ಹೊಸ ತಳಿ ದನಗಳನ್ನು ರೂಪಿಸಿಕೊಂಡಿದ್ದಾರೆ. ಇಂತಹ ತಳಿಗಳಲ್ಲಿ, ಬ್ರಾಂಗಸ್ ಎಂಬುದು ಒಂದು ಜಾತಿ. ಬ್ರಾಹ್ಮಣಿ ಮತ್ತು ಆ ದೇಶದ ಆಂಗಸ್ ತಳಿಗಳಿಂದ ಬಂದದ್ದು. ಅದಕ್ಕೇ ಈ ಹೆಸರು (BRahmin + ANGUS = BRANGUS). ಬ್ರಾಫರ್ಡ್ ಎಂಬುದು ಮತ್ತೊಂದು; ಬ್ರಾಹ್ಮಣಿ+ಹರ್‌ಫರ್ಡ್ ತಳಿಗಳಿಂದ ಸುಧಾರಿಸಿದ್ದು (BRAhmin + Here FORD = BRAFORD). ಸಂಟಾ ಜೆರ್‌ಟ್ರೂಡಿಸ್ (Santa Gertrudis) ಎಂಬುದು ಬ್ರಾಹ್ಮಣಿ ಷಾರ್ಟ್ ಹಾರನ್ ತಳಿಗಳಿಂದ ಬಂದದ್ದು. ಇದು ಈಗ ಪ್ರಖ್ಯಾತವಾದ ತಳಿ. ಈ ತಳಿಯ ಮಂದೆಯೊಂದನ್ನು ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್‌ಸನ್ ಅವರು ತಮ್ಮ ಟೆಕ್ಸಾಸ್ ರಾಂಚಿನಲ್ಲಿ ಸಾಕಿದ್ದರು. ಈ ಮಂದೆಯನ್ನು ಕಂಡರೆ ಅವರಿಗೆ ಬಹಳ ಪ್ರೇಮ, ಹೆಮ್ಮೆ.

ಇಂತಹ ಗುಣಗಳು, ನಮ್ಮ ದನಗಳಲ್ಲಿ ಇದ್ದರೂ, ನಮ್ಮ ಜನ, ನಮ್ಮ ದನದ ಸಂಪತ್ತಿನಿಂದ ಪೂರ್ಣ ಲಾಭವನ್ನು ಪಡೆಯುತ್ತಿಲ್ಲ. ಸರಿಯಾಗಿ ಸಾಕುತ್ತಿಲ್ಲ. ಸಾಕಷ್ಟು ಮೇವು, ತಿಂಡಿ ಹಾಕುತ್ತಿಲ್ಲ. ಈ ಬಗೆಯ ತಾತ್ಸಾರ, ನಮ್ಮ ಹೇರಳ ಸಂಪತ್ತುಗಳ ವಿಷಯದಲ್ಲಿ ಅಜ್ಞಾನ, ನಮ್ಮ ಜನಕ್ಕೆ ಅಂಟಿದ ರೋಗ–ಮಹಾ ರೋಗ.

ಏನೋ ಹೇಳುವುದಕ್ಕೆ ಹೊರಟೆ. ಮಾತು ಎತ್ತಲೊ ಸಾಗಿದೆ. ನೀನು ಮಧ್ಯೆ ಏನೋ ಪ್ರಶ್ನೆ ಕೇಳಿದೆ. ಅದಕ್ಕಾಗಿ ಇಷ್ಟನ್ನೆಲ್ಲಾ ಹೇಳಬೇಕಾಯಿತು. ಪೆಚ್ಚಾಗಬೇಡ. ಇದರಲ್ಲಿ ತಪ್ಪೇನೂ ಇಲ್ಲ. ನೀನು ಈ ಪ್ರಶ್ನೆ ಕೇಳದಿದ್ದರೆ ಇಷ್ಟನ್ನ ನಾನು ಹೇಳುತ್ತಲೇ ಇತ್ತಿಲ್ಲ. ವಿಷಯ ತಿಳಿದುಕೊಂಡ ಹಾಗಾಯ್ತು. ಒಳ್ಳೆಯದೇ ಆಯಿತು. ಈ ನಮ್ಮ ದನಗಳ ಗುಣಗಳ ವಿಷಯ ಹೇಳುತ್ತಿರುವಾಗ ಮತ್ತೊಂದು ವಿಷಯವನ್ನೂ ತಿಳಿಸಿಬಿಡುತ್ತೇನೆ.

ಪಾಶ್ಚಾತ್ಯ ದೇಶಗಳಲ್ಲಿ–ಅಮೆರಿಕ, ಯೂರೋಪ್ ಖಂಡಗಳಲ್ಲಿ ಸುಮಾರು 40–50 ಸ್ಪಷ್ಟವಾದ ದನದ ತಳಿಗಳಿವೆ. ಆದರೆ ಆ ಖಂಡಗಳಿಗಿಂತ ಬಹಳ ಚಿಕ್ಕದಾದ ನಮ್ಮ ಭಾರತದಲ್ಲಿ, ಕನಿಷ್ಠ, 26 ಸ್ಪಷ್ಟವಾದ ದನದ ತಳಿಗಳೂ, 6 ಎಮ್ಮೆ ತಳಿಗಳೂ ಇವೆ. ಇಂತಹ ತಳಿ ಸಂಪತ್ತು ಮತ್ತಾವ ದೇಶದಲ್ಲೂ ಇಲ್ಲ.

ಮತ್ತೊಂದು ವಿಶೇಷ : ವಿಶ್ವದಲ್ಲಿ ಎಮ್ಮೆಯನ್ನು ಸಾಕುಪ್ರಾಣಿಯಾಗಿ ಒಲಿಸಿಕೊಂಡು ಹೆಚ್ಚು ಸಂಖ್ಯೆಯಲ್ಲಿ ಸಾಕಿರುವುದು, ನಮ್ಮ ದೇಶದಲ್ಲೇ. ಚೀನಾ ಸಯಾಮ್, ಫಿಲಿಫೈನ್ ದೇಶಗಳಲ್ಲಿ ಎಮ್ಮೆಗಳಿವೆ ನಿಜ; ಆದರೆ ನಮ್ಮಲ್ಲಿರು ವಷ್ಟು, ಎಮ್ಮೆತಳಿಗಳಾಗಲೀ,* ಎಮ್ಮೆ ಸಂಖ್ಯೆಯಾಗಲೀ ಅವರಲ್ಲಿ ಇಲ್ಲ. ಅಲ್ಲದೆ, ಎಮ್ಮೆಯ ಮೂಲ ತವರೂ ಕೂಡ, ನಮ್ಮ ದೇಶವೇ. ಎಮ್ಮೆ ಅಂದರೆ ಜ್ಞಾಪಕಕ್ಕೆ ಬರುತ್ತೆ. ಈಗಿನ ದನಗಳ ತಳಿಗಳಿಗೂ ಮೂಲದ ಕಾಡು ದನಕ್ಕೂ ಬಹಳ ವ್ಯತ್ಯಾಸವಿದೆ–ಆದರೆ ಕಾಡು ಎಮ್ಮೆಗೂ, ಸಾಕು ಎಮ್ಮೆಗೂ ವ್ಯತ್ಯಾಸ ಬಹಳ ಕಡಿಮೆ. ಎಮ್ಮೆಗಳನ್ನು, ನಾವು ಮತ್ತು ಏಷ್ಯಾ ಖಂಡದ ಜನರು ಬಹಳ ಕಾಲದಿಂದ ಪಳಗಿಸಿ ಸಾಕುತ್ತಿದ್ದರೂ, ಎಮ್ಮೆ, ಕಾಡೆಮ್ಮೆಯ ಧೈರ್ಯವನ್ನಾಗಲೀ, ಮಂದೆಕೂಡಿಕೊಂಡು ಬಾಳುವ ಬುದ್ಧಿಯನ್ನಾಗಲೀ ಕಳೆದುಕೊಂಡಿಲ್ಲ. ಇದನ್ನು ಅರಿತು ಬೇಟೆಗಾರರು, ಗಾಯಗೊಂಡ ಹುಲಿಯನ್ನು ಹಿಡಿಯಲು ಎಮ್ಮೆ ಹಿಂಡನ್ನು ಒಡ್ಡುತ್ತಾರೆ. ಇವು ಮಂದೆಯಲ್ಲಿ ಇದ್ದಾಗ ಹುಲಿಯ ಮೇಲೂ ಬೀಳಬಲ್ಲವು. ಚಿರತೆಯ ಮೇಲೆ ಬಿದ್ದದ್ದೂ ಉಂಟು.

"ಕಾಡೆಮ್ಮೆಗೂ ಊರೆಮ್ಮೆಗೂ ಹೆಚ್ಚು ವ್ಯತ್ಯಾಸವಿಲ್ಲ ಅಂದಿಯಲ್ಲ, ಕಾಡೆಮ್ಮೆ ಈಗಲೂ ಇದೆಯೆ ?"

"ಇದೆ. ಆದರೆ, ಇದನ್ನು ನೋಡಬೇಕಾದರೆ ಅಸ್ಸಾಂಗೆ ಹೋಗಬೇಕು. ಒಂದು ಕಾಲದಲ್ಲಿ ಈ ಕಾಡೆಮ್ಮೆ ಇಂಡಿಯದಲ್ಲಿ, ಯಾಕೆ, ಮೈಸೂರಿನಲ್ಲೂ, ಹೆಚ್ಚಾಗಿತ್ತು ಅಂತ ತೋರುತ್ತೆ–ನಮ್ಮ ರಾಜ್ಯದ ಹೆಸರು ನೋಡಿದರೆ"

"ನಮ್ಮ ರಾಜ್ಯದ ಹೆಸರಿಗೂ ಕಾಡೆಮ್ಮೆಗೂ ಏನೂ ಸಂಬಂಧ, ಮಾವ"

"ಈಗಿನ ಮೈಸೂರು ಹಿಂದೆ ಮಹಿಸೂರು ಆಗಿತ್ತು. ಮಹಿಷ ಅಂದರೆ ಎಮ್ಮೆಯ, ಊರು. ಮಹಿಷನ ಊರು ನಾಲಿಗೆಯಲ್ಲಿ ಆಡುತ್ತ ಆಡುತ್ತ ಮೈಸೂರು ಆಯಿತು. ಇದನ್ನು ಹಿಂದೆ ಮಹಿಷ್ಮತಿ, ಮಹಿಷಮಂಡಲ ಎನ್ನುತ್ತಿದ್ದರು. ಇದರ ಒಡೆಯ ಮಹಿಷಾಸುರ. ಇವನೊಬ್ಬ ರಾಕ್ಷಸ. ಇವನ ತಾಯಿ ದಿತಿ, ಇವಳ ಮಕ್ಕಳನ್ನೆಲ್ಲಾ, ಇವಳ ಸೋದರಿ ಅಧಿತಿಯ ಮಗ ಇಂದ್ರ, ಸಾಯಿಸಿಬಿಟ್ಟಿದ್ದ. ಇವಳು ಪುತ್ರನನ್ನು ಪಡೆಯಲು ಸುಪಾರ್ಶ್ವ ಎಂಬ ಋಷಿಯ ಆಶ್ರಮಕ್ಕೆ ಬಂದಳು, ತಪಸ್ಸು ಮಾಡಿದಳು. ಇವಳ ತಪಸ್ಸನ್ನು

* ೨೬–೩೦ ಫೋಟೋಗಳನ್ನು ನೋಡಿ.

ಮೆಚ್ಚಿ, ಆ ಋಷಿ "ನಿನಗೆ ಮಹಿಷದಂತೆ (ಕೋಣನಂತೆ) ಇರುವ ಮಗ ಹುಟ್ಟುತ್ತಾನೆ, ಹೋಗು ಎಂದರು. ಮಹಿಷ ಹುಟ್ಟಿದ. ಅವನೂ ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ 'ಸಾಯುವುದಾದರೆ ಹೆಣ್ಣಿನಿಂದಲೇ ಸಾಯಬೇಕು' ಎಂಬ ವರವನ್ನು ಬೇಡಿದ. ಶಿವ, ಈ ವರ ಕೊಟ್ಟ. ಈ ವರದಿಂದ ಮಹಿಷಾಸುರ ಕೊಬ್ಬಿ ದೇವರನ್ನು ದಿಂಡಿರನ್ನು ಎಲ್ಲರನ್ನೂ ಗೋಳು ಹುಯುತ್ತ ಬಂದ. ಇವನ ಕಾಟದಿಂದ ಪಾರಾಗಲು ದೇವತೆಗಳೆಲ್ಲಾ ತಮ್ಮ ತಮ್ಮ ಆಯುಧ ಶಕ್ತಿಗಳನ್ನು ಒಬ್ಬ ಹೆಂಗಸಿಗೆ ಕೊಟ್ಟು ಮಹಿಷಾಸುರನನ್ನು ಕೊಲ್ಲಲು ಕಳುಹಿಸಿದರು. ಅವಳೇ ತ್ರಿಪುರ ಸುಂದರಿ. ಈ ಮಹಿಷಾಸುರ ಅವಳ ರೂಪಕ್ಕೆ ಸೋತ. ಮದುವೆಯಾಗೆಂದು ಕೇಳಿಕೊಂಡ. ತನ್ನ ಜತೆಯಲ್ಲಿ ಯುದ್ಧ ಮಾಡಿ ಗೆದ್ದರೆ ಮದುವೆಯಾಗುತ್ತೇನೆಂದು ಆಕೆ ಹೇಳಿದಳು. ಇವನು ಘೋರ ವಾಗಿ ಅವಳೊಡನೆ ಯುದ್ಧ ಮಾಡಿದ. ಸರ್ವ ಶಕ್ತಿಯನ್ನೂ ಪಡೆದ ಚಾಮುಂಡಿಯೇ ಆದ ತ್ರಿಪುರಸುಂದರಿ ಈ ರಾಕ್ಷಸನನ್ನು ಸಂಹಾರ ಮಾಡಿದಳು. ಮಹಿಷಾಸುರಮರ್ಧಿನಿಯಾದಳು. ಚಾಮುಂಡಿ ಬೆಟ್ಟದಲ್ಲಿ ತಂಗಿದಳು. ಅದರ ತಪ್ಪಲಿನ ಊರೇ ಮಹಿಷಾಸುರನ ಊರು—ಮೈಸೂರು, ಅಂತ ಕತೆ. ಹಿಂದೆ, ಈ ಪ್ರದೇಶವನ್ನು ಮಹಿಷಮಂಡಲ ಅನ್ನುತ್ತಿದ್ದರು, ಅಂದನೆಲ್ಲ. ಅಶೋಕ ಚಕ್ರವರ್ತಿ ಭೌದ್ಧ ಪ್ರಚಾರಕ್ಕಾಗಿ ಮಹಿಷಮಂಡಲಕ್ಕೆ ಕೆಲವು ಭೌದ್ಧ ಸನ್ಯಾಸಿಗಳನ್ನು ಕಳುಹಿಸಿದ್ದು ಚರಿತ್ರೆಯಲ್ಲಿ ಓದಿರಬೇಕು. ಇಲ್ಲಿ ಎಮ್ಮೆಗಳು ಹೇರಳವಾಗಿದ್ದುದರಿಂದ ಇದನ್ನು ಹಾಗೆ ಕರೆದಿರಬೇಕು. ಮಹಾ ಭಾರತದಲ್ಲೂ ಕೂಡ ಈ ನಾಡನ್ನು ಮಹಿಷ್ಮತಿ ಎಂದು ಕರೆದಿದ್ದಾರೆ. ಯುಧಿಷ್ಠಿರ, ರಾಜಸೂಯಯಾಗ ಮಾಡಿದಾಗ ದಕ್ಷಿಣಕ್ಕೆ ಸಹದೇವನನ್ನು ಕಳುಹಿಸಿದನಂತೆ. ಇವನು ಕಾವೇರಿ ದಾಟಿ ಮಹಿಷ್ಮತಿಗೆ ಬಂದನಂತೆ. ಅಲ್ಲಿಯ ನೀಳ ಎಂಬ ರಾಜನನ್ನು ಸೋಲಿಸಿ ಅಪಾರವಾದ ಸಂಪತ್ತನ್ನು ಕೊಳ್ಳೆ ಹೊಡೆದುಕೊಂಡು ಹೋದನಂತೆ.

"ಚೆನ್ನಾಗಿವೆ, ಈ ಕತೆಗಳು. ಒಂದಕ್ಕೊಂದು ಸೇರಿಕೊಂಡಿವೆ."

"ಹೌದು, ನನ್ನ ಮಾತಿನಹಾಗೆ; ಕಾಂಕ್ರೇಜ್ ದನದ ಕತೆ ಹೇಳಲು ಹೊರಟು ಮಹಾಭಾರತದ ಕತೆಗಳಿಗೆ ತಿರುಗಿತು. ಇಲ್ಲಿಗೆ ತಿರುಗಿದರೆ, ನಮ್ಮ ದನದ ಕತೆ ಮುಕ್ತಾಯವೇ ಆದಂತೆ. ತುದಿ ಮೊದಲೇ ಇರುವುದಿಲ್ಲ. ಈವೊತ್ತು ಇಷ್ಟು

ಸಾಕು. ಇನ್ನೊಂದು ದಿವಸ ಈ ನಮ್ಮ ಜೆಬು ದನಗಳನ್ನು —ಅಲ್ಲಿಂದ ತಾನೆ
ಕತೆ ಬೆಳೆದುಹೋಗಿದ್ದು—ಈ ದನಗಳನ್ನು, ಯಾರು, ಎಲ್ಲಿ, ಯಾವಾಗ ಪಳಗಿ
ಸಿದರು ಎಂಬುದನ್ನು ತಿಳಿಸಿ ಪುನಃ ಕಾಂಕ್ರೇಜ್ ದನದ ಕತೆಗೆ ತಿರುಗೋಣ.
ಅಂತೂ ಇಂತೂ ನಿನ್ನ ಹರಟೆಯಲ್ಲಿ ನನ್ನ ನಿದ್ದೆ ಹೋಯಿತು. ಹೋಗಿ
ಅಕ್ಕನನ್ನು ಕೇಳಿ ಬಾಯಿ ಆಡಿಸುವುದಕ್ಕೆ, ಬಾಯಾರಿಕೆಗೆ ಏನಾದರೂ ತಾ. ”

ಹರಟೆ ಹೊಡೆದದ್ದು ಮಾವನಾದರೂ, ‘ಹ್ನೂ’ ಎಂದು ನಗುತ್ತ ಕಿಟ್ಟ
ಅಡಿಗೆಯ ಮನೆ ಕಡೆ ಓಡಿದ.

೨. ದನಗಳನ್ನು ಮೊದಲು ಸಾಕಿದವರು ಯಾರು ?

ಅಕ್ಕ ಕಳುಹಿಸಿದ ಕೋಡಬಳೆ ಸರವನ್ನು ಮೆದ್ದು, ಕಾಫಿ ಕುಡಿಯುವ ವೇಳೆಗೆ ಸಾಯಂಕಾಲವಾಗಿತ್ತು. ರಾಮಣ್ಣನ ಹರಟೆಯ ಪುರಾಣ ಮುಗಿಯುವ ಹೊತ್ತಿಗೆ ಭಾರಿ ಮಳೆಯೂ ಬಿದ್ದು, ನಿಂತು, ಆಕಾಶ ಬರಿದಾಗಿತ್ತು. ಹೊರಗೆ ಸುತ್ತಾಡಿ ಬರಲು ಮಾವ ಅಳಿಯ ಹೊರಬಂದರು. ಸ್ವಲ್ಪ ದೂರ ನಡೆದ ಮೇಲೆ, ಕಿಟ್ಟಿ 'ಮಾವ, ಪಾರ್ಕಿನಲ್ಲಿ ಸ್ವಲ್ಪ ಕೂತು ಹೋಗೋಣವೇ' ಎಂದ. 'ಪಾಪ, ಹುಡುಗ ಬಳಲಿರಬೇಕು' ಎಂದುಕೊಂಡು ರಾಮಣ್ಣ ಒಪ್ಪಿದ. ಅವನಿಗೂ ಕೂಡ ಮರದ ತಳಗೆ ಕೂತು ಸುತ್ತು ಮುತ್ತಲಿನ ಹಸುರು ಸೊಬಗನ್ನು ಸವಿಯುವುದರಲ್ಲಿ ಆಸೆ.

ಕಿಟ್ಟಿ ಬಳಲಿರಲಿಲ್ಲ. ಅವನಿಗೆ ಮಾವನ ದನದ ಕತೆಯನ್ನು ಕೇಳಲು ಈ ಸಬೂಬನ್ನು ಹೂಡಿದ. ಕೂತ ಸ್ವಲ್ಪ ಹೊತ್ತಿನಲ್ಲಿಯೇ ಕಿಟ್ಟಿ ರಾಗ ಎಳೆದ; "ಮಾವ, ನಿನಗೆ ಬೇಜಾರಾಗದಿದ್ದರೆ ಮಧ್ಯಾಹ್ನ ಹೇಳುತ್ತಿದ್ದ ದನದ ಕತೆಯನ್ನು ಮುಂದೆ ಹೇಳು". ರಾಮಣ್ಣನಿಗೆ ತನ್ನ ಹುಚ್ಚನ್ನು ಇತರರಿಗೆ ಅಂಟಿಸುವುದಕ್ಕೆ ಯಾವಾಗಲೂ ಬೇಸರವಿರಲಿಲ್ಲ. ಈಗಂತೂ, ದನಗಳ ಬಗ್ಗೆ ಕಿಟ್ಟಿಯಲ್ಲಿ, ಕಿಟ್ಟಿಯ ಮೂಲಕ ಅವನ ಭಾವನಿಗೂ ಆಸಕ್ತಿಯನ್ನು ಕೆರಳಿಸುವುದಕ್ಕಾಗಿಯೇ ಬೆಂಗಳೂರಿನಿಂದ ಬಂದದ್ದರಿಂದ ಕಿಟ್ಟಿ ಕೇಳಿದ್ದೇ ತಡ, ಷುರುಹಚ್ಚಿದ.

"ನೀನು ಮಧ್ಯಾಹ್ನ ಕೇಳಿದ ಪ್ರಶ್ನೆ ಜ್ಞಾಪಕವಿದೆಯೇ?. ಸಿಂಧೂ ಕಣಿವೆಯ ಹರಪ್ಪ ಜನರಿಗಿಂತ ಮುಂಚೆ ಯಾರೂ ದನ ಸಾಕುತ್ತಿರಲಿಲ್ಲವೇ

ಅಂತ. ನಾನು ಹೇಳಿ ಹೊರಟಿದ್ದೆ : ಮಾನವ, ದನಗಳನ್ನು ಸಾಕುವ ಹವ್ಯಾಸ
ವನ್ನು ಆರಂಭಮಾಡಿದ್ದು ನವಶಿಲಾಯುಗದಲ್ಲಿ–ಕೇವಲ 8–10 ಸಾವಿರ ವರ್ಷ
ಗಳ ಹಿಂದೆ ಅಂತ. ಮಾನವ ಮೊಟ್ಟಮೊದಲು ದನಗಳನ್ನು ಎಲ್ಲಿ, ಯಾಕೆ, ಹೇಗೆ
ಸಾಕಿದ ಎಂಬುದನ್ನು ಪೂರ್ವೇತಿಹಾಸಕಾರರು–ಇವರನ್ನು Archaeologists
ಅನ್ನುತ್ತಾರೆ–ಕೆಲವು ಆಧಾರಗಳಿಂದ ಊಹಿಸಿದ್ದಾರೆ.

ದನಗಳ ಸಾಕಣೆ ಮೊದಲೋ, ಬೇಸಾಯ ಮೊದಲೋ, ಮಾನವ ಅನುಸರಿಸಿದ್ದು, ಎಂಬುದು ಒಂದು ಸಮಸ್ಯೆ. ಕೆಲವು ಪ್ರವೀಣರು ಮೊದಲು ದನಗಳ ಸಾಕಣೆ ; ತದನಂತರ ಬೇಸಾಯ, ಎಂದು ತಿಳಿದುಕೊಂಡಿದ್ದರು. ಇವರ ಪ್ರಕಾರ, ಮಾನವ, ಮೊದಲು, ಬೇಟೆಯಾಡುತ್ತಿದ್ದ ಪ್ರಾಣಿಗಳನ್ನು ಪಳಗಿಸಿ ಕೊಂಡ. ಆಮೇಲೆ ಅವನ ಹೆಂಗಸು, ಅವನು ಬೇಟೆಯಾಡುವುದರ ಬದಲು ಈ ಪ್ರಾಣಿಗಳನ್ನೇ ಸಾಕಿ, ಪೋಷಿಸಿ, ಇರುವ ಕಡೆಯೇ ಭೂಮಿಯನ್ನು ಉತ್ತು, ಬಿತ್ತಿ ಬೆಳೆಯುವಂತೆ ಪ್ರೇರೇಪಿಸಿದಳು ಅಂತ ಹೇಳುತ್ತಿದ್ದರು. ಆದರೆ ಈಗಿನ ಪ್ರವೀಣರ ಅಭಿಪ್ರಾಯವೇ ಬೇರೆ. ಆಹಾರಕ್ಕಾಗಿ ಬೇಟೆಯಾಡಿಯೋ, ಕಾಡು ಮೇಡುಗಳಲ್ಲಿ ಅಲೆದು ಹಣ್ಣುಹಂಪಲುಗಳನ್ನು ಆರಿಸಿಕೊಂಡೋ, ಒಂದೆಡೆ ನಿಲ್ಲದೆ ಇದ್ದ ಆಗಿನ ಮಾನವ, ಪಶುಗಳನ್ನು ಪಳಗಿಸಲು ಶಕ್ತನಾಗಿರಲಿಲ್ಲ. ಇವನ್ನು ಸಾಕಲು ಕೆಲವು ವಸ್ತುಗಳು, ಅನುಕೂಲ್ಯಗಳು ಬೇಕು, ಕಟ್ಟಲು ಗೂಟ, ಹಗ್ಗ ಬೇಕು; ಮಂದೆ ಚದರದಿರಲು ರೊಪ್ಪ ಕಟ್ಟಬೇಕು; ಬೇಲಿಹಾಕ ಬೇಕು. ಗೂಟ ಚೂಪುಮಾಡುವ ಹತ್ಯಾರು ಅವನಲ್ಲಿ ಇರಲಿಲ್ಲ. ಹಗ್ಗ ಹೊಸೆಯುವ ಕಲೆ ತಿಳಿದಿರಲಿಲ್ಲ. ರೊಪ್ಪ ಕಟ್ಟಲು ತಡಿಕೆಗಳನ್ನು ಹೆಣೆಯು ವುದು, ಬೊಂಬುಗಳನ್ನು ಕತ್ತರಿಸುವುದು ಅವನ ಬುದ್ಧಿ ಶಕ್ತಿಗೆ, ಕೈ ಶಕ್ತಿಗೆ ಮೀರಿದ್ದು. ಅಲ್ಲದೆ ಹೊಟ್ಟೆಪಾಡಿಗಾಗಿ ಯಾವಾಗಲೂ ಅಲೆಯಬೇಕಾದವನಿಗೆ ಪಳಗಿಸುವ ಈ ಹವ್ಯಾಸಕ್ಕೆ ವಿರಾಮವೆಲ್ಲಿತ್ತು !


ಯಾವಾಗ ಈ ಮಾನವ ಭೂಮಿಯನ್ನು ಉತ್ತು, ಬಿತ್ತಿ, ಕಳೆ ತೆಗೆದು, ಬೆಳೆಯನ್ನು ಕುಯ್ದು, ತನಗೆ ಬೇಕಾದ ಆಹಾರವನ್ನು, ತಾನು ತಂಗಿದ ಕಡೆಯೇ ಹುಟ್ಟಿಸಿಕೊಳ್ಳಲು ಪ್ರಾರಂಭ ಮಾಡಿದನೋ, ಹೀಗೆ ಬೆಳೆಸಿದ ಬೆಳೆಯ ಹತ್ತಿರವೇ ಜೋಪಡಿ ಹಾಕಿಕೊಂಡು ಒಂದೆಡೆ ನಿಂತನೋ, ಯಾವಾಗ ಆಹಾರಕ್ಕಾಗಿ ಅಲೆಯುವುದು ತಪ್ಪಿತೋ, ಬಿಡುವು ಸಿಕ್ಕಿತೋ. ಆಗ ಅವನು

ಪಶುಗಳನ್ನು ಸಾಕಬಲ್ಲ ಸಾಮರ್ಥ್ಯವನ್ನು, ಕಾಲಾವಕಾಶವನ್ನು, ಅನುಕೂಲಗಳನ್ನು ಪಡೆದ. ಅಂದರೆ, ಮಾನವ ಬೇಸಾಯಗಾರನಾದ; ಅನಂತರ ಪಶುಪಾಲಕನಾದ.

ಹೀಗೆಂದಾಕ್ಷಣ, ಇದಕ್ಕಿಂತ ಮುಂಚೆ ಸಾಕು ಪ್ರಾಣಿಗಳೇ ಇರಲಿಲ್ಲವೆಂದಲ್ಲ. ಸಾಕು ಪ್ರಾಣಿಗಳಲ್ಲಿ ಎರಡು ಗುಂಪು. ಕೆಲವು ಒಂಟಿ ಒಂಟಿಯಾಗಿ, ಮನೆಗಳಲ್ಲಿ ಮಕ್ಕಳು ಮರಿಗಳೊಂದಿಗೆ, ಕೂಡಿಕೊಂಡು ಬೆಳೆಯುವ ಪ್ರಾಣಿಗಳು–ನಾಯಿ, ಕೋಳಿ, ಹಂದಿ ಇತ್ಯಾದಿ, ಸಣ್ಣ ಪ್ರಾಣಿಗಳು. ಇವನ್ನು ಮೊಟ್ಟಮೊದಲು ಪಳಗಿಸಿ ಸಾಕಿದವರು ಹೆಂಗಸರು; ಮಕ್ಕಳು ಮರಿಗಳ ಆಟಕ್ಕಾಗಿ; ಬಾಳೆ, ಗಡ್ಡೆ ಕಂದುಗಳನ್ನು ಬೆಳೆದುಕೊಳ್ಳುತ್ತಿದ್ದ ಕಾಲದಲ್ಲಿ, ಪೂರ್ವ ಏಷ್ಯದಲ್ಲಿ.

ದನ, ಕುರಿ, ಮೇಕೆ, ಒಂಟೆ ಇವು ಹಿಂಡು ಪ್ರಾಣಿಗಳು, ಮಂದೆಯಲ್ಲೇ ಜೀವಿಸುವ, ಚಲಿಸುವ ಪ್ರಾಣಿಗಳು, ದೊಡ್ಡ ಪ್ರಾಣಿಗಳು. ಮನೆಯೊಳಗೆ ಮಕ್ಕಳುಮರಿಗಳೊಂದಿಗೆ ಕೂಡಿಕೊಂಡು ಬೆಳೆಯುವ ಪ್ರಾಣಿಗಳಲ್ಲ. ಈ ದೊಡ್ಡ ಪ್ರಾಣಿಗಳನ್ನು ಪಳಗಿಸಲು ದೇಹಶಕ್ತಿ ಇರಬೇಕು. ಹಿಂಡನ್ನು ಮೇಯಿಸಲು ದೂರ ಸ್ಥಳಗಳಿಗೆ ಹೊಡೆದುಕೊಂಡು ಹೋಗಿ, ಹಿಂದುಗೂಡಿಸಿ ಮರಳಿ ಮನೆಯ ಕಡೆ ತರುವುದು ಗಂಡಸರಿಗೆ ಸರಿಯೇ ಹೊರತು, ಮಕ್ಕಳು ಮರಿಗಳಿಗೆ ಗಮನ ಕೊಡಬೇಕಾದ, ಅಡಿಗೆ ಮಾಡಬೇಕಾದ, ಬಿಡುವಿಲ್ಲದ, ಹೆಚ್ಚು ಬಲವಿಲ್ಲದ, ಹೆಂಗಸರಿಗೆ ಸರಿಹೋಗದು. ಆದುದರಿಂದ ಈ ಹಿಂಡು ಪ್ರಾಣಿಗಳನ್ನು ಮೊದಲು ಪಳಗಿಸಿ ಸಾಕಿದವರು ಗಂಡಸರು; ಕಾಳು, ಕಡ್ಡಿ ಬೆಳೆಗಳನ್ನು ಬೆಳೆಯುವುದರಲ್ಲಿ ಜಯಶೀಲರಾದ ಮೇಲೆ; ನೈರುತ್ಯ ಏಷ್ಯಾದಲ್ಲಿ; ಸಿಂಧೂ ನದಿಯಿಂದ ಟರ್ಕಿಯವರಿವಿಗೆ ಇರುವ ಪ್ರದೇಶಗಳಲ್ಲಿ, ಈಗಿನ ಪಾಕಿಸ್ತಾನ, ಇರಾಕ್, ಇಸ್ರೇಲ್, ಜಾರ್ಡನ್, ಈಜಿಪ್ಟ್ ದೇಶಗಳಲ್ಲಿ; ಸುಮಾರು 8–10 ಸಾವಿರ ವರ್ಷಗಳ ಹಿಂದೆ.

ಆಗಿನ, ಆ ಪ್ರದೇಶದ ಜನ–ನವಶಿಲಾಯುಗದ ಜನ; ಅನೇಕ ಬಗೆಯ ಪ್ರಾಣಿಗಳನ್ನು ಸಾಕಲು ಪ್ರಯತ್ನಪಟ್ಟಂತೆ ತೋರುತ್ತೆ. ಇವನ್ನು ಸಾಕುವ ಉದ್ದೇಶ, ಮೊದಲು, ಅವುಗಳಿಂದ ಆಗತಕ್ಕ ಪ್ರಯೋಜನಕ್ಕಲ್ಲ, ಲಾಭಕ್ಕೆ ಅಲ್ಲ. ಪ್ರಯೋಜನ, ಲಾಭ ಗೊತ್ತಾಗಿದ್ದದ್ದು ಆಮೇಲೆ. ಮೊದಲು



ಚಿತ್ರ ೫. ಸಾಕು ಪ್ರಾಣಿಗಳ ಉಗಮ. ಸಾಕು ಪ್ರಾಣಿಗಳನ್ನು ಮೊದಲು ಪಳಗಿಸಿಕೊಂಡದ್ದು ಏಷ್ಯಾ ದೇಶಗಳಲ್ಲಿ. ಭಾರತದ ಪೂರ್ವದಲ್ಲಿ ಕೋಳಿ, ನಾಯಿ, ಹಂದಿಯನ್ನೂ, ಮಧ್ಯ ಏಷ್ಯಾದಲ್ಲಿ ಟೆಕ್ಕು, ಕುರಿ, ಮೇಕೆ, ದನ, ಕುದುರೆಗಳನ್ನು, ಮೊಮ್ಮೊದಲು ಸಾಕಿದರು.

ಮೊದಲು ಬೇಟೆಯಾಡುವಾಗ ಸಿಕ್ಕಿದ ಎಳೆಯ ಕರು ಮರಿಗಳನ್ನು, ತಾಯಿ ಸತ್ತ ತಬ್ಬಲಿಗಳನ್ನು, ಮನೆಗೆ ತಂದು, ಮುದ್ದಿಗಾಗಿ, ಮಕ್ಕಳ ಆಟಪಾಟಕ್ಕಾಗಿ ಸಾಕಿರಬೇಕು. ಎಳೆಯ ಮಕ್ಕಳಿಗೂ ಎಳೆಯ ಪ್ರಾಣಿಗಳಿಗೂ ನಂಟಸ್ತನ ಬೇಗ ಬೆಳೆಯುತ್ತೆ; ಹೆಚ್ಚಾಗಿ ಬೆಳೆಯುತ್ತೆ ಅಲ್ಲವೆ ? ನೀನು ನಾಯಿ ಸಾಕಲು ಇಷ್ಟಪಟ್ಟೆ ; ನಿನಗಾಗಿ ನಿನ್ನ ಅಮ್ಮ ಒಪ್ಪಲಿಲ್ಲವೇ ? ಹಾಗೆ ಇವನ್ನು ಸಾಕಿರ ಬೇಕು, ಆಗಿನ ಕಾಲದ ಕಿಟ್ಟಿಗಳಿಗೋಸ್ಕರ. ಕೆಲವು ಈ ಸಾಕಾಣೆಗೆ ಹೊಂದಿ ಕೊಂಡವು. ಕೆಲವು ಒಗ್ಗಲಿಲ್ಲ. ಹೀಗೆ ಹೊಂದಿಕೊಳ್ಳದ, ಗಲಾಟೆ ಪ್ರಾಣಿ ಗಳನ್ನು ಹೊರ ಅಟ್ಟಿದರು ; ಬಗ್ಗಿದವನ್ನು ಪೋಷಿಸಿದರು. ಯಾವ ಜಾತಿ ಸಂತಾನವನ್ನು ಬೆಳೆಸಬಲ್ಲದೋ ಅವುಗಳನ್ನು ಉಳಿಸಿಕೊಂಡರು, ಬೆಳೆಸಿ ಕೊಂಡರು, ಹೆಚ್ಚಿಸಿದರು. ಕೆಲವು ಪ್ರಾಣಿಗಳು ಸಾಕಿದಾಗ ಬಲಹೀನ ವಾಗುತ್ತೆ. ದೇಹಧಾರ್ಢ್ಯವನ್ನು ಕಳೆದುಕೊಳ್ಳುತ್ತೆ. ಹಿಂದೆ ಇಜಿಪ್ಟಿ ನವರು ಕೆಲವು ಜಾತಿ ಜಿಂಕೆಗಳನ್ನು ಸಾಕಿದರು. ಅವುಗಳಿಗೆ ಹೀಗೆ ಆಯಿತು. ಸಾಕಲು, ಅವುಗಳ ಸಂತಾನ ಬೆಳೆಸಲು ಸಾಧ್ಯವಾಗದೇ ಹೋಯಿತು. ದನ, ಕುರಿ, ಮೇಕೆ ಹಾಗಲ್ಲ. ಸಾಕಿದರೆ ಅವುಗಳು ಬೇಗ ಬಲಗುಂದುವುದಿಲ್ಲ. ಒಂದು ವೇಳೆ ಬಲ ಕ್ಷೀಣಿಸಿದರೂ ಸಾಕುವವನಿಗೆ ಅನುಕೂಲವೇ. ಬಲ ತಗ್ಗಿದರೆ ರೋಶ ಕಡಿಮೆಯಾಗುತ್ತೆ ಅವುಗಳನ್ನು ಹದ್ದಿನಲ್ಲಿಟ್ಟುಕೊಳ್ಳುವುದು ಸುಲಭ. ಹೇಳಿದ ಹಾಗೆ ಕೇಳುತ್ತೆ. ಹಾಗೆ ಅಂತ ನಿನ್ನ ನಾಯಿಗೆ ಸಾಕಷ್ಟು ತಿಂಡಿಹಾಕದೆ ಹದ್ದಿನಲ್ಲಿಟ್ಟುಕೊಳ್ಳುವುದಕ್ಕೆ ಷುರು ಮಾಡಿಕೊಳ್ಳಬೇಡ. ನಾಯಿ ಬೇಗ ಮಾನವನಿಗೆ ಒಗ್ಗುತ್ತೆ. ಚೆನ್ನಾಗಿ ಸಾಕಿದಷ್ಟೂ ಲವಲವಕೆಯಿಂದ ಇರುತ್ತೆ".

"ನಮ್ಮ ನಾಯಿ ಸೂಟಿಯಾಗಿಲ್ಲವೇ, ಮಾವ ?"

"ಇದೆ. ಚೆನ್ನಾಗಿ ನೋಡಿಕೊಳ್ಳುತ್ತಿದ್ದೀಯ. ಸುಮ್ಮನೆ ತಮಾಷೆಗೆ ಹೇಳಿದೆ. ಅದಿರಲಿ, ನಾನು ಹೇಳಿದೆ. ಮಾನವ, ಪ್ರಾಣಿಗಳನ್ನು ಮೊದಲು ಸಾಕಿದ್ದು ಅವುಗಳ ಉಪಯೋಗಕ್ಕಲ್ಲ ಅಂತ. ದನಗಳನ್ನು ಸಾಕಿದ್ದು ಅದರ ಹಾಲಿಗೋಸ್ಕರವಲ್ಲ. ಹಸುಗಳಿಂದ ಹಾಲನ್ನು ಕರೆಯಬಹುದು; ಈ ಹಾಲನ್ನು ಆಹಾರವಾಗಿ ಕುಡಿಯಬಹುದು ಎಂಬುದನ್ನು ಕಂಡುಹಿಡಿದುಕೊಂಡದ್ದು ದನಗಳನ್ನು ಪಳಗಿಸಿಕೊಂಡ ಬಹುಕಾಲವಾದ ಮೇಲೆ. ಹಾಲು ಕರೆಯುವಿಕೆ ಮಾನವನ ಪ್ರಗತಿ ದಾರಿಯಲ್ಲಿ ದೊಡ್ಡ ಹೆಜ್ಜೆ. ಈಹೆಜ್ಜೆ ಇಟ್ಟದ್ದೂ ಕೂಡ

ನೈರುತ್ಯ ಏಷ್ಯಾದಲ್ಲಿ. ಅನೇಕ ಜನಾಂಗಗಳಿಗೆ ದನಗಳಿಂದ ಹಾಲನ್ನು ಕರೆದು ಕುಡಿಯಬಹುದು ಎಂಬ ಅಂಶ ಬಹಳ ಕಾಲ ತಿಳಿದೇ ಇರಲಿಲ್ಲ. ಜಪಾನು ಮತ್ತು ಚೀನಾದಲ್ಲಿ ದನಗಳನ್ನು ಹಾಲಿಗಾಗಿ ಸಾಕುವ ಪದ್ಧತಿ ಬಂದದ್ದು ನೂರು ವರ್ಷಗಳಿಂದ ಈಚೆಗೆ"

"ಅವರಿಗೆ ಅಲ್ಲಿಯ ತನಕ ಇದು ಗೊತ್ತೇ ಇರಲಿಲ್ಲವೇ, ಮಾವ ? ಜಪಾನು ಅಷ್ಟು ಮುಂದುವರಿದ ದೇಶ !"

"ಗೊತ್ತಿದ್ದಿರಬಹುದು. ಆದರೆ, ಹಾಲು ಕರೆಯುವ ವಾಡಿಕೆ ಇರಲಿಲ್ಲ. ಅಲ್ಲಿಯ ಜನರ ಆಹಾರದಲ್ಲಿ, ಈಗಲೂ ಕೂಡ ಹಾಲಿಗೆ, ಹಾಲಿನ ಉತ್ಪನ್ನಗಳಾದ ಬೆಣ್ಣೆ, ತುಪ್ಪ, ಮೊಸರು, ಕೋವ ಮುಂತಾದುವುಗಳಿಗೆ ಅಂತಹ ದೊಡ್ಡ ಸ್ಥಾನವೇನೂ ಇಲ್ಲ. ಇಲ್ಲಿ, ಇಂಡೊನೇಸಿಯಾ, ಬರ್ಮ ಮುಂತಾದ ಕಡೆ, ಈಗಲೂ, ಹಾಲಿನ ಮೇಲೆ ವ್ಯಾಮೋಹವಿಲ್ಲ. ಹಾಲಿನ ಕಸಬು ಅಷ್ಟಾಗಿ ಬೆಳೆದಿಲ್ಲ. ಈ ದೇಶಗಳಲ್ಲಿ ಸ್ಪಷ್ಟವಾದ, ಉತ್ಕೃಷ್ಟವಾದ ದನದ ಅಥವಾ ಎಮ್ಮೆಯ ತಳಿಗಳೂ ಇಲ್ಲ. ಮಲಯಾ, ಫಿಲಿಫೈನಿನಲ್ಲೂ ಹೀಗೆ. ಅವರದೇ ಆದ ಸ್ವಂತ ದನ, ಎಮ್ಮೆ ತಳಿ ಇಲ್ಲ.' ಇದರಿಂದ ತಿಳಿಯುತ್ತೆ–ಆ ದೇಶಗಳಲ್ಲಿ ದನಗಳಿಗೆ ಎಷ್ಟು ಕೀಳು ಸ್ಥಾನವಿತ್ತೆಂದು. ಕಾರಲ್ ಸಾರ್ (Carl Sauer) ಎಂಬ ಪ್ರವೀಣರು ಅವರ ಪುಸ್ತಕವೊಂದರಲ್ಲಿ, ಸುಮಾರು 15ನೆಯ ಶತಮಾನದಲ್ಲಿ ಯಾವ ಯಾವ ದೇಶಗಳಲ್ಲಿ ಹಾಲನ್ನು ಕರೆಯುವ ವಾಡಿಕೆ ಇತ್ತು ಎಂಬುದನ್ನು ಒಂದು ನಕ್ಷೆಯಲ್ಲಿ ತೋರಿಸಿದ್ದಾರೆ. ಅಗ್ಗ–500 ವರ್ಷಗಳ ಕೆಳಗೆ ಹಾಲು ಕರೆಯುವ ಪದ್ಧತಿ ಇದ್ದದ್ದು ಇಂಡಿಯ, ಟಿಬೆಟ್ (ಯಾಕ್ ದನದಿಂದ) ಮಂಗೋಲಿಯ, ರಷ್ಯ, ಯೂರೋಪ್, ಆಫ್ರಿಕದ ಬಹುಭಾಗ, ಪಶ್ಚಿಮ ಏಷ್ಯಗಳಲ್ಲಿ (ಚಿತ್ರ ೬ ನೋಡಿ). ಪೂರ್ವ ಏಷ್ಯದಲ್ಲಾಗಲೀ, ಶಾಂತ ಸಾಗರದ ದ್ವೀಪಗಳಲ್ಲಾಗಲೀ, ಆಸ್ಟ್ರೇಲಿಯದಲ್ಲಾಗಲೀ ಈ ಪದ್ಧತಿಯೇ ಇರಲಿಲ್ಲ. ಕೆಲವು ದೇಶದವರಿಗೆ ಇದು ತಿಳಿಯದೆಯೇ ಇತ್ತು. ಮತ್ತೆ ಕೆಲವರಿಗೆ–ಚೀನಿಗಳಿಗೆ, ತಿಳಿದಿದ್ದರೂ ಹಾಲು ಬಳಸುತ್ತಿರಲಿಲ್ಲ.

ಮತ್ತೊಂದು ತಮಾಷೆ ವಿಷಯ : ಮಾನವ ಮೊತ್ತ ಮೊದಲು ಹಾಲು ಕರೆದದ್ದು ದನದಿಂದ ಅಲ್ಲ, ಮೇಕೆಯಿಂದ ; ಇದನ್ನ ಹಿಂದೆ ಹೇಳಿದ ಜ್ಞಾಪಕ. ಇದಕ್ಕೆ ಕಾರಣ ಮೇಕೆ ಚಿಕ್ಕಪ್ರಾಣಿ. ದನವನ್ನು ಹಟ್ಟೋಟಿಯಲ್ಲಿಟ್ಟು



ಚಿತ್ರ ೬. ೧೫ನೆಯ ಶತಮಾನದಲ್ಲಿ ಹಾಲನ್ನು ಬಳಸುತ್ತಿದ್ದ ದೇಶಗಳ ಎಲ್ಲೆಯನ್ನು ತುಕ್ಕುಡ ಗೀರಿನಿಂದ ಕಾಣಿಸಿದೆ. ಯಾವ ಯಾವ ಪ್ರದೇಶದಲ್ಲಿ ಯಾವ ಯಾವುದು ಮುಖ್ಯ ಸಾಕುಪ್ರಾಣಿ ಎಂಬುದನ್ನು ತೋರಿಸಿದೆ.


ನೈರುತ
ಕುಡಿಂ
ಮತ್ತು
ನೂರು

ಜಪಾನ

"

ಅಲ್ಲಿಯ
ಗಳಾದ
ದೊಡ್ಡ
ಕಡೆ, ಈ
ಜೆಳೆದಿಲ್ಲ.
ಎಮ್ಮೆಯ
ಆದ ಸ್ವಂತ
ದನಗಳಿಗೆ
ಎಂಬ ಪ್ರ
ಮಾನದಲ್ಲಿ
ಇತ್ತು ಎಂ
ಗಳ ಕೆಳಗ
(ಯಾಕ್
ಬಹುಭಾಗ
ದಲ್ಲಾಗಲೀ,
ಈ ಪದ್ಧತಿಂ
ಮತ್ತೆ ಕೆಲ

ಮತ
ಕರೆದದ್ದು ಧ
ಇದಕ್ಕೆ ಕ



ಚಿತ್ರ ೬. ಮಾನವ, ಹಾಲಿಗೋಸ್ಕರ ಮೊದಲು ಪಳಗಿಸಿ ಸಾಕಿದ್ದು ಮೇಕೆ, ದನವಲ್ಲ

ಕೊಂಡು ಕರೆಯುವುದು ಆಗಿನ ಮಾನವನಿಗೆ ಕಷ್ಟವಾಗಿತ್ತು. ಆಗ ದನಗಳು ಈಗಿನಷ್ಟು ಪಳಗಿರಲಿಲ್ಲ; ಸಾಧುವಾಗಿರಲಿಲ್ಲ–ನಮ್ಮ ಅಮೃತ ಮಹಲ್ ದನಗಳಂತೆ ರೋಷಾವೇಷದಿಂದ ಕೂಡಿತ್ತು. ಮೇಕೆ ಹಾಗಲ್ಲ, ಸುಲಭವಾಗಿ ಹದ್ದಿನಲ್ಲಿ ಇಟ್ಟುಕೊಳ್ಳಬಲ್ಲ ಪ್ರಾಣಿ; ಒಗ್ಗಿಸಿಕೊಳ್ಳಬಹುದು.

ಕೆಲವು ಕಾಲದ ನಂತರ ಇತರ ಪ್ರಾಣಿಗಳಿಂದಲೂ–ಕುದುರೆ, ಕುರಿಗಳಿಂದಲೂ ಹಾಲು ಕರೆಯಲು ಪ್ರಾರಂಭಿಸಿದರು. ಹಂದಿಯನ್ನು ಮಾತ್ರ ಕರೆಯಲಿಲ್ಲ.

ಹಾಲನ್ನು ಕರೆದು ಆಹಾರವಾಗಿ ಬಳಸುವ ಪದ್ಧತಿಯಿಂದ ಆಗಿನ ಕಾಲದ ಜನರಲ್ಲಿ, ಜನ ಜೀವನದಲ್ಲಿ ಒಂದು ಕ್ರಾಂತಿಯೇ ಆಗಿ ಹೋಯಿತೆನ್ನಬಹುದು. ಬರಿ ಮಾಂಸಕ್ಕಾಗಿಯೇ ಪ್ರಾಣಿಗಳನ್ನು ಸಾಕುತ್ತಿದ್ದಾಗ, ನಿಂತೆಡೆಯೆ ಸಾಕಾದಷ್ಟು ಆಹಾರವನ್ನು, ಅದರಲ್ಲೂ ಪ್ರೋಟೀನು ಆಹಾರ–ಬೆಳವಣಿಗೆಗೆ

ಬೇಕಾದ ಆಹಾರವನ್ನು, ಪಡೆಯುವುದು ಕಷ್ಟವಾಗಿತ್ತು. ಇವುಗಳನ್ನು ಆಹಾರ ಕ್ಕಾಗಿ ಕೊಂದಂತೆಲ್ಲಾ ಇವುಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಹೆಚ್ಚು ಪ್ರಾಣಿಗಳನ್ನು ಸಾಕಿದರೆ ಅವುಗಳಿಗೆ ಮೇವು, ಆಹಾರ ಒದಗಿಸಲು ದೂರದ ಕಾವಲುಗಳಿಗೆ ಅಟ್ಟಿಕೊಂಡು ಹೋಗಬೇಕು. ಅಂದರೆ, ಒಂದೆಡೆಯೇ ಜೋಪಡಿ ಹಾಕಿಕೊಂಡು ನಿಲ್ಲುವುದು ಕಷ್ಟವಾಯಿತು. ಪುನಃ, ತಮಗಲ್ಲದಿದ್ದರೂ, ತಾವು ಸಾಕಿದ ಪ್ರಾಣಿಗಳ ಮೇವಿಗಾಗಿ ಅಲೆಯಬೇಕಾಗಿತ್ತು. ಮಾಂಸದ ಬದಲಾಗಿ ಹಾಲನ್ನು ಬಳಸಲು ಉಪಕ್ರಮಿಸಿದಾಗ, ಹೆಚ್ಚು ಪ್ರಾಣಿಗಳನ್ನು ಸಾಕುವುದರ ಬದಲು ಸಣ್ಣ ಮಂದೆಗಳನ್ನು ಸಾಕಿ, ಹತ್ತಿರದ ಕಾಡು, ಕಾವಲು ಗಳಲ್ಲೇ ಮೇಯಿಸಿ ಸಾಯಂಕಾಲದ ಹೊತ್ತಿಗೆ ತಮ್ಮ ಜೋಪಡಿಗೆ ಹಿಂದಿರು ಗಲು ಸಾಧ್ಯವಾಯಿತು. ಮಾನವ ಒಂದೆಡೆ ನೆಲೆಸಿದ ಮೇಲೆ ಇತರ ಜನ ಗಳೊಡನೆ ಸೇರಿ ಹಳ್ಳಿ ಕಟ್ಟುವಂತಾಯಿತು. ಸಮಾಜ ಜೀವನ ಪ್ರಾರಂಭ ವಾಯಿತು. ಬೇಸಾಯದ ವ್ಯಾಪ್ತಿ ಬೆಳೆಯಿತು. ಜೀವನ ನೆಮ್ಮದಿಯಾ ಯಿತು. ಬಿಡುವು ಸಿಕ್ಕಿತು. ಕಲೆ, ಸಂಗೀತ, ಸಾಹಿತ್ಯ, ಬೆಳೆಯಿತು. ನಾಗರೀಕತೆ ಉದಯವಾಯಿತು.

ಈ ಜನರಿಗೆ ಹಾಲು, ಕಾಳು ಒಂದಕ್ಕೊಂದು ಪೂರಕವಾದ ಆಹಾರ ವಾಯಿತು. ಕಾಳಿನಿಂದ ಶಕ್ತಿ, ಹಾಲಿನಿಂದ ಬೆಳವಣಿಗೆ. ಶಕ್ತಿ ಹೆಚ್ಚಿ, ಬುದ್ಧಿ ಕುದುರಿ, ಶಿಲಾಯುಗದ ಕಾಡುಮಾನವ, ಊರು ಮಾನವನಾದ; ನಾಗರಿಕ ನಾದ.

ಹಾಲು, ಕಾಳು ಎರಡು ಸಾಕು, ಮಾನವ ಜೀವನಕ್ಕೆ. ಕಾಳಿನಿಂದ ಬಂದ ಬ್ರೆಡ್ಡು, ರೊಟ್ಟಿ, ಚಪಾತಿ, ಅನ್ನ, ಹಿಟ್ಟು, ಜತೆಗೆ ಹಾಲು, ಮೊಸರು, ತುಪ್ಪ ಮಾನವನನ್ನು ಅನಂತವಾಗಿ, ಆರೋಗ್ಯವಾಗಿ ಬಾಳಿಸುವ ಆಹಾರ.

ದನಗಳನ್ನು ಪಳಗಿಸಿದ ಮೇಲೆ, ಅವು ಸಾಕಷ್ಟು ಸಾಧುವಾದ ಮೇಲೆ, ಈ ದನದ ಹಿಂಡುಗಳನ್ನು ಹುಡುಗರು, ಎಳೆಯರು ಅಟ್ಟಿಕೊಂಡು ಹೋಗಿ ಮೇಯಿಸುವಂತಾಯಿತು. ದೊಡ್ಡವರಿಗೆ ಬಿಡುವು ಸಿಕ್ಕಿತು. ಬಿಡುವು ಸಂಗೀತ, ಸಾಹಿತ್ಯ, ನಾಗರೀಕತೆಯ ಪ್ರೇರಕ.

ಬೇಸಾಯ, ಪಶುಪಾಲನೆ ಬೆಳದಂತೆ ಆಹಾರದ ಕೊರತೆ ನೀಗಿತು. ಜನಸಂಖ್ಯೆ ಬೆಳೆಯಿತು. ಸಂಖ್ಯೆ ಹೆಚ್ಚಿದಂತೆಲ್ಲ ಹೊಸ ಹಳ್ಳಿಗಳನ್ನು, ಪಟ್ಟಣ

ಗಳನ್ನು ಕಟ್ಟಿಕೊಂಡರು. ಹೊಸ ಹೊಸ ಪ್ರದೇಶಗಳಿಗೆ ವಲಸೆ ಎತ್ತಿದರು. ಈ ಬೇಸಾಯ, ಪಶುಪಾಲನೆ ಕಸಬುಗಳನ್ನು ಹಿಡಿದ ನೈರುತ್ಯ ಏಷ್ಯಾ ಜನರು ಎಲ್ಲಾ ದಿಕ್ಕುಗಳಿಗೂ ಹರಡಿ, ಮಾನವ ಕುಲವನ್ನು ಎಲ್ಲಾ ಕಡೆಯಲ್ಲೂ ಬೆಳೆಸಿದರು. ಅಲ್ಲೆಲ್ಲಾ ತಮ್ಮ ಬೇಸಾಯ, ಪಶುಪಾಲನೆ ಪದ್ಧತಿಗಳನ್ನು ಹರಡಿದರು.

ಆದರೆ, ಹೀಗೆ ಮಾಡುವಾಗ, ಕೆಲವರು, ಬೇಸಾಯವನ್ನೇ ಹೆಚ್ಚಾಗಿ ಅವಲಂಬಿಸಿದರು. ಮತ್ತೆ ಕೆಲವರು, ಪಶುಪಾಲನೆಯನ್ನೇ ಮುಖ್ಯ ಕಸುಬಾಗಿ ಮಾಡಿಕೊಂಡರು. ಬೇಸಾಯವನ್ನೇ ಪ್ರಾಧಾನ್ಯವಾಗಿಟ್ಟುಕೊಂಡವರು, ಹರಪ್ಪ ಜನ; ಪಶುಪಾಲನೆಯನ್ನೇ ಪೂರ್ಣವಾಗಿ ಅವಲಂಬಿಸಿದ ಜನ, ಆರ್ಯರು. ಹಿಗಾಗಿ ಇವರಿಬ್ಬರ ನಾಗರೀಕತೆ, ಸಂಸ್ಕೃತಿಯೇ ಬೇರೆಯಾದುದರಿಂದ ಇಂಡಿಯ ದಲ್ಲಿ ಇವರಿಬ್ಬರೂ ಸುಮಾರು 4 ಸಾವಿರ ವರ್ಷಗಳ ಕೆಳಗೆ ಸಂಧಿಸಿದಾಗ ಇವರ ಮಧ್ಯೆ 'ಹಗೆತನವೇ ಬೆಳೆಯಿತು. ಇದನ್ನು ಆರ್ಯರ ದನಗಳ ಪ್ರಸ್ತಾಪ ಮಾಡುವಾಗ ಹೇಳುತೀನಿ."

"ಬಹಳ ಚೆನ್ನಾಗಿದೆ, ಮಾವ, ಈ ದನದ, ಹಾಲಿನ ಕತೆ. ಇನ್ನೂ ಕೇಳಬೇಕೆನ್ನಿಸುತ್ತೆ. ದನಗಳನ್ನು ಸಾಕುವುದಕ್ಕೆ ಮುಂಚೆ ಅವು ಹುಲಿ, ಚಿರತೆ ತರಹ ಕಾಡು ಪ್ರಾಣಿಗಳಾಗಿದ್ದವೆ?"

"ಹೌದು, ನಮ್ಮ ಸಾಧುವಾದ ಹಸುವಿನ ಪೂರ್ವಜ, ಕಾಡು ದನವೇ ಆಗಿತ್ತು. ಈ ಕಾಡುದನ ನೂರು ಇನ್ನೂರು ವರ್ಷಗಳ ಕೆಳಗೆ ಯೂರೋಪಿನಲ್ಲಿ ಅನೇಕ ಕಡೆ ಓಡಾಡುತ್ತಿತ್ತಂತೆ. ಇಲ್ಲಿಯತನಕ, ಕಾಡುದನ ಊರುದನ ವಾದದ್ದು ಯಾವಾಗ, ಎಲ್ಲಿ, ಯಾರಿಂದ, ಹೇಗೆ, ಅಂತ ಹೇಳಿದೆ. ಈ ಊರು ದನಗಳ ಜಾತಿ, ರೂಪ, ಲಕ್ಷಣ, ಗುಣ ಮುಂತಾದುವನ್ನು ಹೇಳುವುದಕ್ಕೆ ಮುಂಚೆ, ದನಗಳ ಮೂಲ ಯಾವದು, ಅವುಗಳ ಹತ್ತಿರದ ನಂಟರು ಯಾವ ಪ್ರಾಣಿಗಳು, ದನ ಹೇಗೆ ವಿಕಾಸವಾಯಿತು, ಎಂಬುದನ್ನು ಸ್ವಲ್ಪ ತಿಳಿದು ಕೊಳ್ಳೋಣ. ಸ್ವಲ್ಪ ಪ್ರಾಣಿಶಾಸ್ತ್ರ (Zoology) ನಿನ್ನ ತಲೆಯೊಳಗೆ ಸೇರುವುದು ಒಳ್ಳೆಯದು. ಹಿಂದೆ, ಮರ, ಹಣ್ಣುಗಳ ವಿಷಯ ಹೇಳಿದಾಗ ಸ್ವಲ್ಪ ಸಸ್ಯ ಶಾಸ್ತ್ರ ತುಂಬಿದೆ. ಈಗ ಪ್ರಾಣಿಶಾಸ್ತ್ರದ ಸರದಿ. ದನ, 'ಬೋವಿಡಿ' (Bovidae) ಎಂಬ ಪ್ರಾಣಿಕುಲಕ್ಕೆ (Family) ಸೇರಿದ ಒಂದು ವಂಶ (Species). ದನವಲ್ಲದೆ, ಎಮ್ಮೆ, ಕುರಿ, ಮೇಕೆ, ಕಾಡೆತ್ತು-ಬೈಸನ್ ಅಂತಾರಲ್ಲ ಅದು, ಟಿಬೆಟಿನಲ್ಲಿ

ಹಿಮಾಲಯದ ಎತ್ತರ ಪ್ರದೇಶಗಳಲ್ಲಿರುವ ಯಾಕ್, ಆಂಟಿಲೋಪು (ಒಂದು ಬಗೆಯ ಹುಲ್ಲೆ) ಗಯಾಲ್, ಬಾಂಟಿಂಗ್ ಮುಂತಾದುವೆಲ್ಲಾ ಈ ಬೋವಿಡಿ ಕುಲಕ್ಕೆ ಸೇರಿದ ಪ್ರಾಣಿ ವಂಶಗಳು."

"ಯಾಕೆ, ಇವೆಲ್ಲಾ ಹುಲ್ಲುಮೇಯುವ ಪ್ರಾಣಿಗಳು, ಅಂತಲೇ ?"


"ಇವು ಹುಲ್ಲನ್ನು ಮಾತ್ರವೇ ಅಲ್ಲ, ಸೊಪ್ಪನ್ನೂ ಎಲೆಯನ್ನೂ, ಮೇಯ ಬಲ್ಲವು. ಇವು ಸಸ್ಯಾಹಾರಿಗಳು ನಿಜ. ಆದರೆ ಕುದುರೆ, ಒಂಟೆಗಳೂ ಸಸ್ಯಾಹಾರಿಗಳೇ. ಆದರೂ ಇವು ಬೋವಿಡಿ ಕುಲಕ್ಕೆ ಸೇರಿಲ್ಲ. ಕುದುರೆಗೂ, ದನಕ್ಕೂ ವ್ಯತ್ಯಾಸ ಏನು ಹೇಳು ?"

"ಕುದುರೆಗೆ ಕೊಂಬಿಲ್ಲ ; ದನಕ್ಕೆ ಕೊಂಬಿದೆ.... ಆಮೇಲೆ.... ಕುದುರೆ ಕತ್ತೆ ಗೊರಸು ಸೀಳಿರುವುದಿಲ್ಲ ; ದನದ್ದು, ಎಮ್ಮೆಯದು ಒಡೆದಿರುತ್ತೆ."

"ಭೇಷ್, ಇನ್ನೊಂದು ವ್ಯತ್ಯಾಸ ನಿನಗೆ ಗೊತ್ತೋ ಇಲ್ಲವೋ. ದನ ಎಮ್ಮೆ ಮೆಲಕುಹಾಕುತ್ತವೆ. ಕುದುರೆ ಮೆಲಕುಹಾಕುವುದಿಲ್ಲ. ಬೋವಿಡಿ ಮೆಲಕು ಪ್ರಾಣಿಗಳು. ಅದೇ ಈ ಕುಲದ ಪ್ರಾಣಿಗಳ ವಿಶೇಷ.

ಪ್ರಾಣಿಗಳಲ್ಲಿ ಮುಖ್ಯವಾಗಿ ಎರಡು ತರಗತಿಗಳಿವೆ—ಮಾಂಸಾಹಾರಿಗಳು, ಸಸ್ಯಾಹಾರಿಗಳು. ಸಸ್ಯಾಹಾರಿಗಳಲ್ಲಿ, ಆನೆ, ಸೊಂಡಿಲಿರುವುದರಿಂದ ಪ್ರೊಬೊಸಿಡಿ ತರಗತಿಗೆ ಸೇರಿದೆ. ಕುದುರೆ, ಕತ್ತೆ, ಗೆಂಡಾಮೃಗ ಇವು ಪೆರಿಸ್ಸೊಡಾಕ್ಟೈಲ ತರಗತಿಯ ಪ್ರಾಣಿಗಳು. ಡಾಕ್ಟೈಲ-(Dactyla) ಅಂದರೆ ಬೆರಳು. ಪ್ರಾಣಿಗಳ ಬೆರಳು ಯಾವದು ? ಗೊರಸು. ಪೆರಿಸ್ಸೋ ಅಂದರೆ ಬೆಸಸಂಖ್ಯೆ–1, 3, 5 ಇವೆಲ್ಲಾ ಪೆರಿಸ್ಸೋ ಡಾಕ್ಟೈಲ ಅಂದರೆ ಬೆಸಸಂಖ್ಯೆ ಗೊರಸಿರುವ ಪ್ರಾಣಿಗಳು ಅಂತ. ಕುದುರೆಗೆ ಒಂದು, ಗೆಂಡಾಮೃಗಕ್ಕೆ ಮೂರು ಗೊರಸು.

ದನ ಇತ್ಯಾದಿ ಪ್ರಾಣಿಗಳು ಆರ್ಟಿಯೊಡಾಕ್ಟೈಲ (Artio-dactyla) ಅಂದರೆ ಸಮಸಂಖ್ಯೆ ಗೊರಸಿನ ಪ್ರಾಣಿಗಳು. ಇವಕ್ಕೆ, ಸಾಮಾನ್ಯವಾಗಿ 2 ಗೊರಸುಗಳಿವೆ. ನೋಡುವುದಕ್ಕೆ ಗೊರಸು ಸೀಳಿದಂತೆ ಕಾಣುತ್ತೆ, ಅಷ್ಟೆ. ಆದರೆ, ಅವು ನಿಜವಾದ ಎರಡು ಕಾಲ್ಬೆರಳುಗಳು; ಗೊರಸಿನ ರೂಪತಾಳಿವೆ. 5 ಬೆರಳುಗಳ ಪೈಕಿ ಮೂರು ಮಾಯವಾಗಿದೆ. ಕುದುರೆಯಲ್ಲಿ ಮಧ್ಯದ ಬೆರಳು ಗೊರಸಾಗಿದೆ. ದನ ಮುಂತಾದುವುಗಳಲ್ಲಿ ಮೂರು ಮತ್ತು, ನಾಲ್ಕನೆಯ



ಚಿತ್ರ ೮. ಕುದುರೆ ಮತ್ತು ಮೆಲಕು ಪ್ರಾಣಿಗಳ ಜಠರ,

ಎಡ : ಕುದುರೆಯದು ಸರಳ ; ಬಲ : ದನದ್ದು, ನಾಲ್ಕು ಜಠರಗಳು.

ಕೆಳಗೆ : ಎಡಕ್ಕೆ, ಮೆಲಕು ಪ್ರಾಣಿಗಳ ಗೊರಸು ; ಬಲಕ್ಕೆ ಕುದುರೆಯ ಗೊರಸು.

ಗೊರಸುಗಳಾಗಿವೆ. ಎರಡನೆಯ ಮತ್ತು ಐದನೆಯ ಬೆರಳುಗಳು ಗೊರಸಿನ ಹಿಂದೆ ಸಣ್ಣಗೆ, ಅವಶೇಷವಾಗಿ ಉಳಿದುಕೊಂಡಿವೆ.

ಈ ಕಾಲ್ಬೆರಳುಗಳು ಈ ಪ್ರಾಣಿಗಳಲ್ಲಿ ಗೊರಸಾಗಲು ಕಾರಣವೇನು? ಗೊರಸು, ಕೊಂಬಿನಿಂದ ಮುಚ್ಚಿಕೊಂಡಿದೆ ನಮ್ಮ—ಬೆರಳುಗಳ ತುದಿಯಲ್ಲಿ ಕೊಂಬಿನಿಂದ ಮಾಡಿದ ಉಗುರುಗಳಂತೆ. ಕೊಂಬು ಗಟ್ಟಿ ; ಎಂತಹ ಒರಟು ನೆಲದಮೇಲೆ ನಡೆದರೂ, ಓಡಾಡಿದರೂ ಬೇಗ ತೇಯುವುದಿಲ್ಲ. ಈ ಗೊರಸಿನ ಪ್ರಾಣಿಗಳು– ಇವನ್ನು ಅಂಗ್ಯುಲೇಟ್ಸ್ ಅಂತಾರೆ (ungulates) –ಸಸ್ಯಾಹಾರಿ ಗಳು. ಮರಳು, ಮುಳ್ಳು, ಕಲ್ಲು, ನುರುಜು ಎನ್ನದೆ, ಮೇವನ್ನು ಹುಡುಕಿ

ಕೊಂಡು ಓಡಾಡಬೇಕಾದ ಪ್ರಾಣಿಗಳಿವು. ಹೀಗೆ ಅಲೆದರೆ ಕಾಲು ಸವೆಯುವುದಿಲ್ಲವೇ. ನಿಮ್ಮಮ್ಮ ನಿನಗೆ, ನಿನ್ನ ಕಾಲು ಸವೆಯದಿರಲು ಎಕ್ಕಡ ಕೊಂಡು ಕೊಡಿಸುತ್ತಾಳೆ. ಈ ಪ್ರಾಣಿಗಳಿಗೆ ಯಾರು ಪಾದರಕ್ಷೆಗಳನ್ನು ಕೊಡಿಸುವವರು ? ಅದಕ್ಕೋಸ್ಕರ, ಅವೇ ಕೊಂಬಿನ ಎಕ್ಕಡಗಳನ್ನು ಬೆಳೆಯಿಸಿಕೊಂಡಿವೆ. ಈ ಎಕ್ಕಡಗಳೇ ಅವುಗಳ ಗೊರಸು.

ಕೊಂಬಿನ ಗೊರಸಿಗೆ ಮತ್ತೊಂದು ಕಾರಣವೂ ಇದೆ. ಈ ಗೊರಸಿನ ಪ್ರಾಣಿಗಳು ಚಲಿಸುವಾಗ ಪಾದ ಊರಿ ಚಲಿಸುವುದಿಲ್ಲ. ಹೀಗೆ ಊರಿದರೆ ಅವು ಬೇಗ ನಡೆಯನಾರವು, ಓಡಲಾರವು. ನೀನು ಓಡುವಾಗಲೂ ಅಷ್ಟೆ. ನಿನ್ನ ಪಾದದ ತುದಿ ಮಾತ್ರ ನೆಲವನ್ನು ಮುಟ್ಟುತ್ತೆ. ಪಾದ ಊರಿ ಓಡುವುದಕ್ಕೆ ಪ್ರಯತ್ನಮಾಡು, ಆಗ ತಿಳಿಯುತ್ತೆ. ಹೀಗೆ ಚಲಿಸುವಾಗ ದೇಹದ ತೂಕವೆಲ್ಲಾ ಪಾದದ ತುದಿಯಮೇಲೆ ಬೀಳುತ್ತೆ. ಇದಕ್ಕಾಗಿ, ಈ ತುದಿ ಬಹಳ ಗಟ್ಟಿಯಾಗಿರಬೇಕು. ಅಂತಲೇ ಕೊಂಬಿನ ಗೊರಸು.

ಎರಡು ಗೊರಸು ಯಾಕೆ? 5 ಬೆರಳೂ 5 ಗೊರಸಾಗಲಿಲ್ಲವೇಕೆ ? 5 ಬೆರಳು ಅಥವಾ ಗೊರಸು ಇದ್ದರೆ ಓಟಕ್ಕೆ, ಪೇರಿ ಕೀಳುವುದಕ್ಕೆ ಕಷ್ಟ. ಈ ಪ್ರಾಣಿಗಳಿಗೆ ಶತ್ರುಭಯ ಜಾಸ್ತಿ. ಶತ್ರುಗಳನ್ನ ಕಂಡ ತಕ್ಷಣವೇ ಕಾಲಿಗೆ ಬುದ್ಧಿ ಹೇಳಬೇಕು ; ಓಡಬೇಕು. ಗೊರಸಿನ ಸಂಖ್ಯೆ ಕಡಿಮೆ ಇರುವುದರಿಂದ ಹೀಗೆ ಓಡಿ ಶತ್ರುಗಳಿಂದ ಪಾರಾಗುತ್ತವೆ. ಕುದುರೆಗೆ ಒಂದು ಗೊರಸು ಇರುವುದರಿಂದ ಎರಡು ಗೊರಸಿನ ದನಕ್ಕಿಂತ ಬೇಗ ಓಡಬಲ್ಲದು. ಜೂಜಿಗೆ ಕುದುರೆ ಓಡಿಸುತ್ತಾರೆಯೇ ವಿನಾ ದನಗಳನ್ನು ಓಡಿಸುತ್ತಾರೆಯೆ ? ಜಿಂಕೆಗೆ 2 ಗೊರಸುಗಳಿವೆಯಲ್ಲಾ ಅಂತ ಕೇಳಬಹುದು. ಆದರೆ ಇವು ಚಿಕ್ಕದಾಗಿರುವುದರಿಂದ ಓಟಕ್ಕೆ ಅಡಚಣೆಯಿಲ್ಲ. ಹಾಗಾದರೆ, ದನಗಳಿಗೆ ಎರಡು ಗೊರಸು ಏನು ಉಪಯೋಗ? ಉಪಯೋಗವಿದೆ. ಒರಟು ನೆಲದ ಮೇಲೆ ಎರಡು ಗೊರಸಿದ್ದರೆ ಆಯ ತಪ್ಪದೆ ಓಡಾಡಲು ಅನುಕೂಲ. ಮುಗ್ಗರಿಸುವುದು ಅಪರೂಪ. ಅಲ್ಲದೆ, ಸಡಿಲವಾದ ನೆಲದಲ್ಲಿ, ಮರಳು, ಕೊಚ್ಚೆಯಲ್ಲಿ ಎರಡು ಗೊರಸಿರುವುದು ಬಹಳ ಅನುಕೂಲ. ಇಂತಹ ನೆಲದಲ್ಲಿ ಕಾಲೂರಿದಾಗ ಗೊರಸು ಹಿಗ್ಗುತ್ತೆ. ಆಯ ಸಿಗುತ್ತೆ. ಕಾಲು ತೆಗೆದಾಗ ಗೊರಸು ಮುಚ್ಚುತ್ತೆ ; ಎತ್ತುವುದಕ್ಕೆ ಅನುಕೂಲವಾಗುತ್ತೆ. ಹೆಚ್ಚಾಗಿ ಜೌಗು ನೆಲದಲ್ಲಿ, ಕೆಸರಿನಲ್ಲೇ

ಓಡಾಡುವ ಎಮ್ಮೆಗಳಲ್ಲಿ, ಗೊರಸುಗಳು ಅಗಲವಾಗಿರುವುದಕ್ಕೂ ಇದೇ ಕಾರಣ. ಅದೇ ಗುಡ್ಡ ಬೆಟ್ಟಗಳಲ್ಲಿ ಓಡಾಡುವ ಕಾಡುಎತ್ತು (ಬೈಸನ್), ಮೇಕೆ ಮುಂತಾದ ಪ್ರಾಣಿಗಳ ಗೊರಸು ಹೆಚ್ಚು ಅಗಲಕ್ಕೆ ಇರದೆ ಇರುವುದಕ್ಕೂ ಇದೇ ಕಾರಣ. ಅವುಗಳ ಗೊರಸು ಚಿಕ್ಕದಾಗಿ, ಅಡಕವಾಗಿರುತ್ತೆ.

ಗೊರಸಿನ ಪ್ರಾಣಿಗಳಿಗೆ ಶತ್ರು ಭಯ ಹೆಚ್ಚು ಅಂತ ಹೇಳಿದೆನಲ್ಲ. ಅದಕ್ಕೇ, ಅವಕ್ಕೆ ಅಂಜಿಕೆ ಹೆಚ್ಚು–ಅಂಜುಬುರುಕ ಪ್ರಾಣಿಗಳು ಇವು. ಯಾವಾಗಲೂ, ಹುಷಾರಾಗಿ ಶತ್ರುಗಳ ಬರುವನ್ನೇ ಕಾಯುತ್ತಿರುತ್ತವೆ. ಈ ಶತ್ರುಗಳಿಂದ ಓಡಿಹೋಗಲು ಅವುಗಳ ದೇಹ ರಚನೆಯೂ ಅನುಕೂಲ ವಾಗಿದೆ. ಹೀಗೆ ಪಾರಾಗುವುದಕ್ಕಾಗಿಯೇ ಇವುಗಳಲ್ಲಿ ಅನೇಕ ವ್ಯತ್ಯಾಸಗಳು ವಿಕಾಸವಾಗಿವೆ. ಮೊದಲು ಅವುಗಳ ಕಣ್ಣು. ಅವು ಕುದುರೆ, ದನಗಳಲ್ಲಿ ಎಲ್ಲಿವೆ, ಗಮನಿಸಿದ್ದೀಯಾ ?

" ಓಹೋ, ನಮ್ಮಗಳಲ್ಲಿ ಇರುವಹಾಗೆ ಇವುಗಳಲ್ಲಿ ಕಣ್ಣುಗಳು ಹಣೆಯ ಮುಂದಿಲ್ಲ. ಇದಕ್ಕೆ ಕಾರಣವೂ ಇದೆಯೆ, ಮಾವ ? "

" ಇದೇ ಮಗೂ, ಇದೆ. ಪ್ರಕೃತಿಯಲ್ಲಿ, ಪ್ರತಿಯೊಂದು ರೂಪಕ್ಕೂ, ಲಕ್ಷಣಕ್ಕೂ, ರಚನೆಗೂ ಕಾರಣವಿದೆ. ಜೀವನದ ಹೋರಾಟದಲ್ಲಿ ಯಾವ ರೂಪ, ಲಕ್ಷಣ, ಗುಣ, ರಚನೆ ಅನುಕೂಲವೋ ಅದು ಉಳಿಯುತ್ತದೆ. ಉಪಯೋಗಕ್ಕೆ ಬಾರದವು ಅಳಿಯುತ್ತವೆ. ದನ, ಕುದುರೆಗಳಿಗೆ ಕಣ್ಣು ಪಕ್ಕ ಗಳಲ್ಲಿರುವುದರಿಂದ, ಶತ್ರುಗಳಿಂದ ಅಪಾಯ ಕಡಿಮೆ. ಅವು ಕಾಡಿನಲ್ಲಿದ್ದಾಗ, ಶತ್ರುಗಳು ಯಾವ ದಿಕ್ಕಿನಿಂದಲಾದರೂ ಬಂದು ಇವುಗಳ ಮೇಲೆ ಎಗರಬಹುದು. ಕಣ್ಣುಗಳು ಪಕ್ಕದಲ್ಲಿರುವುದರಿಂದ, ಕತ್ತನ್ನು ಸ್ವಲ್ಪ ವಾಲಿಸಿದರೆ ಹಿಂದೆ ಏನಿದೆ, ಯಾವ ಶತ್ರು ಬರುತ್ತಿದೆ ಎಂಬುದನ್ನು ಸುಲಭವಾಗಿ ಕಂಡುಕೊಳ್ಳಬಲ್ಲವು. ನಾವು ಹೀಗೆ ಮಾಡಬೇಕಾದರೆ ಕತ್ತನ್ನೇ ಪೂರ್ತ ತಿರುಗಿಸಿದರೆ ಸಾಲದು; ದೇಹವನ್ನೂ ತಿರುಗಿಸಬೇಕು. ಜಟಕಾ ಗಾಡಿಯ ಕುದುರೆಗೆ ಮೊಖವಾಡ ಹಾಕುವುದು ಈ ಪಕ್ಕದ ಕಣ್ಣಿಗಾಗಿಯೇ. ಕುದುರೆ ಕತ್ತು ತಿರುಗಿಸಿದಾಗ ಹಿಂದೆ ಬರುವ ಜನ, ಪ್ರಾಣಿ, ಗಾಡಿಗಳನ್ನು ಕಂಡು ಬೆದರಿ ಎಗರಲಾಡುತ್ತವೆ, ಮೊಖವಾಡ ಹಾಕಿ ಬಿಟ್ಟರೆ ಮುಂದಿರುವುದು ಮಾತ್ರ ಕಾಣುತ್ತೆ. ಕುದುರೆ, ನೆಟ್ಟಗೆ ಸಲೀಸಾಗಿ ಹೇಳಿದ ಹಾಗೆ ಕೇಳುತ್ತ ಹೋಗುತ್ತೆ.

ಕೊಂಡು ಓಡಾಡಬೇಕಾದ ಪ್ರಾಣಿಗಳಿವು. ಹೀಗೆ ಅಲೆದರೆ ಕಾಲು ಸವೆಯುವುದಿಲ್ಲವೇ. ನಿಮ್ಮಮ್ಮ ನಿನಗೆ, ನಿನ್ನ ಕಾಲು ಸವೆಯದಿರಲು ಎಕ್ಕಡ ಕೊಂಡು ಕೊಡಿಸುತ್ತಾಳೆ. ಈ ಪ್ರಾಣಿಗಳಿಗೆ ಯಾರು ಪಾದರಕ್ಷೆಗಳನ್ನು ಕೊಡಿಸುವವರು ? ಅದಕ್ಕೋಸ್ಕರ, ಅವೇ ಕೊಂಬಿನ ಎಕ್ಕಡಗಳನ್ನು ಬೆಳೆಯಿಸಿಕೊಂಡಿವೆ. ಈ ಎಕ್ಕಡಗಳೇ ಅವುಗಳ ಗೊರಸು.

ಕೊಂಬಿನ ಗೊರಸಿಗೆ ಮತ್ತೊಂದು ಕಾರಣವೂ ಇದೆ. ಈ ಗೊರಸಿನ ಪ್ರಾಣಿಗಳು ಚಲಿಸುವಾಗ ಪಾದ ಊರಿ ಚಲಿಸುವುದಿಲ್ಲ. ಹೀಗೆ ಊರಿದರೆ ಅವು ಬೇಗ ನಡೆಯನಾರವು, ಓಡಲಾರವು. ನೀನು ಓಡುವಾಗಲೂ ಅಷ್ಟೆ. ನಿನ್ನ ಪಾದದ ತುದಿ ಮಾತ್ರ ನೆಲವನ್ನು ಮುಟ್ಟುತ್ತೆ. ಪಾದ ಊರಿ ಓಡುವುದಕ್ಕೆ ಪ್ರಯತ್ನಮಾಡು, ಆಗ ತಿಳಿಯುತ್ತೆ. ಹೀಗೆ ಚಲಿಸುವಾಗ ದೇಹದ ತೂಕವೆಲ್ಲಾ ಪಾದದ ತುದಿಯಮೇಲೆ ಬೀಳುತ್ತೆ. ಇದಕ್ಕಾಗಿ, ಈ ತುದಿ ಬಹಳ ಗಟ್ಟಿಯಾಗಿರಬೇಕು. ಅಂತಲೇ ಕೊಂಬಿನ ಗೊರಸು.

ಎರಡು ಗೊರಸು ಯಾಕೆ ? 5 ಬೆರಳೂ 5 ಗೊರಸಾಗಲಿಲ್ಲವೇಕೆ ? 5 ಬೆರಳು ಅಥವಾ ಗೊರಸು ಇದ್ದರೆ ಓಟಕ್ಕೆ, ಪೇರಿ ಕೀಳುವುದಕ್ಕೆ ಕಷ್ಟ. ಈ ಪ್ರಾಣಿಗಳಿಗೆ ಶತ್ರುಭಯ ಜಾಸ್ತಿ. ಶತ್ರುಗಳನ್ನ ಕಂಡ ತಕ್ಷಣವೇ ಕಾಲಿಗೆ ಬುದ್ಧಿ ಹೇಳಬೇಕು ; ಓಡಬೇಕು. ಗೊರಸಿನ ಸಂಖ್ಯೆ ಕಡಿಮೆ ಇರುವುದರಿಂದ ಹೀಗೆ ಓಡಿ ಶತ್ರುಗಳಿಂದ ಪಾರಾಗುತ್ತವೆ. ಕುದುರೆಗೆ ಒಂದು ಗೊರಸು ಇರುವುದರಿಂದ ಎರಡು ಗೊರಸಿನ ದನಕ್ಕಿಂತ ಬೇಗ ಓಡಬಲ್ಲದು. ಜೂಜಿಗೆ ಕುದುರೆ ಓಡಿಸುತ್ತಾರೆಯೇ ವಿನಾ ದನಗಳನ್ನು ಓಡಿಸುತ್ತಾರೆಯೆ ? ಜಿಂಕೆಗೆ 2 ಗೊರಸುಗಳಿವೆಯಲ್ಲಾ ಅಂತ ಕೇಳಬಹುದು. ಆದರೆ ಇವು ಚಿಕ್ಕದಾಗಿರುವುದರಿಂದ ಓಟಕ್ಕೆ ಅಡಚಣೆಯಿಲ್ಲ. ಹಾಗಾದರೆ, ದನಗಳಿಗೆ ಎರಡು ಗೊರಸು ಏನು ಉಪಯೋಗ ? ಉಪಯೋಗವಿದೆ. ಒರಟು ನೆಲದ ಮೇಲೆ ಎರಡು ಗೊರಸಿದ್ದರೆ ಆಯ ತಪ್ಪದೆ ಓಡಾಡಲು ಅನುಕೂಲ. ಮುಗ್ಗರಿಸುವುದು ಅಪರೂಪ. ಅಲ್ಲದೆ, ಸಡಿಲವಾದ ನೆಲದಲ್ಲಿ, ಮರಳು, ಕೊಚ್ಚೆಯಲ್ಲಿ ಎರಡು ಗೊರಸಿರುವುದು ಬಹಳ ಅನುಕೂಲ. ಇಂತಹ ನೆಲದಲ್ಲಿ ಕಾಲೂರಿದಾಗ ಗೊರಸು ಹಿಗ್ಗುತ್ತೆ. ಆಯ ಸಿಗುತ್ತೆ. ಕಾಲು ತೆಗೆದಾಗ ಗೊರಸು ಮುಚ್ಚುತ್ತೆ ; ಎತ್ತುವುದಕ್ಕೆ ಅನುಕೂಲವಾಗುತ್ತೆ. ಹೆಚ್ಚಾಗಿ ಜೌಗು ನೆಲದಲ್ಲಿ, ಕೆಸರಿನಲ್ಲೇ

ಓಡಾಡುವ ಎಮ್ಮೆಗಳಲ್ಲಿ, ಗೊರಸುಗಳು ಅಗಲವಾಗಿರುವುದಕ್ಕೂ ಇದೇ ಕಾರಣ. ಅದೇ ಗುಡ್ಡ ಬೆಟ್ಟಗಳಲ್ಲಿ ಓಡಾಡುವ ಕಾಡುಎತ್ತು (ಬೈಸನ್), ಮೇಕೆ ಮುಂತಾದ ಪ್ರಾಣಿಗಳ ಗೊರಸು ಹೆಚ್ಚು ಅಗಲಕ್ಕೆ ಇರದೆ ಇರುವುದಕ್ಕೂ ಇದೇ ಕಾರಣ. ಅವುಗಳ ಗೊರಸು ಚಿಕ್ಕದಾಗಿ, ಅಡಕವಾಗಿರುತ್ತೆ.

ಗೊರಸಿನ ಪ್ರಾಣಿಗಳಿಗೆ ಶತ್ರು ಭಯ ಹೆಚ್ಚು ಅಂತ ಹೇಳಿದೆನಲ್ಲ. ಅದಕ್ಕೇ, ಅವಕ್ಕೆ ಅಂಜಿಕೆ ಹೆಚ್ಚು—ಅಂಜುಬುರುಕ ಪ್ರಾಣಿಗಳು ಇವು. ಯಾವಾಗಲೂ, ಹುಷಾರಾಗಿ ಶತ್ರುಗಳ ಬರುವನ್ನೇ ಕಾಯುತ್ತಿರುತ್ತವೆ. ಈ ಶತ್ರುಗಳಿಂದ ಓಡಿಹೋಗಲು ಅವುಗಳ ದೇಹ ರಚನೆಯೂ ಅನುಕೂಲ ವಾಗಿದೆ. ಹೀಗೆ ಪಾರಾಗುವುದಕ್ಕಾಗಿಯೇ ಇವುಗಳಲ್ಲಿ ಅನೇಕ ವ್ಯತ್ಯಾಸಗಳು ವಿಕಾಸವಾಗಿವೆ. ಮೊದಲು ಅವುಗಳ ಕಣ್ಣು. ಅವು ಕುದುರೆ, ದನಗಳಲ್ಲಿ ಎಲ್ಲಿವೆ, ಗಮನಿಸಿದ್ದೀಯಾ ?

" ಓಹೋ, ನಮ್ಮಗಳಲ್ಲಿ ಇರುವಹಾಗೆ ಇವುಗಳಲ್ಲಿ ಕಣ್ಣುಗಳು ಹಣೆಯ ಮುಂದಿಲ್ಲ. ಇದಕ್ಕೆ ಕಾರಣವೂ ಇದೆಯೆ, ಮಾವ ? "

" ಇದೇ ಮಗೂ, ಇದೆ. ಪ್ರಕೃತಿಯಲ್ಲಿ, ಪ್ರತಿಯೊಂದು ರೂಪಕ್ಕೂ, ಲಕ್ಷಣಕ್ಕೂ, ರಚನೆಗೂ ಕಾರಣವಿದೆ. ಜೀವನದ ಹೋರಾಟದಲ್ಲಿ ಯಾವ ರೂಪ, ಲಕ್ಷಣ, ಗುಣ, ರಚನೆ ಅನುಕೂಲವೋ ಅದು ಉಳಿಯುತ್ತದೆ. ಉಪಯೋಗಕ್ಕೆ ಬಾರದವು ಅಳಿಯುತ್ತವೆ. ದನ, ಕುದುರೆಗಳಿಗೆ ಕಣ್ಣು ಪಕ್ಕ ಗಳಲ್ಲಿರುವುದರಿಂದ, ಶತ್ರುಗಳಿಂದ ಅಪಾಯ ಕಡಿಮೆ. ಅವು ಕಾಡಿನಲ್ಲಿದ್ದಾಗ, ಶತ್ರುಗಳು ಯಾವ ದಿಕ್ಕಿನಿಂದಲಾದರೂ ಬಂದು ಇವುಗಳ ಮೇಲೆ ಎಗರಬಹುದು. ಕಣ್ಣುಗಳು ಪಕ್ಕದಲ್ಲಿರುವುದರಿಂದ, ಕತ್ತನ್ನು ಸ್ವಲ್ಪ ವಾಲಿಸಿದರೆ ಹಿಂದೆ ಏನಿದೆ, ಯಾವ ಶತ್ರು ಬರುತ್ತಿದೆ ಎಂಬುದನ್ನು ಸುಲಭವಾಗಿ ಕಂಡುಕೊಳ್ಳಬಲ್ಲವು. ನಾವು ಹೀಗೆ ಮಾಡಬೇಕಾದರೆ ಕತ್ತನ್ನೇ ಪೂರ್ತ ತಿರುಗಿಸಿದರೆ ಸಾಲದು ; ದೇಹವನ್ನೂ ತಿರುಗಿಸಬೇಕು. ಜಟಕಾ ಗಾಡಿಯ ಕುದುರೆಗೆ ಮೊಖವಾಡ ಹಾಕುವುದು ಈ ಪಕ್ಕದ ಕಣ್ಣಿಗಾಗಿಯೇ. ಕುದುರೆ ಕತ್ತು ತಿರುಗಿಸಿದಾಗ ಹಿಂದೆ ಬರುವ ಜನ, ಪ್ರಾಣಿ, ಗಾಡಿಗಳನ್ನು ಕಂಡು ಬೆದರಿ ಎಗರಲಾಡುತ್ತವೆ, ಮೊಖವಾಡ ಹಾಕಿ ಬಿಟ್ಟರೆ ಮುಂದಿರುವುದು ಮಾತ್ರ ಕಾಣುತ್ತೆ. ಕುದುರೆ, ನೆಟ್ಟಗೆ ಸಲೀಸಾಗಿ ಹೇಳಿದ ಹಾಗೆ ಕೇಳುತ್ತ ಹೋಗುತ್ತೆ.

ಕೊಂಡು ಓಡಾಡಬೇಕಾದ ಪ್ರಾಣಿಗಳಿವು. ಹೀಗೆ ಅಲೆದರೆ ಕಾಲು ಸವೆಯುವುದಿಲ್ಲವೇ. ನಿಮ್ಮಮ್ಮ ನಿನಗೆ, ನಿನ್ನ ಕಾಲು ಸವೆಯದಿರಲು ಎಕ್ಕಡ ಕೊಂಡು ಕೊಡಿಸುತ್ತಾಳೆ. ಈ ಪ್ರಾಣಿಗಳಿಗೆ ಯಾರು ಪಾದರಕ್ಷೆಗಳನ್ನು ಕೊಡಿಸುವವರು ? ಅದಕ್ಕೋಸ್ಕರ, ಅವೇ ಕೊಂಬಿನ ಎಕ್ಕಡಗಳನ್ನು ಬೆಳೆಯಿಸಿಕೊಂಡಿವೆ. ಈ ಎಕ್ಕಡಗಳೇ ಅವುಗಳ ಗೊರಸು.

ಕೊಂಬಿನ ಗೊರಸಿಗೆ ಮತ್ತೊಂದು ಕಾರಣವೂ ಇದೆ. ಈ ಗೊರಸಿನ ಪ್ರಾಣಿಗಳು ಚಲಿಸುವಾಗ ಪಾದ ಊರಿ ಚಲಿಸುವುದಿಲ್ಲ. ಹೀಗೆ ಊರಿದರೆ ಅವು ಬೇಗ ನಡೆಯನಾರವು, ಓಡಲಾರವು. ನೀನು ಓಡುವಾಗಲೂ ಅಷ್ಟೆ. ನಿನ್ನ ಪಾದದ ತುದಿ ಮಾತ್ರ ನೆಲವನ್ನು ಮುಟ್ಟುತ್ತೆ. ಪಾದ ಊರಿ ಓಡುವುದಕ್ಕೆ ಪ್ರಯತ್ನಮಾಡು, ಆಗ ತಿಳಿಯುತ್ತೆ. ಹೀಗೆ ಚಲಿಸುವಾಗ ದೇಹದ ತೂಕವೆಲ್ಲಾ ಪಾದದ ತುದಿಯಮೇಲೆ ಬೀಳುತ್ತೆ. ಇದಕ್ಕಾಗಿ, ಈ ತುದಿ ಬಹಳ ಗಟ್ಟಿಯಾಗಿರಬೇಕು. ಅಂತಲೇ ಕೊಂಬಿನ ಗೊರಸು.


ಎರಡು ಗೊರಸು ಯಾಕೆ ? 5 ಬೆರಳೂ 5 ಗೊರಸಾಗಲಿಲ್ಲವೇಕೆ ? 5 ಬೆರಳು ಅಥವಾ ಗೊರಸು ಇದ್ದರೆ ಓಟಕ್ಕೆ, ಪೇರಿ ಕೀಳುವುದಕ್ಕೆ ಕಷ್ಟ. ಈ ಪ್ರಾಣಿಗಳಿಗೆ ಶತ್ರುಭಯ ಜಾಸ್ತಿ. ಶತ್ರುಗಳನ್ನ ಕಂಡ ತಕ್ಷಣವೇ ಕಾಲಿಗೆ ಬುದ್ಧಿ ಹೇಳಬೇಕು ; ಓಡಬೇಕು. ಗೊರಸಿನ ಸಂಖ್ಯೆ ಕಡಿಮೆ ಇರುವುದರಿಂದ ಹೀಗೆ ಓಡಿ ಶತ್ರುಗಳಿಂದ ಪಾರಾಗುತ್ತವೆ. ಕುದುರೆಗೆ ಒಂದು ಗೊರಸು ಇರುವುದರಿಂದ ಎರಡು ಗೊರಸಿನ ದನಕ್ಕಿಂತ ಬೇಗ ಓಡಬಲ್ಲದು. ಜೂಜಿಗೆ ಕುದುರೆ ಓಡಿಸುತ್ತಾರೆಯೇ ವಿನಾ ದನಗಳನ್ನು ಓಡಿಸುತ್ತಾರೆಯೆ ? ಜಿಂಕೆಗೆ 2 ಗೊರಸುಗಳಿವೆಯಲ್ಲಾ ಅಂತ ಕೇಳಬಹುದು. ಆದರೆ ಇವು ಚಿಕ್ಕದಾಗಿರುವುದರಿಂದ ಓಟಕ್ಕೆ ಅಡಚಣೆಯಿಲ್ಲ. ಹಾಗಾದರೆ, ದನಗಳಿಗೆ ಎರಡು ಗೊರಸು ಏನು ಉಪಯೋಗ ? ಉಪಯೋಗವಿದೆ. ಒರಟು ನೆಲದ ಮೇಲೆ ಎರಡು ಗೊರಸಿದ್ದರೆ ಆಯ ತಪ್ಪದೆ ಓಡಾಡಲು ಅನುಕೂಲ. ಮುಗ್ಗರಿಸುವುದು ಅಪರೂಪ. ಅಲ್ಲದೆ, ಸಡಿಲವಾದ ನೆಲದಲ್ಲಿ, ಮರಳು, ಕೊಚ್ಚೆಯಲ್ಲಿ ಎರಡು ಗೊರಸಿರುವುದು ಬಹಳ ಅನುಕೂಲ. ಇಂತಹ ನೆಲದಲ್ಲಿ ಕಾಲೂರಿದಾಗ ಗೊರಸು ಹಿಗ್ಗುತ್ತೆ. ಆಯ ಸಿಗುತ್ತೆ. ಕಾಲು ತೆಗೆದಾಗ ಗೊರಸು ಮುಚ್ಚುತ್ತೆ ; ಎತ್ತುವುದಕ್ಕೆ ಅನುಕೂಲವಾಗುತ್ತೆ. ಹೆಚ್ಚಾಗಿ ಜೌಗು ನೆಲದಲ್ಲಿ, ಕೆಸರಿನಲ್ಲೇ

ಓಡಾಡುವ ಎಮ್ಮೆಗಳಲ್ಲಿ, ಗೊರಸುಗಳು ಅಗಲವಾಗಿರುವುದಕ್ಕೂ ಇದೇ ಕಾರಣ. ಅದೇ ಗುಡ್ಡ ಬೆಟ್ಟಗಳಲ್ಲಿ ಓಡಾಡುವ ಕಾಡುಎತ್ತು (ಬೈಸನ್), ಮೇಕೆ ಮುಂತಾದ ಪ್ರಾಣಿಗಳ ಗೊರಸು ಹೆಚ್ಚು ಅಗಲಕ್ಕೆ ಇರದೆ ಇರುವುದಕ್ಕೂ ಇದೇ ಕಾರಣ. ಅವುಗಳ ಗೊರಸು ಚಿಕ್ಕದಾಗಿ, ಅಡಕವಾಗಿರುತ್ತೆ.

ಗೊರಸಿನ ಪ್ರಾಣಿಗಳಿಗೆ ಶತ್ರು ಭಯ ಹೆಚ್ಚು ಅಂತ ಹೇಳಿದೆನಲ್ಲ. ಅದಕ್ಕೇ, ಅವಕ್ಕೆ ಅಂಜಿಕೆ ಹೆಚ್ಚು–ಅಂಜುಬುರುಕ ಪ್ರಾಣಿಗಳು ಇವು. ಯಾವಾಗಲೂ, ಹುಷಾರಾಗಿ ಶತ್ರುಗಳ ಬರುವನ್ನೇ ಕಾಯುತ್ತಿರುತ್ತವೆ. ಈ ಶತ್ರುಗಳಿಂದ ಓಡಿಹೋಗಲು ಅವುಗಳ ದೇಹ ರಚನೆಯೂ ಅನುಕೂಲ ವಾಗಿದೆ. ಹೀಗೆ ಪಾರಾಗುವುದಕ್ಕಾಗಿಯೇ ಇವುಗಳಲ್ಲಿ ಅನೇಕ ವ್ಯತ್ಯಾಸಗಳು ವಿಕಾಸವಾಗಿವೆ. ಮೊದಲು ಅವುಗಳ ಕಣ್ಣು. ಅವು ಕುದುರೆ, ದನಗಳಲ್ಲಿ ಎಲ್ಲಿವೆ, ಗಮನಿಸಿದ್ದೀಯಾ ?

" ಓಹೋ, ನಮ್ಮಗಳಲ್ಲಿ ಇರುವಹಾಗೆ ಇವುಗಳಲ್ಲಿ ಕಣ್ಣುಗಳು ಹಣೆಯ ಮುಂದಿಲ್ಲ. ಇದಕ್ಕೆ ಕಾರಣವೂ ಇದೆಯೆ, ಮಾವ ? "

" ಇದೇ ಮಗೂ, ಇದೆ. ಪ್ರಕೃತಿಯಲ್ಲಿ, ಪ್ರತಿಯೊಂದು ರೂಪಕ್ಕೂ, ಲಕ್ಷಣಕ್ಕೂ, ರಚನೆಗೂ ಕಾರಣವಿದೆ. ಜೀವನದ ಹೋರಾಟದಲ್ಲಿ ಯಾವ ರೂಪ, ಲಕ್ಷಣ, ಗುಣ, ರಚನೆ ಅನುಕೂಲವೋ ಅದು ಉಳಿಯುತ್ತದೆ. ಉಪಯೋಗಕ್ಕೆ ಬಾರದವು ಅಳಿಯುತ್ತವೆ. ದನ, ಕುದುರೆಗಳಿಗೆ ಕಣ್ಣು ಪಕ್ಕ ಗಳಲ್ಲಿರುವುದರಿಂದ, ಶತ್ರುಗಳಿಂದ ಅಪಾಯ ಕಡಿಮೆ. ಅವು ಕಾಡಿನಲ್ಲಿದ್ದಾಗ, ಶತ್ರುಗಳು ಯಾವ ದಿಕ್ಕಿನಿಂದಲಾದರೂ ಬಂದು ಇವುಗಳ ಮೇಲೆ ಎಗರಬಹುದು. ಕಣ್ಣುಗಳು ಪಕ್ಕದಲ್ಲಿರುವುದರಿಂದ, ಕತ್ತನ್ನು ಸ್ವಲ್ಪ ವಾಲಿಸಿದರೆ ಹಿಂದೆ ಏನಿದೆ, ಯಾವ ಶತ್ರು ಬರುತ್ತಿದೆ ಎಂಬುದನ್ನು ಸುಲಭವಾಗಿ ಕಂಡುಕೊಳ್ಳಬಲ್ಲವು. ನಾವು ಹೀಗೆ ಮಾಡಬೇಕಾದರೆ ಕತ್ತನ್ನೇ ಪೂರ್ತ ತಿರುಗಿಸಿದರೆ ಸಾಲದು ; ದೇಹವನ್ನೂ ತಿರುಗಿಸಬೇಕು. ಜಟಕಾ ಗಾಡಿಯ ಕುದುರೆಗೆ ಮೊಖವಾಡ ಹಾಕುವುದು ಈ ಪಕ್ಕದ ಕಣ್ಣಿಗಾಗಿಯೇ. ಕುದುರೆ ಕತ್ತು ತಿರುಗಿಸಿದಾಗ ಹಿಂದೆ ಬರುವ ಜನ, ಪ್ರಾಣಿ, ಗಾಡಿಗಳನ್ನು ಕಂಡು ಬೆದರಿ ಎಗರಲಾಡುತ್ತವೆ, ಮೊಖವಾಡ ಹಾಕಿ ಬಿಟ್ಟರೆ ಮುಂದಿರುವುದು ಮಾತ್ರ ಕಾಣುತ್ತೆ. ಕುದುರೆ, ನೆಟ್ಟಗೆ ಸಲೀಸಾಗಿ ಹೇಳಿದ ಹಾಗೆ ಕೇಳುತ್ತ ಹೋಗುತ್ತೆ.



ಚಿತ್ರ ೯. ಬೆಕ್ಕು, ಮಾನವ, ಎಮ್ಮೆ ಮತ್ತು ಕುದುರೆಗಳಲ್ಲಿ ಕಣ್ಣುಗಳ ಸ್ಥಾನ; ಎಮ್ಮೆ, ಕುದುರೆಗಳಲ್ಲಿ, ಕಣ್ಣು, ಹಣೆಯ ಪಕ್ಕದಲ್ಲಿ

"ಹಾಗಾದರೆ ಗಾಡಿ ಎಳೆಯುವ ಎತ್ತಿಗೆ ಯಾಕೆ ಮೊಖವಾಡ ಹಾಕುವುದಿಲ್ಲ?"

"ಇದಕ್ಕೆ ಕಾರಣ ಇಷ್ಟೆ, ಕುದುರೆ ಬುದ್ಧಿ ಚುರುಕು; ಎತ್ತಿಗಿಂತ ಸೂಕ್ಷ್ಮ; ಅಕ್ಕ ಪಕ್ಕ ನೋಡಿ ಕುದುರೆ ಎಗರಾಡುವ ಹಾಗೆ ಮಂದ ಬುದ್ಧಿಯ ಎತ್ತು ಆಡುವುದಿಲ್ಲ. ನಿನ್ನಂತಹ ಚುರುಕು ಹುಡುಗರಿಗೆ ಮೊಖವಾಡ ಹಾಕಬೇಕು; ನನ್ನಂಥ ದಡ್ಡರಿಗೆ ಯಾಕೆ? ಅಕ್ಕನಿಗೆ ಹೇಳಿ ನಿನಗೆ ಮುಖವಾಡ ಹಾಕಿಸೋಣ ಏದ್ದೇಳು; ಬಹಳ ಹೊತ್ತಾಯ್ತು; ಅಕ್ಕ ತರಾಟೆಗೆ ತೆಗೆದುಕೊಳ್ಳಬಹುದು."

ನಗುತ್ತ, ಇಬ್ಬರೂ ಮನೆಗೆ ವಾಪಸ್ಸು ಬಂದರು.

೩. ಕಿಟ್ಟಿಯ ಪ್ರಾಣಿಶಾಸ್ತ್ರ ಪ್ರವೇಶ

ಮಾರನೆಯ ದಿನ ಹಬ್ಬ. " ಊಟ ಹೊತ್ತಾಗುತ್ತೆ ; ಏನಾದರೂ ಉಪ್ಪಿಟ್ಟುಗಿಪ್ಪಿಟ್ಟು ಮಾಡಿಕೊಡಲೇ, ರಾಮು " ಎಂದು ಅಕ್ಕ ಕೇಳಿದಾಗ, ರಾಮಣ್ಣ " ಬೇಡಾ ಅಕ್ಕ ನೆನ್ನೆ ರಾತ್ರಿಯ ಮಳೆಯಿಂದ ಹವಾ ತಂಪಾಗಿದೆ. ಹಾಗೇ ನಾನೂ, ಕಿಟ್ಟಿ ಸುತ್ತಾಡಿಕೊಂಡು ಹೊಟೇಲಿನಲ್ಲಿ ಒಂದೊಂದು ಮಸಾಲೆ ದೋಸೆ ತಿಂದು ಬರುತೀವಿ " ಎಂದ. ತಮ್ಮನಿಗೆ ಮಸಾಲೆ ದೋಸೆ ಅಂದರೆ ಪ್ರಾಣ ; ಕಿಟ್ಟಿಗೂ ಇದರ ಚಟ, ಮಾವನಿಂದ ಅಂಟಿತ್ತು. ಹೊಟ್ಟೆ ಕೆಡಬಹುದು ಎಂಬ ಭಯವಿದ್ದರೂ ತಮ್ಮನ ಆಸೆಗೆ ಅಡ್ಡಿ ಬರಲಿಲ್ಲ, ಕಾವೇರಮ್ಮ. ಮಾವ ಅಳಿಯಂದರು ಹೊರಬಿದ್ದರು. ಅಗ್ರಹಾರದ ರಂಗಣ್ಣನ ಹೊಟೇಲಿನಲ್ಲಿ ದೋಸೆ ಹೊಡೆದು, ಕಾಫಿ ಇಳಿಸಿಕೊಂಡು ಪಾರ್ಕಿನ ಕಡೆ ನಡೆದರು. ಜಟಕಾ ಸ್ಟಾಂಡಿನ ಮೂಲಕ ಹೋಗುತ್ತಿದ್ದಾಗ, ಅಲ್ಲಿ ಗಾಡಿಗೆ ಕಟ್ಟಿದ್ದ ಕುದುರೆ ಹುಲ್ಲನ್ನು ತಿನ್ನುತ್ತಿತ್ತು. " ಚೆನ್ನಾಗಿ ನೋಡು, ಕಿಟ್ಟಿ, ಕುದುರೆ ಹುಲ್ಲು ತಿನ್ನುತ್ತಿರುವುದನ್ನ. ಇದರ ವಿಷಯ ಪಾರ್ಕಿನಲ್ಲಿ ಹೇಳುತ್ತೇನೆ." ಅಲ್ಲೇ ಒಂದೆಡೆ ಒಂದು ದನ ಮಲಗಿ ನಿಧಾನವಾಗಿ ಮೆಲಕು ಹಾಕುತ್ತಿರುವುದನ್ನು ತೋರಿಸಿ ಗಮನಿಸು, ಇದು ಮೆಲಕು ಹಾಕುವುದನ್ನ ಎಂದು, ಪಾರ್ಕಿನಲ್ಲಿ ಕೂತಮೇಲೆ ರಾಮಣ್ಣ ದನದ ಕತೆಯನ್ನು ಮುಂದುವರಿಸಿದ.

" ಕುದುರೆ ತಿನ್ನುತ್ತಿದುದನ್ನ, ದನ ಮೆಲಕು ಹಾಕುತ್ತಿದ್ದನ್ನ ನೋಡಿದೀ ತಾನೆ ? ದನ ಕೂತು ಮೆಲಕು ಹಾಕುತ್ತಿತ್ತು, ಕುದುರೆ ನಿಂತು ತಿನ್ನುತ್ತಿತ್ತು ಅಲ್ಲವೇ. ಕುದುರೆ ಕೂತಿರುವುದನ್ನ ನೋಡಿದ್ದೀಯಾ .... ಪೆಚ್ಚಾಗಬೇಡ.

ಕುದುರೆ ಸಾಮಾನ್ಯವಾಗಿ ಕೂರುವುದಿಲ್ಲ. ಕೂತ ಕುದುರೆಯನ್ನು ಕಾಣದೆ ಇರುವವನು ನೀನು ಒಬ್ಬನೇ ಅಲ್ಲ."

"ನಿದ್ದೆ ಮಾಡುವಾಗಲೂ ಕೂತುಕೊಳ್ಳುವುದಿಲ್ಲವೆ ?"

"ಇಲ್ಲ, ನಿಂತೇ ನಿದ್ದೆ ಹೋಗುತ್ತೆ. ಇದು ಕುದುರೆ ಕತ್ತೆಗಳ ವಿಶೇಷ. ನಿಂತೇ ನಿದ್ದೆ ಮಾಡುವ ಪ್ರಾಣಿಗಳು ವಿರಳ. ಕುದುರೆ ಕೂತರೆ ಬಹಳ ಕಷ್ಟ. ಕೂತಾಗ ಭಾರವೆಲ್ಲ ಹೊಟ್ಟೆಯ ಮೇಲೆ ಬೀಳುತ್ತೆ ; ಅದಕ್ಕೆ ಬಹಳ ಕಷ್ಟವಾಗುತ್ತೆ. ಆದರೆ ದನಗಳು ಹಾಗಲ್ಲ. ಮೇದ ಮೇಲೆ ಕೂತು ನಿಧಾನವಾಗಿ ಮೆಲಕು ಹಾಕಲೇಬೇಕು. ಸಾಮಾನ್ಯವಾಗಿ ಮೆಲಕು ಪ್ರಾಣಿಗಳು ಕೂತೇ ಮೆಲಕು ಹಾಕುತ್ತವೆ."

"ದನ ಯಾಕೆ ಮೆಲಕು ಹಾಕುತ್ತೆ, ಕುದುರೆ ಯಾಕೆ ಹಾಕುವುದಿಲ್ಲ, ಮಾವ ?"

"ಇದು ಲಾಗಾಯತನಿಂದ ಬಂದ ಸಂಸ್ಕಾರ. ಹಿಂದೆ ಹೇಳಿದೆ, ಕುದುರೆ ಚುರುಕು. ಬೇಗ ಓಡುತ್ತೆ. ಶತ್ರುಗಳಿಂದ ಬೇಗ ಪಾರಾಗುತ್ತೆ. ಆದುದರಿಂದ ಅದು ಶತ್ರುಗಳಿಗೆ ಅಷ್ಟಾಗಿ ಹೆದರಿಕೊಳ್ಳಬೇಕಿಲ್ಲ. ದನ ಎಮ್ಮೆಗಳ ಓಟ ಕಡಿಮೆ. ಆದುದರಿಂದ ಅವುಗಳಿಗೆ ಶತ್ರು ಭಯ ಹೆಚ್ಚು. ಅವಸರವಸರವಾಗಿ ಮೇದು, ಹೊಟ್ಟೆ ತುಂಬಿಕೊಂಡು ಶತ್ರುಗಳು ಇಲ್ಲದ ಕಡೆ ಹೋಗಿ, ಕೂತು, ನಿಧಾನವಾಗಿ, ನುಂಗಿದ ಮೇವನ್ನು ಸ್ವಲ್ಪ ಸ್ವಲ್ಪವಾಗಿ ಬಾಯಿಗೆ ತಂದುಕೊಂಡು, ಹಲ್ಲುಗಳಿಂದ ಚೆನ್ನಾಗಿ ಜೊಲ್ಲಿನೊಂದಿಗೆ ಅರೆದು ನುಂಗುತ್ತದೆ. ಅಲ್ಲದೆ ಇವಕ್ಕೆ ಹೆಚ್ಚು ಮೇವು ಬೇಕು. ಮೇಯುವಾಗಲೇ ಮೇವೆಲ್ಲವನ್ನು ಅರೆಯುತ್ತಿದ್ದರೆ ಹೆಚ್ಚು ಕಾಲ ಮೇಯಬೇಕಾಗುತ್ತೆ–ಹೆಚ್ಚು ಕಾಲ ಶತ್ರುಗಳ ಬಾಧೆಯೂ ಇರುತ್ತದೆ. ಆದುದರಿಂದ, ಗಪಗಪ ಅಂತ ಮೇದು ಅನಂತರ ನಿಧಾನವಾಗಿ ಅರೆಯುತ್ತವೆ.

ಮೆಲಕು ಹಾಕುವುದಕ್ಕೆ ಅನುಕೂಲವಾಗುವಂತೆ ಅದರ ಜೀರ್ಣಾಂಗಗಳೂ ರೂಪುಗೊಂಡಿವೆ. ಕುದುರೆಗೆ ನಮ್ಮಲ್ಲಿ ಇರುವ ಹಾಗೆ ಒಂದೇ ಹೊಟ್ಟೆ; ಜಠರ (ಚಿತ್ರ ೮ ನೋಡಿ). ಆದರೆ ಮೆಲಕು ಪ್ರಾಣಿಗಳಲ್ಲಿ 4 ಜಠರ. ಇದಕ್ಕೆ ಕ್ರಮವಾಗಿ ರೂಮೆನ್ (rumen) ರೆಟಿಕ್ಯುಲಂ (reticulum), ಒಮೇಸಮ್ (omasum) ಮತ್ತು ಅಬ್‌ಒಮೇಸಮ್ (abomasum) ಅಂತ ಇಂಗ್ಲಿಷಿನಲ್ಲಿ ಕರೆ

ಯುತ್ತಾರೆ. ಕನ್ನಡದಲ್ಲಿ ಹೆಸರುಗಳು ಇದ್ದಂತಿಲ್ಲ. ಮೊದಲನೆಯ, ಎರಡನೆಯ, ಮೂರನೆಯ, ನಾಲ್ಕನೆಯ ಹೊಟ್ಟೆ ಎನ್ನೋಣ. ಅವಸರದಲ್ಲಿ ಮೇದ ಮೇವು ಮೊದಲನೆಯ ಹೊಟ್ಟೆಯಲ್ಲಿ ತುಂಬಿಕೊಳ್ಳುತ್ತದೆ. ಇದು ತುತ್ತಿನ ಚೀಲ– ಕೂಡಿಡುವುದಕ್ಕೆ. ಕೂತು ಮೆಲಕು ಹಾಕುವಾಗ ಈ ಚೀಲದಿಂದ ಒಂದೆರಡು ತುತ್ತನ್ನು ಬಾಯಿಗೆ ತಂದುಕೊಳ್ಳುತ್ತೆ ; ನೀನು ಆ ದನ ಮೆಲಕು ಹಾಕುವುದನ್ನು ಗಮನಿಸಿರಬೇಕು. ಆಗಾಗ್ಗೆ ದನದ ಪಕ್ಕೆ, ಬಿಕ್ಕಲು ಬಂದಾಗ ಸೇದುವಂತೆ ಸೇದುವುದು ಕಂಡು ಬರುತ್ತೆ. ಈ ಸೇದಿಕೆಯಿಂದಲೇ ಮೇವಿನ ತುತ್ತು ಬಾಯಿಗೆ ಬರುವುದು. ಈ ತುತ್ತನ್ನು ಜೊಲ್ಲಿನೊಂದಿಗೆ ಬೆರೆಸಿ ನಯವಾಗಿ ಹಲ್ಲುಗಳಿಂದ ಅರೆಯುತ್ತದೆ. ಈ ಪ್ರಾಣಿಗಳ ಆಹಾರ ಒರಟು, ನಾರು. ಇವನ್ನು ಚೆನ್ನಾಗಿ ಅರೆಯಬೇಕು. ಇಲ್ಲದಿದ್ದರೆ ಅವು ಜೀರ್ಣವಾಗು ವುದಿಲ್ಲ.

ಇದರ ಹಲ್ಲುಗಳೂ ಕೂಡ ಇಂತಹ ಒರಟು ಮೇವನ್ನು ಅರೆಯುವುದಕ್ಕೆ ತಕ್ಕಂತೆ ರಚನೆಯಾಗಿವೆ. ಹುಲ್ಲಿನಲ್ಲಿ, ಅದರಲ್ಲೂ ಒರಟು ಹುಲ್ಲಿನಲ್ಲಿ, ಸಿಲಿಕ (silica) ಎಂಬ ಒಂದು ವಸ್ತುವಿದೆ. ಮರಳಿನಲ್ಲಿ ಬೆಣಚುಕಲ್ಲಿನಲ್ಲಿ ಈ ವಸ್ತುವೇ ಪ್ರಾಧಾನ್ಯ. ಇದು ಬಹಳ ಗಟ್ಟಿ ವಸ್ತು. ವಜ್ರ, ನೀಲಮಣಿ, ಗೋಮೇಧಿಕ ಬಿಟ್ಟರೆ, ಇದೇ ಬಹಳ ಗಟ್ಟಿ ವಸ್ತು. ಸಿಲಿಕಾ ಇರುವ ಹುಲ್ಲನ್ನು ದಿನ ದಿನವೂ ಅರೆದಾಗ ಹುಲ್ಲುಗಳೇ ಸವೆದು ಹೋಗಿ ಹಲ್ಲು ಇಲ್ಲದಂತೆ ಆಗಬೇಕು, ಅಲ್ಲವೇ ? ಹಾಗೆ ಆಗುವುದಿಲ್ಲ, ಯಾಕೆ ? ಈ ಪ್ರಾಣಿ ಗಳ ದಂತದ ರಚನೆ ಹಾಗಿದೆ. ಇವುಗಳ ದನಡೆ ಹಲ್ಲನ್ನು ಒಂದು ಪಕ್ಕದಿಂದ ನೋಡಿದರೆ, ಪುಟ್ಟ ಪುಟ್ಟ ಕಂಬಗಳನ್ನು ಜೋಡಿಸಿದಂತೆ ಇವೆ. ಮೇಲಿನಿಂದ ನೋಡಿದರೆ ಹಲ್ಲುಗಳು ಮಟ್ಟವಾಗಿರದೆ ಏರು ತಗ್ಗುಗಳಿಂದ ಕೂಡಿರುತ್ತವೆ. ಏರಿದ ಭಾಗ, ಗಟ್ಟಿಯಾದ ಸಿಲಿಕಾಗಿಂತ ಗಟ್ಟಿಯಾಗಿರುವ ಏನಾಮಲ್ (enamel) ಎಂಬ ವಸ್ತುವಿನಿಂದ ಮಾಡಿದೆ. ನಮ್ಮ ಹಲ್ಲಿನಲ್ಲೂ ಹೊರಗೆ ಏನಾಮಲ್ ಪದರವಿದೆ. ಅದಕ್ಕೇ ನಮ್ಮ ಹಲ್ಲು, ನನ್ನ ಹಲ್ಲಲ್ಲ, ನಮ್ಮ ಹಲ್ಲು ಗಟ್ಟಿಯಾಗಿರುತ್ತೆ". ರಾಮಣ್ಣ ಹಲ್ಲು ಕಟ್ಟಿಸಿಕೊಂಡಿರುವುದು ಕಿಟ್ಟಿಗೆ ಗೊತ್ತು. ಮಾವನ ಮಾತಿನಿಂದ ನಗೂ ಬಂದರೂ, ದನದ ಕತೆ ಎಲ್ಲಿ ನಿಲ್ಲಿಸುತ್ತಾನೋ ಎಂದುಕೊಂಡು ನಗು ನುಂಗಿದ.

ಏನಾಮಲ್ಲಿನಿಂದ ಮಾಡಿದ ಏರುಗಳು, ಮೃದು ವಸ್ತುವಿನಿಂದ ಮಾಡಿದ ತಗ್ಗುಗಳು ಬೀಸುವ ಕಲ್ಲಿಗೆ ಚಕಮುಕಿ ಹಾಕಿದಂತೆ ಇರುತ್ತೆ. ತುತ್ತನ್ನು ಅರೆಯುವುದಕ್ಕೆ ಅನುಕೂಲ. ಮಟ್ಟವಾಗಿ, ನಯವಾಗಿದ್ದ ಪಕ್ಷದಲ್ಲಿ, ಹೀಗೆ ನಯವಾಗಿ ಅರೆಯಲು ಸಾಧ್ಯವಿರುತ್ತಿರಲಿಲ್ಲ.

ದನಗಳು ಮೇವನ್ನು ಅರೆಯುವುದು ಒಂದು ತಮಾಷೆ. ತಳ ದವಡೆ ಸುಲಭವಾಗಿ ಅಕ್ಕಕ್ಕೂ ಪಕ್ಕಕ್ಕೂ ಚಲಿಸಬಲ್ಲದು. ನಮ್ಮ ದವಡೆಯನ್ನು ಸ್ವಲ್ಪ ಮಟ್ಟಿಗೆ ಆಡಿಸಬಹುದು, ದನದ ಹಾಗೆ ಅರೆಯುವುದಕ್ಕೆ ಹೋದರೆ ದವಡೆ ಮೂಳೆ ಒಡೆಯುತ್ತೆ. ಪ್ರಯತ್ನಪಡಬೇಡ. ತುತ್ತನ್ನು ದನಗಳು ಎಡ ದವಡೆಯಲ್ಲಿ ಕೆಲವು ಬಾರಿ, ಆಮೇಲೆ ಅಷ್ಟೇ ಬಾರಿ, ಬಲ ದವಡೆಯಲ್ಲಿ ಅರೆಯುತ್ತೆ ; ಎರಡು ದವಡೆಯನ್ನೂ ಉಪಯೋಗಿಸುತ್ತೆ. ಹೀಗಾಗಿ ಒಂದು ಕಡೆಯ ದವಡೆ ಹಲ್ಲು ಸವೆಯುವುದಿಲ್ಲ. ಈ ಹಲ್ಲಿನ ವಿಚಾರವಾಗಿ ಮಾತ ನಾಡುವಾಗ ಒಂದು ಕತೆ ಜ್ಞಾಪಕಕ್ಕೆ ಬರುತ್ತೆ. ದನಗಳಿಗೆ ಎಷ್ಟು ಹಲ್ಲು ಗೊತ್ತೇನೋ ? "

" ಮೂವತ್ತೆರಡು ಹಲ್ಲು "

" ಪೋರ, ಬಾಯಿಗೆ ಬಂದದ್ದು ಹೇಳುತ್ತಿ. ನೀನು ನೋಡಿದ್ದೀಯಾ, ಕೇಳಿದ್ದಿಯಾ ? ಆದರೂ, ಅಡ್ಡ ಏಟಿಗೆ ಕುರಿತೇಟು ಅನ್ನುವ ಹಾಗೆ, ನೀನು ಹೇಳಿದ ಹಾಗೇ ದನಕ್ಕೆ 32 ಹಲ್ಲು. ನಮ್ಮಲ್ಲೂ; ನಿನ್ನ ಬಾಯಲ್ಲಿ ಅಲ್ಲ, ದೊಡ್ಡವರ ಬಾಯಲ್ಲೂ 32 ಹಲ್ಲು. ಎರಡು ದವಡೆಗಳಲ್ಲೂ 16 ಹಲ್ಲು. ಆದರೆ, ಈ ಮೆಲಕು ಪ್ರಾಣಿಗಳಲ್ಲಿ, ಕೆಳ ದವಡೆಯಲ್ಲಿ 20 ಹಲ್ಲು, ಮೇಲ್ದವಡೆ ಯಲ್ಲಿ 12 ಹಲ್ಲು ಮಾತ್ರ. 8 ಹಲ್ಲು ಖೋತಾ—ಬಾಚಿ ಹಲ್ಲು, ಮುಂಬಲ್ಲು, ಮುಂದಿನ ಹಲ್ಲು. ಕೆಳದವಡೆಯಲ್ಲಿ ಮಾತ್ರ 8 ಬಾಚಿ ಹಲ್ಲು. ಮೇಲು ದವಡೆಯಲ್ಲಿ ಈ ಬಾಚಿ ಹಲ್ಲಿನ ಬದಲು ಕೊಂಬಿನಂತಿರುವ ಒಂದು ಸಿಂಬಿ ಮಾತ್ರ ಇದೆ. ಮೇಯುವಾಗ, ದನ ಮೇವನ್ನು, ತಳದ ಬಾಚಿಹಲ್ಲು ಮುತ್ತು ಮೇಲಿನ ಸಿಂಬಿ ಮಧ್ಯೆ ಸಿಕ್ಕಿಸಿಕೊಂಡು ತಲೆಯನ್ನು ಪಕ್ಕಕ್ಕೆ ಥಟ್ಟನೆ ಜಗ್ಗಿಸುತ್ತೆ; ಆಗ ಹುಲ್ಲು ಕಿತ್ತುಕೊಂಡು ಬರುತ್ತೆ."

" ಅಮ್ಮ ಒಂದು ಸಾರಿ ಹೇಳುತ್ತಿದ್ದರು–ದನಕ್ಕೆ ಮೇಲಿನ ದವಡೆಯಲ್ಲಿ ಹಲ್ಲಿಲ್ಲ ಅಂತ "

" ಅವಳು ಯಾವಾಗ ದನದ ಬಾಯಿ ಹಿಗ್ಗಿಸಿ ನೋಡಿದ್ದಳಂತೆ ! ದವಡೆ ಹಲ್ಲು ಇದ್ದೇ ಇದೆ ; ಒಂದೊಂದು ಪಕ್ಕದಲ್ಲಿಯೂ ಆರು ಆರು ಇವೆ".

"ಯಾವುದೋ ಕತೆ ಜ್ಞಾಪಕಕ್ಕೆ ಬಂತು ಅಂತ ಹೇಳಿದೆಯಲ್ಲಾ ಮಾವ"

" ಆ ಕತೇನಾ. ದನಕ್ಕೆ ಯಾಕೆ ಮೇಲ್ದವಡೆಯಲ್ಲಿ ಮುಂಬು ಹಲ್ಲು ಇಲ್ಲ ಅನ್ನುವುದಕ್ಕೆ ಆ ಕತೆ–ಕೃಷ್ಣನ ಕತೆ. ಕೃಷ್ಣ ಗೊಲ್ಲ ಅಲ್ಲವೆ? ಬೇಕಾದಷ್ಟು ಹಸುಗಳನ್ನು ಸಾಕಿದ್ದ. ಅವನ ಸಾಕು ತಂದೆ ನಂದನಿಗೆ–ಯಶೋಧೆಯ ಗಂಡನಿಗೆ" 9 ಲಕ್ಷ ದನಗಳು ಇದ್ದುವಂತೆ. ಇವುಗಳನ್ನೆಲ್ಲಾ ಮೇಯಿಸಲು, ಪಾಲಿಸಲು ಕಷ್ಟವಲ್ಲವೆ ? ಇದು ಕೃಷ್ಣನಿಗೆ ಸಾಧ್ಯವಿತ್ತು. ಅವನು ಕೊಳಲನ್ನು ಊದಿದ ಎಂದರೆ ಎಲ್ಲಾ ಗೋವುಗಳು ಅವನ ಹತ್ತಿರಕ್ಕೆ ಬರುತಿದ್ದವಂತೆ ; ಅವನ ಕೊಳಲಿನ ಶಕ್ತಿ ಅಂಥದ್ದು. ಕೃಷ್ಣ. ದನಗಳನ್ನು ಚೆನ್ನಾಗಿ ಮೇಯಿಸುತ್ತಿದ್ದ. ಅವನ ಮಂದೆ ದನಗಳು ಮೈತುಂಬಿ ಮಿನುಗುತ್ತಿದ್ದಂತೆ ಮತ್ಯಾವ ಮಂದೆಯೂ ಇರಲಿಲ್ಲ. ಒಂದು ದಿನ, ದನಗಳನ್ನೆಲ್ಲಾ ಹೊಟ್ಟೆ ತುಂಬ ಮೇಯಿಸಿ, ಗೋಕುಲಕ್ಕೆ ಅಟ್ಟಿ ರೊಪ್ಪಕ್ಕೆ ಸೇರಿಸುತ್ತಿದ್ದ. ಒಂದು ಹಸು ಎಂದೂ ಅವನ ಜತೆಯಲ್ಲೇ ಇರುತ್ತಿತ್ತು : ಅವನ ಸಂಗಡವೇ ಮಲಗುತ್ತಿತ್ತು. ಅದು ರೊಪ್ಪಕ್ಕೆ ಬರುವುದಕ್ಕೆ ಮುಂಚೆ ಮನೆಗೆ ಹೊದೆಸಿದ ಚಾವಣಿಯ ಹುಲ್ಲನ್ನು ಕಿತ್ತು ತಿನ್ನುತ್ತಿತ್ತು. ಕೃಷ್ಣನಿಗೆ ಕೋಪ ಬಂತು. " ಮುಂಡೇದೆ, ಹೊಟ್ಟೆ ಬಿರಿಯುವ ಹಾಗೆ ಕಾವಲಿನಲ್ಲಿ ಮೇದಿದ್ದಿಯಾ; ಅದೂ ಸಾಲದೆ ಚಾವಣಿ ಹುಲ್ಲೂ ಬೇಕೋ, ಹೊಟ್ಟೆಬಾಕ, ಎನ್ನುತ್ತ ಅದರ ಹೆಗ್ಗತಿಗೆ ಚೆನ್ನಾಗಿ ಗುದ್ದಿದ. ದೊಡ್ಡ ಬಾಸುಂಡೆ ಎತ್ತು. ಆದರೂ ಹುಲ್ಲನ್ನು ಎಳೆಯುವುದು ಬಿಡಲಿಲ್ಲ. ಕೃಷ್ಣನಿಗೆ ಕೋಪ ಉಕ್ಕಿತು. 'ಹಲ್ಲು ಉದುರಿಸಿದ ಹೊರತು ನಿನಗೆ ಬುದ್ಧಿ ಬರೋದಿಲ್ಲ' ಅಂತ ಹೇಳಿ ರೂಪ್ಪನೆ ಮೂತಿ ಮೇಲೆ ಬಾರಿಸಿದ. ಆ ಏಟಿಗೆ 8 ಮುಂದಿನ ಹಲ್ಲು ಉದುರಿತು ; ಮತ್ತೆ ಬೆಳೆಯಲಿಲ್ಲ. ಅಂದಿನಿಂದ ಯಾವ ದನಕ್ಕೂ ಮೇಲ್ದವಡೆಯ ಬಾಚಿ ಹಲ್ಲು ಬೆಳೆಯುತ್ತಿಲ್ಲ. ಹಾಗೆ, ಹೆಗ್ಗತಿನ ಬಾಸುಂಡೆಯು ಹಾಗೆ ನಿಂತಿತು ; ಡುಬ್ಬವಾಯಿತು. ಕೃಷ್ಣನ ಮಾತು ಹುಸಿಯಾಗುತ್ತೆಯೇ ? ಅವನ ಹೆಸರು ಹೊತ್ತಿರುವ ನೀನೇ ಹೇಳು, ಕಿಟ್ಟಿ."

"ಅದು ಕತೆ ಅಲ್ಲವೇ, ಮಾವ"

"ನಾನೇ ಹೇಳಿದನಲ್ಲ, ಕತೆ ಅಂತ. ಹಲ್ಲು ಉದುರಿದ್ದುದರಿಂದ ದನಕ್ಕೇನೂ ನಷ್ಟವಿಲ್ಲ. ಸಿಂಬಿ ಇರುವುದರಿಂದ, ಹುಲ್ಲನ್ನು ನೆಲಕ್ಕೆ ಒತ್ತಾಗಿ ಮೇಯಬಹುದು. ಕಬ್ಬನ್ನು, ತುಂಡು ಹಾಕುವುದನ್ನು ನೀನು ನೋಡೇ ಇದ್ದೀಯಲ್ಲ. ಮರದ ಕೊರಡಿನ ಮೇಲೆ ಕಬ್ಬಿನ ಜಲ್ಲೆಯನ್ನಿಟ್ಟು ಮಚ್ಚಿನಿಂದ ಚಕ್ ಚಕ್ ಅಂತ ಹೇಗೆ ಕತ್ತರಿಸುತ್ತಾರೆ? ಕೊರಡಿನ ಬದಲಾಗಿ ಅಲಗು ಇದ್ದಿದ್ದರೆ ಹೀಗೆ ತುಂಡು ಹಾಕುವುದಕ್ಕೆ ಆಗುತ್ತಿತ್ತೆ? ದನದ ಮೆಲ್ದವಡೆಯ ಸಿಂಬಿ ಕೊರಡಿನಂತೆ; ತಳ ದವಡೆಯ ಬಾಚಿ ಹಲ್ಲು ಮಚ್ಚಿನಂತೆ. ಮೇವು ಕಚಕ್, ಕಚಕ್ ಅಂತ ದನದ ಬಾಯಿ ಸೇರುತ್ತೆ."

"ನಂದನಿಗೆ 9 ಲಕ್ಷ ದನ ಇತ್ತು ಅಂದೆಯಲ್ಲ; ಅದೂ ಕತೆಯಲ್ಲವೇ, ಮಾವ"

"ಇದು ದ್ವಾಪರ ಯುಗದ ಕತೆ. ಆಗ ಜನಗಳು ಬಹಳ ದನ ಸಾಕುತ್ತಿದ್ದರು ಅಂತ ತಿಳಿಸುವುದಕ್ಕೆ ಹಾಗೆ ಹೇಳ್ತಾರೆ. ಹಿಂದಿನವರು ತಮ್ಮ ಸಂಪತ್ತನ್ನು ರೂಪಾಯಿನಿಂದ ಎಣಿಸುತ್ತಿರಲಿಲ್ಲ; ಅವರಲ್ಲಿದ್ದ ದನಗಳ ಸಂಖ್ಯೆಯಿಂದ ಅಳೆಯುತ್ತಿದ್ದರು. ಈ ವಿಷಯ ಸಧ್ಯಕ್ಕೆ ಬೇಡ. ಈಗಾಗಲೇ ಮಾತು ಎತ್ತೆತ್ತಲೋ ತಿರುಗಿದೆ. ಈಗ, ಈ ಮೆಲುಕಿನ ವಿಷಯ ಮುಗಿಸೋಣ. ಇಲ್ಲಿಯ ತನಕ ಬಾಯಿನ ವಿಷಯವಾಯಿತು. ಮೆಲುಕನ್ನು ಅರೆದ ಮೇಲೆ ಈ ತುತ್ತು ಎರಡನೆಯ ಜಠರದ ಮೂಲಕ ಮೂರನೆಯ ಜಠರಕ್ಕೆ ಹೋಗುತ್ತೆ. ಇದರ ಒಳ ಪದರ ಜೇನುಗೂಡಿನ ಜಾಲದಂತೆ ಇರುತ್ತೆ. 4 ನೆಯ ಜಠರದಲ್ಲೇ ಆಹಾರ ಜೀರ್ಣವಾಗುವುದು, ಇದು ನಮ್ಮ ಜಠರದ ತರಹ. ಜಠರದ ರಸ ಉತ್ಪತ್ತಿಯಾಗುವುದು ಇದರಲ್ಲೇ.

ಇದನ್ನೆಲ್ಲಾ ಯಾಕೆ ಹೇಳಿದೆ ಗೊತ್ತೆ. ಪ್ರಕೃತಿಯಲ್ಲಿ ಒಂದು ನಿಯಮವಿದೆ. ಇದನ್ನು ವಿಕಾಸ ನಿಯಮ (Evolutionary Principle) ಅನ್ನುತ್ತಾರೆ. ಜೀವನದ, ಪ್ರಕೃತಿಯ, ನಿರಂತರವೂ ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳಬಲ್ಲ ಪ್ರಾಣಿ ಅಥವಾ ಸಸ್ಯ ಉಳಿಯುತ್ತೆ; ಹೊಂದಿಕೊಳ್ಳಲಾರದ ಜೀವಿ ಅಳಿಯುತ್ತೆ, ಅನ್ನುವುದೇ ಈ ನಿಯಮದ ಸಾರ. ಹಿಂದೆ ಅನೇಕ ಜೀವಿಗಳು ಸುತ್ತಲಿನ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ ನಿರ್ನಾಮವಾದವು.

ನಾವೂ ಅಷ್ಟೆ. ಕಾಲ ಬದಲಾಯಿಸದಂತೆಲ್ಲಾ ಈ ಪರಿಸ್ಥಿತಿಯೂ ವ್ಯತ್ಯಾಸ ವಾಗುತ್ತಿರುತ್ತೆ. ಇದಕ್ಕೆ ಹೊಂದಿಕೊಂಡು ನಮ್ಮ ಜೀವನ ಕ್ರಮವನ್ನು ಅಭ್ಯಾಸಗಳನ್ನು, ಚಟಗಳನ್ನು, ರುಚಿಗಳನ್ನು, ಮನಸ್ಸನ್ನು ತಿದ್ದಿಕೊಳ್ಳಬೇಕು. ಹಾಗೆ ಮಾಡದಿದ್ದರೆ ನಾವು ಬಹಳ ಕಷ್ಟಕ್ಕೆ ಗುರಿಯಾಗಬೇಕಾಗುತ್ತೆ. ತಿದ್ದಿ ಕೊಂಡರೆ ಮಾತ್ರ, ಮುಂದೆ ಸಾಗುತ್ತೇವೆ. ಇದಕ್ಕೆ ಉದಾಹರಣೆ, ದನದ ವಿಕಾಸ.

ದನಗಳಿಗೆ, ನಾರೇ ಪ್ರಾಧಾನ್ಯವಾದ ಹುಲ್ಲು, ಆಹಾರ. ಇವನ್ನು ಅರೆಯಲು ಹಲ್ಲು ಗಟ್ಟಿಯಾಗಿರಬೇಕು, ಬೇಗ ಸವೆಯಬಾರದು. ಅರೆಯಲು ಅನುಕೂಲ ವಾಗುವಂತೆ ದವಡೆ ಎಡಕ್ಕೂ ಬಲಕ್ಕೂ ಚೆನ್ನಾಗಿ ಆಡಬೇಕು. ಹೀಗೆ ಹಲ್ಲು ರಚನೆಯಾಗಿರುವುದರಿಂದಲೇ, ದನಗಳು ಜೀವನದ ಸಂಗ್ರಾಮದಲ್ಲಿ ಯಶಸ್ವಿ ಯಾಗಿರುವುದು.

ಎರಡನೆಯದು, ಈ ಪ್ರಾಣಿಗಳಿಗೆ ಶತ್ರುಗಳು ಹೆಚ್ಚು. ಇವುಗಳಿಂದ ಪಾರಾಗಲು, ಪಕ್ಕದ ಕಣ್ಣುಗಳು, ಬೇಗ ಓಡಲು ಅನುಕೂಲವಾದ ಕಾಲು ಗಳು, ಅವಸರದಲ್ಲಿ ನುಂಗಿದ ಮೇವನ್ನು ಮೆಲಕು ಹಾಕಿ ಅರೆದು ಅರಗಿಸಿ ಕೊಳ್ಳಲು ಅನುಕೂಲವಾದ ಜಠರಗಳ ರಚನೆ, ಗುಡ್ಡಗಾಡುಗಳಲ್ಲಿ, ಕೆಸರು ಕೊಚ್ಚೆಗಳಲ್ಲಿ, ಮುಳ್ಳು ಕಲ್ಲುಗಳ ಮೇಲೆ ಓಡಾಡಲು ಸೂಕ್ತವಾದ ಗೊರಸಿನ ಪಾದರಕ್ಷೆಗಳು—ಇವೆಲ್ಲಾ ಇರುವುದರಿಂದ ಜೀವನದ ಹೋರಾಟದಲ್ಲಿ ಇವಕ್ಕೇ ಗೆಲವು. ಅದಕ್ಕಾಗಿಯೇ, ಜಗತ್ತಿನಲ್ಲಿ ಮಾನವ ಸಂಖ್ಯೆ ಬೆಳೆದ ಹಾಗೆ, ಜೋವಿಡ ಕುಲದ ದನ, ಎಮ್ಮೆ, ಕುರಿ, ಮೇಕೆ ಅಸಂಖ್ಯಾತವಾಗಿರುವುದು.

ಇಂತಹ ಮಾರ್ಪಾಡುಗಳು ಇದ್ದರೂ ಇವುಗಳಿಗೆ ಶತ್ರುಭಯ ಇದ್ದೇ ಇರುತ್ತೆ. ಇವುಗಳನ್ನು ಎದುರಿಸಲು ಇವುಗಳ ಹತ್ತಿರ ಒಂದು ಅಸ್ತ್ರವೂ ಇದೆ. ಕೋಡು. ಈ ಕೋಡಿನಿಂದ ಅನೇಕ ದನಗಳು ಶತ್ರುಗಳಿಂದ ಪಾರಾಗಿವೆ.

ಈ ತನಕ ಹೇಳುತ್ತಿದ್ದ ಪ್ರಾಣಿಶಾಸ್ತ್ರ ನಿನಗೆ ಹಿಡಿಸಿತೊ ಇಲ್ಲವೋ ಗೊತ್ತಿಲ್ಲ. ಸುಮ್ಮನೆ ಕೇಳುತ್ತಿದ್ದೀಯಾ. ಇದೇ ಸಮಯದಲ್ಲಿ ನಿನಗೆ ಇನ್ನಷ್ಟು ಪ್ರಾಣಿಶಾಸ್ತ್ರ ತುಂಬೋಣ ಅಂತಿದ್ದೆ. ನಿನಗೆ ಇದು ಹಿಡಿಸದಿದ್ದರೆ ಇನ್ನೇನ್ನಾ ದರೂ ಮಾತಾಡೋಣ."

"ಬೇಡ, ಬೇಡ, ಮಾವ. ನಾನು ಸುಮ್ಮನೆ ಕೇಳುತ್ತಿದ್ದು ಯಾಕೆಂದರೆ : ಮಧ್ಯೆ ಬಾಯಿ ಹಾಕಿದರೆ ಮಾತು ಇನ್ನಾವ ದಿಕ್ಕಿಗಾದರೂ ತಿರುಗಬಹುದು, ಅಂತ. ನೀನು ಹೇಳುವುದನ್ನೆಲ್ಲಾ ಗಮನವಿಟ್ಟು ಕೇಳು

ತ್ತಿದ್ದೀನಿ. ಈ ವಿಷಯಗಳು ನಮ್ಮ ಸ್ಕೂಲು ಪುಸ್ತಕಗಳಲ್ಲಿ ಇರುವುದಿಲ್ಲ. ನಮ್ಮ ಲೈಬ್ರರಿಯಲ್ಲಿ ಪ್ರಾಣಿ ಶಾಸ್ತ್ರದ ಮೇಲೆ ಕನ್ನಡದಲ್ಲಿ ಹೆಚ್ಚು ಪುಸ್ತಕಗಳಿಲ್ಲ ಅದೂ ಅಲ್ಲದೆ ನೀನು ಪ್ರಾಣಿಶಾಸ್ತ್ರ ಒಂದೇ ಅಲ್ಲ, ಚರಿತ್ರೆ, ಭೂಗೋಳ, ಕತೆ ಎಲ್ಲಾ ವಿಷಯವನ್ನೂ ಹೇಳುತ್ತಿ. ಒಂದೇ ಕಡೆ ಇವೆಲ್ಲಾ ಎಲ್ಲಿ ಸಿಗುತ್ತೆ"

"ಹಾಗಾದರೆ ಸರಿ. ಸ್ವಲ್ಪ ಹಿಂದೆ, ಹೇಳಿದೆ, ಸಸ್ಯಾಹಾರಿಗಳಲ್ಲಿ ಕೆಲವಕ್ಕೆ ಸಮಸಂಖ್ಯೆ ಗೊರಸಿರುತ್ತೆ ; ಮತ್ತೆ ಕೆಲವಕ್ಕೆ ಬೆಸಸಂಖ್ಯೆ ಗೊರಡು, ಅಂತ. ಬೆಸ ಸಂಖ್ಯೆ ಪ್ರಾಣಿಗಳಾವವು ಹೇಳು ?"

"ಕುದುರೆ, ಕತ್ತೆ, ಗೆಂಡಾಮೃಗ"

"ಸರಿಸರಿ. ಈ ಪ್ರಾಣಿಗಳು, ಸಮಸಂಖ್ಯೆ ಗೊರಸಿನ ಪ್ರಾಣಿಗಳಿಗಿಂತ ಮುಂದೆಯೇ ಜಗತ್ತಿನಲ್ಲಿ ವಿಕಾಸಗೊಂಡವು– ಪ್ಲೈಸ್ಟೊಸೀನ್ (Pleistocene) ಕಾಲದಲ್ಲೇ ಕಂಡುಕೊಂಡವು, ಹತ್ತು ಲಕ್ಷ ವರ್ಷಗಳ ಹಿಂದೆಯೇ. ಆದರೆ ಏಕೋ ಏನೋ ಈ ಗುಂಪಿನ ಪ್ರಾಣಿಗಳು ಆಗ್ಗೆ ಹೆಚ್ಚು ಪ್ರಬಲವಾಗಿದ್ದರೂ ಬರುಬರುತ್ತ ಇವುಗಳ ಸಂಖ್ಯೆ, ವೈವಿಧ್ಯ ಕುಗ್ಗಿಹೋಯಿತು. ಈಗ ಈ ತರಗತಿಯಲ್ಲಿ–ಬೆಸಸಂಖ್ಯೆ ಗೊರಸಿನ ತರಗತಿಯಲ್ಲಿ, ಮುಖ್ಯವಾದವು ಅಂದರೆ ಕುದುರೆ, ಕಾಡುಕತ್ತೆ, ನಾಡುಕತ್ತೆ, ಜೀಬ್ರ, ಟಪೀರ್ ಎಂಬ ದಕ್ಷಿಣ ಅಮೆರಿಕದ ಪ್ರಾಣಿ ಮತ್ತು ಗೇಂಡಾಮೃಗ. ಇವುಗಳ ಪೈಕಿ ಗೆಂಡಾಮೃಗಕ್ಕೆ 3 ಗೊರಸು. ಟಪೀರಿಗೆ, ಮುಂದಿನ ಕಾಲದಲ್ಲಿ 4 ಇದ್ದರೂ ಹಿಂದಿನ ಕಾಲಿನಲ್ಲಿ ಮೂರೇಗೊರಸು. ಉಳಿದುವಕ್ಕೆ ಒಂದೇ ಗೊರಸು.

ಸಮ ಸಂಖ್ಯೆ ಗೊರಸಿನ ಪ್ರಾಣಿಗಳಲ್ಲಿ ಹಂದಿ, ಹಿಪ್ಪೊಪೊಟಮಸ್ (ನೀರು ಕುದುರೆ) ಇವಕ್ಕೆ ನಾಲ್ಕು ಗೊರಸು. ಇವು ಮೆಲಕು ಹಾಕುವುದಿಲ್ಲ. ಈ ತರಗತಿಯ ಉಳಿದ ಪ್ರಾಣಿಗಳಿಗೆ–ದನ ಮುಂತಾದುವಕ್ಕೆ 2 ಗೊರಸು ; ಮೆಲಕು ಹಾಕುತ್ತವೆ. ಈ ಮೆಲಕಿನ ಪ್ರಾಣಿಗಳನ್ನು ರೂಮಿನೆಂಟ್ (ruminant) ಅಂತಾರೆ–ರೂಮೆನ್ ಎಂಬ ಜಠರವಿರುವುದರಿಂದ, ಇವು ಈಚಿಗೆ–10 ಲಕ್ಷ ವರ್ಷಗಳಿಂದೀಚೆಗೆ, ವಿಕಾಸವಾದ ಪ್ರಾಣಿಗಳು. ಗೊರಸು ಪ್ರಾಣಿಗಳಲ್ಲಿ, ಸಂಖ್ಯೆಯಲ್ಲೂ, ವೈವಿಧ್ಯದಲ್ಲೂ ಇವೇ ಹೆಚ್ಚು. ಎಷ್ಟು ವಿವಿಧ ಮೆಲಕು ಪ್ರಾಣಿಗಳಿವೆಯೆಂಬುದನ್ನು ಸೂಕ್ಷ್ಮವಾಗಿ ಹೇಳಲೆ ?" "ಹೇಳು ಮಾವ ಪ್ರಾಣಿಗಳ ವಿಚಾರ ಕೇಳುವುದಕ್ಕೆ ನನಗೆ ತುಂಬ ಇಷ್ಟ. ಇವನ್ನ ನೋಡ

ಬೇಕೂ ಅಂತಲೂ ಇಷ್ಟ. ಮೈಸೂರಿನಲ್ಲಿ ಸೂ (ಮೃಗಾಲಯ)ನಲ್ಲಿ ಬಹಳ ತರಹ ಪ್ರಾಣಿಗಳಿವೆಯಂತೆ".

"ಯಾವಾಗಲಾದರೂ ನಿನ್ನನ್ನ ಮೈಸೂರಿಗೆ ಕರೆದುಕೊಂಡು ಹೋಗಿ ಈ ಪ್ರಾಣಿಗಳನ್ನು ತೋರಿಸುತೀನಿ. ಈಗ, ಕೆಲವು ಪ್ರಾಣಿಗಳ ವಿಷಯ ಕೇಳು. ಮೆಲಕು ಪ್ರಾಣಿಗಳಲ್ಲಿ ಒಂದು ಕುಲ : ಒಂಟೆ. ಒಂಟೆಯಂತೆ ಇರುವ ಆದರೆ ಡುಬ್ಬವಿಲ್ಲದ ದಕ್ಷಿಣ ಅಮೆರಿಕದ ಲ್ಯಾಮ (Llama) ಮತ್ತು ಅಲ್ಪಾಕ (Alpaca). ಅಲ್ಪಾಕದಿಂದ ಬಹಳ ಶ್ರೇಷ್ಟವಾದ ಉಣ್ಣೆ ಸಿಗುತ್ತೆ. ಈ ಉಣ್ಣೆ ಬಟ್ಟೆಯ ಕೋಟನ್ನು-ಅಲ್ಪಾಕ ಅಂಗಿಯನ್ನು, ಬಹಳ ಮೆಚ್ಚುತ್ತಾರೆ-ಪಾಶ್ಚಾತ್ಯ ದೇಶಗಳಲ್ಲಿ. ಎರಡನೆಯ ಕುಲದಲ್ಲಿ ಜಿರಾಫೆ ಮತ್ತು ಒಕಾಪಿ. ಜಿರಾಫೆ ಚಿತ್ರ ನೀನು ನೋಡೇ ಇರಬೇಕು-ಬಹಳ ಎತ್ತರವಾಗಿ ಬೆಳೆಯುತ್ತೆ, ಸುಮಾರು 19 ಅಡಿ; ಇದರ ಹತ್ತಿರದ ಸಂಬಂಧಿ ಓಕಾಪಿ; ಸುಮಾರಾಗಿ ಇದರ ಹಾಗೇ ಇರುತ್ತೆ-ಆಫ್ರಿಕದ ಕಾಂಗೋವಿನಲ್ಲಿ; ಆದರೆ ಚಿಕ್ಕದು. ಮೂರನೆಯ ಕುಲದ ಪ್ರಾಣಿಗಳು ಚೆವ್ರೊಟೇನ್ ಅಥವಾ ಮೌಸ್‌ಡೀರ್ (Mouse deer). ಇದನ್ನು ಕೂರ್ ಅಂಡಿ ಅಥವಾ ಕೂರೆ ಅಂತ ನಮ್ಮಲ್ಲಿ ಕರೆಯುತ್ತಾರೆ. (ಚಿತ್ರ ೧೦ ನೋಡಿ). ಒಂದಡಿ ಎತ್ತರದ್ದು. ಇದರ ವಿಶೇಷವೇನಂದರೆ ಇದರಲ್ಲಿ 3 ಜಠರ ಮಾತ್ರವಿದೆ. ನಾಲ್ಕು ಗೊರಸು;

ನಾಲ್ಕನೆಯ ಕುಲ-ಜಿಂಕೆಗಳು-ನಿಜವಾದ ಜಿಂಕೆಗಳು. ಇವನ್ನು (Cervidae) ಅಂತಾರೆ".

"ನಿಜವಾದ ಜಿಂಕೆ? ಹುಸಿ ಜಿಂಕೆಗಳೂ ಇವೆಯೇ, ಮಾವ?"

"ಇವೆ. ನಮ್ಮ ಭಾಷೆಗಳಲ್ಲಿ ಡೀರ್ (Deer), ಆಂಟೆಲೋಪ್ (Antelope) ಎಂಬುದಕ್ಕೆ ಒಂದೇ ಪದ-ಜಿಂಕೆ. ಆದರೆ ಇವು ಬೇರೆ ಕುಲಗಳಿಗೆ ಸೇರಿದ ಪ್ರಾಣಿಗಳು. ನಿಜ ಜಿಂಕೆ (deer) ಗಳಲ್ಲಿ ಕೋರೆ ಹಲ್ಲು ಇವೆ. ಹುಸಿ ಜಿಂಕೆಗಳಲ್ಲಿ-ಆಂಟೆಲೋಪುಗಳಲ್ಲಿ, ಇಲ್ಲ. ಇನ್ನೂ ಬೇರೇ ವ್ಯತ್ಯಾಸಗಳಿವೆ. ಆದರೆ ಎಲ್ಲಕ್ಕಿಂತ ಮುಖ್ಯವಾದದ್ದು-ಕೊಂಬು. ನಿಜ ಜಿಂಕೆ ಕೊಂಬು ಗಟ್ಟಿ. ಆಂಟಲೋಪಿನ ಕೊಂಬು ನಮ್ಮ ದನ, ಕುರಿ ಕೊಂಬುಗಳಂತೆ-ಟೊಳ್ಳು. ಜಿಂಕೆ ಕೊಂಬು ಆಗಾಗ್ಗೆ ಉದುರುತ್ತೆ; ಪುನಃ ಬೆಳೆಯುತ್ತೆ. ಆದರೆ ಹುಸಿ ಜಿಂಕೆಯ



ಚಿತ್ರ ೧೮. ಗ್ನ್ಯೂ, ಲಾಮ ಮತ್ತು ಕೂರೆ (Chevrotain)

ಕೊಂಬು ನಮ್ಮ ದನದ ಕೊಂಬಿನಂತೆ ; ಉದುರುವುದಿಲ್ಲ. ಇದರ ವಿಷಯ ಈಗ ಬೇಡ. ಮಾತು ಮತ್ತೆಲ್ಲೋ ತೇಲಿಹೋಗಬಹುದು.

ಐದನೆಯ ಕುಲ : ಪ್ರಾಂಗ್‌ಹಾರನ್ (Pronghorn). ಇದು ಅಮೆರಿಕ ದೇಶದ್ದು. ಇದರ ಕೊಂಬು ಉದುರುವುದಿಲ್ಲ ; ಆದರೆ ಕೊಂಬಿನ ಪದರ ಪೊರೆ ಬಿಟ್ಟಂತೆ ಉದುರುತ್ತೆ. ಇದರ ಕೊಂಬೂ ಆಂಟಿಲೋಪಿನ ಕೊಂಬಿನಂತೆ ಕವಲು ಒಡೆಯುತ್ತೆ. ಇದು ಜಿಂಕೆ, ದನಗಳಿಗೆ ಮಧ್ಯಸ್ಥ.

ಆರನೆಯ ಕುಲವೇ ದೊಡ್ಡ ಕುಲ: ಮಾನವನಿಗೆ ಬಹಳ ಉಪಯೋಗಕರ ವಾದ ಕುಲ ; ಹಾಲು, ಮಾಂಸ, ಚರ್ಮ, ಕೊಂಬು, ಗೊಬ್ಬರ ಮುಂತಾದವು ಗಳನ್ನು ಒದಗಿಸಿ, ಮಾನವನನ್ನು ಬಹಳ ಕಾಲದಿಂದ ಸಲಹುತ್ತಿರುವ ಪ್ರಾಣಿ ಗಳು–ದನ, ಎಮ್ಮೆ, ಮೇಕೆ, ಕುರಿ, ಹಿಮಾಲಯದ ಯಾಕ್ ಮುಂತಾದವು. ಇದೇ ಕುಲಕ್ಕೆ ಸೇರಿದ್ದು ಹುಸಿ ಜಿಂಕೆಗಳು–ಆಂಟಿಲೋಪುಗಳು.

ಈ ಮೃಗಗಳು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಇರುತ್ತವೆ. ಇಷ್ಟು ವಿಶ್ವ ವ್ಯಾಪ್ತಿ ಇರುವ ಕುಲ ಮತ್ತೊಂದಿಲ್ಲ. ಪ್ರಾಣಿಗಳಲ್ಲಿ ಒಂಟೆ, ಆನೆ. ಜಿಂಕೆ ಮುಂತಾದವು ಕೆಲವೆಡೆ ಮಾತ್ರ. ಆದರೆ ದನ, ಕುರಿ, ಮೇಕೆ ಅನೇಕ ಕಡೆ. ಇಂತಹ ಮಹತ್ವದ ಬೋವಿಡಿ ಕುಲದ ವಿಷಯವನ್ನು ಇನ್ನೂ ಸ್ವಲ್ಪ ಹೆಚ್ಚಾಗಿ ತಿಳಿದುಕೊಳ್ಳಬೇಕು, ಕಣೋ. ಇಂತಹ ಉಪಕಾರಿ ಪ್ರಾಣಿಗಳನ್ನು ಸ್ಮರಿಸಿ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಲ್ಲವೆ ?

ಈ ಬೋವಿಡಿಯಲ್ಲಿ ಅನೇಕ ಉಪಕುಲಗಳಿವೆ. ಮೊದಲನೆಯದು : ಆಂಟಿಲೋಪ್. ಇವುಗಳಲ್ಲಿ ಕುರಿ ಮೇಕೆಯ ಕೆಲವು ಲಕ್ಷಣಗಳೂ ಇವೆ ; ದನ ಎಮ್ಮೆ ಮುಂತಾದವುಗಳ ಲಕ್ಷಣಗಳೂ ಕೆಲವಿವೆ. ಬೋವಿಡಿಯಲ್ಲಿ ಈ ಉಪ ಕುಲದ ಪ್ರಾಣಿಗಳೇ ಮೊದಲು ವಿಕಾಸವಾದವು. ಇವು ಬಂದಾದ ಮೇಲೆಯೇ, ಮೇಕೆ, ಕುರಿ, ದನಗಳು ವಿಕಾಸಗೊಂಡವು ಎಂದು ಪ್ರವೀಣರು ಕೆಲವರು ಹೇಳುತ್ತಾರೆ. ಹೀಗೆ ಹೇಳಲು ಕಾರಣಗಳನ್ನೂ ಕೊಡುತ್ತಾರೆ.

ದನ ಹುಲ್ಲೆಯಿಂದ ಬಂತು ಎಂಬುದಕ್ಕೆ ನಮ್ಮ ಮೈಸೂರಿನಲ್ಲಿ ಒಂದು ಕತೆ ಇದೆ. ಇದು ನಮ್ಮ ರಾಜ್ಯದ ಹಳ್ಳಿಕಾರ್ ದನದ ತಳಿಗೆ ಸಂಬಂಧಪಟ್ಟ ಕತೆ. ಹೈದರ್‌ಆಲಿ, ಆಗಾಗ್ಗೆ ದಕ್ಷಿಣದ ಕಡೆ ಯುದ್ಧ ಮಾಡಲು ಹೋಗು ತ್ತಿದ್ದ, ತಾನೆ. ಒಂದು ಬಾರಿ ತನ್ನ ದೇಶಕ್ಕೆ ಹಿಂದಿರುಗುವಾಗ ದಕ್ಷಿಣದಲ್ಲಿ

ಬಸವಿ ಬಿಟ್ಟ ಕೆಲವು ಹಸುಗಳನ್ನು ತನ್ನೊಡನೆ ತಂದನಂತೆ. ಅವನ್ನು ತುಮಕೂರು ಜಿಲ್ಲೆಯ ಅಮೃತ ಮಹಲ್ ಕಾವಲಿಗೆ ಮೇಯಲು ಬಿಟ್ಟನಂತೆ. ಈ ಕಾವಲಿನಲ್ಲಿ ಆಂಟಿಲೋಪ್ ಜಿಂಕೆಗಳು–ಚಿಗರಿ, ಹುಲ್ಲೆ ಕರ, ಕೊಂಡಗುರಿ–ಹೆಚ್ಚಾಗಿದ್ದವು. ಹುಲ್ಲೆಯ ಹೋರಿ ಮತ್ತು ಹೈದರ್ ತಂದ ಹಸುಗಳು ಕಲೆತು ಹಳ್ಳಿಕಾರ್ ತಳಿ ಉತ್ಪತ್ತಿಯಾಯಿತಂತೆ. ಇದನ್ನು ರುಜುವಾತು ಪಡಿಸಲು ಈ ತಳಿ ದನದ ಕಣ್ಣಿನ ಕೆಳಗೆ ಇರುವ ಮಚ್ಚೆಯನ್ನು ತೋರಿಸು ತ್ತಾರೆ. ಈ ಮಚ್ಚೆ ಹುಲ್ಲೆಗಳಲ್ಲೂ ಇರುತ್ತೆ.

ಈ ಕತೆ, ಕಲ್ಪಕತೆ; ಕಗ್ಗ. ಹುಲ್ಲೆಗೂ ದನದಗಳಿಗೂ ಇರುವ ಸಾಮ್ಯ ವನ್ನು ಚೆನ್ನಾಗಿ ಅರಿತವರು ಈ ಕತೆಯನ್ನು ಕಟ್ಟಿರಬೇಕು. ಅಷ್ಟೆ; ಇದು ಕಗ್ಗವಾದರೂ ಹುಲ್ಲೆಗೂ ದನಗಳಿಗೂ ಇರುವ ಹತ್ತಿರದ ಸಂಬಂಧವನ್ನು ಸೂಚಿಸುತ್ತದೆ. ಈ ಸಂಬಂಧ ಯಾವ ರೀತಿಯದು ?

ಆಂಟಿ ಲೋಪುಗಳು–ಚಿಗರಿಗಳು ಮೈದಾನದ, ಬಯಲುಗಳ, ಪ್ರಾಣಿ ಗಳು. ಬೋವಿಡಿ ಕುಲದ ದನ, ಎಮ್ಮೆ, ಕುರಿ ಮೇಕೆಗಳು ಬಯಲು ಪ್ರದೇಶದ ಪ್ರಾಣಿಗಳು. ಕಾಡುಗಳಲ್ಲಿ ಇವಕ್ಕೆ ಶತ್ರು ಭಾದೆ ಹೆಚ್ಚು, ಬಯಲು ಗಳಲ್ಲಿ ಕಡಿಮೆ. ಆದುದರಿಂದ ದನಗಳು ಚಿಗರಿಗಳಿಂದ ವಿಕಾಸಗೊಂಡಿರ ಬಹುದು. ಬೋವಿಡಿ ಪ್ರಾಣಿಗಳಲ್ಲಿ ಮೊದಲು ವಿಕಾಸಗೊಂಡದ್ದೂ ಚಿಗರಿಯೇ. ಇದರಲ್ಲಿ, ದನ ಎಮ್ಮೆಗಳ, ಕುರಿ ಮೇಕೆಗಳ ಲಕ್ಷಣಗಳಿವೆ, ಅಂತ ಹೇಳಿದ್ದೀನಲ್ಲಾ. ಆದುದರಿಂದ ದನಗಳ ಮೂಲ ಪ್ರಾಣಿ ಚಿಗರಿಯಾಗಿರಬಹುದಲ್ಲ. ಮೂರನೆಯ ಕಾರಣ, ಈ ಆಂಟಿಲೋಪುಗಳು ಹೆಚ್ಚಾಗಿರುವುದು ಆಫ್ರಿಕದಲ್ಲಿ. ಈಗಲೂ ಕೂಡ, ಈ ಸಮಸಂಖ್ಯೆಗೊರಸಿನ ಪ್ರಾಣಿಗಳ ವಿಕಾಸ ಸ್ಥಾನ ಆಫ್ರಿಕ.

ಈ ಕಾರಣಗಳಿಂದ ಪ್ರಾಣಿಶಾಸ್ತ್ರ ವೈಜ್ಞಾನಿಕರು, ಬೋವಿಡಿ ಉಪ ಕುಲದ ಮೂಲ ಪ್ರಾಣಿ ಆಂಟಿಲೋಪ್ ಅಂತ ಹೇಳುತ್ತಾರೆ. ಅವರ ಪ್ರಕಾರ ಈ ಚಿಗರಿಗಳಿಂದ ಕುರಿ, ಮೇಕೆ ಮುಂತಾದವುಗಳು ಉದ್ಭವವಾಗಿರಬೇಕು. ಚಿಗರಿಗಳಲ್ಲಿ ಕೆಲವು ಬಯಲು ಬಿಟ್ಟು ಗುಡ್ಡ ಬೆಟ್ಟಗಳಲ್ಲಿ ವಾಸಿಸಲು ತೊಡಗಿರ ಬೇಕು. ಅವುಗಳ ವಂಶವೇ, ಕುರಿ ಮೇಕೆಗಳಾಗಿರಬಹುದು. ಕೆಲವು ಬೆಟ್ಟದ ಕುರಿ ಮೇಕೆಗಳಲ್ಲಿ ಚಿಗರಿ ಟಗರಿನಲ್ಲಿರುವಂತೆ ಸುರಳಿ ಕೋಡುಗಳಿರುವುದು ಈ ವೈಜ್ಞಾನಿಕರ ಮತಕ್ಕೆ ಪುಷ್ಟಿ ಕೊಡುತ್ತೆ.

ನೀನು ಕೇಳಬಹುದು : ಕುರಿ ಮೇಕೆ ಸಣ್ಣ ಪ್ರಾಣಿಗಳು ; ಅವು ಸಣ್ಣಗಿರುವ ಚಿಗರಿಯಿಂದ ಬಂದಿರಬಹುದು. ಆದರೆ ಎಮ್ಮೆ, ದನ ಭಾರಿ. ಇವೂ ಕೂಡ ಚಿಗರಿಯಿಂದ ಉದ್ಭವಿಸಲು ಹೇಗೆ ಸಾಧ್ಯ, ಅಂತ. ಚಿಗರಿ ಅಂದಾಕ್ಷಣ ಸಣ್ಣ ಪ್ರಾಣಿಯೇ ಆಗಿರಬೇಕಿಲ್ಲ. ಇದರಲ್ಲೂ ಅನೇಕ ವಂಶ ಗಳಿವೆ. ಆಫ್ರಿಕದಲ್ಲಿ ,, ಗ್ನು" (Gnu) ಎಂಬ ಒಂದು ಜಾತಿ ಚಿಗರಿ– ಆಂಟಿಲೋಪ್ ಇದೆ (ಚಿತ್ರ ೧೦ ನೋಡಿ). ದೂರದಿಂದ ನೋಡಿದರೆ ಇದು ಕೋಡಿರುವ ಕುದುರೆಯಂತೆ ಕಾಣುತ್ತೆ. ಬಾಲ ಕುದುರೆಯ ತರಹ ; ಕೋಡು ಎಮ್ಮೆಯ ತರಹ ; ಸುಮಾರು 225 ಕೆ.ಜಿ. ತೂಕ ; ದೊಡ್ಡ ಹಿಂಡು ಗಳಲ್ಲಿರುತ್ತವೆ. ಇದೇ ಎಮ್ಮೆ ದನಗಳ ಮೂಲಪ್ರಾಣಿಯಾಗಿರಬಹುದು

ಈ ಗೊರಸಿನ ಪ್ರಾಣಿಗಳ ಸಂಬಂಧ, ವಿಂಗಡನೆಯನ್ನು ಮನೆಗೆ ಹೋದ ಮೇಲೆ ನಿನ್ನ ಪುಸ್ತಕದಲ್ಲಿ ಬರೆದುಕೊಡುತೀನಿ. ಮನೆಗೆ ನಡಿ. ಇಷ್ಟು ಹೊತ್ತಿಗೆ ಊಟ ರೆಡಿಯಾಗಿರುತ್ತೆ. ಅಂದ ಹಾಗೆ, ಅಕ್ಕ, ಹಬ್ಬಕ್ಕೆ ಏನು ಮಾಡಿದ್ದಾಳೊ ". ನಾಚಿಕೆಯಿಂದ, ಕಿಟ್ಟಿ ' ಗೊತ್ತಿಲ್ಲ ' ಎಂದ. ,, ಸುಳ್ಳು, ಅಡಿಗೆ ಮನೆ ಉಗ್ರಾಣದ ಕಡೆಯೇ ಸುಳಿಯುವ ನಿನಗೆ ಗೊತ್ತಿಲ್ಲ ಅಲ್ಲವೆ ! ಈವೊತ್ತಿನ ಅಡಿಗೆ ಏನು ಹೇಳೊ, ಇರಲಿ, ನಿನ್ನ ನಾಚಿಕೆ. "

,, ಕಾಯಿ ಒಬ್ಬಟ್ಟು ; ಜತೆಗೆ ನುಚ್ಚಿನುಂಡೆ ಅಂತ ಕಾಣುತ್ತೆ."

,, ಹಾಗೆ ಬಾ. ನಡಿ, ಚೆನ್ನಾಗಿ ಕತ್ತರಿಸೋಣ. ಪ್ರಾಣಿಶಾಸ್ತ್ರ ಹೇಳುವುದರಲ್ಲಿ ಮಸಾಲೆ ದೋಸೆ ಕರಗಿ ಹೋಗಿ ಎಷ್ಟೋ ಹೊತ್ತಾಯಿತು ". ಇಬ್ಬರೂ ಮನೆಗೆ ನಡೆದರು.

೪. ಕಿಟ್ಟಿಗೆ ದನದ ನಂಟರ ಪರಿಚಯ

ರಾಮಣ್ಣನಿಗೆ ನುಚ್ಚಿನುಂಡೆ ಕಂಡರೆ ಪ್ರಾಣ–ಅದರಲ್ಲೂ ಅಕ್ಕ ಮಾಡಿದ ಉಂಡೆ. ಇಂಗು ಗಮಗಮಾಯಿಸಿರುತ್ತೆ. ಕಾಯಿ ಒಬ್ಬಿಟ್ಟು ಉಂಡೆಗಳನ್ನು ಚೆನ್ನಾಗಿ ಮೇದು, ಕಿಟ್ಟಿಗೂ, ಅಕ್ಕ ಒಪ್ಪದಿದ್ದರೂ, ತಿನ್ನಿಸಿ, ಎಲೆಯಿಂದ ಏಳಲಾರದೆ ಎದ್ದ. ಊಟ ಮುಗಿದ ಮೇಲೆ ನಿದ್ದೆ ತಡೆಯುವುದು ಅಸಾಧ್ಯವಾಯಿತು. ಕಿಟ್ಟಿ, ಒಂದೆರಡು ಬಾರಿ, ಮಾವನ ರೂಮಿನಲ್ಲಿ ಇಣಕಿ ನೋಡಿದ. ಮಾವ ಗಾಢ ನಿದ್ರೆಯಲ್ಲಿ ಇದ್ದುದರಿಂದ ತನ್ನ ಸ್ನೇಹಿತ ಶ್ರೀನಿವಾಸನ್ ಅವನ ಮನೆಗೆ ಕೇರಂ ಆಡಲು ಹೋದ. ನಾಲ್ಕು ಗಂಟೆಗೆ ತಿಂದಿದ್ದು ಕರಗಿತ್ತು. ಮನೆಗೆ ಬಂದು ಅಮ್ಮನನ್ನು ಕಾಡಿಬೇಡಿ ಮತ್ತೆರಡು ಒಬ್ಬಿಟ್ಟನ್ನು ಗಿಟ್ಟಿಸಿದ. ಅವನ್ನು ಮೆದ್ದು ರೂಮಿಗೆ ಬಂದ. ರಾಮಣ್ಣ ಕಣ್ಣು ಹೊಸಕುತ್ತಿದ್ದ. ತಕ್ಷಣವೇ ಅಮ್ಮನ ಬಳಿ ಓಡಿ ಸ್ವಲ್ಪ ಹುರಿಗಾಳು, ಎರಡು ಬಟ್ಟಲು ಟೀ ತಂದು ರಾಮಣ್ಣನ ಮುಂದಿಟ್ಟ.

ರಾಮಣ್ಣ, ಟೀ ಕುಡಿದು, ಹುರಿಗಾಳನ್ನು ಬಾಯಿಗೆ ಎಸೆದುಕೊಳ್ಳು ತ್ತಿದ್ದಾಗ, ಕಿಟ್ಟಿ, ,, ಮಾವ, ಬೆಳಿಗ್ಗೆ ದನದ ಕೋಡು ಹೇಳುವುದಕ್ಕೆ. ಹೊರಟು ಪ್ರಾಣಿಶಾಸ್ತ್ರಕ್ಕೆ ತಿರುಗಿತು. ಕೋಡು ದನಗಳ ಅಸ್ತ್ರ ಅಂದಿ".

ರಾಮಣ್ಣ ಬೆಳಗಿನ ಊಟದಿಂದ, ಗಾಢವಾದ ನಿದ್ದೆಯಿಂದ ಸಂತೃಪ್ತ ನಾಗಿದ್ದ. ಎದ್ದ ಒಡನೆಯೆ, ಕಿಟ್ಟಿ ಯಾಕೆ ಟೀ ತಂದ, ಅಂತಲೂ ಗೊತ್ತು. ಅಲ್ಲದೆ, ರಜ ಮುಗಿಯುವುದರೊಳಗಾಗಿ ದನಗಳ ಬಗ್ಗೆ ಆದಷ್ಟು ವಿಷಯಗಳನ್ನು ಕಿಟ್ಟಿಯ ತಲೆಯಲ್ಲಿ ತುರುಕುಬೇಕಾಗಿತ್ತು. ಅವನ ಮೂಲಕ ಭಾವನಿಗೂ


ದನದ ಬಗ್ಗೆ ಆಸಕ್ತಿ ಮೂಡಿಸಬೇಕಾಗಿತ್ತು. ಬೇಸರವಿಲ್ಲದೆ, ದನದ ಕತೆಯನ್ನು ಮುಂದುವರಿಸಿದ.

,, ಕೋಡಿನ ವಿಷಯ ಅಲ್ಲವೆ. ದನಕ್ಕೆ ಕೋಡು ಇರುವುದು, ಅಲಂಕಾರಕ್ಕಲ್ಲ ; ಶತ್ರುಗಳನ್ನು ಎದುರಿಸುವುದಕ್ಕೆ ಬೆಳೆಸಿಕೊಂಡಿರುವ ಅಸ್ತ್ರ. ಎದುರಿಸುವುದಕ್ಕೆ ಅನ್ನುವ ಬದಲು ಬೆದರಿಸುವುದಕ್ಕೆ ಅನ್ನಬಹುದು. ಈ ಅಸ್ತ್ರವನ್ನು ಪಡೆದುದರಿಂದ ಮತ್ತು ಹಿಂದೆ ತಿಳಿಸಿದ ಕಾರಣಗಳಿಂದ ದನಗಳು ಕಾಡಿನಲ್ಲೂ ಊರಿನಲ್ಲೂ ಜಯಶೀಲಗಳಾಗಿ ತಮ್ಮ ವ್ಯಾಪ್ತಿಯನ್ನು ಹೆಚ್ಚಿಸಿ ಕೊಂಡಿವೆ.

ಈ ಕೋಡಿನ ಬಗ್ಗೆ ಒಂದು ವಿಷಯ ಮರೆತಿದ್ದೆ. ಜಿಂಕೆ, ಜಿರಾಫೆ, ಪ್ರಾಣಿಗಳ ಕೋಡು ಗಟ್ಟಿ ; ಬೋವಿಡಿ ಕೋಡು ಟೊಳ್ಳು ಅಂದೆ. ಇವುಗಳಲ್ಲಿ ತಲೆ ಮೂಳೆಯಿಂದ ಕೋಡಿನ ಒಳ ಮೂಳೆ ಹೊರಟಿಕೊಳ್ಳುತ್ತೆ. ಅದರ ಮೇಲೆ ಕೊಂಬಿನ ಪದರ ಬೆಳೆದು ಕೋಡಾಗುತ್ತೆ. ಅಂದರೆ ಬುಡದ ಭಾಗ ದಲ್ಲಿ ಮೂಳೆ ಇದ್ದರೂ, ತುದಿಯ ಭಾಗದಲ್ಲಿ ಹೊರಪದರ ಕೊಂಬು ; ಒಳಗೆ ಟೊಳ್ಳು. ಈ ತುದಿಯನ್ನು ಕತ್ತರಿಸಿದರೆ ದನಕ್ಕೆ ನೋವಾಗುವುದಿಲ್ಲ. ಒಳಗೆ ಮೂಳೆ ಇದ್ದಿದರೆ ನೋವಾಗುತ್ತಿತ್ತು.

ಬೋವಿಡಿ ಪ್ರಾಣಿಗಳ ಕೋಡು ರೆಂಬೆ ಒಡೆಯುವುದಿಲ್ಲ. ಅದೇ ಜಿಂಕೆ ಕೊಂಬು ಒಡೆಯುತ್ತೆ. ಬೊವಿಡಿಯಲ್ಲಿ ಹೆಣ್ಣು, ಗಂಡು ಎರಡಕ್ಕೂ ಕೋಡು ಇರುತ್ತೆ. ಏಷ್ಯಾ ದೇಶದ ಯಾವ ಹೆಣ್ಣುಜಿಂಕೆಗೂ ಕೋಡಿರು ವುದಿಲ್ಲ. ಕೆಲವು ಆಂಟಿಲೋಪುಗಳಲ್ಲಿ ಮಾತ್ರ ಹೆಣ್ಣಿಗೆ ಕೋಡಿರುವು ದುಂಟು.

ಬಹಳ ಉದ್ದದ ಕೋಡು ಯಾವ ಪ್ರಾಣಿಯದು ಗೊತ್ತೆ?–ಕಾಡಮ್ಮೆ ಯದು. ಸುಮಾರು 2 ಮೀಟರು (ಚಿತ್ರ ೧೧ ನೋಡಿ) ದನ, ಕುರಿ, ಇತ್ಯಾದಿಗೆ 2 ಕೋಡುಗಳು ಮಾತ್ರ. ಆದರೆ ಒಂದು ಬಗೆಯ ಹುಲ್ಲೆಗೆ– ಚಾಸಿಂಗಾ ಎಂಬ ಹುಲ್ಲೆಗೆ 4 ಕೊಂಬು. ಈ ಹುಲ್ಲೆ ನಮ್ಮ ಮೈಸೂರಿನಲ್ಲೂ ಇದೆ. ಈ ಪ್ರಾಣಿಯನ್ನು ಆಂಟಿಲೋಪ್ ಉಪಕುಲಕ್ಕೆ ಸೇರಿಸಿಲ್ಲ. ಇದರದೇ ಒಂದು ಪ್ರತ್ಯೇಕ ಉಪಕುಲ. ಇಲ್ಲಿಗೆ ಕೋಡಿನ ಮಾತು ಸಾಕು. ಇನ್ನಾದರೂ, ಏನೂ ಅಡಚಣೆಯಿಲ್ಲದೆ, ನಮ್ಮ ದೇಶದ ವಿವಿಧ ದನಗಳ



ಚಿತ್ರ ೧೧. ಕೊಂಬುಗಳು : 1ನೆಯ ಸಾಲು : ಚಿಟಾಲ್ (ಸಾರಂಗ ಜಿಂಕೆ) ಸಾಂಬೂರ್ (ಕುಡುವೆ) ಜಿಂಕೆ. ಇವುಗಳ ಕೋಡು ಗಟ್ಟಿ, ಉದುರುತ್ತವೆ ಗಂಡಿನಲ್ಲಿ. 2ನೆಯ ಸಾಲು : ನೀಲ್ಗೈ (ನೀಲ್) ಮತ್ತು 4 ಕೋಡಿನ ಆಂಟಿಲೋಪ್. 3 ನೆಯ ಸಾಲು : ಚಿಂಕಾರ (Indian Gazelle_ದೊಡ್ಡ ಜಿಂಕೆ) ಮತ್ತು ಹರಿಣ (ಹೊಲಕೆರ್ರೆ_Black buck). ಈ ನಾಲ್ಕು ಪ್ರಾಣಿಗಳ ಕೋಡು ಟೊಳ್ಳು; ಉದುರುವುದಿಲ್ಲ; ಹೆಣ್ಣಿನಲ್ಲೂ ಕೂಡ ಕೋಡು ಇರುತ್ತದೆ. (ಮಧ್ಯೆ ಕಾಣಿಸಿದೆ)

ವಿಷಯ ತಿಳಿದುಕೊಳ್ಳೋಣ—ಪುನಃ ಕಾಂಕ್ರೇಜ್ ದನಕ್ಕೆ ಹಿಂದಿರುಗೋಣ"

"ಇದೊಂದು ಬಾರಿ ಅಡ್ಡಿ ಮಾಡ್ತೀನಿ, ಮಾವ. ಆ ಮೇಲೆ ಈ ಪ್ರಶ್ನೆ ಕೇಳುವುದಕ್ಕೆ ಆಗುತ್ತೊ ಇಲ್ಲವೊ. ನೀನು ಕಾಡೆತ್ತು, ಕಾಡೆಮ್ಮೆ ಅಂದಿ. ಇವೆಲ್ಲ ದನಗಳ ಬಳಗ ಅಂದಿ; ಇವುಗಳ ವಿಷಯ ಸ್ವಲ್ಪ ಹೇಳು".

"ನಿಜ. ನಿನ್ನ ಪ್ರಶ್ನೆ ಸರಿಯಾಗಿದೆ. ದನದ ಜಾತಿಗಳ ಬಗ್ಗೆ ಮಾತಾಡುವುದಕ್ಕೆ ಮುಂಚೆಯೇ ಈ ದನದ ಬಳಗ, ಇದರ ನಂಟರ ಪ್ರಸ್ತಾಪ ಮಾಡುವುದು ಸೂಕ್ತ. ಆ ಮೇಲೆ ಇದಕ್ಕೆ ಅವಕಾಶ ಸಿಗಲಾರದು.


ದನದ ನಂಟರು ಯಾರು ಅಂತ ಆಗಲೇ ಹೇಳಿದ್ದೀನಿ. ಎಮ್ಮೆ, ಕುರಿ, ಮೇಕೆ ಅಲ್ಲದೆ, ಕಾಡೆತ್ತು, ಕಾಡೆಮ್ಮೆ, ಯಾಕ್, ಬೈಸನ್, ಗಯಾಲ್, ಬಾಂಟೆಂಗ್ ದನದ ಬಳಗ. ಮೊದಲು ಕಾಡೆತ್ತು. ಇದನ್ನ ಮೊದಲು ಹೇಳಲು ಕಾರಣವೂ ಇದೆ. ನಿನ್ನ ರಫ್‌ನೋಟ್ ಬುಕ್ ಹಾಳೆಯನ್ನು ಬೆಳಕಿಗೆ ಹಿಡಿದರೆ ನಿನಗೆ ಗೋಚರವಾಗುವುದು ಈ ಕಾಡೆತ್ತು."

"ನಿಜ. ನಮ್ಮ ಮೈಸೂರು ಕಾಗದದ ಕಾರ್ಖಾನೆಯವರ ಕಾಗದ ಮೇಲೆಲ್ಲಾ ಇದೆ. ಇದನ್ನು ಬೈಸನ್ ಬ್ರಾಂಡ್ ಕಾಗದ ಅಂತಾರೆ. ಈ ಬೈಸನ್ನೇ, ಕಾಡೆತ್ತು?"

"ಬೈಸನ್ನೇ ಬೇರೆ, ಕಾಡೆತ್ತೇ ಬೇರೆ. ನಮ್ಮ ದೇಶದಲ್ಲಿ ಬೈಸನ್ ಇಲ್ಲ; ಇರುವುದು ಕಾಡೆತ್ತು. ನೀಲಗಿರಿಗೆ ಹೋಗುವಾಗ ದಾರಿಯಲ್ಲಿ ಬಂಡೀಪುರದ ಕಾಡುಸಿಗುತ್ತೆ. ಈ ಕಾಡಿನಲ್ಲಿ ಕಾಡೆತ್ತನ್ನು ನೋಡಬಹುದು. ಇದನ್ನು ಉತ್ತರದವರು ಗೌರ್ ಅಂತಾರೆ; ತಮಿಳಿನಲ್ಲಿ ಕಾಡೆಮ್ಮೆ ಅಂತಾರೆ. ತಪ್ಪು. ಕಾಡೆಮ್ಮೆ ಇರುವುದು ಅಸ್ಸಾಂ, ನೇಪಾಳಿನಲ್ಲಿ. ಬಂಡೀಪುರದಲ್ಲಿ, ದಕ್ಷಿಣದ ಕೆಲವೆಡೆ, ಇರುವುದು ಕಾಡೆತ್ತು, ಕಿಟ್ಟಿ"

"ಹಾಗಾದರೆ ನಮ್ಮ ದೇಶದ್ದಲ್ಲವಾದ ಬೈಸನ್ ಚಿತ್ರವನ್ನು ಯಾಕೆ ನಮ್ಮ ಕಾಗದದ ಕಾರ್ಖಾನೆ ಹಾಕ್ತಿದೆ?"

ಕಾಗದದ ಮೇಲೆ ಇರುವ ಚಿತ್ರ ಕಾಡೆತ್ತಿನದು—ಮೈಸೂರಿನ ಪ್ರಾಣಿ, ಸರಿ. ಆದರೆ ಅದಕ್ಕೆ ಬೈಸನ್ ಅಂತ ಕರೆದಿರುವುದು ತಪ್ಪು. ಈ ತಪ್ಪಿನ ಹಿಂದೆ ಒಂದು ಕತೆ ಇದೆ. ಹಿಂದೆ, ಹೋದ ಶತಮಾನದಲ್ಲಿ, ಒಬ್ಬ ಶಿಕಾರಿ,



ಚಿತ್ರ ೧೨. 1ನೆಯ ಸಾಲು : ಕಾಡೆತ್ತು (gaur), ಅದರ ತಲೆ. 2ನೆಯ ಸಾಲು ಬಾಂಟೆಂಗ್ (Banteng) ; ಮಲಯದ್ವ-ಬರ್ಮದ ಕಾಡೆತ್ತು, ಅದರ ತಲೆ. 3ನೆಯ ಸಾಲು. ಕಾಡೆಮ್ಮೆ, ಅದರ ತಲೆ. 4ನೆಯ ಸಾಲು (a) ಗಯಾಲ್ ಅಥವಾ ಮಿಥುನ್. (b) ಯಾಕ್ [Yak]

ಬಂಡಿಪುರದ ಸಹಾಯಕನೊಂದಿಗೆ ಈ ಕಾಡಿನಲ್ಲಿ ಹೋಗುತ್ತಿದ್ದನಂತೆ. ಎದುರಿಗೆ ಕಾಡೆತ್ತು ಕಾಣಿಸಿಕೊಂಡಿತು. ಶಿಕಾರಿ, ಹಿಂದಿಯಲ್ಲಿ "ಇದು ಯಾವ ಪ್ರಾಣಿ ?" ಅಂತ ಕೇಳಿದ. ಅದಕ್ಕೆ ಜತೆಗಾರ, 'ಭೈನ್ಸಾ' ಅಂದ. ಭೈನ್ಸಾ ಅಂದರೆ ಹಿಂದಿಯಲ್ಲಿ ಎಮ್ಮೆ ಅಂತ. ಶಿಕಾರಿಗೆ ಇದು ಬೈಸನ್ ಅಂತ ಕೇಳಿಸಿತು. ಇದರ ಹೆಸರನ್ನು ಕೇಳಿದ್ದ. ಊರಿಗೆ ಹೋದ ಮೇಲೆ ತಾನು ಬೈಸನ್ ನೋಡಿದೆ, ಕೊಂದೆ ಎಂದು ಜಂಬ ಕೊಚ್ಚಿಕೊಂಡ. ಅಂದಿನಿಂದ ಈ ತಪ್ಪು ಹೆಸರೇ ಸ್ಥಿರವಾಯಿತು. ನಮ್ಮ ಕಾಗದ ಕಾರ್ಖಾನೆಯವರೂ, ಆ ತಪ್ಪು ಹೆಸರನ್ನೇ ಬಳಸುತ್ತಿದ್ದಾರೆ. ಈ ಕಾಡೆತ್ತು (೧೨ ನೆಯ ಚಿತ್ರ) ಬೋವಿಡಿ ಪ್ರಾಣಿಗಳ ಪೈಕಿ ಅತ್ಯಂತ ದೊಡ್ಡ ಪ್ರಾಣಿ. ಅನೇಕವು 2 ಮೀ. ಎತ್ತರಕ್ಕೆ ಇರುತ್ತೆ ; ಸುಮಾರು 900 ಕಿಲೊ ಭಾರವಾಗಿರುತ್ತೆ. ಇದು ದಪ್ಪಗೆ, ಕಪ್ಪಗೆ ಇರುತ್ತೆ. ಆದರೆ ಮಂಡಿ ಕೆಳಗೆ ಬಿಳುಪು ; ಗೊರಸು ಅಚ್ಚ ಕಪ್ಪು. ದೂರದಿಂದ ಬಿಳಿಯ ಕಾಲ್ಚೀಲದ ಮೇಲೆ ಕಪ್ಪು ಬೂಟ್ಸು ಹಾಕಿಕೊಂಡಂತೆ ಕಾಣುತ್ತೆ. ಕೊಂಬು ದಪ್ಪ, ನಯ, ಸ್ವಲ್ಪ ಹಸುರು ಮೇಲೆ ಇರುತ್ತೆ ; ಕಮಾನಿನಂತೆ ಬಾಗಿರುತ್ತೆ. ತಲೆ ಸ್ವಲ್ಪ ಹಳ್ಳ ಬಿದ್ದಿರುತ್ತೆ-ಸಾಸರಿನಂತೆ. ನೆತ್ತಿ ಮೇಲೆ ಗುಂಗುರು ಕೂದಲು-ಕ್ರಾಪ್ ಬಿಟ್ಟಂತೆ. ಇವಕ್ಕೆ ಡುಬ್ಬ ಇರುವುದಿಲ್ಲ. ಆದರೆ ಬೆನ್ನಿನ ಮಧ್ಯೆ ಸ್ವಲ್ಪ ಉಬ್ಬು ಇದೆ. ಇವು ಹಿಂಡು ಕೂಡುವ ಪ್ರಾಣಿ. ಸಾಮಾನ್ಯವಾಗಿ ಬೋವಿಡಿ ಕುಲದ ಪ್ರಾಣಿಗಳು ಮಂದೆ ಅಥವಾ ಹಿಂಡು ಕೂಡುವ ಪ್ರಾಣಿಗಳೇ. ಕಾಡೆತ್ತು ಬೆಟ್ಟಗುಡ್ಡ ಇರುವ ಕಡೆಯೇ ಹೆಚ್ಚು. ಜೌಗು ಪ್ರದೇಶದ ಹತ್ತಿರ ಬರುವುದಿಲ್ಲ. ಅದಕ್ಕಾಗಿಯೇ ಇದನ್ನು ಕಾಡೆಮ್ಮೆ ಅನ್ನಕೂಡದು. ಇವು ಗುಡ್ಡಗಳನ್ನು ಚೆನ್ನಾಗಿ ಹತ್ತುತ್ತವೆ. 6 ಸಾವಿರದ ಅಡಿ ಬೆಟ್ಟಗಳಲ್ಲೂ ಇವೆ. ಅಷ್ಟು ದೊಡ್ಡ ದೇಹವಿದ್ದರೂ ವೇಗವಾಗಿ ನಡೆಯಬಲ್ಲವು. ಸಾಮಾನ್ಯವಾಗಿ ಕಾಡಿನಲ್ಲೇ ಇರುತ್ತೆ. ಹಳ್ಳಿಗಳ ಹತ್ತಿರ ಸುಳಿಯುವುದಿಲ್ಲ. ಇದರ ಆಹಾರ, ಹುಲ್ಲು, ಬೊಂಬಿನ ಚಿಗುರು. ಮರದ ತೊಗಟೆ, ಹಣ್ಣುಗಳನ್ನು ತಿನ್ನುವುದುಂಟು. ಕಾಡೆತ್ತು ಇಂಡಿಯದಲ್ಲಿ ಅನೇಕ ಕಡೆ ಇವೆ. ಇದರ ಚಿತ್ರ ನಮ್ಮ ಸ್ಟಾಂಪಿನ ಮೇಲೆ ಬಂದಿದೆ. ಕಾಡೆತ್ತಿನಂತೆ ಇನ್ನೊಂದು ಪ್ರಾಣಿ ಇದೆ. ಅದರ ಹೆಸರು ಬಾಂಟೆಂಗ್ (Banteng). ಇದಕ್ಕೆ ಕನ್ನಡದಲ್ಲಾಗಲೀ

ಹಿಂದಿಯಲ್ಲಾಗಲೀ ಹೆಸರಿಲ್ಲ. ಕಾರಣ, ಇದು ನಮ್ಮ ದೇಶದ ಪ್ರಾಣಿಯಲ್ಲ. ಬರ್ಮ, ಥಾಯ್‌ಲ್ಯಾಂಡ್ ಮಲಯ, ಜಾವಾ ಕಡೆ ಇದು ಇರುತ್ತೆ. ಗೌರ್ ನಮ್ಮ ಕಾಡೆತ್ತು; ಇದು ಬರ್ಮಾದ ಕಾಡೆತ್ತು. ನಮ್ಮ ಪ್ರಾಣಿಗಿಂತ ಚಿಕ್ಕದು–ಸುಮಾರು 1¾ ಮೀ. ಎತ್ತರ. ಕಾಲು ಉದ್ದ, ಬೆನ್ನು ಎದ್ದಿರುತ್ತೆ. ಕುದುರೆ ಬಣ್ಣ. ಬಿಳಿ ಮುಖ.

ಆನೇಲಿ ಕಾಡೆಮ್ಮೆ. ಇದೂ ಕೂಡ ಕಾಡೆತ್ತಿನಂತೆ ಭಾರಿ ಪ್ರಾಣಿ; ಸುಮಾರು ಅದೇ ತೂಕ. ಆದರೆ, ಎತ್ತರ ಕಡಿಮೆ. ಊರು ಎಮ್ಮೆಗೂ ಕಾಡು ಎಮ್ಮೆಗೂ ಹೆಚ್ಚು ವ್ಯತ್ಯಾಸವಿಲ್ಲ. ನಡಿಗೆ ಗಂಭೀರ–ನಮ್ಮ ದೇಶದ ಡೆಹಲಿ ಅಥವಾ ಮುರ್ರಾ ಎಮ್ಮೆಯಂತೆ. ಸ್ಲೇಟ್ ಬಣ್ಣ. ಮೈ ನುಣುಪು. ಇದರ ಮೊಳಕಾಲೂ ಸ್ವಲ್ಪ ಬಿಳಪು. ಮೂರು ಮೂಲೆ ಕೋಡು. ಊರಿನ ಎಮ್ಮೆಯಂತೆಯೇ ಚಪ್ಪಟೆ. ಇವಕ್ಕೆ ಕೊಚ್ಚೆ, ಕೆಸರು ಅಂದರೆ ಬಲು ಆನಂದ. ಕಾಡೆಮ್ಮೆ, ಕೆಲವು ಬಾರಿ ಊರಿಗೂ ಬರುವುದುಂಟು. ಬೋವಿಡಿ ಪ್ರಾಣಿಗಳ ಪೈಕಿ ಇದೇ ಬಹಳ ದುಷ್ಟ. ವಿನಾಕಾರಣ ಮೇಲೆ ಬೀಳುತ್ತೆ. ಕಾಡೆಮ್ಮೆ, ಊರೆಮ್ಮೆ ಬೆರೆಯುತ್ತೆ. ಇವುಗಳ ಸಂತಾನ ಗಟ್ಟಿಮುಟ್ಟು; ಹೆಚ್ಚು ಹಾಲು ಕೊಡುತ್ತೆ; ಹೆಚ್ಚು ಕಾಲ ಜೀವಿಸುತ್ತೆ; ಹೆಚ್ಚು ಭಾರ ಎಳೆಯುತ್ತೆ. ಆದರೆ ಕೋಪ ಜಾಸ್ತಿ. ಈಗ ಇದು ಅಸ್ಸಾಂ, ನೇಪಾಳ್, ಮಧ್ಯ ಪ್ರದೇಶ ಮತ್ತು ಒರಿಸ್ಸದ ಕೆಲವೆಡೆಗಳಲ್ಲೂ ಇವೆ.

ಕಾಡೆಮ್ಮೆ ಊರೆಮ್ಮೆ ಬೆರೆಯುವಂತೆ, ಕಾಡೆತ್ತು ಊರಿನ ದನದೊಂದಿಗೆ ಬೆರೆಯುತ್ತೆ. ಆದರೆ ಮೈಸೂರಿನಲ್ಲಿ ಇದು ಆಗುತ್ತಿಲ್ಲ. ಅಸ್ಸಾಂನಲ್ಲಿ ಗಿರಿಜನರು ಇದರ ಮಿಶ್ರ ಸಂತಾನವನ್ನು ಸಾಕುತ್ತಾರೆ. ಈ ಸಂತಾನಕ್ಕೆ ಮಿಥನ್ ಅಥವಾ ಮೆಥನ್ ಅಂತಾರೆ. ಇವು ಭಾರಿ ದನ. ಇವನ್ನು ಪೂರ್ತ ಪಳಗಿಸಿ ಕೊಟ್ಟಿಗೆಯಲ್ಲಿ ಕಟ್ಟುವುದಿಲ್ಲ. ಸುತ್ತಲೂ ಕಾಡುಗಳು ವಿಶೇಷವಾಗಿರುವುದರಿಂದ ಕಾಡು ಪ್ರಾಣಿಯಾಗಿಯೇ ಸಾಕುತ್ತಾರೆ. ಈ ಮಿಶ್ರ ತಳಿಯನ್ನೆ 'ಗಯಾಲ್' ಅಂತ ಕರೆಯುತ್ತಾರೆ.

ದನದ ಇನ್ನೊಂದು ನಂಟ: ಯಾಕ್ [Yak] (೧೨ ನೆಯ ಚಿತ್ರ ನೋಡಿ) ಇದರ ಚಿತ್ರ ಭೂತಾನಿನ ಸ್ಟಾಂಪಿನ ಮೇಲೆ ಇದೆ. ನನ್ನ ಹತ್ತಿರ ಆ ಸ್ಟಾಂಪು ಇದೆ. ಬೆಂಗಳೂರಿಗೆ ಹೋದಮೇಲೆ ಕಳುಹಿಸುತ್ತೀನಿ, ಒಂದನ್ನ. ಈ ಯಾಕನ್ನು


ಬೂಬಲ್, ಡೋಂಗ್ ಅಂತ ಕರೆಯುತ್ತಾರೆ. ಹೆಸರಿಂದಲೇ ಹೇಳಬಹುದು ಇದು ಭಾರತದ ಒಳ ಪ್ರದೇಶದ್ದಲ್ಲ ಅಂತ. ಹಿಮಾಲಯದ ಎತ್ತರ ಪ್ರದೇಶ ವಾದ ಲಡಾಕ್, ಚಂಬಾ, ಚೀನಿ, ಪಂಜಿ, ಸ್ಪೀತಿ, ಲಹೋಲ್ ಮತ್ತು ನೆಫಾ ಕಡೆ ಇದು ಇರುತ್ತೆ. ಟಿಬೆಟ್ಟನಲ್ಲಿ ಸಾಮಾನ್ಯ-ನಮ್ಮ ದನಗಳಂತೆ. ಜಗತ್ತಿನ ಬಹಳ ಎತ್ತರದ ಪ್ರದೇಶಗಳಲ್ಲಿ ಜೀವಿಸಬಲ್ಲ ಕೆಲವೇ ಪ್ರಾಣಿಗಳಲ್ಲಿ ಯಾಕ್ ಒಂದು-14 ರಿಂದ 20 ಸಾವಿರ ಅಡಿ ಎತ್ತರದಲ್ಲಿ. ಇವಕ್ಕೆ ಚಳಿ, ಮಂಜು ಬಹಳ ಬೇಕು. ನೀರು ಬದಲಾಗಿ ಗಡ್ಡೆ ಮಂಜನ್ನೇ ನೆಕ್ಕುತ್ತವೆ. ಕೊರೆ ಯುತ್ತಿರುವ ಪರ್ವತದ ತೊರೆಗಳಲ್ಲಿ ಜಲಕ್ರೀಡೆಯಾಡುತ್ತವೆ. ಇದರ ಬಣ್ಣ ಕಪ್ಪು ಅಥವಾ ಕಂದು ಸುಮಾರು 2 ಮೀ. ಹೆಚ್ಚು ಎತ್ತರ; ½ ಟನ್ನು ತೂಕ; ಕಾಲು ಮೋಟು. ಮೈಯೆಲ್ಲಾ, ಕರಡಿಯಂತೆ, ಕೂದಲು-ದಟ್ಟ ವಾದ ಉದ್ದವಾದ ಕೂದಲು. ಈ ಕೂದಲಿನಿಂದ ಹಗ್ಗವನ್ನು ಹೊಸೆಯು ತ್ತಾರೆ; ಚೀಲ ತಯಾರು ಮಾಡುತ್ತಾರೆ; ಹಾಸಿಗೆ ತುಂಬುತ್ತಾರೆ. ಇದರ ಬೆನ್ನಿನ ಮೇಲೆ ದೊಡ್ಡ ಡುಬ್ಬವಿರುತ್ತೆ. ಇತರ ಪ್ರಾಣಿಗಳಿಗೆ ಬಾಲದ ತುದಿ ಯಲ್ಲಿ ಕೂದಲಿನ ಕುಚ್ಚು ಇದ್ದರೆ, ಇದಕ್ಕೆ ಬಾಲದ ಮೇಲೆಲ್ಲಾ ಕೂದಲು. ಇದೂ ಕೂಡ ಹಿಂಡು ಪ್ರಾಣಿ; ಗುಂಪಿನಲ್ಲೇ ಓಡಾಡುತ್ತೆ.

ಈ ಪ್ರದೇಶದಲ್ಲಿ ಗಾಡಿಗಳಿಲ್ಲ. ರಸ್ತೆ ಇದ್ದರೆ ತಾನೇ ಗಾಡಿ. ಗಾಡಿಯಲ್ಲಿ ಸಾಮಾನನ್ನು ಹೇರುವುದರ ಬದಲಾಗಿ ಇದರ ಬೆನ್ನು ಮೇಲೆ ಹೇರು ತ್ತಾರೆ-ಅಗಸರು ಕತ್ತೆಯ ಮೇಲೆ ಹೇರುವಂತೆ. ಇದರ ಮೇಲೆ ಸವಾರಿ ಮಾಡುತ್ತಾರೆ. ಮಂಜುಗಡ್ಡೆಯ ಮೇಲೂ ಚೆನ್ನಾಗಿ ನಡೆಯುತ್ತೆ; ಗಿರಿಗಳನ್ನೂ ಏರುತ್ತೆ.

ಇದರ ಹಾಲು, ಹೊಂಬಣ್ಣ. 1 ರಿಂದ 5 ಪೌಂಡಿನಷ್ಟು ಹಾಲು ಕೊಡುತ್ತೆ. 4-5 ತಿಂಗಳು ಕೊಟ್ಟು ನಿಲ್ಲಿಸುತ್ತೆ. ಹಾಲಿನಿಂದ ಬೆಣ್ಣೆ ಮಾಡ್ತಾರೆ. ಹಾಲನ್ನ ಒಡೆಸಿ, ಕೇಸಿನ್ ಪುಡಿಮಾಡಿಟ್ಟು ಕೊಳ್ಳುತ್ತಾರೆ. ಇದರ ಮಾಂಸವನ್ನೂ ತಿನ್ನುವುದುಂಟು.

ದನಗಳ ಮತ್ತೊಂದು ನಂಟ-ಬೈಸನ್. ಇದು ನಮ್ಮ ದೇಶದಲ್ಲಿ ಇಲ್ಲ. ಅಮೆರಿಕದಲ್ಲಿದೆ. ಒಂದು ಕಾಲದಲ್ಲಿ ಇವು ಆ ದೇಶದಲ್ಲಿ ಬಹಳ

ಹೇರಳವಾಗಿದ್ದವು. ಈಗ ಬಹು ಕಡಿಮೆ. ಇದೂ ದೊಡ್ಡ ಪ್ರಾಣಿ; 5-6 ಅಡಿ ಎತ್ತರ: ಮುಕ್ಕಾಲು ಟನ್ನು ತೂಕ. (ಚಿತ್ರ ೧೩ ನೋಡಿ) ಇಲ್ಲಿಗೆ ದನದ ಬಳಗದ ಕತೆ ಮುಗಿಯಿತು.



ಚಿತ್ರ ೧೩. ನಿಜವಾದ ಬೈಸನ್ನುಗಳು. ಯೂರೋಪಿನದು, ಅಮೆರಿಕದ್ದು

೫. ಹರಪ್ಪ ಜನರ ತಳಿಗಳು

ದನದ ನಂಟರ ಕತೆ ಮುಗಿಯಿಸಿ, ಬಟ್ಟೆ ಹಾಕಿಕೊಂಡು ಮಾವ, ಅಳಿಯ ಪಾರ್ಕಿಗೆ ಹೊರಟರು. ಅಲ್ಲಿ ಕೂತ ಮೇಲೆ ರಾಮಣ್ಣ, ಶುರು ಮಾಡಿದ " ಈಗ ದನದ ಪೂರ್ವ ವೃತ್ತಾಂತ, ಅದರ ಹುಟ್ಟು, ಅದರ ನಂಟರು ಇವುಗಳಲ್ಲಿ ವಿಷಯವೆಲ್ಲವನ್ನೂ ಹೇಳಿ ಮುಗಿಸಿದ್ದೇನೆ. ಇನ್ನು ಇಲ್ಲಿರುವಷ್ಟು ದಿನ ಆ ಮಾತು, ಈ ಮಾತು ಬೆಳೆಸದೆ ನಮ್ಮ ದೇಶದ ದನ ಸಂಪತ್ತಿನ ವಿಷಯವನ್ನು, ನಮ್ಮ ದನದ ತಳಿಗಳ ವಿಚಾರವನ್ನು ಮಾತ್ರ ಹೇಳುತ್ತೇನೆ, ಗೊತ್ತಾಯಿತೆ. ಹೆಚ್ಚು ಪ್ರಶ್ನೆ ಕೇಳಬೇಡ. ಕೇಳಿದರೂ, ಈ ತಳಿಗಳ ವಿಚಾರ ಕೇಳು. ನನ್ನ ಮಾತು ಹದ್ದಿನಲ್ಲೆ ಹರಿಯುವಂತೆ ನನ್ನ ಜತೆಯಲ್ಲಿ ಎರಡು ಪುಸ್ತಕಗಳನ್ನು ತಂದಿದ್ದೀನಿ–ಚಿತ್ರದ ಪುಸ್ತಕ ಒಂದು. ತಳಿಗಳ ವರ್ಣನೆ ಇರುವ ಪುಸ್ತಕ ಮತ್ತೊಂದು. ಇವುಗಳ ಸಹಾಯದಿಂದ ಈ ತಳಿಗಳ ವಿಚಾರ ತಿಳಿದುಕೊಳ್ಳೋಣ.

ನಮ್ಮ ಕತೆ ಕಾಂಕ್ರೇಜ್ ದನದಿಂದ ಆರಂಭವಾಯಿತು. ಎತ್ತೆತ್ತೊ ಸಾಗಿತು. ಪುನಃ ಅಲ್ಲಿಗೇ ಬರೋಣ .... ನೋಡು ಕಾಂಕ್ರೇಜ್ ದನದ ಈ ಚಿತ್ರವನ್ನು, ಎಲ್ಲಿ, ವರ್ಣಿಸು, ನೋಡೋಣ."

" ದಪ್ಪ ಕೊಂಬು, ಎರಡೂ ಸೇರಿ ಅರ್ಧ ಚಂದ್ರದ ಆಕಾರದಲ್ಲಿದೆ, ಜೋಲುಕಿವಿ, ಡುಬ್ಬದಪ್ಪ. ಬಾಲದ ಕುಚ್ಚು ನೆಲಕ್ಕೆ ತಗಲುತ್ತಿದೆ. ತಲೆ ಎತ್ತಿಕೊಂಡು ನಿಂತಿದೆ. ಕತ್ತಿನ ತಳಗೆ ಚರ್ಮ ಇಳೀ ಬಿದ್ದಿದೆ."

"ಮುಖ್ಯವಾದ, ಎದ್ದು ಕಾಣುವ ವಿಷಯಗಳನ್ನು ತಿಳಿಸಿದ್ದೀಯಾ. ಆದರೆ ದನಗಳನ್ನು ವರ್ಣಿಸುವಾಗ ಒಂದು ಕ್ರಮವನ್ನು ಅನುಸರಿಸಬೇಕು. ಮರಗಿಡ ವರ್ಣಿಸುವಾಗ ನಾನು ಅನುಸರಿಸಿರಲಿಲ್ಲವೇ, ಹಾಗೆ. ಮೊದಲು ಗಾತ್ರ ಎತ್ತರ ಇತ್ಯಾದಿ. ಆ ಮೇಲೆ ತಲೆ, ಕತ್ತು, ಕಾಲು, ಬೆನ್ನು, ಹೊಟ್ಟೆ. ಕೊನೆಯಲ್ಲಿ ಬಾಲ, ಈ ಚಿತ್ರವನ್ನು ನೋಡು. ಇದರ ಪಕ್ಕದಲ್ಲೆ ಇದರ ಮಾಲೀಕ ನಿಂತಿದ್ದಾನೆ. ಆದುದರಿಂದ ಇದರ ಎತ್ತರವನ್ನು ಸುಮಾರಾಗಿ ಹೇಳಬಹುದು. ದನದ ಎತ್ತರವನ್ನು ಡುಬ್ಬದ ಹಿಂಭಾಗದಲ್ಲಿ ಅಳೆಯಬೇಕು. ಈ ದನ ಅವನ ಹೆಗಲಿಗೆ ಬರುತ್ತೆ. ಸುಮಾರು 140 ಸೆಂ. ಮೀ. ಇರಬಹುದು. ಸಾಮಾನ್ಯವಾಗಿ ಈ ದನದ ಎತ್ತರ 135 ಸೆಂ. ಮೀ. ಹಸುವಿಗಿಂತ ಹೋರಿ 2-5 ಸೆಂ. ಮೀ. ಅಂಗುಲ ಎತ್ತರ.

ದನಗಳ ಉದ್ದವನ್ನು ಹೆಗಲಿನಿಂದ ಚಪ್ಪೆಯ ಭಾಗದಲ್ಲಿ ಹೊರ ಚಾಚಿರುವ ಮೂಳೆಯ ತನಕ ಅಳೆಯುತ್ತಾರೆ. ಚಪ್ಪೆ ಅಂದರೆ ದನದ ಹಿಂಭಾಗ. ಹೀಗೆ ಅಳೆಯಲು, ಗ್ರಾಫ್ ಪೇಪರಿನಂತೆ ಗೆರೆ ಹಾಕಿರುವ ಬೋರ್ಡಿನ ಮುಂದೆ ನಿಲ್ಲಿಸಿ ಅಳೆಯುತ್ತಾರೆ. ಈ ಬೋರ್ಡನ್ನು ಚಿತ್ರದಲ್ಲಿ ಕಾಣಬಹುದು. ಕೆಲವು ದೇಹದ ದನ ಹೆಚ್ಚು ಉದ್ದಕ್ಕೆ ಇರುತ್ತೆ. ಯಾವ ಯಾವ ಜಾತಿ ದನ ಎಷ್ಟು ಎಷ್ಟು ಎತ್ತರಕ್ಕೆ, ಉದ್ದಕ್ಕೆ ಇರುತ್ತೆ, ತೂಕ ಎಷ್ಟು ಎಂಬುದನ್ನ ನಾನು ಒಂದು ಬಾರಿ ಪಟ್ಟಿ ಮಾಡಿದ್ದೆ. ಇದನ್ನ ಸ್ವಲ್ಪ ನೋಡೋಣ.

ಎತ್ತರದಲ್ಲಿ, ಎಲ್ಲಾ ದನಗಳಗಿಂತ ನಗೋರಿ ತಳಿಯ ದನಗಳೇ ಹೆಚ್ಚು ಎತ್ತರ. ಬಹುಷಃ ಬಹಳ ಗಿಡ್ಡ ತಳಿ ಅಂದರೆ ಆಂಧ್ರ ಪ್ರದೇಶದಲ್ಲಿರುವ ಪುಂಗನೂರು ತಳಿ. ಇದನ್ನ ಪ್ರತ್ಯೇಕ ತಳಿ ಅಂತ ಭಾವಿಸದಿದ್ದರೂ ಸಾಮಾನ್ಯವಾಗಿ ಇವು ಕುಳ್ಳಾಗಿಯೇ ಇರುತ್ತವೆ.

ಬಹಳ ಉದ್ದವಾಗಿರುವ ದೇಹ ಇರುವುದು ಕಾಂಕ್ರೇಜ್, ಮೇವಾತಿ, ದೇಓನಿ ಮತ್ತು ಕಂಗಾಯಂ ತಳಿಗಳು.

ಹೆಚ್ಚು ತೂಕದ ದನ ಅಂದರೆ ಕಾಂಕ್ರೇಜ್. ದನಗಳನ್ನು ವರ್ಣಿಸಲು, ಅದರ ದೇಹದ ಭಾಗಗಳ ಹೆಸರನ್ನು ತಿಳಿದುಕೊಳ್ಳಬೇಕು. ಈ ಹೊತ್ತು ರಾತ್ರಿ ನಿನ್ನ ಪುಸ್ತಕದಲ್ಲಿ ದನದ ಚಿತ್ರ ಬರೆನು ವಿವಿಧ ಭಾಗಗಳ ಹೆಸರುಗಳನ್ನು ಸೂಚಿಸುತ್ತೇನೆ. ಆಗ ನಿನಗೆ ವರ್ಣನೆ ಸುಲಭವಾಗುತ್ತೆ. ಮುಂಡೆ, ಹಣೆ,

ಶಿಖೆ, ಮುಸುಡಿ ಮೂತಿ, ಹೊಳ್ಳೆ, ಗಂಗೊದಲು, ಎದೆ ಗುಂಡಿಗೆ, ಮುಂಡಿ, ಜುಂಜುಗಾಲು, ಕೀಲು, ಇರಳು, ಕೊಂಡಿಮೂಳೆ, ಕೀಲು ಮೂಳೆ, ಟೊಂಕ, ಪೃಷ್ಟ (ಚಪ್ಪೆ), ತೋಕೆ, ವಂಶಲಾಂಛನ–ಈ ಹೆಸರುಗಳು ನಿನಗೆ ಚೆನ್ನಾಗಿ ಪರಿಚಯವಾಗಬೇಕು. ನೋಡು, ಈ ಪುಸ್ತಕದಲ್ಲಿ ದನದ ಚಿತ್ರದ ಪಕ್ಕದಲ್ಲಿ ಇಂಗ್ಲಿಷ್ ಹೆಸರಿಗೆ ಪಕ್ಕದಲ್ಲಿ ಕನ್ನಡ ಹೆಸರುಗಳನ್ನು ಬರೆದಿದ್ದೀನಿ.

ಈಗ ಕಾಂಕ್ರೇಜ್ ದನ ವರ್ಣಿಸುತ್ತೀನಿ. (ಫೋಟೊ 1) ಕಿವಿಗೊಟ್ಟು ಕೇಳು. ಇದು ಭಾರಿ ದನ. ಹಸುವಿನ ತೂಕ ಸುಮಾರು 420 ಕಿಲೊ; ಗೂಳಿಯ ತೂಕ 630 ಕಿಲೊ ನರೆ ಬಣ್ಣ ಅಥವಾ ಬೂದಿ; ಇಲ್ಲವೇ ಉಕ್ಕಿನ ಬಣ್ಣ. ಆದರೆ ಹುಟ್ಟಿದ ಕರುಗಳಲ್ಲಿ ಮಂಡೆ ಕೆಂಪಗಿದ್ದು ಆ ಮೇಲೆ ಬೂದಿಗೆ ತಿರುಗುತ್ತದೆ. ಸಾಮಾನ್ಯವಾಗಿ, ಡುಬ್ಬ, ಮುಂದಿನ ಹಿಂದಿನ ಚಪ್ಪೆಗಳು ಸ್ವಲ್ಪ ಕಪ್ಪು. ಹಣೆ ಅಗಲ; ಮಧ್ಯೆ ಸ್ವಲ್ಪ ತಗ್ಗು; ಮೋರೆ ಸ್ವಲ್ಪ ಕಿರಿದು, ಮುಸುಡಿ ಸ್ವಲ್ಪ ಮೇಲಕ್ಕೆ ಎತ್ತಿದೆ.

ಕಾಂಕ್ರೇಜ್ ದನದ ಮುಖ್ಯ ವೈಶಿಷ್ಟ್ಯ-ಇದರ ಕೋಡು. ಇದನ್ನು ಲೈರ್ (Lyre) ಕೋಡು ಅಂತಾರೆ, ಲೈರ್ ಅನ್ನುವುದು ಗ್ರೀಕರು ಬಳಸುತ್ತಿದ್ದ ಒಂದು ತಂತಿ ವಾದ್ಯ (ಚಿತ್ರ ೨) ಇದರಲ್ಲಿ ಎರಡು ಸಮ ಆಕಾರದ ಕೊಡು; ಇವುಗಳ ಮಧ್ಯೆ 6 ತಂತಿ ಎಳೆದಿರುತ್ತೆ. ಕಾಂಕ್ರೇಜ್ ದನದಕೋಡ ಈ ವಾದ್ಯವನ್ನು ಹೋಲುತ್ತೆ. ಮೊಹೆಂಜದಾರೋ ಮುದ್ರೆಗಳಲ್ಲಿ ಕೆತ್ತಿರುವ ಗೂಳಿಯ ಕೋಡೂ ಹೀಗೇ ಇದೆ. ಆದಕ್ಕಾಗಿಯೇ ಕಾಂಕ್ರೇಜ್ ತಳಿಯನ್ನು ಹರಪ್ಪ ಜನರ ತಳಿ ಎಂದು ಭಾವಿಸಿರುವುದು. ಕೋಡಿನ ಬುಡದ ಚರ್ಮ ಮೇಲಕ್ಕಿದೆ. ಇದೂ ಕೂಡ ಈ ತಳಿಯ ವಿಶೇಷ. ಇತರ ಗುಂಪಿನ ತಳಿಗಳಲ್ಲಿ ಹೀಗೆ ಚರ್ಮ ಮೇಲೇರಿರುವುದಿಲ್ಲ. ಕೊಡಿನ ತಳಕ್ಕೆ ಚಕ್ಕಳದ ಪಟ್ಟಿ ಬಿಗಿದ ಹಾಗೆ ಇರುತ್ತೆ. ಇದರ ಕಿವಿ ನೋಡು. ದೊಡ್ಡದು; ತೆರೆದಿರುತ್ತೆ; ಮೂತಿತನಕ ಜೋತು ಬಿದ್ದಿರುತ್ತೆ.

ಈ ತಳಿಯ ಮತ್ತೊಂದು ವಿಶೇಷ: ಕತ್ತಿನ ತಳಗಿನ ಚರ್ಮ–ಗಂಗೊದಲು ಬಹಳ ಸಡಿಲ; ಜೋತು ಬಿದ್ದಿದೆ. ಮೊಹೆಂಜದಾರೊ, ಗೂಳಿಯಲ್ಲೂ ಹೀಗೆ ಭಾರಿ ಗಂಗೊದಲು.

ಇದರ ಕತ್ತು ಉದ್ದ, ತೆಳು. ಕಾಲುಗಳು ಲಕ್ಷಣವಾಗಿವೆ. ಗೊರಸು ಈ ತಳಿಗೆ ಸಣ್ಣ; ದುಂಡಾಗಿದೆ. ಇದರ ಕೂದಲು ಮೋಟು, ಮೃದು, ಎದೆ ಅಗಲ; ಬೆನ್ನು ನೇರಕ್ಕಿದೆ. ಡುಬ್ಬ ದಪ್ಪ ಎದ್ದು ಕಾಣುತ್ತೆ. ಬಾಲ ಸುಮಾರು ಉದ್ದ; ಕುಚ್ಚು ಕಪ್ಪು.

ಕೊನೆಯದಾಗಿ ಇದರ ನಿಲುವು. ನೀನು ಹೇಳಿದ ಹಾಗೆ ತಲೆ ಎತ್ತಿ ಕೊಂಡು ಸಿಂಹದಂತೆ ಇರುತ್ತೆ.

" ಈ ದನವನ್ನು, ಮುಖ್ಯವಾಗಿ ಎತ್ತುಗಳಿಗಾಗಿ ರೂಪಿಸಿಕೊಂಡಿದ್ದಾರೆ, ಇದನ್ನು ಸಾಕುವವರು. ಸೌರಾಷ್ಟ್ರ ಮತ್ತು ಗುಜರಾತಿನ ಅನೇಕ ಭಾಗಗಳಲ್ಲಿ ಕಾಂಕ್ರೇಜ್ ಎತ್ತಿಗೆ ಬಹಳ ಪ್ರಶಸ್ತಿ-ಬೇಸಾಯಕ್ಕೆ, ನೀರು ಎತ್ತುವುದಕ್ಕೆ, ಗಾಡಿಗೆ."

" ಹಾಗಾದರೆ, ಈ ದನ ಹೆಚ್ಚಾಗಿ ಹಾಲು ಕೊಡುವುದಿಲ್ಲವೆ,."

" ಕೊಡುತ್ತೆ. ಕೆಲ ವರ್ಷಗಳ ಹಿಂದೆ ಕಾಂಕ್ರೇಜು, ಎತ್ತಿನ ತಳಿ, ಹಾಲಿಗೆ ಅನುಕೂಲವಲ್ಲ, ಎಂದು ಭಾವಿಸಿದ್ದರು. ಆದರೆ, ಒಳ್ಳೆ ತೀನಿ ತಿನಸು ಹಾಕಿ, ಚೆನ್ನಾಗಿ ಸಾಕಿದರೆ ಈ ತಳಿ ಹೆಚ್ಚು ಹಾಲನ್ನು ಕೊಡಬಲ್ಲದು ಎಂದು ಗೊತ್ತಾಯಿತು. 4-5 ಲೀಟರು (3-4 ಮೈಸೂರು ಸೇರಿಗೆ) ಮೋಸವಿಲ್ಲ. ಚೆನ್ನಾಗಿ ತಿನ್ನಿಸಿದರೆ ಇನ್ನೂ ಹೆಚ್ಚಾಗಿ ಕೊಡುತ್ತೆ. ಗುಜರಾತಿ ನಲ್ಲಿ ಆನಂದ್ ಅಂತ ಒಂದು ಊರು. ಅಮೂಲ್ ಬೇಬಿ ಫುಡ್. ಅಮೂಲ್ ಬೆಣ್ಣೆ ಕೇಳಿದ್ದೀಯಲ್ಲ. ಈ ಅಮೂಲ್ ಕಾರ್ಖನೆ ಇರುವುದು ಆನಂದದಲ್ಲಿ. ವಲ್ಲಭಾಯ್ ಪಟೇಲಿನವರ ಹೆಸರಿನಲ್ಲಿ ಒಂದು ಭಾರಿ ವಿದ್ಯಾ ಸಂಸ್ಥೆಯೂ ಇಲ್ಲಿದೆ. ಇಲ್ಲಿ ವ್ಯವಸಾಯದ ಕ್ಷೇತ್ರವಿದೆ. ಹೆಸರೆತ್ತಿದ್ದು. ಇಲ್ಲಿ ಒಂದು ಕಾಂಕ್ರೇಜ್ ಹಸು, ದಿನಕ್ಕೆ 21 ಲೀಟರು–15 ಸೇರು, ಒಂದು ಸೀಮೆ ಟಿನ್ನು ತುಂಬಿ ಚೆಲ್ಲುವಷ್ಟು ಹಾಲು ಕೊಟ್ಟಿದೆ. ಈ ತಳಿ ಹಸುಗಳಿಗೆ ಇದೇ ಗರಿಷ್ಟ-maximum-ಹಾಲಿನ ಉತ್ಪತ್ತಿಯಾದುದರಿಂದ ಆ ದನದ ಮಾಲೀಕರಾದ ಕ್ಷೇತ್ರಕ್ಕೆ ಇಂಡಿಯಾ ಸರ್ಕಾರ " ಗೋಪಾಲ ರತ್ನ " ಎಂಬ ಬಹುಮಾನ ಬಿರಿದು ಕೊಟ್ಟಿದೆ.

ಆದರೆ ಲಾಗಾಯತನಿಂದಲೂ, ಈ ಕಾಂಕ್ರೇಜ್ ತಳಿಯನ್ನು ಎತ್ತು ಗಳಿಗಾಗಿ ಸಾಕಿದರು. ಈ ತಳಿಯನ್ನು ರೂಪಿಸಿದವರು, ಹೆಚ್ಚಾಗಿ ಸಾಕು

ತ್ರಿರುವವರು, ರಬ್ಬಾರಿ, ಭರ್‌ವಾಡ್, ಮಲ್ಡಾರಿ ಮುಂತಾದ ಕೋಮುಗಳು. ಇವರು ದನ ಸಾಕುವುದರಲ್ಲಿ ಚತುರರು ; ಈ ತಳಿಯ ಲಕ್ಷಣಗಳನ್ನು ಚೆನ್ನಾಗಿ ತಿಳಿದಿದ್ದಾರೆ. ದನಗಳ ಹಿಂಡನ್ನು, ಮನೆಯ ಹತ್ತಿರವೇ, ಮುಳ್ಳು ಬೇಲಿಯ ರೊಪ್ಪದಲ್ಲಿ ರಾತ್ರಿ ಹೊತ್ತು ಕೂಡಿಸಿ, ಹಗಲಿನಲ್ಲಿ ಮೇಯುವುದಕ್ಕೆ ಹೊರ ಹೊಡೆದುಕೊಂಡು ಹೋಗುತ್ತಾರೆ. ಮೇವು ಕಡಿಮೆ ಇರುವ ಕಾಲದಲ್ಲಿ ಬಹಳ ದೂರ ಅಟ್ಟಿಕೊಂಡು ಹೋಗುತ್ತಾರೆ. ಕರುಗಳನ್ನು ತಾಯಿಗಳಿಂದ ಬಿಡಿಸುವುದಿಲ್ಲ; ಇವು ಹೊಟ್ಟೆ ತುಂಬ ತಾಯಿ ಹಾಲು ಕುಡಿದ ದಟ್ಟ ಪುಷ್ಟ ವಾಗಿ ಬೆಳೆಯುತ್ತವೆ. ಕರು ಕುಡಿದು ಮಿಕ್ಕ ಹಾಲನ್ನು ಕರೆದು ತುಪ್ಪಮಾಡಿ ಮಾರುತ್ತಾರೆ. ಈ ಗೊಲ್ಲರು ಬೆಳೆಸಿದ ದನಗಳಿಗೆ, ಬಹಳ ಗಿರಾಕಿ.

ಈ ದನದ ಬಗ್ಗೆ ಒಂದು ವಿಷಯ ಹೇಳುವುದನ್ನು ಮರೆತಿದ್ದೆ–ಇದನ್ನು ಕಾಂಕ್ರೇಜ್ ದನ ಅಂತ ಯಾಕೆ ಕರೆಯುತ್ತಾರೆ ಅಂತ, ಕಾಂಕ್ರೇಜ್ ಅನ್ನು ವುದು ಗುಜರಾತಿನ ಪಲನ್‌ಪುರ್ ಹತ್ತಿರದ ಪ್ರದೇಶ. ಈ ಪ್ರದೇಶ ಕಚ್ ಮರು ಭೂಮಿಯ ಪಕ್ಕದಲ್ಲೇ ಇದೆ. ಈ ದನದ ಈಗಿನ ತವರು ಬನಾಸ್ ಮತ್ತು ಸರಸ್ವತಿ ನದಿಗಳ ಮಧ್ಯೆ ಇರುವ ಕಾಂಕ್ರೇಜ್.

ಸರಸ್ವತಿ ನದಿ ಅಂದರೆ ಒಂದು ಸ್ವಾರಸ್ಯದ ವಿಷಯ ಜ್ಞಾಪಕಕ್ಕೆ ಬರುತ್ತೆ. ಆರ್ಯರಿಗೆ ಈ ಸರಸ್ವತಿ ನದಿ ಬಹಳ ಅಚ್ಚು ಮೆಚ್ಚಿನ, ಬಹಳ ಪೂಜ್ಯವಾದ ನದಿ. ವೇದಗಳಲ್ಲಿ ಅದರಲ್ಲೂ ಋಗ್ ವೇದದಲ್ಲಿ, ಇದನ್ನೇ ಬಹಳವಾಗಿ ಹೊಗಳುತ್ತಾರೆ. ಸರಸ್ವತಿ, ದೃಶದ್ವತಿ ನಡುವಣ ಪ್ರದೇಶವೇ ನಿಜವಾದ ಬ್ರಹ್ಮಾವರ್ತ - ದೇವತೆಗಳ ತವರು ಅಂತ ಅವರ ಭಾವನೆ. ಆರ್ಯರಿಗೆ ಸರಸ್ವತಿ, ನದೀ ಮಾತ್ರವೇ ಅಲ್ಲ; ಪರಮ ಪೂಜ್ಯವಾದ ವಾಗ್ದೇವಿ, ವಿದ್ಯಾ ದಾಯಿನಿ. ಇದರ ದಡದಲ್ಲೇ ಋಷಿಗಳು ವೇದ ಮುಂತಾದ ಗ್ರಂಥಗಳನ್ನು ರಚಿಸಿದ್ದು. ಸರಸ್ವತಿ ನದಿ ಪ್ರದೇಶ ಜ್ಞಾನಿಗಳ, ವಿದ್ಯೆಯ ಆವಾಸಸ್ಥಾನ ವಾದುದರಿಂದ ಈ ನದಿಯನ್ನು ವಾಗ್ದೇವಿ, ವಿದ್ಯಾದಾಯಿನಿ ಎಂದರು.

ಸರಸ್ವತಿ ಎಂದರೆ ಸರಸುಗಳಿಂದ - ಸರೋವರಗಳಿಂದ ಕೂಡಿದ ನದಿ. ಆದರೆ ಈಗ ಸರಸ್ವತಿ ನದಿಯೇ ಇಲ್ಲ. ಮಳೆಗಾಲದಲ್ಲಿ ಮಾತ್ರ ನೀರು."

" ಯಾಕೆ, ಏನಾಯ್ತು ಈ ನದಿಗೆ."

"ಋಗ್ ವೇದದ ಕಾಲದಲ್ಲಿ ಇದು ಮಹಾ ನದಿಯಾಗಿದ್ದಿರಬಹುದು. ಆದರೆ ಮಹಾಭಾರತ ಬರೆಯುವ ಕಾಲಕ್ಕೆ; ಭೂಕಂಪ, ಜ್ವಾಲಾಮುಖಿಗಳಿಂದ ಈ ನದಿಯ ಓಟಕ್ಕೆ ಅಡಚಣೆಯಾಗಿ ಕುರುಕ್ಷೇತ್ರದ ಬಳಿ ಈ ನದಿ ಮಾಯವಾಯಿತು. ಹೀಗೆ ಮಾಯವಾದ ಸ್ಥಳವನ್ನು ವಿನಾಶನಿ ಅಂತ ಕರೆಯುತ್ತಾರೆ. ಈಗಲೂ ಅದೇ ಹೆಸರು ಆ ಸ್ಥಳಕ್ಕೆ.

ಇದನ್ನು ಗುಪ್ತಗಾಮಿನಿ ಅಂತಾರೆ—ನೆಲದೊಳಗೆ ಹರಿಯುವ ನದಿ. ಹಿಮಾಲಯದಲ್ಲಿ ಹುಟ್ಟಿ ಕುರುಕ್ಷೇತ್ರದಲ್ಲಿ ಮಾಯವಾಗಿ ಅಜ್ಮೀರ್ ಬಳಿ ಇರುವ ಪುಷ್ಕರಣಿ ಸರೋವರದಿಂದ ಮತ್ತೆ ಕಾಣಿಸಿಕೊಂಡು ಮತ್ತೆ ರಾಜಸ್ಥಾನದ ಮರು ಭೂಮಿಯ ಮರಳಿನಲ್ಲಿ ಮಾಯವಾಗಿ, ಅರ್ಬುದ (ಈಗಿನ ಮೌಂಟ್ ಅಬು) ಬಳಿ ಕಾಣಿಸಿಕೊಂಡು ಕಚ್ಛಿನ ಮರಳು ಗಾಡಿನಲ್ಲಿ ಅದೃಶ್ಯವಾಗಿ ಗಿರ್ ಕಾಡಿನಲ್ಲಿ ಪುನಃ ಹರಿದು ಪ್ರಖ್ಯಾತವಾದ ಸೋಮನಾಥ ದೇವಾಲಯದ ಬಳಿ ಅರಬ್ಬೀ ಸಮುದ್ರವನ್ನು ಸೇರುತ್ತೆ.

ಈ ನದೀ ಯಾಕೆ ಹೀಗೆ ಅನೇಕ ಕಡೆ ಮಾಯವಾಗುತ್ತೆ ಎನ್ನುವುದಕ್ಕೆ ಪುರಾಣದಲ್ಲಿ ಬಹಳ ಸ್ವಾರಸ್ಯವಾದ ಕತೆ ಇದೆ."

"ಹೇಳು, ಹೇಳು ಮಾವ. ನನಗೆ ಕತೆ ಬಹಳ ಇಷ್ಟ."

"ಪುರಾಣದ ಕತೆ ಹೇಳುತ್ತ ಹೊರಟರೆ ದನದ ಕತೆ ಯಾವಾಗಲೋ ಹೇಳುವುದು. ಆದರೂ, ಈ ಬಗೆಯ ಕತೆಗಳನ್ನು ಹೇಳಬೇಕು, ಕೇಳಬೇಕು. ಕೇಳು. ದಧೀಚಿ ಎಂಬ ಮಹರ್ಷಿ ಇದ್ದ. ಇವನು ಭೃಗು ಮಹರ್ಷಿಯ ಮಗ; ಸರಸ್ವತೀ ನದೀ ತೀರದಲ್ಲಿ ತಪಸ್ಸು ಮಾಡುತ್ತಿದ್ದ. ಒಂದು ಸಲ ದೇವತೆಗಳಿಗೂ, ದೈತ್ಯರಿಗೂ ಮಹಾ ಯುದ್ಧವಾಯಿತು. ಈ ಯುದ್ಧಾದನಂತರ ದೇವತೆಗಳು ತಮ್ಮ ಅಸ್ತ್ರಗಳನ್ನು ಕಾಪಾಡಿಕೊಳ್ಳಲು ದೈತ್ಯರ ಕೈ ಸೇರದಿರಲು, ದದೀಚಿ ಬಳಿ ಬಂದು ಅವುಗಳನ್ನು ಅವನ ವಶಕ್ಕೆ ಒಪ್ಪಿಸಿದರು. ಎಷ್ಟು ವರ್ಷಗಳಾದರೂ ಇವನ್ನು ವಾಪಸ್ಸು ಪಡೆಯಲಿಲ್ಲ; ಅವು ತುಕ್ಕು ಹಿಡಿಯ ಹತ್ತಿದವು. ಅನ್ಯಾಯವಾಗಿ ಇಂತಹ ದಿವ್ಯಾಸ್ತ್ರಗಳು ಹಾಳಾಗುತ್ತಿವೆಯಲ್ಲ ಅಂತ ದಧೀಚಿ ಈ ಅಸ್ತ್ರಗಳನ್ನು ನೀರಿನಲ್ಲಿ ನೆನೆಸಿ, ಮಂತ್ರಿಸಿ, ಆ ನೀರನ್ನು ಕುಡಿದು ಬಿಟ್ಟ. ಈ ಅಸ್ತ್ರಗಳ ಶಕ್ತಿಯೆಲ್ಲಾ ಇವನ ಮೂಳೆಗಳಲ್ಲಿ ಸೇರಿಕೊಂಡವು. ಇದಾದ ಸ್ವಲ್ಪ ಕಾಲದಲ್ಲಿಯೇ ಮತ್ತೆ, ದೇವತೆಗಳಿಗೂ ದಾನವರಿಗೂ ಕಲಹ

ಪ್ರಾರಂಭವಾಯಿತು. ದೇವರಿಗೆ ಅಸ್ತ್ರಗಳು ಬೇಕಾದವು. ದಧೀಚಿ ಹತ್ತಿರ ಹೋಗಿ "ಅಸ್ತ್ರಗಳನ್ನು ವಾಪಸ್ಸು ಕೊಡಿ" ಎಂದರು. ಋಷಿ ನಡೆದ ಸಂಗತಿಯನ್ನು ತಿಳಿಸಿದ. "ನಿಮ್ಮ ಅಸ್ತ್ರಗಳನ್ನು ಪಡೆಯಲು ನನ್ನ ಮೂಳೆ ತೆಗೆದುಕೊಂಡು ಹೋಗಿ. ಅದರಲ್ಲಿರುವ ಶಕ್ತಿಯಿಂದ ಹೊಸ ಅಸ್ತ್ರಗಳನ್ನು ಮಾಡಿಸಿಕೊಳ್ಳಿ" ಅಂದ. ನಾಚಿಕೆ ಹೇಚಿಕೆಯಿಲ್ಲದೆ ದೇವರುಗಳು ಈ ಋಷಿಯ ಮೂಳೆಗಳನ್ನು ಕುಯ್ದು ತೆಗೆದುಕೊಂಡು ಒಳ್ಳೆ ಒಳ್ಳೆಯ ಆಯುಧಗಳನ್ನು ಮಾಡಿಸಿಕೊಂಡರು. ದಧೀಚಿಗೆ, ಅವನು ದೇಹ ತ್ಯಾಗ ಮಾಡಿದ ಕೆಲವು ದಿನಗಳ ಮೇಲೆ, ಒಬ್ಬ ಮಗ ಹುಟ್ಟಿದ. ಪಿಪ್ಪಲಾದ ಅಂತ ಅವನ ಹೆಸರು. ವಯಸ್ಸಿಗೆ ಬಂದ ಮೇಲೆ, ತಾಯಿಯಿಂದ, ದೇವರುಗಳಿಗೋಸ್ಕರ ತನ್ನ ತಂದೆ ಹೇಗೆ ದೇಹತ್ಯಾಗ ಮಾಡಬೇಕಾಯಿತು ಎಂಬುದನ್ನು ತಿಳಿದ. ಅವನಿಗೆ ಮಹಾಕೋಪ ಬಂತು. ಈ ದೇವತೆಗಳನ್ನೆಲ್ಲಾ ನಿರ್ಮೂಲ ಮಾಡಬೇಕೆಂದು ಪಣತೊಟ್ಟ; ಉಗ್ರ ತಪಸ್ಸು ಕೈಕೊಂಡ. ಇದರ ಫಲವಾಗಿ ಅವನ ತೊಡೆಯಿಂದ ವಡವಾನಲವೆಂಬ ಮಹಾಜ್ವಾಲೆ ಹೊರಬಂತು. ದಿನಕ್ಕೆ ಒಬ್ಬನಂತೆ ಈ ಬೆಂಕಿ ದೇವತೆಗಳನ್ನು ಸುಟ್ಟು ಹಾಕುತ್ತ ಬಂತು. ದೇವ ಕುಲವೇ ನಿರ್ನಾಮವಾಗುವ ಸ್ಥಿತಿ ಒದಗಿತು. ಅವರು ವಿಷ್ಣುವಿನಲ್ಲಿ ಮೊರೆಯಿಟ್ಟರು. ವಿಷ್ಣು, ಈ ಜ್ವಾಲೆಯನ್ನು ಪುಸಲಾಯಿಸಲು, ಅದು ಸಾಗರವನ್ನು ಸೇರಲು, ಆರಿಕೊಳ್ಳಲು, ಒಪ್ಪಿಕೊಂಡಿತು. ಆದರೆ ಈ ಜ್ವಾಲೆಯನ್ನು ಯಾರು ಸಾಗರಕ್ಕೆ ಹೊರಬಲ್ಲರು. ಹತ್ತಿರ ಹೋದರೆ ಭಸ್ಮ ಮಾಡುತ್ತಿತ್ತು, ಈ ಜ್ವಾಲೆ. ಆಗ ಬ್ರಹ್ಮ, ತನ್ನ ಹೆಂಡತಿ ಸರಸ್ವತಿಯನ್ನು "ಈ ಜ್ವಾಲೆಯನ್ನು ಹೊತ್ತು ಸಾಗರಕ್ಕೆ ಸೇರಿಸಿ ದೇವತೆಗಳನ್ನು ಕಾಪಾಡು" ಎಂದು ಕೇಳಿಕೊಂಡ. ಸರಸ್ವತಿ ಒಪ್ಪಿದಳು; ನದೀ ರೂಪ ತಾಳಿ ಈ ಜ್ವಾಲೆಯನ್ನು ಹೊತ್ತು ಸಾಗರದ ಎಡೆ ಹೊರಟಳು. ಆದರೆ ಮಧ್ಯೆ ಮಧ್ಯೆ ಪಾಪಿಗಳ, ಕೇಡಿಗಳ ಪ್ರದೇಶವಿತ್ತು. ಈ ಜ್ವಾಲೆ ಅವರ ಕೈ ಸೇರಿದರೆ ಲೋಕವೇ ಹಾಳಾಗುತ್ತೆ ಎಂದು ಹೆದರಿ, ಇವರಿರುವ ಕಡೆ ಅದೃಶ್ಯವಾಗಿ ಪುನಃ ಮೇಲೆದ್ದು, ತಂಗಿ, ಉಕ್ಕಿ, ಪ್ರಭಾಸದಲ್ಲಿ ಜ್ವಾಲೆಯನ್ನು ಸಾಗರಕ್ಕೆ ಸೇರಿಸಿದಳು. ಈ ಕಾರಣದಿಂದಲೇ ನದಿ ಬತ್ತಿ, ಉಕ್ಕಿ, ಹರಿಯುತ್ತಿರುವುದು ಅಂತ ಪುರಾಣದ ಕತೆ."

“ಚೆನ್ನಾಗಿದೆ, ಮಾವ, ಪ್ರತಿಯೊಂದಕ್ಕೂ ಒಂದು ಕಾರಣ, ಒಂದು ಕತೆ ಕಟ್ಟಿದ್ದಾರೆ.”

“ನಿಜ. ಪುರಾಣದ ಕತೆಗಳೇ ಹಾಗೆ. ಸರಸ್ವತಿ ನದಿ ಅಂದಾಗ ಜ್ಞಾಪಕಕ್ಕೆ ಬಂತು. ಕಾಂಕ್ರೇಜ್ ದನದ ತವರು ಇದರ ದಂಡೆ. ಈ ಪ್ರದೇಶವೂ ಸಿಂಧೂ ನದೀ ಮುಖದ ಹತ್ತಿರವೇ ಇದೆ. ಆದುದರಿಂದ ಈ ನದಿಯ ದಂಡೆಯಲ್ಲಿದ್ದ ಮೊಹೆಂಜದಾರೋ ದನದ ವಂಶವೇ ಈ ಕಾಂಕ್ರೇಜ್ ದನ. ಇನ್ನಾದರೂ, ಈ ದನದ ವಿಷಯ ಮುಂದುವರಿಸೋಣವೇ ಅಥವಾ ಪುರಾಣದ ಕತೆಗಳನ್ನೇ ಹೇಳುತ್ತ ಕಾಲ ಕಳೆಯೋಣವೇ.... ಈ ಸರಸ್ವತಿ ಕತೆ ಹೇಳುವುದಕ್ಕೆ ಮುಂಚೆ ಹೇಳುತ್ತಿದ್ದೆ, ಕಾಂಕ್ರೇಜ್ ದನದ ಹಾಲಿನ ಉತ್ಪತ್ತಿಯ ವಿಷಯ. ಈ ನಮ್ಮ ದನಗಳ ಹಾಲಿನ ಉತ್ಪತ್ತಿ ಸಾಮರ್ಥ್ಯದ ಬಗ್ಗೆ ಒಂದೆರಡು ಮಾತನ್ನ ಈಗಲೇ ಹೇಳಿಬಿಡುತ್ತೇನೆ. ನಮ್ಮ ದನ ಹಾಲು ಕೊಡುವುದು ಕಡಿಮೆ, ಪಾಶ್ಚಾತ್ಯ ದೇಶಗಳ ದನಗಳೊಂದಿಗೆ ಹೋಲಿಸಿದರೆ ಬಹಳ ಕಡಿಮೆ. ಬ್ರಿಟನ್ನ ನೋಡು. ಅಲ್ಲಿಯ ದನದ ಸಂಖ್ಯೆ ನಮ್ಮ ದನದ ಸಂಖ್ಯೆಯ 10ನೆಯ 1 ಭಾಗವೂ ಇಲ್ಲ. ಆದರೂ ಆ ಪುಟ್ಟ ದೇಶದಲ್ಲಿ, ಅಷ್ಟು ಕಮ್ಮಿ ದನಗಳಿಂದ, ನಮ್ಮ ದೇಶಕ್ಕಿಂತ ಹೆಚ್ಚು ಹಾಲು ಉತ್ಪತ್ತಿಯಾಗುತ್ತಿದೆ. ಡೆನ್ಮಾರ್ಕಿನಲ್ಲೂ ಹಾಗೆ. ಇಲ್ಲಿ 10 ದನಗಳು ಕರೆಯುವಷ್ಟು ಹಾಲು ಅಲ್ಲಿ, ಒಂದೇ ದನ ಕರೆಯುತ್ತೆ.”

“ಅದು ಯಾಕೆ ಹೀಗೆ ಮಾವ? ನಮ್ಮ ದೇಶ ಎಲ್ಲದರಲ್ಲೂ ಕೀಳು.

“ಇದಕ್ಕೆ ಹಲಾವಾರು ಕಾರಣ. ನಮ್ಮ ದೇಶದಲ್ಲಿ ಹಸು, ಎತ್ತಿನ ತಾಯಿ; ಹಾಲು ಕರೆಯುವ ಪ್ರಾಣಿಯಲ್ಲ; ಹಾಲಿಗಾಗಿ ಎಮ್ಮೆ; ಎತ್ತಿಗಾಗಿ ಹಸು. ಇದು ನಮ್ಮ ಸಂಪ್ರದಾಯ. ನಮ್ಮದು ವ್ಯವಸಾಯದ ದೇಶ. ಎತ್ತಿಲ್ಲದೆ ಬೇಸಾಯ ಅಸಾಧ್ಯ. ಆದುದರಿಂದ, ಬಹು ಪಾಲು ಬೇಸಾಯಗಾರರಿರುವ ನಮ್ಮ ದೇಶದವರಿಗೆ, ಹಾಲಿಗಿಂತ ಎತ್ತೇ ಮುಖ್ಯ. ನೇಗಿಲು ಮುಂತಾದ ಮುಟ್ಟುಗಳನ್ನು ನಿರಾಯಾಸವಾಗಿ ಎಳೆಯಬಲ್ಲ, ಹೆಚ್ಚು ಹೊರೆ ಹಾಕಿದ ಗಾಡಿಗಳನ್ನು ಕಚ್ಚಾ ರಸ್ತೆಗಳಲ್ಲಿ ವೇಗವಾಗಿ ಎಳೆದುಕೊಂಡು ಹೋಗಬಲ್ಲ ಎತ್ತಿಗೇ, ಎತ್ತಿನ ತಳಿಗಳಿಗೇ ಹೆಚ್ಚು ಪ್ರಾಶಸ್ತ್ಯ. ಈ ಬಗೆಯ ತಳಿಗಳನ್ನೇ ನಾವು ನೂರಾರು ವರ್ಷಗಳಿಂದ ರೂಪಿಸಿಕೊಂಡು ಸಾಕುತ್ತಿದ್ದೇವೆ.

ನಿನಗೆ ಜ್ಞಾಪಕವಿರಬಹುದು. ಮೊಹೆಂಜದಾರೋ ಮುದ್ರೆಯಲ್ಲಿ ಕೆತ್ತಿರುವುದು ಗೂಳಿಯೇ ಹೊರತು ಹಸುವಲ್ಲ. ಆಗಿನಿಂದಲೂ ಎತ್ತಿಗೇ ಪ್ರಶಸ್ತಿ. ನಮ್ಮ ದೇವರಿಗೂ ಗೂಳಿಯೇ ವಾಹನ; ಶಿವ ನಂದೀಶ್ವರ, ಪಶುಪತಿ, ಬಸವೇಶ್ವರ. ಹೀಗಾಗಿ ನಾವು ಹಸುಗಳನ್ನು ಸಾಕುತ್ತಿರುವುದು ಅದರ ಹಾಲಿಗಲ್ಲ, ಆದರ ಹೋರಿಕರಕ್ಕಾಗಿ. ಹಾಲಿನ ಉಪಯೋಗ, ಗುಣ ನಮಗೆ ಗೊತ್ತಿಲ್ಲದೆ ಇಲ್ಲ. ಆದರೆ, ಹಾಲನ್ನು ಹಸುವಿನಿಂದ ಪಡೆಯುವುದರ ಬದಲು, ಎಮ್ಮೆಯಿಂದ ಪಡೆಯುತ್ತಿದ್ದೇವೆ."

"ಅಂದರೆ ಎರಡು ಪ್ರಾಣಿಗಳನ್ನು ಸಾಕಬೇಕಾಗುತ್ತೆ. ಖರ್ಚು ಹೆಚ್ಚಾಗುತ್ತಲ್ಲವೆ, ಮಾವ."

"ಆಗುತ್ತೆ. ಪಾಶ್ಚಾತ್ಯ ದೇಶಗಳಲ್ಲೂ ಬೇಸಾಯದ ಕೆಲಸಕ್ಕಾಗಿ ಕುದುರೆಗಳನ್ನೂ ಹಾಲಿಗಾಗಿ ಹಸುವನ್ನೂ ಸಾಕುತ್ತಿದ್ದರು. ಈಗ ಕುದುರೆ ಬದಲಾಗಿ ಯಂತ್ರಗಳನ್ನು ಬಳಸುತ್ತಾರೆ. ಆದರೂ, ಮಾಂಸಕ್ಕಾಗಿಯೇ ಕೆಲವು ತಳಿಗಳನ್ನೂ, ಹಾಲಿಗಾಗಿಯೇ ಬೇರೆ ತಳಿ ದನಗಳನ್ನು ಸಾಕಬೇಕಾಗಿದೆ. ಈ ಸಮಸ್ಯೆಯನ್ನು ಅವರೂ ಬಗೆ ಹರಿಸಿಲ್ಲ. ನಮ್ಮ ದೇಶದಲ್ಲಿ ಇದು ಹರಿದಿಲ್ಲ. ಆದರೆ, ನಮ್ಮಲ್ಲಿ ಕೆಲವು ತಳಿಗಳಿವೆ. ಸುಮಾರು ಒಳ್ಳೆಯ ಎತ್ತುಗಳನ್ನೂ, ಸುಮಾರು ಹಾಲನ್ನೂ ಕೊಡುವ ತಳಿಗಳಿವೆ. ಅವುಗಳ ಪ್ರಸ್ತಾಪ ಆ ಮೇಲೆ.

ನಮ್ಮ ಹಸುಗಳ ಹಾಲಿನ ಉತ್ಪತ್ತಿ ಕಡಿಮೆಯಾಗಿರುವುದಕ್ಕೆ ಇನ್ನೂ ಕೆಲವು ಕಾರಣಗಳಿವೆ. ನಮ್ಮ ದನಗಳು ಪಾಶ್ಚಾತ್ಯ ದನಗಳಂತೆ ಬೇಗ ಬೇಗ ಕರುಗಳನ್ನು ಹಾಕುವುದಿಲ್ಲ. ಅಲ್ಲಿ 12–15 ತಿಂಗಳಿಗೆ ಒಂದೊಂದು ಕರು ಬರುತ್ತೆ. ಇದರ ಅನುಕೂಲ ಹೀಗೆ. ಹಸು, ಕರು ಹಾಕಿದ ಮೇಲೆ ತಾನೆ ಹಾಲನ್ನು ಕೊಡಲು ಪ್ರಾರಂಭಿಸುವುದು. ಕೆಲವು ತಿಂಗಳು ಹಾಲುಕೊಟ್ಟು ಹಾಲನ್ನು ಕ್ರಮೇಣ ಕಡಿಮೆಯಾಗಿ ಕೊಡುತ್ತ ನಿಲ್ಲಿಸುತ್ತದೆ. ಪಾಶ್ಚತ್ಯ ದನಗಳು ಹಾಲು ನಿಂತ 2–3 ತಿಂಗಳಲ್ಲೇ ಮತ್ತೊಂದು ಕರುವನ್ನು ಹಾಕಿ, ಮತ್ತೆ ಹಾಲನ್ನು ಕೊಡಲು ಶುರು ಮಾಡುತ್ತೆ. ನಮ್ಮ ದನಗಳು ಹಾಗಲ್ಲ. 8–10 ತಿಂಗಳು ಹಾಲು ಕೊಟ್ಟು ನಿಲ್ಲಿಸಿ ಬಿಡುತ್ತವೆ. ಪುನಃ ಹಾಲನ್ನು ಕೊಡುವುದು ಬಹಳ ತಿಂಗಳ ನಂತರ.

ಅಂದರೆ ಪಾಶ್ಚಾತ್ಯ ದನಗಳು, ತಮ್ಮ ಜೀವಾವಧಿಯಲ್ಲಿ ಬಹಳ ಕಾಲ ಹಾಲು ಕೊಡುತ್ತಿರುತ್ತವೆ ಅಂದ ಹಾಗಾಯ್ತು. ಇನ್ನೊಂದು ವ್ಯತ್ಯಾಸ ನಮ್ಮ ದನಗಳು ಮೊದಲನೆಯ ಕರು ಹಾಕಲು ಬಹಳ ನಿಧಾನ. ಕೆಲವು ಹಸುಗಳು 4–4½ ವರ್ಷಗಳಾದರೂ ಮೊದಲಿನ ಕರು ಹಾಕದಿರುವುದುಂಟು. ಪಾಶ್ಚಾತ್ಯ ದನಗಳು 2–3 ವರ್ಷಗಳಲ್ಲೇ ಕರು ಹಾಕುತ್ತೆ. ಅಂದರೆ ಹಸು ವಿನ ಕರಾವಿನ ಕಾಲ ದೀರ್ಘವಾಯಿತು. ಈ ಕಾರಣಗಳಿಂದ ನಮ್ಮ ದನಗಳ ಹಾಲಿನ ಉತ್ಪತ್ತಿ ಕಡಿಮೆ. ಸರಿಯಾಗಿ ಮೇವು ಹಾಕಿ, ಪುಷ್ಟಿಕರವಾದ ತೀನಿ ತಿನಿಸಿ ಸರಿಯಾಗಿ ಸಾಕಿದರೆ, ಮೊದಲು ಕರು ಹಾಕುವ ಕಾಲವನ್ನೂ, ಎರಡು ಕರುಗಳ ಮಧ್ಯದ ಅಂತರವನ್ನೂ, ಪ್ರತಿದಿನ ದಿನದ ಹಾಲಿನ ಉತ್ಪತ್ತಿ ಯನ್ನೂ, ಹೆಚ್ಚಿಸಿಕೊಳ್ಳಲು ಸಾಧ್ಯ. ಹೆಚ್ಚಿಸಿಕೊಂಡಿದ್ದಾರೆ. ಹಳ್ಳಿಯ ದನಕ್ಕಿಂತ ಹೆಚ್ಚಾಗಿ ವ್ಯವಸಾಯದ ಫಾರಂಗಳ ದನಗಳು ಹೆಚ್ಚು ಹಾಲು ಉತ್ಪತ್ತಿ ಮಾಡುವುದು ಈ ಸಾಕಣೆ ಕ್ರಮದ ವ್ಯತ್ಯಾಸಗಳಿಂದಲೇ. ಇದಕ್ಕೆ ಒಂದು ಉದಾಹರಣೆ ಕೊಡಬಹುದು. ಸಾಹಿವಾಲ್ ಎಂಬುದು ನಮ್ಮ ಹಾಲು ತಳಿಗಳಲ್ಲಿ ಬಹಳ ಉತ್ತಮವಾದದ್ದು. ಅದರ ಹಿಂಡೊಂದನ್ನು ಒಂದು ಫಾರಂನಲ್ಲಿ ಸಾಕಿದರು: ಸುಮಾರು 40 ವರ್ಷಗಳ ಹಿಂದೆ ಪ್ರಥಮದಲ್ಲಿ. ಈ ಹಿಂಡಿನ ದನಗಳ ದಿನಂ ಪ್ರತಿ ಹಾಲಿನ ಉತ್ಪತ್ತಿ $2^1/_4$ ಲೀ. ಮಾತ್ರ– ಒಂದು ದನದಿಂದ. ಈ ಹಿಂಡನ್ನು ಸುಧಾರಿಸಿದ ರೀತಿಯಲ್ಲಿ ಬೆಳೆಸಿದರು. 25 ವರ್ಷದಲ್ಲಿ, ಹಿಂಡಿನ ಪ್ರತಿ ದನದ ಸರಾಸರಿ ಉತ್ಪತ್ತಿ, ನಾಲ್ಕು ಪಟ್ಟು ಹೆಚ್ಚಾಯಿತು. ಕಾಂಕ್ರೇಜ್ ದನಗಳಲ್ಲೂ ಈ ವ್ಯತ್ಯಾಸ ಕಾಣಬಹುದು. ಹಳ್ಳಿಗಳಲ್ಲಿ, ಕಾಂಕ್ರೇಜ್ ಹಸುಗಳಿಂದ ಪ್ರತಿ ದನದ ಉತ್ಪತ್ತಿ $1^3/_4$ ಲೀ. ಮಾತ್ರ. ಅದೇ ಸೂಕ್ತವಾದ ಸಾಕಣೆ ಕ್ರಮಗಳನ್ನು ಅನುಸರಿಸುವ ಸರ್ಕಾರಿ ದನದ ಫಾರಂಗಳಲ್ಲಿ ಇದು 4½ ಲೀ. ಹೆಚ್ಚಿತು. ಚೆನ್ನಾಗಿ ಸಾಕಿದ್ದ ರಿಂದ ಹಾಲಿನ ಉತ್ಪತ್ತಿ 2½ ಪಟ್ಟು ಹೆಚ್ಚಿತು. ಆದುದರಿಂದ ನಮ್ಮ ದನಗಳಲ್ಲಿ ಸಾಕಷ್ಟು ಹಾಲನ್ನು ಕೊಡುವ ಸಾಮರ್ಥ್ಯವಿಲ್ಲ ಅನ್ನ ಕೂಡದು. ಈ ಸಾಮರ್ಥ್ಯ, ಸರಿಯಾಗಿ ಸಾಕದೆ, ಕುಗ್ಗಿದೆ; ಮುಸುಕಿದೆ ಅಷ್ಟೆ.

ಕಾಂಕ್ರೇಜ್ ತಳಿ ಒಳ್ಳೆಯ ಎತ್ತುಗಳನ್ನು ಕೊಟ್ಟರೂ, ಇದರ ಹಾಲಿನ ಉತ್ಪತ್ತಿ ಸಾಮರ್ಥ್ಯ ಚೆನ್ನಾಗಿದ್ದರೂ ಇದರಲ್ಲಿ ಕೆಲವು ಅವಗುಣಗಳೂ ಇವೆ.

ಕರು ಹಾಕುವುದು ನಿಧಾನ. 4 ವರ್ಷ ವಯಸ್ಸಾದನಂತರ. ಎರಡು ಕರುಗಳ ಅಂತರ–3 ವರ್ಷ. ಕರು ಹಾಕಿದ ಮೇಲೆ ಸುಮಾರು 10–12 ತಿಂಗಳು ಹಾಲು ಕೊಡುತ್ತೆ. ಈ ಹಾಲನ್ನು ಕರಾವಿನ ಕಾಲ Lactation– ಅಂತಾರೆ. ನಮ್ಮ ದನಗಳ ಕರಾವು ಕಾಲ ಕಡಿಮೆ ಅಂತ ಹಿಂದೆಯೇ ಹೇಳಿದ್ದೇನೆ. ಹಾಲು ಬತ್ತಿದ 5–7 ತಿಂಗಳು ಕಾಲವಾದ ಮೇಲೆ ಗರ್ಭವಾಗುತ್ತೆ.

ಈ ಅವಗುಣಗಳನ್ನು ಸರ್ಕಾರಿ ಕ್ಷೇತ್ರಗಳಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದಾರೆ–ಸರಿಯಾದ ಸಾಕಣೆ ಕ್ರಮಗಳಿಂದ. ಕರಾವಿನ ಅವಧಿಯನ್ನು 300 ದಿನಗಳಿಂದ 370 ದಿನಗಳಿಗೆ ಏರಿಸಿ, ಹಾಲಿಲ್ಲದ ಒಣಕಾಲವನ್ನು 200 ರಿಂದ 150 ದಿನಸಗಳಿಗೆ ಇಳಿಸಿದ್ದಾರೆ.

ಇನ್ನು ಕಾಂಕ್ರೇಜ್ ಎತ್ತುಗಳ ವಿಷಯ. ಇವು ಗಾಡಿಗೆ ಕಟ್ಟುವುದಕ್ಕೆ ಬಹಳ ಯೋಗ್ಯ. ಅವುಗಳ ಗಂಭಿರ ನಡಗೆ, ಸಿಂಹದ ನಿಲುವು ನೋಡುವುದಕ್ಕೆ ಆನಂದ. ಮೈಸೂರಿನಲ್ಲಿ, ದಸರಾ ಮೆರವಣಿಗೆಯಲ್ಲಿ ಈ ದನಗಳನ್ನು ನೋಡಬೇಕು. ಮೆರವಣಿಗೆಗೆ ತಕ್ಕ ದನ. ಇವು ಸುಮಾರು ಮುಕ್ಕಾಲು ಟನ್ನು ಹೊರೆ ಎಳೆಯ ಬಲ್ಲವು. ಸಾಮಾನ್ಯವಾಗಿ ನಮ್ಮ ಗಾಡಿಗಳಲ್ಲಿ ಅರ್ಧ ಟನ್ನು ಹೊರೆ ಹಾಕುತ್ತಾರೆ. ಮೇಲಿನವರಿವಿಗೂ ತುಂಬಿದರೆ ಮುಕ್ಕಾಲು ಟನ್ನು ಆಗುತ್ತೆ. ರಬ್ಬರ್ ಟೈರ್ ಹಾಕಿರುವ ಗಾಡಿಯಾದರೆ ಈ ಎತ್ತುಗಳು ಎರಡು ಟನ್ನು ಹೊರೆಯನ್ನೂ ಎಳೆಯುತ್ತವೆ. ಇದರ ವೇಗ ಗಂಟೆಗೆ ಸುಮಾರು 4–4$^{3}/_{4}$ ಕಿ.ಮಿ. ಮಾತ್ರ. ನಮ್ಮ ಅಮೃತಮಹಲ್‌.ದನಗಳಷ್ಟು ಚುರುಕಾಗಿ ನಡೆಯಲಾರವು. ಪಾಪ, ಭಾರಿ ಮೈ ಹೊತ್ತು ಚುರುಕಾಗಿ ನಡೆಯುವುದು ಕಷ್ಟ ಅಲ್ಲವೇ. ಕತ್ರೆ, ನೀನು ಯಾಕೆ ನಗುತ್ತಿದ್ದಿಯಾ ಗೊತ್ತು. ನನ್ನಸೈಜು ನೋಡಿ ನಾನೂ ಕಾಂಕ್ರೇಜಿನಂತೇ ಅಂತ ಮಾಡಿದ್ದೀಯಾ. ನನ್ನ ಜತೆಯಲ್ಲಿ ಓಡುತ್ತಿಯಾ, ನೋಡೋಣ! ಆಮೇಲೆ, ಇದು ಪುರಾತನ ಕಾಲದಿಂದ, ಸುಮಾರು 3–4 ಸಾವಿರ ವರ್ಷಗಳಿಂದ ಸಾಕುತ್ತಿರುವ ತಳಿಯಾದರೂ, ಈಗಲೂ ಕೂಲ, ಕೆಲವು ವೇಳೆ ಕಾಡು ದನದಂತೆ ವರ್ತಿಸುತ್ತದೆ. ಹೊಸಬರು ಬಂದರೆ ಹಿಂದಿನ ದನಗಳು, ಕರುಗಳನ್ನು ಸುತ್ತುಗಟ್ಟಿ, ತಲೆ ಏರಿಸಿ, ಕಿವಿ ನಿಗರಿಸಿ, ಬಂದವರ ಕಡೆ ಕಣ್ಣು ನೆಡುತ್ತವೆ-ಕರುಗಳನ್ನು, ಅವರಿಂದ ಕಾಪಾಡಲು.

ಇದಕ್ಕೆ ಕಾರಣ ಈಗಲೂ ಕೂಡ, ಇದನ್ನು ಹೆಚ್ಚಾಗಿ ಸಾಕುವ ರಬಾರಿ ಕೋಮಿನ ಗೊಲ್ಲರು ಇವಕ್ಕೆ ಮೂಗುದಾರ ಹಾಕದೆ, ಕಟ್ಟದೆ ಕಾಡು ಮೇಡುಗಳಲ್ಲಿ ಮೇಯಿಸಿ ಬೆಳೆಯಿಸುತ್ತಿರುವುದರಿಂದ–ಕಾಡಿನ ಸಂಪರ್ಕ ಇನ್ನೂ ಇರುವುದರಿಂದ.

ಈ ತಳಿ ಗುಜರಾತಿನ ರೈತರಿಗೆ ಅಚ್ಚು ಮೆಚ್ಚಾದ ತಳಿ. ಅಲ್ಲಿ 100 ದನಗಳಲ್ಲಿ ಸುಮಾರು 40, ಕಾಂಕ್ರೇಜ್ ದನಗಳೇ.

ಈ ತಳಿಯ ದನಗಳನ್ನು ಅಮೆರಿಕದ ರೈತರೂ ಮೆಚ್ಚಿಕೊಂಡಿದ್ದಾರೆ, ನಿನಗೆ ಆಗಲೇ ಹೇಳಿದನಲ್ಲ, ಅಮೆರಿಕ ಅಧ್ಯಕ್ಷ ಲಿಂಡನ್ ಜಾನ್ಸನ್ ಅವರ ಬಳಿ ಸಂಟಾ ಜರ್‌ಟ್ರೂಡಿಸ್ ಎಂಬ ಉತ್ಕೃಷ್ಟವಾದ ತಳಿಯ ಮಂದೆ ಇದೆ, ಅಂತ. ಈ ತಳಿಯಲ್ಲಿ ಕಾಂಕ್ರೇಜ್ ದನದ ರಕ್ತ ಹರಿಯುತ್ತಿದೆ ಎಂಬುದು ನಮಗೆ ಹೆಮ್ಮೆಯ ವಿಷಯ.

ಇಲ್ಲಿಗೆ, ಕಾಂಕ್ರೇಜ್ ದನಗಳ ವಿಷಯ ಮುಗಿಯಿತು. ಇತರ ಕತೆ ಎಷ್ಟು ದಿವಸ ಬೆಳೆದುಹೋಯಿತು. ಈ ಕತೆ ಹೇಳಲು ಹೊರಟು ಸ್ವಲ್ಪ ಚರಿತ್ರೆ, ಭೂಗೋಳ, ಪ್ರಾಣಿಶಾಸ್ತ್ರ, ಪುರಾಣ ಎಲ್ಲಾ ಹೇಳಬೇಕಾಯ್ತು. ಹೀಗೆ ಕತೆಯನ್ನು ಬೆಳೆಸಿದ್ದಕ್ಕೆ ಕಾರಣವೂ ಇದೆ. ಈ ಕಾಂಕ್ರೇಜ್ ತಳಿ, ಭಾರತದಲ್ಲಿ ಬಹಳ ಹಿಂದಿನ ಕಾಲದಿಂದಲೂ ಸಾಕುತ್ತಿರುವ ತಳಿ; 4–5 ಸಾವಿರ ವರ್ಷಗಳಿಂದ. ಇಷ್ಟು ಪುರಾತನ ತಳಿ, ನಮ್ಮ ದೇಶ ಬಿಟ್ಟರೆ, ಬೇರೆ ಎಲ್ಲೂ ಇರಲಾರದು. ಅದಕ್ಕೋಸ್ಕರವೇ, ನಮ್ಮ ದನದ ಕತೆಯನ್ನು ಈ ತಳಿಯಿಂದ, ಈ ತಳಿಯನ್ನೇ ಸಬೂಬಾಗಿಟ್ಟುಕೊಂಡು ದನಗಳಿಗೆ ಸಂಬಂಧ ಪಟ್ಟ ಎಲ್ಲಾ ವಿಷಯಗಳನ್ನೂ ಪ್ರಸ್ತಾಪ ಮಾಡಿದೆ. ಬೇಜಾರಾಗಲಿಲ್ಲ ತಾನೆ ?"

"ಬೇಜಾರು ಯಾಕೆ, ಮಾವ ? ಎಷ್ಟು ವಿಷಯ ತಿಳಿಯಿತು ದನಗಳ ಅಂಗರಚನೆ, ಅವು ಹುಟ್ಟಿದ ರೀತಿ, ಅವನ್ನು ಸಾಕಿ ಪಳಗಿಸಿದ್ದು, ಅವುಗಳ ನಂಟರು, ನಮ್ಮ ದೇಶದಲ್ಲಿ ದನವನ್ನು ಯಾರು ಮೊದಲು ಸಾಕಿದರು, ಯಾವ ದನ ಇತ್ತು, ನಮ್ಮ ದನಕ್ಕೂ ಯೂರೋಪ್ ದನಕ್ಕೂ ಏನು ವ್ಯತ್ಯಾಸ, ಪುರಾಣದ ಕತೆ, ಬೇಕಾದಷ್ಟು ವಿಷಯ ತಿಳಿಯಿತು."

" ನಿಜ. ಕಾಂಕ್ರೇಜ್ ದನದ ಕತೆಯನ್ನು ಹತ್ತು ನಿಮಿಷಗಳಲ್ಲಿ ಮುಗಿಸಬಹುದಿತ್ತು. ಆದರೆ, ಇತರ ವಿಷಯಗಳನ್ನು ಹೇಳುವುದಕ್ಕೆ ಆಗುತ್ತಿರಲಿಲ್ಲ. ಇಷ್ಟು ವಿಷಯ ತಿಳಿದುಕೊಂಡ ಮೇಲೆ ಇತರ ದನಗಳ ವಿಚಾರವನ್ನು ಬೇಗ ಬೇಗ ಹೇಳಿಕೊಂಡು ಹೋಗಬಹುದು. ಇನ್ನು, ಕಾಂಕ್ರೇಜ್ ದನವಾದ ಮೇಲೆ ಮಾಲ್ವಿ ತಳಿಯ ವಿಷಯ. ಎಲ್ಲಿ. ಆ ಪುಸ್ತಕ– 'ಭಾರತದ ಪಶು ತಾರೆಗಳು'–ಅದನ್ನು ಕೊಡು............ಈ ಪೇಜಿನಲ್ಲಿದೆ ಅದರ ಚಿತ್ರ (ಫೋಟೊ 2). ಈ ದನವನ್ನು ಸರಿಯಾಗಿ ನೋಡು."

" ಇದೂ ಕಾಂಕ್ರೇಜ್ ದನದ ಹಾಗೆ ಇದೆಯಲ್ಲ ಮಾವ "

" ಈಗ ನಿನ್ನ ಕಣ್ಣಿಗೆ ಎಲ್ಲವೂ ಕಾಂಕ್ರೇಜ್ ದನದ ಹಾಗೆ ಕಾಣ ಬಹುದು. ಹಾಗೇ ಇಲ್ಲ. ಆದರೆ, ಕೆಲವು ಹೋಲಿಕೆ ಇವೆ. ಹೋಲಿಕೆ ಜತೆಗೆ ವ್ಯತ್ಯಾಸಗಳೂ ಇವೆ. ಇದರ ಕೋಡು ನೋಡು." " ಕಾಂಕ್ರೇಜಿನ ದಪ್ಪ ಭಾರಿ ಅಲ್ಲ. ಅಷ್ಟು ದುಂಡಾಗಿ ಬಾಗಿಲ್ಲ. ಸ್ವಲ್ಪ ಮುಂದಕ್ಕಿದೆ."

"ಸರಿ. ತುದಿ ಚೂಪಾಗಿದೆ. ಬಣ್ಣ ನೋಡು. ಹೆಚ್ಚು ಬಿಳುಪು. ಕಿವಿ ? ಜೋತಿಲ್ಲ ; ಪಟಂನೆ ನಿಂತಿದೆ. ಅಷ್ಟು ದೊಡ್ಡದೂ ಅಲ್ಲ. ಮೊನೂಚಾಗಿದೆ. ಕಾಂಕ್ರೇಜಿನ ಕಿವಿ ಸುಮಾರು 30 ಸೆ.ಮೀ. ಇದರದ್ದು 15 ಸೆ.ಮೀ. ಡುಬ್ಬ ಕೂಡ ಅದರಷ್ಟು ದೊಡ್ಡದಲ್ಲ. ಇದರ ದೇಹವೇನೋ ಉದ್ದ. ಆದರೆ, ಅದಕ್ಕಿಂತ ಇದು ಸ್ವಲ್ಪ ಗಿಡ್ಡ. ಆದುದರಿಂದ, ಅದರಂತೆ ಇದು ಭಾರಿ ದನವಲ್ಲ ; ತೂಂ ಕಡಿಮೆ. ಇದರ ತಲೆ ಮೋಟು, ಕಿರಿದು. ಆದರೆ, ಹಣೆ ಕಾಂಕ್ರೇಜಿನಂತೇ ಹಳ್ಳ ಬಿದ್ದಿದೆ. ಇದರ ಮುಸುಡಿಯೂ ಸ್ವಲ್ಪ ಮೇಲಕ್ಕಿದೆ ; ಕಪ್ಪು. ಕಣ್ಣಿನ ಸುತ್ತಲೂ ಕಪ್ಪು ಛಾಯೆ ಇದೆ. ಅಲ್ಲದೆ ಕಣ್ಣುಗಳು ಸ್ವಲ್ಪ ದೂರಕ್ಕೆ ಇವೆ. ಕತ್ತು ಮೋಟು. ದಪ್ಪ. ಕತ್ತು ಎತ್ತಿ ನಿಲ್ಲುತ್ತೆ. ಗಂಗೊದಲು ಕಾಂಕ್ರೇಜಿನಂತೆ ಜೋತಿರುವುದಿಲ್ಲ. ಕಾಲು ಮೋಟು. ಗೊರಸು ಕಪ್ಪು ; ಬಾಲವೂ ಅಷ್ಟು ಉದ್ದ ಇಲ್ಲ. ಚರ್ಮ ಸ್ವಲ್ಪ ದಪ್ಪವೇ.

ಈ ವ್ಯತ್ಯಾಸಗಳಿದ್ದರೂ, ಮಾಲ್ವಿ ದನ ಕಾಂಕ್ರೇಜ್ ದನದ ಗುಂಪಿಗೇ ಸೇರಿದ್ದು. ಇದರ ಕೋಡೂ ಕೂಡ ಲೈರಿನಂತೆ ಇದೆ. ಇದೂ ಕೂಡ ಮೊಹೆಂಜದಾರೋ ಮುದ್ರೆಯ ಗೂಳಿಯನ್ನು ಹೋಲುತ್ತೆ."

" ಹಾಗಾದರೆ, ಇದೂ ಕೂಡ ಬಹಳ ಹಿಂದಿನ ಕಾಲದ ದನವೇ, ಮಾವ."

" ಹೌದು. ಈ ದನದ ತವರೂ, ಕಾಂಕ್ರೇಜ್ ದನದ ತವರೂ ಹತ್ತಿರ ಹತ್ತಿರ. ಮಾಲ್ವಾ, ಮಾಲ್ವಿ ಪ್ರದೇಶದ್ದು. ಮಾಲ್ವಾ, ರಾಜಾಸ್ಥಾನ ಮತ್ತು ಮಧ್ಯ ಪ್ರದೇಶದಲ್ಲಿದೆ. ಇಂದೂರು, ಉಜ್ಜಯಿನಿ, ವಿದಿಷ, ಭೂಪಾಲ್, ರಾಜಾಸ್ಥಾನದ ಜಲಾವರ್ (ಸತುವಿನ ಗಣಿ ಇರುವ ಸ್ಥಳ), ಕೋಟಾ ಇವು ಇರುವ ಪ್ರದೇಶ ಮಾಲ್ವಾ-ಹಿಂದಿನಿಂದಲೂ ಪ್ರಸಿದ್ಧವಾದದ್ದು. ಉಜ್ಜಯಿನಿ ವಿಕ್ರಮಾದಿತ್ಯನ ರಾಜಧಾನಿ. ಅವನ ಆಸ್ಥಾನದ ನವರತ್ನಗಳು ಇದ್ದು, ಬಾಳಿ, ಇಡೀ ಭಾರತಕ್ಕೇ ಹೆಮ್ಮೆ ತಂದ ಸ್ಥಳ ಉಜ್ಜಯಿನಿ. ವಿದಿಷ, ಸಾಂಚೀಸ್ತೂಪದ ಹತ್ತಿರ ಇದೆ. ಭೌದ್ಧರ ಕಾಲದಲ್ಲಿ ಬಹಳ ಹೆಸರೆತ್ತಿತ್ತು. ಇದನ್ನು ಹಿಂದೆ ಬಿಲ್ಸ ಅಂತ ತಪ್ಪಾಗಿ ಕರೆಯುತ್ತಿದ್ದರು. ಕಾಳಿದಾಸನ ಮೇಘ ದೂತದಲ್ಲಿ ಈ ಸ್ಥಳಗಳ ವರ್ಣನೆಯಿದೆ. ವಿಶ್ವಪ್ರಸಿದ್ಧ ಸಾಂಚೀ ಸ್ತೂಪವಿರುವುದೂ ಈ ಮಾಲ್ವಾದಲ್ಲಿ. ಮದನ ಮೋಹನ ಮಾಲವಿಯ ಎಂಬ ದೇಶಭಕ್ತರ ಹೆಸರು ಬಂದಿರುವುದು ಇದರಿಂದ. ಮಾಲವದ ಜನ ಮಾಳವೀಯರು. ಒಂದು ಕಾಲದಲ್ಲಿ ಈ ಮಾಲವ ಕೂಡ, ಕರ್ಣಾಟಕ ರಾಜರ ಅಧೀನದಲ್ಲಿತ್ತು. ನಮ್ಮ ಕರ್ನಾಟಕ ಸಂಗೀತದ ಕೆಲವು ರಾಗಗಳು ಈ ಪ್ರದೇಶದಿಂದ ಬಂದವಂತೆ— ಮಾಯಾಮಾಳವ ಗೌಳ, ಮಾಲವಿ, ಮಾಲವಶ್ರೀ ಮುಂತಾದವು. ಈ ಮಾಲವಕ್ಕೂ ಕಾಂಕ್ರೇಜ್ ಪ್ರದೇಶಕ್ಕೂ ದೂರ ಹೆಚ್ಚಾಗಿಲ್ಲ. ಕೆಲವು ತಜ್ಞರ ಪ್ರಕಾರ, ಮಾಲ್ವಿ ದನಗಳು ಕಾಂಕ್ರೇಜ್ ದನಗಳ ಮಿಶ್ರದಿಂದ, ಬೆರಕೆಯಿಂದ ರೂಪಗೊಂಡುವಂತೆ. ಈ ತಳಿಯ ಅಭಿವೃದ್ಧಿಯಲ್ಲಿ ಬಂಜಾರರ ಕೈವಾಡ ಹೆಚ್ಚು. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೂ ಈ ಜನ ಇದ್ದಾರೆ. ಇವರು ನಿಂತು ನೆಲಸುವ ಜನರಲ್ಲ. ಊರೂರು ಸುತ್ತುತ್ತ ಇರುವವರು. ಹೋದ ಕಡೆ ಜೋಪಡಿ ಹಾಕಿಕೊಂಡು, ಸ್ವಲ್ಪ ಕಾಲ ತಂಗಿ, ಮುಂದೆ ಸಾಗುವ ಜನ. ಇವರೊಂದಿಗೆ ಇವರ ದನಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತಲೇ ಇರುತ್ತವೆ. ಹೀಗಾಗಿ ಈ ಮಾಲ್ವಿ ತಳಿ ದನಗಳು ಮಧ್ಯ ಪ್ರದೇಶ, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ರಾಜಾಸ್ಥಾನದ ಕೆಲವು ಭಾಗಗಳಿಗೂ ಹರಡಿವೆ. ಜತೆಗೆ ತಳಿಗಳೂ ಬೆರಕೆಯಾಗಿವೆ. ಒಂದು ಉಪ ತಳಿ ದೊಡ್ಡದು. ಇನ್ನೊಂದು ಅಷ್ಟು ಧಡೂತಿಯಾಗಿಲ್ಲ.

ಈ ತಳಿಯೂ ಕೂಡ ಎತ್ತಿನ ತಳಿ. ಇದರ ಎತ್ತುಗಳು ಬಲಿಷ್ಟ–ಆದರೆ ನಡೆಗೆ ನಿಧಾನ. ಉಳುಮೆಗೆ–ಅದರಲ್ಲೂ ಮಾಲವ ಪ್ರದೇಶದ ಕರಿ ಎರೆಮಣ್ಣೆ (ಮಾಳವ ಹತ್ತಿ ಬೆಳೆಯುವುದಕ್ಕೆ ಹೆಸರೆತ್ತಿದೆ. ಅಲ್ಲಿಯ ಮಣ್ಣು ಕಪ್ಪು, ಜಿಗಟು. ಈ ಮಣ್ಣಿಗೆ ಅನುಕೂಲ) ಭಾರಿ ಹೊರೆಗಳನ್ನು ಎಳೆಯುತ್ತೆ ಕಪಿಲೆಗಳಿಗೆ ಕಟ್ಟಿ ನೀರೆತ್ತುವುದಕ್ಕೆ ಅನುಕೂಲ. ಅಲ್ಲದೆ ಸಾಧು ದನ. ಹೇಳಿದ ಹಾಗೆ ಕೇಳುತ್ತೆ.

ಈ ತಳಿ ದನಗಳಿಗೆ ಹೆಚ್ಚು ಮೇವು ಬೇಕಿಲ್ಲ. ಒಂದು ಕಾರಣ ಅದರ ತೂಕ ಕಡಿಮೆಯಾಗಿರುವುದರಿಂದ 280–420 ಕಿಲೊ ಅಷ್ಟೆ. ಅಲ್ಲದ ಬಂಜಾರರು ಬೆಳೆಸಿದ ದನ. ಅವರು ಬಡವರು. ಮೇವೆಲ್ಲಿಂದ ತಂದಾರು? ಮೇವೆಲ್ಲಿ ಬೆಳೆಸಿಯಾರು? ಒಂದು ಕಡೆ ನಿಂತರಲ್ಲವೆ ಬೆಳೆಸುವುದು; ಬೇಸಾಯ ಮಾಡುವುದು. ಹೀಗೆ, ಈ ದನ ಹಿಂದಿನ ಕಾಲದಿಂದಲೂ ದೊರೆತ ಅಲ್ಪ ಸ್ವಲ್ಪ ಮೇವಿನಿಂದಲೇ ತೃಪ್ತಿಯಾಗಿ ವಿಕಾಸವಾದ ದನವಾದುದ ರಿಂದ ಹೆಚ್ಚು ಮೇವನ್ನು ಕೇಳುವುದಿಲ್ಲ."

"ಈ ತಳಿಯೂ ಹೆಚ್ಚು ಹಾಲು ಕೊಡುತ್ತದೆಯೇ, ಮಾವ?

"ಹಳ್ಳಿಯ ದನಗಳು, ಬಂಜಾರರು ಸಾಕಿದ ದನಗಳು ಅಷ್ಟು ಹೆಚ್ಚಾಗಿ ಹಾಲು ಕೊಡುವುದಿಲ್ಲ. ಆದರೆ ಚೆನ್ನಾಗಿ ನೋಡಿ ಕೊಂಡರೆ, ತಿಂಡಿ ತಿನ್ನಿಸಿದರೆ 3 ಲೀ. ಹಾಲು ಕೊಡುತ್ತೆ. ಇದೂ ಕೂಡ 10 ತಿಂಗಳು ಹಾಲು ಕೊಟ್ಟು 6 ತಿಂಗಳು ಕಾಲ ಹಾಲು ನಿಲ್ಲಿಸುತ್ತೆ. 3-3½ ವರ್ಷ ವಯಸ್ಸಾದ ಮೇಲೆ ಕರು ಹಾಕುತ್ತೆ. ಈ ಮಾಲ್ವಿ ದನದೊಂದಿಗೆ ದನದ ಕತೆ ನಿಲ್ಲಿಸಿ ಮನೆಗೆ ಹೋಗೋಣ. ಹೇಗಿದ್ದರೂ ನಿನಗೂ ರಜ, ನನಗೂ ರಜ. ನನಗೆ ದನದ ಕತೆ ಹೇಳುವುದಕ್ಕೆ ಬೇಜಾರಿಲ್ಲ. ನಿನಗೆ ಕೇಳುವುದಕ್ಕೆ ಬೇಜಾರಿಲ್ಲ. ನಡಿ." ಎಂದು ಹೇಳಿಕೊಂಡು ಮನೆಗೆ ಬಂದರು.

೫. ಕಿಟ್ಟಿ ಕಾಂಕ್ರೇಜ್ ಗುಂಪಿನ ದನಗಳ ಕತೆ ಕೇಳಿದ

ಊಟವಾದ ಮೇಲೆ ಪುನಃ ಕತೆ ಆರಂಭವಾಯಿತು. ರಜಾ ಕಳೆಯುತ್ತಿದೆ. ದನದ ಕತೆ ಬೆಳೆಯುತ್ತಿದೆ. ಷುರು ಮಾಡಿಯಾಯಿತು. ಮಧ್ಯೆ ಬಿಡುವ ಹಾಗಿಲ್ಲ. ಆದುದರಿಂದ ಪುರುಸೊತ್ತು ಇದ್ದಾಗಲೆಲ್ಲಾ ಈ ಕತೆಯನ್ನು ಹೇಳಬೇಕಾಗಿದೆ. ಆದರೆ, ಕಿಟ್ಟಿಗೆ ಬಹಳ ಕೊತೂಹಲವಿದ್ದುದರಿಂದ, ಹೇಳಿದ್ದನ್ನ ಬೇಗ ಅರ್ಥ ಮಾಡಕೊಳ್ಳುತ್ತಿದ್ದರಿಂದ, ಹೊಸ ವಿಷಯಗಳನ್ನು ತಿಳಿಯಲು ಬೇಸರ ಪಡುತ್ತಿರಲಿಲ್ಲ. “ಕಿಟ್ಟಿ, ಈ ಪೊತ್ತು ಈ ಕಾಂಕ್ರೇಜ್ ಗುಂಪಿನ ದನಗಳ ಕತೆ ಮುಗಿಸಿಬಿಡೋಣ. ನಿದ್ದೆ ಬರೊದಿಲ್ಲ ತಾನೆ.”

“ಇಲ್ಲ ಮಾವ. ಕತೆ ಹೇಳುತ್ತಿದ್ದರೆ ಎಷ್ಟು ಹೊತ್ತು ಬೇಕಾದರೂ ಎದ್ದಿರ್ತೀನಿ.”

“ಸರಿ. ಕಾಂಕ್ರೇಜ್ ಗುಂಪಿಗೆ ಸೇರಿದ ಮತ್ತೆರಡು ತಳಿಗಳು–**ಕೆನ್ವಾರಿಯಾ ಮತ್ತು ಕೆರಿಘಡ್** (ಫೋಟೊ 3, 4). ಕೆನ್ವಾರಿಯಾ ಅಂದರೆ ಕೆನ್ ನದಿ ಪ್ರವೇಶದ ದನ, ಅಂತ. ಈ ನದಿ ವಿಂಧ್ಯ ಪರ್ವತದಲ್ಲಿ ಹುಟ್ಟಿ, ಮಧ್ಯ ಪ್ರದೇಶದಲ್ಲಿ ಹರಿದು ಯಮುನಾ ನದಿಯನ್ನು ಉತ್ತರ ಪ್ರದೇಶದ ಬಂಡಾ ಜಿಲ್ಲೆಯಲ್ಲಿ ಸೇರುತ್ತೆ. ನಮ್ಮ ದೇಶದ ಹೆಸರುವಾಸಿಯಾದ ವಜ್ರದ ಗಣಿ ಎಲ್ಲಿದೆ ಗೊತ್ತೆ.”

“ಗೊತ್ತು, ಗೊತ್ತು, ಪನ್ನ.”

“ಭೇಷ್! ಭೂಗೋಳ ಚೆನ್ನಾಗಿ ಓದಿದ್ದೀಯಾ. ಈ ಪನ್ನ ಇರುವುದು ಕೆನ್ ನದೀ ಪ್ರದೇಶದಲ್ಲಿ. ಈ ಪ್ರದೇಶ ಗುಡ್ಡಗಾಡು. ಭೂಫಲವತ್ತಿಲ್ಲ.

ಮೇವು ಕಡಿಮೆ. ಆದುದರಿಂದ ಇಲ್ಲಿ ಬೆಳೆದ, ರೂಪಗೊಂಡ ಕೆನ್ವಾರಿಯ ತಳಿ ಧಡೂತಿ ದನವಲ್ಲ-ಸಣ್ಣ ದನಗಳೇ ಅನ್ನಬೇಕು. ಆದರೆ, ಗಟ್ಟಿ ಮುಟ್ಟು. ಸಾಮಾನ್ಯವಾಗಿ ಗುಡ್ಡಗಾಡಿನ ದನಗಳೇ ಹಾಗೆ. ಸಣ್ಣಗಿದ್ದರೂ ಗಟ್ಟಿ-ಕಾಲಂತೂ, ಗುಡ್ಡ ಹತ್ತೀ ಇಳಿದು ಗಟ್ಟಿಯಾಗಿರಬೇಕು. ಇವು ಹೆಚ್ಚು ಭಾರ ಎಳೆಯಲಾರವು; ಆದರೆ ಚೆನ್ನಾಗಿ ನಡೆಯುತ್ತವೆ. ಸಾಕುವುದಕ್ಕೆ ಹೆಚ್ಚು ಖರ್ಚಿಲ್ಲ; ಹೆಚ್ಚು ಮೇವು ಹಾಕಬೇಕಲ್ಲ. ಇದರ ಚಿತ್ರ ನೋಡು. ಗೂಳಿ ಹಸು ಎರಡರದೂ ನರೆ ಬಣ್ಣ. ಗೂಳಿ ಬಣ್ಣ ಸ್ವಲ್ಪ ದಟ್ಟ, ಅಷ್ಟೆ. ತಲೆ ನೋಡು. ಕಾಂಕ್ರೇಜಗಿಂತ ಚಿಕ್ಕದು; ಮಾಲ್ವಿ ದನದ ತರಹ; ಹಣೆ ಅಗಲ."

"ಈ ಚಿತ್ರದ ಕೆಳಗೆ ಕೆಂಕಥ ಅಂತ ಬರೆದಿದೆಯಲ್ಲ, ಮಾವ. ಕೇನ್ವಾರಿಯಾ ಬೇರೆ ಇರಬೇಕು, ಅಲ್ಲವೆ?"

"ಏನು, ನಾನು ಗಗ್ಗ ಅಂತ ಮಾಡಿದ್ದೀಯೇನೊ. ಇದಕ್ಕೆ ಎರಡು ಹೆಸರು ಅಷ್ಟೆ. ಹೇಳುವುದನ್ನು ಮರೆತಿದ್ದೆ. ಇದರ ಹಣೆಯೂ ಗುಳಿ ಬಿದ್ದಿದೆ. ಇದರ ಕೋಡು ನೋಡು, ಸ್ವಲ್ಪ ಹೊರ ಚಾಚಿದೆ, ಮುಂದಕ್ಕೆ ಬಗ್ಗಿದೆ: ತುದಿ ಮೊನಚು; ಕಿವಿ ಚೂಪು; ನೆಟ್ಟಗಿರುತ್ತೆ; ಜೋತಿರುವುದಿಲ್ಲ. ಬೆನ್ನು ನೇರ; ಕಾಲು ಮೋಟು; ಆದರೆ ಬಹಳ ಬಲಯುತವಾದದ್ದು. ಕತ್ತೆ ಕಾಲು ಮೋಟು, ಸಣ್ಣ; ಒದ್ದರೆ ಗೊತ್ತಾಗುತ್ತೆ ಅದರ ಬಲ. ಗೂಳಿ ಮತ್ತು ಹಸು ಎರಡರ ಡುಬ್ಬವು ಎದ್ದು ಕಾಣುತ್ತೆ. ಸಾಮಾನ್ಯವಾಗಿ ಹಸುವಿನ ಡುಬ್ಬ ಗೂಳಿ ಡುಬ್ಬದಷ್ಟು ಪುಷ್ಟವಾಗಿರುವುದಿಲ್ಲ. ಆದರೆ ಈ ದನದಲ್ಲಿ ಹಾಗಿದೆ-ಹಸು, ಗಂಡು ಬೀರಿಯಂತೆ. ಇದರ ಗಂಗೊದಲು ಸುಮಾರು ದಪ್ಪ. ಬಾಲ ಸ್ವಲ್ಪ ಉದ್ದವೇ. ಇದು ಕಾಂಕ್ರೇಜ್ ದನವನ್ನು ಹೋಲುತ್ತೊ, ಮಾಲ್ವಿಯನ್ನೊ?" "ಮಾಲ್ವಿ ದನವನ್ನು ಹೋಲುತ್ತೆ, ಅಲ್ಲವೆ ಮಾವ"

ಸರಿ, ಇದಕ್ಕೆ ಕಾರಣವೂ ಇದೆ. ಹಿಂದೆ ಹೇಳಿದನೆಲ್ಲಾ, ಮಾಲ್ವಿ, ದನಗಳು, ಬಂಜಾರರಿಂದ ಅನೇಕ ಕಡೆ ಹರಡಿವೆ ಅಂತ. ಅದರ ರಕ್ತ ಕೆನ್ವಾರಿಯಾದಲ್ಲಿ ಹರಿಯುವುದರಿಂದ, ಅದರಂತೆ ಕಾಣುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಇನ್ನು ಕೆರಿಘಡ್ ತಳಿ. ಮಾಲ್ವಿ ತಳಿಗೆ ಹೆಚ್ಚು ಸಮೀಪ ಇದು. ಉತ್ತರ ಪ್ರದೇಶದ ಕೇರಿ ಎಂಬ ಜಿಲ್ಲೆಯಲ್ಲಿ ಹೆಚ್ಚು; ಅದಕ್ಕೇ ಇದರ ಹೆಸರು ಕೆರಿಘಡ್ ಅಂತ. ಈ ಪ್ರದೇಶ ಫಲವತ್ತಿನದು. ಬಹಳ ಪ್ರಸಿದ್ಧ ನದಿಗಳು ಹರಿಯುವ ಪ್ರದೇಶ-ಶಾರದಾ, ಗೋಮತಿ ನದಿಗಳು. ನೇಪಾಳಿನ ಪಕ್ಕ; ಹಿಮಾಲಯದ ತಪ್ಪಲು; ಫಲವತ್ತು ಮಣ್ಣು, ಒಳ್ಳೆಯ ಮಣ್ಣು; ಹಸುರಿನ ಹುಲ್ಲುಗಾವಲುಗಳು. ಆದುದರಿಂದ ಈ ದನ ದಷ್ಟ ಪುಷ್ಟವಾಗಿ ಬೆಳೆದಿರುತ್ತವೆ. ಬೇಸಿಗೆಯಲ್ಲಿ ಇವನ್ನು ನೇಪಾಳಕ್ಕೆ ಹೊಡೆದುಕೊಂಡು ಹೋಗಿ ಮೇಯಿಸುತ್ತಾರೆ.

ಈ ತಳಿ ಚುರುಕು. ಹೆಚ್ಚು ಹೊರೆಯನ್ನಾದರೂ ಎಳೆಯುತ್ತೆ. ಗಂಟೆಗೆ 5-7 ಕಿ.ಮೀ. ನಡೆಯುತ್ತವೆ; ಚೆನ್ನಾಗಿ ಕೆಲಸ ಮಾಡುತ್ತವೆ. ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಇದಕ್ಕೆ ಬಹಳ ಗಿರಾಕಿ.

ಬಣ್ಣ ಸುಮಾರು ಬಿಳುಪು ಅಥವಾ ತೆಳುನರೆ. ಮೊಖ ಕಿರಿದು. ಕೋಡು ತೆಳುವು. 30-45 ಸೆ.ಮೀ. ಉದ್ದ. ನೆಟ್ಟಗಿರುತ್ತೆ. ಕಿವಿಕೂಡ ಚಿಕ್ಕದು. ಚಿಕ್ಕ ಕತ್ತು, ಗಂಗೊದಲು ತೆಳುವು. ಬಾಲ ಉದ್ದ. ಆದರೆ ಇದರ ತಮಾಷೆ ಏನು ಗೊತ್ತೆ? ಇತರ ದನಗಳ ಬಾಲದ ಕುಚ್ಚು ಕಪ್ಪಗಿದ್ದರೆ, ಇದರ ಕುಚ್ಚು ಬಿಳಪು. ಇದು ಎತ್ತಿನ ತಳಿ; ಹಾಲು ಕಡಿಮೆ.

ಥಾರ್ ಪಾರ್ಕರ್ ಎಂಬ ಮತ್ತೊಂದು ತಳಿ ಇದೆ. (ಫೋಟೊ 5) ಇದು ಹರಪ್ಪ ಜನರ ತಳಿಗಳಿಗೂ, ಆರ್ಯರ ದನದ ತಳಿಗಳೂ ಮಧ್ಯಸ್ಥ-ಎರಡು ಗುಂಪಿನ ಲಕ್ಷಣಗಳೂ ಇವೆ, ಈ ತಳಿಯಲ್ಲಿ. ಇದರ ಚಿತ್ರ ಇಲ್ಲಿದೆ ನೋಡು.

ಇದು ಥಾರ್ ಮರಭೂಮಿಯ ಪ್ರದೇಶದ ದನ, ಈ ಮರುಭೂಮಿ ಎಲ್ಲಿದೆ ಎನ್ನುವುದು ಭೂಗೋಳದ ಪ್ರವೀಣನಿಗೆ ಗೊತ್ತೇ ಇರಬೇಕು."

"ಗೊತ್ತಿದೆ, ಮಾವ. ರಾಜಾಸ್ಥಾನದ ಮರಭೂಮಿ. ಗ್ರೇಟ್ ಇಂಡಿಯನ್ ಡೆಸರ್ಟ್."

"ನಾನು ಪ್ರವೀಣ ಅಂದೆ. ನೀನೇ ಆ ಪ್ರವೀಣ ಅಂದುಕೊಂಡುಬಿಟ್ಟೆ. ನೀನು ಹೇಳಿದ್ದು ಸರಿ. ಆದರೆ ಪಾಕಿಸ್ತಾನ ಸ್ಥಾಪಿತವಾದ ಮೇಲೆ ಮರು ಪ್ರದೇಶವೂ ಇಬ್ಭಾಗವಾಯಿತು. ಈ ತಳಿಯ ತವರು, ಸಿಂಧ್‌ಗೆ ತೆನ್ಮೂಡಿಲಿ

ನಲ್ಲಿ–ಆಗ್ನೇಯದಲ್ಲಿ, ಮರಳು ದಿಣ್ಣೆಗಳಿಂದ ಕೂಡಿದ ಈ ಪ್ರದೇಶದಲ್ಲಿ ಮಳೆ ಬಹು ಕಡಿಮೆ; ವರ್ಷಕ್ಕೆ 25 ಮಿ. ಮಿಾ. ಕೂಡ ಬೀಳುವುದಿಲ್ಲ. ಪರಿಸ್ಥಿತಿ ಹೀಗಿದ್ದರೂ ಥಾರ್‌ಪಾರ್ಕ್‌ರ್ ದನ ಒಳ್ಳೆಯ ತಳಿ. ಎತ್ತುಗಳು ಕಷ್ಟಸಹಿಷ್ಣುಗಳು–ಚೆನ್ನಾಗಿ ಕೆಲಸ ಮಾಡುತ್ತವೆ. ಹಸುಗಳು ಹೆಚ್ಚು ಹಾಲು ಕೊಡುತ್ತವೆ."

"ಮರು ಭೂಮಿಯ ದನ ಹೆಚ್ಚು ಹಾಲು ಕೊಡುತ್ತೆಯೆ ?"

"ಹೌದು. ಮರಭೂಮಿಯ, ಒಣ ಪ್ರದೇಶದ ದನಗಳೇ, ತೇವ ಪ್ರದೇಶದ, ಒತ್ತಾದ ಅರಣ್ಯದ ದನಗಳಿಗಿಂತ, ಹೆಚ್ಚು ಹಾಲು ಕೊಡತಕ್ಕವು. ನಮ್ಮ ದೇಶದಲ್ಲಿ ಹಾಲಿನ ಉತ್ಪತ್ತಿಗೆ ಹೆಸರು ಪಡೆದಿರುವ ದನ ಎಮ್ಮೆಗಳು–ಕೆಂಪು ಸಿಂಧಿ, ಗಿರ್, ಸಾಹಿವಾಲ್, ಹರಿಯಾಣೆ ಹಸುಗಳು, ಮುರ್ರಾ, ಮೆಹಸಾನಾ ಮತ್ತು ಜಾಫರ್‌ಬಾದಿ ಎಮ್ಮೆಗಳು ಒಣ ಪ್ರದೇಶದ ತಳಿಗಳೇ. ಇಲ್ಲಿಯ ಜನರೂ ಇವುಗಳಂತೆ ಧೃಡಕಾಯರು, ಕಷ್ಟ ಬಿದ್ದು ಕೆಲಸ ಮಾಡುವವರು. ಪಠಾಣರು. ಪಂಜಾಬಿಗಳು, ಗಿರ್ ಪ್ರದೇಶದವರು, ರಾಜಾಸ್ಥಾನಿಗಳು ಎಷ್ಟು ಬಲಾಢ್ಯರೋ ಅವರ ದನ ಎಮ್ಮೆಗಳೂ ಅಷ್ಟೆ ಗಟ್ಟಿ ಮುಟ್ಟು, ದಟ್ಟ ಪುಷ್ಟ."

"ಇದಕ್ಕೇನು ಕಾರಣ, ಮಾವ. ಮಳೆ ಕಡಿಮೆ ಇದ್ದರೆ ಬೆಳೆ ಕಡಿಮೆ. ತಿನ್ನುವುದಕ್ಕೆ ಸಾಕಷ್ಟು ಆಹಾರವಿರುವುದಿಲ್ಲ ಅಲ್ಲವೇ."

"ಒಳ್ಳೆ ಪಾಯಿಂಟ್ ಹಾಕಿದೆ. ಆದರೆ ಇದನ್ನು ಹೇಳುವುದಕ್ಕೆ ಸ್ವಲ್ಪ ವ್ಯವಸಾಯ ಶಾಸ್ತ್ರದ ಸಹಾಯ ಬೇಕು. ಮಳೆ ಕಡಿಮೆ ಇರುವ ಕಡೆ ಬೆಳೆಯೇನೋ ಕಡಿಮೆ. ಆದರೆ ಬೆಳೆದ ಬೆಳೆ ಮಾತ್ರ ಬಹಳ ಪುಷ್ಟಿಕರ–ಅದರಲ್ಲೂ ಲವಣಗಳಲ್ಲಿ, ಸುಣ್ಣದಲ್ಲಿ. ಒಳ್ಳೆಯ ಮೈಕಟ್ಟಿಗೆ ಸುಣ್ಣ ಮುಂತಾದ ಲವಣಗಳು ಬೇಕು. ಈ ಸುಣ್ಣದ ಲವಣ ನೀರಿನಲ್ಲಿ ಬಹುಬೇಗ ಕರಗುವ ವಸ್ತು. ಮಣ್ಣಿನ ಸುಣ್ಣದ ಅಂಶ ಒಂದೊಂದು ಮಳೆಯಲ್ಲೂ ಕರಗಿ ಭೂತಳವನ್ನು ಸೇರುತ್ತೆ—ಮಳೆ ಹೆಚ್ಚಾಗಿ ಬೀಳುವ ಪ್ರದೇಶಗಳಲ್ಲಿ. ನಮ್ಮ ಮಲೆನಾಡಿನಲ್ಲಿ, ಮೆಲ್ಮಣ್ಣಿನಲ್ಲಿನ ಬಹುಭಾಗ ಸುಣ್ಣ ಹೀಗೆ ಕರಗಿ ಹೋಗಿ ನಿಸ್ಸಾರವಾಗಿದೆ. ಇಂತಹ ಕಡೆ ಬೆಳೆದ, ಧಾನ್ಯಗಳನ್ನು ತಿನ್ನುವ ಜನಕ್ಕೆ, ಹುಲ್ಲನ್ನು ತಿನ್ನುವ ದನಕ್ಕೆ, ಆಹಾರದಲ್ಲಿ ಸಾಕಷ್ಟು ಸುಣ್ಣ ಸಿಗುವುದಿಲ್ಲ. ಇದು

ಸಿಗದಿದ್ದರೆ ಮೂಳೆ ಚೆನ್ನಾಗಿ, ದೊಡ್ಡದಾಗಿ ಬೆಳೆಯುವುದಿಲ್ಲ. ಅವರ ಮೈಕಟ್ಟು ಭಾರಿಯಾಗಿರುವುದಿಲ್ಲ. ಒಣ ಪ್ರದೇಶದಲ್ಲಿ ಬೆಳೆದ ಕಾಳು, ಹುಲ್ಲುಗಳಲ್ಲಿ ಈ ಅಂಶ ಹೆಚ್ಚಾಗಿರುವುದರಿಂದ ಅವರ ಮೈಕಟ್ಟು ಚೆನ್ನಾಗಿರುತ್ತೆ. ಹೆಚ್ಚು ಶಕ್ತಿ ಇರುತ್ತೆ. ಹಸುವಿಗೆ ಪುಷ್ಟಿಯಾದ ಆಹಾರ ಸಿಕ್ಕಿದರೆ ಹಾಲಿನ ಉತ್ಪತ್ತಿ ಚೆನ್ನಾಗಿರಲೇಬೇಕು.

ನಮ್ಮ ಮೈಸೂರಿನಲ್ಲೇ ಈ ವ್ಯತ್ಯಾಸಗಳನ್ನು ಅರಿತುಕೊಳ್ಳಬಹುದು ಮಳೆ ಕಡಿಮೆ ಬೀಳುವ ಚಿತ್ರದುರ್ಗ, ರಾಯಚೂರು, ಬಿಜಾಪುರದ ಜನರ ಮೈಕಟ್ಟನ್ನು ಮಲೆನಾಡಿನ ಜನರ ಮೈಕಟ್ಟಿಗೆ ಹೋಲಿಸಿನೋಡು–ಸುಣ್ಣದ ಪ್ರಭಾವ ಕಾಣುತ್ತೆ. ಮಲೆನಾಡಿನ ಜನ ಗಿಡ್ಡು, ತೆಳು. ಅವರ ದನವೂ ಹಾಗೆ.

ಸಿಂಧ್, ಪಂಜಾಬಿನ ದನಗಳು ಹೆಚ್ಚು ಹಾಲು ಕೊಡುವುದಕ್ಕೆ ಮತ್ತೊಂದು ಕಾರಣವಿದೆ, ಇಲ್ಲಿಯ ಜನಕ್ಕೆ ಹಾಲಿನ ಮೇಲೆ ಬಲು ಆಸೆ. ಅವರು ಹೆಚ್ಚು ಹಾಲು, ಮೊಸರು, ಬೆಣ್ಣೆ, ತುಪ್ಪ ಬಳಸುತ್ತಾರೆ. ಅದುದರಿಂದ, ಲಾಗಾಯತನಿಂದ ಹೆಚ್ಚು ಹಾಲು ಕೊಡಬಲ್ಲ ದನಗಳನ್ನೇ ಆರಿಸಿಕೊಂಡು ಸಾಕುತ್ತಿರುವುದರಿಂದ, ಕ್ರಮೇಣ, ಕಡಿಮೆ ಹಾಲು ಕೊಡುವ ದನಗಳು ಅಳಿದು ಉತ್ತಮವಾದ ಹಾಲಿನ ತಳಿಗಳೇ, ದನಗಳೇ, ಹೆಚ್ಚಿದವು.

ನಿನ್ನ ಪ್ರಶ್ನೆಗೆ ಉತ್ತರ ಬಂದ ಮೇಲೆ ಈ ಥಾರ್ ಪಾರ್ಕರ್ ದನದ ಕತೆ ಮುಗಿಸಿಬಿಡೋಣ. ಈ ತಳಿಗೆ ಇತರ ಹೆಸರುಗಳಿವೆ-ಥಾರಿ, ಕಚ್ಚಿ ಅಂತ. ಕಾರಣ ಕಚ್ ಕಡೆ ಇದು ಹೆಚ್ಚು. ಕಚ್, ಸಿಂಧ್ ದೇಶಕ್ಕೆ ಪಕ್ಕದಲ್ಲೇ ಇದೆ. ಕೆಲವರು ಇದನ್ನು ಬಿಳಿ ಸಿಂಧಿ ದನವೆಂದೂ ಕರೆಯುತ್ತಾರೆ.

ಇದರ ತವರಿನಲ್ಲಿ ಮೇವಿನ ಕ್ಷಾಮ ಪದೇ ಪದೇ ತಲೆಯೆತ್ತುತ್ತಿರುವುದರಿಂದ, ಈ ದನಗಳು ಅಕ್ಕ ಪಕ್ಕದ ಪ್ರದೇಶಗಳಿಗೆ ವಲಸೆ ಹೋಗುವುದು ಸಾಮಾನ್ಯ. ಕಾಂಕ್ರೇಜ್ ಪ್ರದೇಶ ಹತ್ತಿರವೇ ಇರುವುದರಿಂದ, ಕಾಂಕ್ರೇಜ್ ದನದ ಪ್ರಭಾವ ಈ ತಳಿಯಲ್ಲಿ ಕಾಣಬಹುದು. ಕೆಲವರು ಹೇಳುತ್ತಾರೆ. ಹಿಂದೆ ದನ ಸಾಕುವ ಗೊಲ್ಲರು, ಕಾಂಕ್ರೇಜ್ ದನಗಳನ್ನೇ ಥಾರ್ ಪ್ರದೇಶಕ್ಕೆ ಕೊಂಡೊಯ್ದರು. ಅಲ್ಲಿ ಈ ತಳಿ ಕ್ರಮೇಣ ರೂಪಗೊಂಡಿತು. ಮೂಲದನ ಕಾಂಕ್ರೇಜ್. ಆದುದರಿಂದ ಅದರ ಕೆಲವು ಲಕ್ಷಣಗಳು, ಈ ತಳಿಯಲ್ಲಿ

ಉಳಿಯಿತು, ಅಂತ. ಈ ಕಾಂಕ್ರೇಜಲ್ಲದೆ, ಇದರಲ್ಲಿ ಇದರ ತಳಿಗಳ-ಕೆಂಪು ಸಿಂಧಿ, ಗಿರ್ ಮುಂತಾದುವಗಳ ಪ್ರಭಾವವೂ ಇದೆ. ಈಗ ಈ ತಳಿ ಜೋದ್‌ಪುರ್, ಜಯಸಾಲ್ಮೆರ್ ಮುಂತಾದ ಕಡೆ ಹೆಚ್ಚು."

"ಇದನ್ನ ಇನ್ನೂ ವರ್ಣಿಸಿಯೇ ಇಲ್ಲವಲ್ಲ ಮಾವ"

"ಅದಕ್ಕೆ ಬರುತ್ತಿದ್ದೆ. ಬಣ್ಣ, ಆಗಲೇ ಹೇಳಿದೆ, ಬಿಳುಪು ಅಥವಾ ತೆಳು ಬೂದಿ. ಸಾಮಾನ್ಯವಾಗಿ ಹೋರಿಗಳು ಬೂದಿಯಾಗಿರುತ್ತವೆ. ಎಳೆ ದನಗಳಲ್ಲಿ ಬೆನ್ನಿನ ಮೇಲೆ ತಿಳಿನರೆ ಬಣ್ಣದ ಪಟ್ಟೆ ಇರುತ್ತೆ.

ಇದರ ಬಣ್ಣದಲ್ಲಿ ಒಂದು ವಿಶೇಷ; ಬದಲಾಯಿಸುತ್ತೆ. ಚಳಿಗಾಲ ದಲ್ಲಿ ಮತ್ತು ಹಸು ಗಬ್ಬವಾಗಿರುವಾಗ, ಅವುಗಳ ಬಣ್ಣ ದಟ್ಟವಾಗುತ್ತೆ. ಬೇರೆ ಕಾಲದಲ್ಲಿ ತೆಳುವಾಗುತ್ತೆ.

ಇದರ ತಲೆ ಸುಮಾರು ಗಾತ್ರ. ಹಣೆ ಅಗಲ. ಚಪ್ಪಟೆ. ಕುಳಿ ಬಿದ್ದಿರುವುದಿಲ್ಲ. ಕೋಡುಗಳು ಸ್ವಲ್ಪ ದೂರಕ್ಕೇ ಇವೆ; ಹೊರಕ್ಕೆ, ಪಕ್ಕಕ್ಕೆ ಚಾಚಿರುತ್ತವೆ. ಉದ್ದವಿಲ್ಲ: 15-22 ಸೆಂಮಿೂ. ಅಷ್ಟೆ. ಕೋಡಿನ ಬುಡ ದಪ್ಪ. ಕಿವಿ ಉದ್ದವಾಗಿ ಅಗಲವಾಗಿ ಇವೆ. ಮುಂದಕ್ಕೆ ಜೋತಿರುತ್ತೆ. ಇದರಲ್ಲೂ ಒಂದು ವಿಶೇಷ, ಕಿವಿಯ ಒಳಭಾಗ ಹಳದಿಯಾಗಿರುತ್ತೆ. ಮತ್ತೊಂದು, ಕಣ್ಣುಗಳ ಮಧ್ಯೆ ಚರ್ಮ ಉದುದ್ದಕ್ಕೆ-ನಮಗೆ ಕೋಪ ಬಂದಾಗ ಬರುತ್ತಲ್ಲ ಹಾಗೆ-ಮುದುಡಿಕೊಂಡಿರುತ್ತೆ"

"ಹಾಗಾನರೆ ಇದೂ ಕೋಪದ ಹಸುವೆ?"

"ಸ್ವಲ್ಪ; ಆದರೆ ನಮ್ಮ ಅಮೃತ ಮಹಲ್ ದನಗಳಷ್ಟಲ್ಲ. ರೆಪ್ಪೆ ಸುತ್ತಲೂ ಕಾಡಿಗೆ ಹಚ್ಚಿರುವ ಹಾಗೆ ಕಪ್ಪು ಕಲೆ ಇದೆ. ಗಂಗೊದಲು ಅಷ್ಟು ಎತ್ತಿ ಕಾಣುವುದಿಲ್ಲ. ಕಾಲು ತುಂಡು; ಆದರೆ ನೆಟ್ಟಗಿರುತ್ತೆ. ಗೊರಸು ಕಪ್ಪು. ಬೆನ್ನು ನೇರ, ಉದ್ದ. ಬಾಲ ತೆಳುವು. ಉದ್ದ. ಹಸುಗಳಲ್ಲಿ ತುಂಬು ಕೆಚ್ಚಲು. ಹೊಕ್ಕಳ ಮೇಲೆ ಸಡಿಲ ಚರ್ಮ; ಜೋತು ಬಿದ್ದಿರುತ್ತೆ. ಮೊಲೆ ಉದ್ದ—7-10 ಸೆಂಮಿೂ. ಉದ್ದ. ಚರ್ಮ ಮೃದು. ಕೂದಲು ನವುರು. ಸಾಕೋ ವರ್ಣನೆ?"

"ಪಟ ಪಟ ಅಂತ ಹೇಳಿಬಿಟ್ಟೆ ಮಾವ. ಇದು ಭಾರೀ ದನವೆ?"

" ಕಾಂಕ್ರೇಜಿನಷ್ಟು ಭಾರಿ ಅಲ್ಲ. ಸುಮಾರು 385 ಕಿಲೊ ಗೂಳಿಗಳು 530 ಕಿಲೊ ತೂಗುತ್ತೆ. ಈ ತಳಿ ಒಳ್ಳೆಯ ಎತ್ತುಗಳನ್ನು ಕೊಡುವುದರಿಂದಲೂ, ಹೆಚ್ಚು ಹಾಲು ಉತ್ಪತ್ತಿ ಮಾಡುವುದರಿಂದಲೂ, ಇದನ್ನು ತವರಿನಿಂದ ದೂರವಿರುವ ಅನೇಕ ಕಡೆ ಸಾಕಿರುತ್ತಾರೆ—ಬಿಹಾರಿನಲ್ಲಿ, ಪಂಜಾಬಿನಲ್ಲಿ. ಮರುಭೂಮಿಯ ದನಗಳಾದುದರಿಂದ ಗಟ್ಟಿಮುಟ್ಟು ; ಕಷ್ಟ ಸಹಿಷ್ಣುಗಳು ; ಬಿಸಿಲು ಸೆಕೆ ಚಳಿ ತಡೆಯಬಲ್ಲವು. ಮೇವು ಕಡಿಮೆಯಾದರೂ ಕೊಂಚಕಾಲ ಈ ಅಭಾವವನ್ನು ತಡೆಯಬಲ್ಲವು. ಮರುಭೂಮಿಯಂತಹ ಅನಾನುಕೂಲ ಸ್ಥಳಗಳಲ್ಲೂ 3½-4½ ಲೀ. ಹಾಲು ಕೊಡುತ್ತೆ. ಆದರೆ ಚೆನ್ನಾಗಿ ಸಾಕಿದರೆ 13-15 ಲೀ. (10-11 ಸೇರು) ಹಾಲು ಕೊಡುತ್ತೆ. 10 ತಿಂಗಳು ಹಾಲು ; 6 ತಿಂಗಳು ಹಾಲಿಲ್ಲ. ಈ ಗುಂಪಿನ ಇತರ ದನಗಳಿಗಿಂತ ಬೇಗನೆ ಕರು ಹಾಕುತ್ತೆ-ಸುಮಾರು 3½ ವರ್ಷಕ್ಕೆ. ಆದರೆ 10-12 ವರ್ಷಗಳಲ್ಲಿ ಮುದಿ ಬೀಳುತ್ತೆ. ಎತ್ತುಗಳು ಹೆಚ್ಚು ಭಾರ ಎಳೆಯಲಾರವು. ನಡೆ ಸ್ವಲ್ಪ ನಿಧಾನ. ಈ ದನವನ್ನು ಸರಿಯಾಗಿ ಲಂಗಿನಲ್ಲಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಹಾಯುವುದು, ಒದೆಯುವುದು ಜಾಸ್ತಿ.

ಅಬ್ಬ........ ಇದರೊಂದಿಗೆ ಹರಪ್ಪ ದನಗಳ ಗುಂಪಿನ ಕತೆಯನ್ನು ಮುಗಿಸೇಬಿಟ್ಟೆ, ಹೋಗು. ಮಲಗೊ ಹೊತ್ತು ಎಂದೊ ಆಗಿಹೋಯ್ತು " ಎಂದು ಹೇಳುತ್ತ ಹಾಸಿಗೆಗೆ ಉರುಳಿದ.

೩. ಕಿಟ್ಟಿ ಆರ್ಯರ ಕತೆ ಕೇಳಿದ

ಮಾರನೆಯ ಬೆಳಿಗ್ಗೆ ಇಡ್ಲಿ ಕಾಫಿ ಮುಗಿಸಿಕೊಂಡು ರಾಮಣ್ಣ ದನದ ಕತೆಯನ್ನು ಮುಂದುವರಿಸಿದ.

" ಇಲ್ಲಿಯ ತನಕ ನಮ್ಮ ದೇಶದ ಒಂದು ಗುಂಪಿನ ದನಗಳ, ಹರಪ್ಪ ದನಗಳ 5 ತಳಿಗಳ, ವಿಷಯ ಹೇಳಿ ಮುಗಿಸಿದೆ–ಸ್ವಲ್ಪ ಅವಸರದಿಂದಲೇ ನಿನ್ನೆ ರಾತ್ರಿ ಮುಗಿಸಿದೆ. ಈವೊತ್ತು ಎರಡನೆಯ ಗುಂಪಿನ ದನಗಳ ಕತೆ ಪ್ರಾರಂಭ. ಇವು, ಹೆಚ್ಚೂ ಕಡಿಮೆ, ಆರ್ಯರ ದನಗಳು. ಈ ಗುಂಪಿನಲ್ಲೇ ಹೆಚ್ಚು ದನದ ತಳಿಗಳಿರುವುದು. ಬಚಾರ್, ಭಗ್ನಾರಿ, ಗಾವ್‌ಲಾವ್, ಹರಿಯಾಣ, ಓಂಗೋಲ್, ಮೇವತಿ, ಕೃಷ್ಣಾಕುಣಿವೆ, ರಥ್, ನಾಗೋರಿ–9 ತಳಿಗಳು. ವಿಧ ವಿಧವಾದ ತಳಿಗಳು."

" ಆರ್ಯರು ಅಷ್ಟು ಜಾತಿ ದನಗಳನ್ನು ನಮ್ಮ ದೇಶಕ್ಕೆ ತಂದರೆ ? "

ಇರಲಾರದು. ಒಂದೆರಡು ಜಾತಿ ದನಗಳನ್ನು ತಂದಿರಬಹುದು. ಆದರೆ ಆರ್ಯರಿಗೆ ದನಗಳ ಬಗ್ಗೆ ಬಹಳ ಆಸ್ಥೆ. ಅವರಿಗೆ ಬಲು ಇಷ್ಟವಾದ ಪ್ರಾಣಿ ಗಳೆಂದರೆ ಗೋವು, ಕುದುರೆ. ಗೋವೇ ಅವರ ಆಸ್ತಿ. ಗೋಪಾಲನೆಯೇ ಅವರ ಮುಖ್ಯ ಕಸಬು. ಗೋಪೂಜೆಯೇ ಅವರ ನಿತ್ಯ ನಿಯಮ. ಗೋವೇ ಅವರ ಭೂದೇವತೆ. ಅವರ ಕಥೆ, ಪುರಾಣ, ಹಾಡು, ಗ್ರಂಥಗಳೆಲ್ಲವೂ, ಗೋಮಯ. ಗೋವು ಅವರ ಜೀವನದ ಹಾಸು ಹೊಕ್ಕು. ಆವರಿದ್ದೆಡೆಯೇ ದನ ; ದನವಿದ್ದೆಡೆಯೇ ಅವರು. ಅವರಲ್ಲಿ, ಜನಕ್ಕೂ ದನಕ್ಕೂ ಭೇದವೇ ಇರಲಿಲ್ಲ. ಕೃಷ್ಣನೊಂದಿಗೆಯೇ ಅವನ ದನ ಮಲಗುತ್ತಿತ್ತು ಎಂಬುದನ್ನು

ನೀನು ಕೇಳಿರಬೇಕು. ಗೋವು ಅವರಿಗೆ ಅಷ್ಟು ಪ್ರಾಣ. ಒಂದು ಮಾತಿನಲ್ಲಿ ಹೇಳುವುದಾದರೆ, ಅವರ ಇಹ, ಪರ, ಬದಕು, ಆಸೆ, ಅವರ ಸಂಸ್ಕೃತಿ ಎಲ್ಲವೂ ಗೋವಿನಲ್ಲೇ ಕೇಂದ್ರೀಕೃತವಾಗಿತ್ತು.

ಈ ಆರ್ಯ ಜನಕ್ಕೆ ಗೋವಿನಲ್ಲಿ ಅಷ್ಟು ಪ್ರೇಮ ಬೆಳದದ್ದು ಹೇಗೆ ಎಂಬುದನ್ನು ತಿಳಿಸಲು ಆರ್ಯರ ಕತೆಯನ್ನು ಹೇಳಬೇಕಾಗುತ್ತೆ. ಕೇಳ್ತೀಯಾ ?"

"ಹೇಳು, ಹೇಳು ಮಾವ. ಚರಿತ್ರೆಯಲ್ಲಿ ಅವರು ಹೊರ ದೇಶದಿಂದ ನಮ್ಮ ದೇಶಕ್ಕೆ ಸುಮಾರು ಕ್ರಿ. ಪೂ. 1500 ರಲ್ಲಿ ವಾಯುವ್ಯ ಕಡೆಯಿಂದ ಬಂದರು ಎಂದು ಓದಿದ್ದೇನೆ. ಅವರು ಎಲ್ಲಿಂದ ಬಂದರು ? ಮೊದಲು ಅವರೆಲ್ಲಿದ್ದರು ? ಇನನ್ನೆಲ್ಲಾ ತಿಳಿದುಕೊಳ್ಳಬೇಕು, ಮಾವ."

"ಹೇಳುತೀನಿ; ನನಗೆ ತಿಳಿದ ಮಟ್ಟಿಗೆ. ನನಗೆ ತಿಳಿದಿರುವುದೂ ಸ್ವಲ್ಪ. ನಾನು ವಿದ್ಯಾರ್ಥಿಯಾಗಿದ್ದಾಗ ಓದಿದ್ದು ವಿಜ್ಞಾನ; ಚರಿತ್ರೆ ತಲಗೆ ಹತ್ತುತ್ತಿರಲಿಲ್ಲ. 35 ನಂಬರು ತೆಗೆಯುತ್ತಿದ್ದೆ ಅಷ್ಟೆ. ಆದರೆ, ಈಗ ಕೆಲವು ವರ್ಷಗಳಿಂದ ಈಚೆಗೆ, ಚರಿತ್ರೆಯಲ್ಲಿ ಸ್ವಲ್ಪ ಆಸಕ್ತಿ ಹುಟ್ಟಿದೆ. ಚರಿತ್ರೆ ಅನ್ನುವುದಕ್ಕಿಂತ ಚರಿತ್ರೆಯ ಪೂರ್ವ ಕಾಲದಲ್ಲಿ ಅಂತ ಹೇಳಬೇಕು–ಇತಿಹಾಸ ಪೂರ್ವ–Prehistory ಅಂತ. ಆ ಕಾಲ.

ಆರ್ಯರು ಎಲ್ಲಿಯವರು ಎನ್ನುವುದು ಇನ್ನೂ ಖಚಿತವಾಗಿ ತಿಳಿದಿಲ್ಲ. ಆದರೆ ಆರ್ಯರು ಬೆಟ್ಟದ ಗುಡ್ಡ ಗಾಡಿನ ಜನವಲ್ಲ; ಬಯಲು ಸೀಮೆಯ, ಹುಲ್ಲುಗಾವಲುಗಳ ಜನ ಎಂಬುದು ಸ್ಪಷ್ಟ. ಇವರಿಗೆ ಗುಡ್ಡಗಾಡುಗಳನ್ನು ಕಂಡರೆ ಆಗದು. ಹಿಂದೆ ತಿಳಿಸಿದ ಹಾಗೆ, ಅವರ ಮುಖ್ಯ ಕಸಬು–ಗೋಪಾಲನೆ; ಅವರ ಮುಖ್ಯ ಆಟ–ರಥದ ಜೂಜು. ಇವೆರಡಕ್ಕೂ ಅನುಕೂಲವಾದ ಪ್ರದೇಶ ಬಯಲು ಸೀಮೆ ; ಗುಡ್ಡ ಬೆಟ್ಟಗಳ ಪ್ರದೇಶವಲ್ಲ. ಇವರಿಗೆ, ಈ ಪ್ರದೇಶದ ಪರಿಚಯವೂ ಇರಲಿಲ್ಲ. ಆರ್ಯ ಕುಲ ಬೆಳೆದದ್ದು, ಆರ್ಯ ಕುಲದ ತವರು, ಡಾನ್ಯೂಬ್ ಮತ್ತು ಆಕ್ಸಸ್ (Oxus) ನದಿಗಳ ಮಧ್ಯದ ಹುಲ್ಲುಗಾವಲಿನ ಪ್ರದೇಶ. ಈ ನದಿಗಳು ಎಲ್ಲಿ ಇವೆ, ಹೇಳು."

"ಡಾನ್ಯೂಬು ಗೊತ್ತು. ಜರ್ಮನಿ, ಆಸ್ಟ್ರಿಯ, ಹಂಗೆರಿ, ಯುಗೋ

ಸ್ಲಾವಿಯ, ಬಲ್ಗೇರಿಯ ಮತ್ತು ರುಮೇನಿಯ ದೇಶಗಳ ಮೂಲಕ ಹರಿದು ಕಪ್ಪು ಸಮುದ್ರವನ್ನು ಸೇರುತ್ತೆ. ಅಕ್ಸಸ್ ಗೊತ್ತಿಲ್ಲ."

"ಇದು ಅಷ್ಟು ದೊಡ್ಡ ನದಿಯೇನೂ ಅಲ್ಲ. ಅಫ್ಘನೀಸ್ತಾನದ ಉತ್ತರದಿಂದ ರಷ್ಯ ಹೊಕ್ಕು ಆರಲ್ ಸಮುದ್ರವನ್ನು ಸೇರುತ್ತೆ. ಇದನ್ನು ಅಮುದರ್ಯಾ ಅಂತಲೂ ಕರೆಯುತ್ತಾರೆ. ದರ್ಯಾ ಅಂದರೆ ನದಿ. ನಮ್ಮ ಶ್ರೀರಂಗಪಟ್ಟಣದ ಬಳಿ ಇರುವ ದರ್ಯಾದವಲತ್‌ಗೆ ಹೆಸರು ನದಿಯಿಂದ; ಇದಕ್ಕೆ ನದೀ ಪಕ್ಕದ ದಿವ್ಯ ಭವನ ಎಂದರ್ಥ. ನಿನ್ನ ಅಟ್ಲಾಸನ್ನು ನೋಡಿದರೆ ಈ ನದಿಗಳ ಮಧ್ಯಭಾಗ ಹುಲ್ಲು ಗಾವಲುಗಳ ಪ್ರದೇಶವೆಂಬುದು ತಿಳಿಯುತ್ತೆ. ಈ ಹುಲ್ಲು ಗಾವಲುಗಳನ್ನು, ಸ್ಟೆಪ್ (Steppe) ಅಂತ ಕರೆಯುತ್ತಾರೆ. ಈ ಸ್ಟೆಪ್ಪುಗಳು ಹಂಗೆರಿಯಿಂದ ಹಿಡಿದು ಕಪ್ಪು ಸಮುದ್ರ, ಕಾಸ್ಪಿಯನ್ ಸಮುದ್ರದ ದಂಡೆಗಳ ಮೂಲಕ ಹಾದು, ರಷ್ಯದ ಕಸಕೀಸ್ತಾನದವರಿವಿಗೂ ಹರಡಿದೆ. ಈ ಪ್ರದೇಶ ಮಾನವನ ಚರಿತ್ರೆಯಲ್ಲಿ ಬಹಳ ಪ್ರಭಾವ ಬೀರಿರುವ ಭಾಗ; ಅನೇಕ ಮಾನವ ಕುಲಗಳು, ಆಳಿ, ಅಳಿದ ಪ್ರದೇಶ, ಇದು.

ಆರ್ಯರು ಈ ಭಾಗದ ಜನ. ಇಲ್ಲಿಂದಲೇ ಪಶ್ಚಿಮಕ್ಕೂ ಪೂರ್ವ ದೇಶಗಳಿಗೂ ವಲಸೆ ಎತ್ತಿದರು. ಪಶ್ಚಿಮಕ್ಕೆ ತೆರಳಿದ ಜನ ಯೂರೋಪನ್ನು ಆಕ್ರಮಿಸಿಕೊಂಡರು. ಪೂರ್ವಕ್ಕೆ ವಲಸೆ ಬಂದವರು ಪರ್ಷಿಯ (ಈಗಿನ ಇರಾನ್), ಅಫ್ಘನಿಸ್ತಾನ ಮತ್ತು ಇಂಡಿಯವನ್ನು ಆಕ್ರಮಿಸಿಕೊಂಡರು ಹೀಗಾದುದರಿಂದಲೇ ಯುರೋಪಿನ ಅನೇಕ ಭಾಷೆಗಳಿಗೂ ಸಂಸ್ಕೃತಕ್ಕೂ ಸಾಮಾನ್ಯವಾದ ಅಥವಾ ಸಮವಾದ ಅನೇಕ ಪದಗಳು, ಕತೆಗಳೂ ಇರುವುದು.

ಆರ್ಯರು ಪೂರ್ವ ದೇಶಗಳಿಗೆ ವಲಸೆ ಎತ್ತಿದಾಗ ಮೊದಲು ಸಿರಿಯಾ (Syria) ದ ಉತ್ತರ ಭಾಗದಲ್ಲಿ ಸ್ವಲ್ಪ ಕಾಲ ನೆಲೆಸಿದರು. ಅಲ್ಲಿಂದ ಕೆಲವರು ಪರ್ಷಿಯಾಕ್ಕೆ ಬಂದರು. ಇಲ್ಲಿ, ಈ ಜನರಲ್ಲಿ, ಅಂತಃ ಕಲಹ ಹುಟ್ಟಿ ಒಂದು ಗುಂಪು ಆಫ್ಘಾನಿಸ್ತಾನದ ಮೂಲಕ, ಇಂಡಿಯಾದ (ಆಗಿನ ಇಂಡಿಯ, ಈಗಿನ ಪಾಕಿಸ್ತಾನ)ದ ವಾಯುವ್ಯ ಭಾಗಕ್ಕೆ ಸುಮಾರು ಕ್ರಿ.ಪೂ. 1500 ರಲ್ಲಿ ಬಂದರು. ಪರ್ಷಿಯದಲ್ಲಿ ನಡೆದ ಒಳ ಜಗಳವೇ ದೇವದಾನವರಿಗೆ ನಡೆದ

ಯುದ್ಧದ ಮೂಲ ಕತೆಯೇ ಇರಬಹುದು ಎಂದು ಕೆಲವರು ಹೇಳುತ್ತಾರೆ. ಈ ಕತೆಯ ಪ್ರಕಾರ ದೇವರು, ದಾನವರು. ಸುರರು ಅಸುರರು, ಒಂದೇ ಕುಲದವರು. ಅಕ್ಕ ತಂಗಿಯರ ಮಕ್ಕಳು. ಅಧಿತಿ ಎಂಬುವಳಿಂದ ಬಂದವರು ಆದಿತ್ಯರು, ಸುರರು, ದೇವತೆಗಳು. ಧಿತಿಯೆಂಬುವಳಿಂದ ಜನಿಸಿದವರು ದೈತ್ಯರು, ಅಸುರರು, ದಾನವರು. ಇವರಲ್ಲಿ ಯಾವತ್ತೂ ಕಲಹ. ಆರ್ಯರು ಸಪ್ಪೆ ಜನಗಳಲ್ಲ. ಶಕ್ತಿ ಉಕ್ಕಿ ಬರುತ್ತಿದ್ದ ಜನ. ಆದುದರಿಂದ ಇವರಲ್ಲಿ ಒಳಜಗಳಗಳು ಬಹಳ ಸಾಮಾನ್ಯ. ಮಹಾಭಾರತದ ಯುದ್ಧವೂ ಅಣ್ಣ ತಮ್ಮಂದಿರ ಜಗಳ. ಕೃಷ್ಣನ ಯಾದವೀ ಕುಲವೂ ಒಳ ಜಗಳಗಳಿಂದ ನಿರ್ನಾಮವಾದದ್ದು.

ಈ ಜಗಳಗಳಿಗೆ, ಅನೇಕವಕ್ಕೆ, ಗೋವೇ ಕಾರಣ. ನಿನಗೆ ಹೇಳಿದ್ದೀನಲ್ಲ-ಆರ್ಯರ ಮುಖ್ಯ ಕಸಬು ಗೋಪಾಲನೆ ಅಂತ. ಅವರ ಮುಖ್ಯ ಆಸ್ತಿ ಗೋವು. ಯಾರಿಗೆ ಹೆಚ್ಚು ಗೋವುಗಳಿವೆಯೋ ಅವನೇ ರಾಜ. ಕೃಷ್ಣನ ತಂದೆ ವಸುದೇವ, ಯದುವಂಶದ ಶೂರನೆಂಬ ರಾಜನ ಮಗ, ಅಂತ ಕೇಳಿರಬೇಕು. ಶೂರ, ರಾಜನಾದದ್ದು ಅವನಲ್ಲಿದ್ದ ಅಸಂಖ್ಯಾತವಾದ ಗೋವುಗಳಿಂದ. ಗೋವಿನ ಮಂದೆಗಳನ್ನು ಅಪಹರಿಸಿ, ತಮ್ಮ ದನಗಳ ಮಂದೆಯನ್ನೂ, ತನ್ಮೂಲಕ ತಮ್ಮ ಆಸ್ತಿಯನ್ನು ಬೆಳೆಸಿಕೊಳ್ಳುವುದು ಈ ಆರ್ಯ ಕುಲಕ್ಕೆ ಬಂದ ಕುಲ ಹವ್ಯಾಸ. ಇಂದ್ರಾದಿ ದೇವತೆಗಳಂತಹವರೇ ಇತರರ ದನಗಳನ್ನು ಅಪಹರಿಸಿ ತೊಡಕಿಗೆ ಸಿಕ್ಕಿ ಬಿದ್ದ ಕತೆಗಳು ಪುರಾಣಗಳಲ್ಲಿ ಬಹಳ ಇವೆ.

ಆರ್ಯರ ಕಸಬು, ಹವ್ಯಾಸ ಗೋಪಾಲನೆಯಾದ ಕಾರಣ ಇವರ ನಾಗರೀಕತೆಯನ್ನು ಗೋ ಸಂಸ್ಕೃತಿ (Cattle culture) ಎಂದು ಇತಿಹಾಸಕಾರರು ಕರೆಯುತ್ತಾರೆ.

ಈ ಸಂಸ್ಕೃತಿಯ ವಿಷಯ ಸ್ವಲ್ಪ ಹೇಳುತ್ತೇನೆ. ಯಾಕೆಂದರೆ, ಮಾನವನ ಕತೆಯಲ್ಲಿ, ಚರಿತ್ರೆಯಲ್ಲಿ, ಪ್ರಗತಿಯಲ್ಲಿ, ಈ ಗೋಕುಲದವರೇ ಬಹಳ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದ್ದಾರೆ.

ಮಾನವ ಬೇಸಾಯವನ್ನು ಕಂಡು ಹಿಡಿದ ಮೇಲೆ, ಪಶುಪಾಲನೆ ಪ್ರಾರಂಭಿಸಿದ ನಂತರ, ಅವನ ಸಂಖ್ಯೆ ಹೆಚ್ಚಾಗಲು ಅವಕಾಶವೊದಗಿತು ಎಂದು

ಹಿಂದೆಯೇ ಹೇಳಿದ್ದೇನೆ. ಸಾಮಾನ್ಯವಾಗಿ, ಜೀವನ ನೆಮ್ಮದಿಯೊಂದಿಗೆ ಇದ್ದರೆ, 25 ವರ್ಷಗಳಲ್ಲಿ ಪ್ರಜಾಸಂಖ್ಯೆ ದ್ವಿಗುಣವಾಗುತ್ತದಂತೆ. ಈ ಜನರ ಜೀವನ ನೆಮ್ಮದಿಗೊಂಡಷ್ಟು ಇವರ ಸಂಖ್ಯೆ ವೃದ್ಧಿಯಾಯಿತು. ಹೊಸ ಜಮೀನುಗಳನ್ನು, ಹೊಸ ಹುಲ್ಲುಗಾವಲುಗಳನ್ನು, ಪ್ರದೇಶಗಳನ್ನು, ದೇಶ ಗಳನ್ನು, ಈ ಅಧಿಕ ಜನರ ಆಹಾರಕ್ಕಾಗಿ, ನೆಲೆಗಾಗಿ, ಹುಡುಕಬೇಕಾಯಿತು; ವಲಸೆ ಎತ್ತುತ್ತಿರಬೇಕಾಯಿತು. ಆರ್ಯರು ಯೂರೋಪಿಗೂ, ಪೂರ್ವ ಏಷ್ಯಾಕ್ಕೂ ವಲಸೆ ಎತ್ತಿದ್ದು ಈ ಕಾರಣಗಳಿಂದಲೇ. ಆದರೆ ವಲಸೆ ಎತ್ತಿದ ಮಾತ್ರಕ್ಕೆ, ಅವರ ಸಂಪ್ರದಾಯ, ನಡೆ, ನುಡಿ, ನಡೆವಳಿಕೆ, ಸಂಸ್ಕೃತಿ ಬಿಡು ವುದಕ್ಕೆ ಆಗುತ್ತದೆಯೆ ? ಆರ್ಯರೂ ಕೂಡ ತಾವು ಹೋದ ಕಡೆಗೆ ತಮ್ಮ ದನಗಳನ್ನಲ್ಲದೆ, ಸಾಗಿಸಬಹುದಾದ ಆಸ್ತಿ ಪಾಸ್ತಿಗಳನಲ್ಲದೆ, ತಮ್ಮ ಭಾಷೆ, ಕಥೆಗಳು ಮತ್ತು ಸಂಸ್ಕೃತಿಯನ್ನು ಕೊಂಡೊಯ್ದು ಈ ಹೊಸ ಪ್ರದೇಶಗಳಲ್ಲಿ ಅವನ್ನು ನೆಡಲು, ಸ್ಥಾಪಿಸಲು, ಪ್ರಯತ್ನಪಟ್ಟರು. ಅವರು ಹೋದ ಪ್ರದೇಶ ಗಳಲ್ಲಿ ಜನ ಹೆಚ್ಚಾಗಿಲ್ಲದಿದ್ದರೆ, ಆ ಜನ ಬಹಳ ಹಿಂದುಳಿದಿದ್ದರೆ, ಆ ಜನಕ್ಕೆ ತಮ್ಮದೇ ಆದ ಸಂಸ್ಕೃತಿ ನಾಗರಿಕತೆ ಇಲ್ಲದಿದ್ದರೆ, ಆರ್ಯರು ತಮ್ಮ ನಡೆನುಡಿ ಸಂಸ್ಕೃತಿಗಳನ್ನು ಅವರ ಮೇಲೆ ಹೊರಿಸಲು ಸುಲಭವಾಗಿತ್ತು. ಆದರೆ, ಆ ಜನರೂ ಸುಸಂಸ್ಕೃತರಾಗಿದ್ದರೆ, ಸ್ಥಳದ ಜನರಿಗೂ, ಹೊರಗಿನ ಬಂದ ಆರ್ಯರಿಗೂ ಯುದ್ಧವಾಗುತ್ತಿತ್ತು. ಆರ್ಯರು, ಹಾಲು ಕುಡಿದು, ತುಪ್ಪ ತಿಂದು, ಹುಲ್ಲುಗಾವಲುಗಳಲ್ಲಿ ಓಡಾಡಿ ಗಟ್ಟಿ ಮುಟ್ಟಾಗಿದ್ದರು; ಯುದ್ಧ ಮಾಡುವುದರಲ್ಲಿ ಚತುರರಾಗಿದ್ದರು ; ಯುದ್ಧಕ್ಕೆ ಬೇಕಾದ ಆಯುಧಗಳನ್ನು ರೂಪಿಸಿಕೊಂಡಿದ್ದರು. ಇವರ ಮುಂದೆ, ನಿರ್ಬಲರಾದ, ಯುದ್ಧಗಳನ್ನು ಹೂಡಲು ತಿಳಿಯದ ಜನ, ಹಿಂದಕ್ಕೆ ಸರಿಯಬೇಕಾಗಿತ್ತು. ಆರ್ಯರಿಗೆ ಸೋತು, ತಮ್ಮ ದೇಶಗಳನ್ನು ಒಪ್ಪಿಸಿ, ಗುಡ್ಡಗಾಡುಗಳನ್ನು ಸೇರುತ್ತಿದ್ದರು. ಇಲ್ಲವೇ ಆರ್ಯರ ದಾಸರಾಗುತ್ತಿದ್ದರು. ಆರ್ಯರು ಪಶುಪಾಲಕರು. ಬೇಸಾಯ ಮಾಡಲು ಅವರ ಜೀವನ ಕ್ರಮಕ್ಕೆ ಅನಾನುಕೂಲ. ಬೇಸಾಯ ದುಡಿಮೆಯ ಕೆಲಸ. ಮೈ ಬಗ್ಗಿ ಮಾಡುವ ಕೆಲಸ. ನಿಂತಲ್ಲೆ ಇದ್ದು, ಉಳುಮೆಯಿಂದ ಹಿಡಿದು ಒಕ್ಕಣೆಯವರಿವಿಗೂ ಗಮನ ಕೊಟ್ಟು, ಕಾಲ ಕಾಲಕ್ಕೆ, ಕೆಲಸಗಳಲ್ಲೇ ನಿರತರಾಗಬೇಕಾದ್ದು ಬೇಸಾಯ. ಅಲ್ಲದೆ, ಆಗಿನ ಕಾಲದಲ್ಲಿ, 4-5 ಸಾವಿರ

ವರ್ಷಗಳ ಕೆಳಗೆ, ಕಬ್ಬಿಣದ ಬಳಕೆ, ಉಪಯೋಗ ಇನ್ನೂ ತಿಳಿದಿರಲಿಲ್ಲ. ಕಬ್ಬಿಣವಿಲ್ಲದೆ ಮರದ ತುಂಡುಗಳಿಂದ ಜಮೀನುಗಳನ್ನು ಅಗೆಯುವುದು, ಹದಗೊಳಿಸುವುದು ಬಹಳ ಕಷ್ಟದ ಕೆಲಸ. ಇಂತಹ ಕೆಲಸಗಳಿಗೆ, ಆರ್ಯರ ಮನಸ್ಸು ಒಗ್ಗದು. ಅವರ ಕಸುಬಾದರೋ, ಪಶುಪಾಲನೆಯಾದರೊ, ಬೇಸಾಯಕ್ಕಿಂತ ಅತಿ ಸುಲಭ. ದನವನ್ನು ಅಟ್ಟಿಕೊಂಡು ಹೋಗಿ ಮೇಯಿಸುವುದು ಮತ್ತೆ ರೊಪ್ಪಕ್ಕೆ ಸೇರಿಸುವುದು, ಹಾಲು ಕರೆಯುವುದು, ತುಪ್ಪ ಮಾಡುವುದು ಹಗುರವಾದ ಕೆಲಸ. ಆದುದರಿಂದ, ಆರ್ಯರು ಗೆದ್ದ ಪ್ರದೇಶಗಳಲ್ಲಿ ಅಲ್ಲಿಯ ಮೂಲ ಜನರನ್ನು ದಾಸರನ್ನಾಗಿ ಮಾಡಿಕೊಂಡು, ಅವರಿಂದ ಬೇಸಾಯ ಮಾಡಿಸಿ, ತಮ್ಮ ಗಮನವನ್ನೆಲ್ಲಾ ಪಶುಪಾಲನೆ, ರಥಪಂದ್ಯ, ಯುದ್ಧ ಸನ್ನಾಹಗಳ ಕಡೆ ಹರಿಸುತ್ತಿದ್ದರು.

ಗೋಪಾಲಕರಾದ ಆರ್ಯರು ಯುದ್ಧ ಪ್ರೇಮಿಗಳಾಗಿರಲೇಬೇಕು. ಜಮೀನೇ ಆಸ್ತಿಯಾಗಿರುವ ಬೇಸಾಯಗಾರರಲ್ಲಿ ಕಳವು ಎಲ್ಲಿಬಂತು. ಜಮೀನನ್ನು ಯಾರು ಕದ್ದು ಕೊಂಡೊಯ್ಯುತ್ತಾರೆ. ಯಾವಾಗ ಕಳವು ಇಲ್ಲವೋ ಕಲಹವೂ ಕಡಿಮೆ. ಕಲಹ ಇಲ್ಲದಿದ್ದರೆ, ಕಲಹಗಳಿಗೆ ಬೇಕಾದ ಆಯುಧಗಳೇಕೆ, ಹಿಂಬಾಲಕರೇಕೆ, ಸೈನಿಕರು ಏಕೆ, ಚದುರಂಗ ಬಲವೇಕೆ. ಬೇಸಾಯ ಮಾಡುವವರಿಗೆ, ಯುದ್ಧ ಮಾಡಲು ಬಿಡುವೆಲ್ಲಿ ? ನಿರಂತರವೂ ಅವರ ಗಮನ, ಶ್ರಮ, ಹೊಲ ಗದ್ದೆಗಳಲ್ಲಿರುವಾಗ, ಈ ಯುದ್ಧದ ಹವ್ಯಾಸಕ್ಕೆ ಪುರಸೊತ್ತೆಲ್ಲಿ ? ಹೀಗಾಗಿ, ಬೇಸಾಯಗಾರರು ಶಾಂತಿ ಪ್ರಿಯರಾದರು. ಸೌಮ್ಯರಾದರು.

ಆದರೆ ಪಶುಪಾಲಕರ ಕ್ರಮವೇ ಬೇರೆ. ದನಗಳನ್ನು ಸುಲಭವಾಗಿ ಕದಿಯಬಹುದು. ದನವೇ ಆಸ್ತಿಯಾಗಿದ್ದವರಲ್ಲಿ ಗೋ ಅಪಹರಣ, ಬಹಳ ಸಾಮಾನ್ಯ. ಈ ಕಳುವುನಿಂದ ಮನಸ್ತಾಪ, ಜಗಳ, ಕಾದಾಟ, ಹೋರಾಟ, ಮಾರಾಮಾರಿ, ಕಲಹ, ಯುದ್ಧ ಸಾಮಾನ್ಯವಾಗಲೇಬೇಕು. ಯುದ್ಧಕ್ಕೆ ಬೇಕಾದ ಅಸ್ತ್ರಗಳನ್ನು ರೂಪಿಸಿಕೊಳ್ಳುವುದು, ಶತ್ರುಗಳನ್ನು ಗೆಲ್ಲಲು ಉಪಾಯಗಳನ್ನು ಕಂಡು ಹಿಡಿಯುವುದು, ಅವರ ಗುಂಪುಗಳನ್ನು ಒಡೆಯುವುದು, ತಮ್ಮ ಗುಂಪನ್ನು ಹೆಚ್ಚಿಸಿಕೊಳ್ಳುವುದು, ಇವೇ ಮುಂತಾದ ಹವ್ಯಾಸಗಳು ಬೆಳೆಯಲೇಬೇಕು. ಬೆಳೆಸಲು ವಿರಾಮವೂ ಇದ್ದಿತು. ಹೀಗಾಗಿ ಯುದ್ಧ ಗೋಪಾಲಕರಿಗೆ ಕ್ರೀಡೆಯಾಯಿತು. ಧೈರ್ಯಕ್ಕೆ, ಸಾಹಸಕ್ಕೆ, ಕೆಚ್ಚಿಗೆ, ದೇಹ ಬಲಕ್ಕೆ,

ಕಷ್ಟಸಹಿಷ್ಣತೆಗೆ ಪುರಸ್ಕಾರ ಸಿಗುತ್ತ ಬಂತು. ಬಲಹೀನರಿಗೆ, ಹೇಡಿಗಳಿಗೆ, ಮೃದುಸ್ವಭಾವದವರಿಗೆ, ಶಾಂತಿಪ್ರಿಯರಿಗೆ ತಿರಸ್ಕಾರ ಸಿಕ್ಕಿತು. ಹೆಣ್ಣಿಗಿಂತ ಗಂಡಿಗೆ ಯುದ್ಧವಾಡುವ ಶಕ್ತಿ ಇರುವುದರಿಂದ ಈ ಗೋಪಾಲಕರಲ್ಲಿ ಗಂಡಿಗೇ ಹೆಚ್ಚು ಪ್ರಾಮುಖ್ಯ. ಗಂಡುಮಗುವಾದರೆ ಮನೆಯಲ್ಲಿ ದೀಪಾವಳಿ, ಸಿಹಿತಿಂಡಿ; ಹೆಣ್ಣುಮಗುವಾದರೆ ಮನೆಯಲ್ಲಿ ಕಗ್ಗತ್ತಲು. ಬೇಸಾಯಗಾರರಲ್ಲಿ ಹಾಗಲ್ಲ. ಅವರ ಸಂಸ್ಕೃತಿಯಲ್ಲಿ ಹೆಣ್ಣಿಗೆ ಪ್ರಶಸ್ತಿ. ಅನೇಕ ಬೇಸಾಯದ ಕೆಲಸಗಳಿಗೆ, ನಾಟಿ, ಕಳೆ ಕೀಳುವುದು, ಕುಯ್ಯಲು, ಒಕ್ಕಣೆ ಇವಕ್ಕೆಲ್ಲಾ ಹೆಣ್ಣು ಒಪ್ಪು. ಬೇಸಾಯಗಾರರಾಗಿದ್ದ ಹರಪ್ಪ ಜನರಲ್ಲಿ ಹೆಣ್ಣು, ದೇವಸ್ವರೂಪ–ಆದಿಶಕ್ತಿ. ಪಶುಪಾಲಕರಾದ ಆರ್ಯರಲ್ಲಿ ಗಂಡು ದೇವಸ್ವರೂಪ–ಬ್ರಹ್ಮ, ವಿಷ್ಣು, ಶಿವ ಎಲ್ಲರೂ ಗಂಡಸರೆ. ಆರ್ಯರು ಪುತ್ರಸಂತಾನಕ್ಕೆ ಹಾತೊರೆಯುವ ಜನ. ಪುತ್ರರಿಲ್ಲದೆ, ಸ್ವರ್ಗ ಪ್ರಾಪ್ತಿಯಿಲ್ಲ ಎಂಬ ಅಭಿಪ್ರಾಯ ಬೆಳೆಸಿಕೊಂಡ ಜನ.

ಹೀಗೆ ಗೋಪಾಲನೆ ಆರ್ಯರ ನಡೆನುಡಿ ಸಂಸ್ಕೃತಿ ಧರ್ಮವೆಲ್ಲದರ ಮೇಲೆ ಪರಿಣಾಮವುಂಟುಮಾಡಿತು. ಆದುದರಿಂದಲೇ ಇತಿಹಾಸಕಾರರು ಆರ್ಯರ ಸಂಸ್ಕೃತಿಯನ್ನೂ ಗೋಸಂಸ್ಕೃತಿಯೆಂದು ಕರೆಯುವುದು. ನಮ್ಮ ಪುರಾಣಗಳಲ್ಲಿ, ಗೋವಿನ ಆಸೆಗೆ ರಾಜರು, ಋಷಿಗಳು, ಎಲ್ಲರಲ್ಲೂ ಕಾಣಿಸುತ್ತದೆ. ಈ ಆಸೆಗೋಸ್ಕರ ಭಾರಿ ಭಾರಿ ಕಲಹಗಳೇ ನಡೆದ ಕತೆಗಳಿವೆ." "ಹೇಳು ಮಾವ ಈ ಕತೆಗಳನ್ನೂ"

"ಕತೆ ಅಂದರೆ ನಿನಗೆ ನಾಲ್ಕು ಕಿವಿ ಹುಟ್ಟಿಕೊಳ್ಳುತ್ತೆ, ಅಲ್ಲವೇ? ಎಲ್ಲಾ ಕತೆಗಳನ್ನು ಹೇಳುತ್ತ ಹೊರಟರೆ ದೊಡ್ಡ ಪುರಾಣವೇ ಆಗುತ್ತೆ. ಬಹಳ ಪ್ರಸಿದ್ಧವಾದ ಒಂದು ಕತೆಯನ್ನು ಮಾತ್ರ ಹೇಳ್ತೀನಿ—ವಸಿಷ್ಠ ವಿಶ್ವಾಮಿತ್ರರ ಜಗಳ. ವಸಿಷ್ಠ ಒಬ್ಬ ದೊಡ್ಡ ಋಷಿ. ಸಪ್ತಋಷಿ ಮಂಡಲದ ಋಷಿಗಳಲ್ಲಿ ಮುಖ್ಯ. ಇವನ ಹೆಂಡತಿ ಅರುಂಧತಿ. ಮದುವೆ ಸಮಯದಲ್ಲಿ ಮದವಣಿಗ, ಮದುವಣಗಿತ್ತಿ ಈ ವಸಿಷ್ಠ ನಕ್ಷತ್ರವನ್ನೂ ಅದರ ಅತಿ ಸಮೀಪದಲ್ಲೇ ಇರುವ ಅರುಂಧತಿಯ ನಕ್ಷತ್ರವನ್ನೂ ನೋಡಬೇಕು. ಅವರ ಬಾಳೂ ವಸಿಷ್ಠ–ಅರುಂಧತಿಯರಂತೆ ಅನ್ಯೋನ್ಯವಾಗಿರಬೇಕು ಎಂದೇ ಈ ನಕ್ಷತ್ರಗಳ ದರ್ಶನ; ಅದು ಹಾಗಿರಲಿ.

ವಸಿಷ್ಟ ಇದ್ದುದು ವಿಶ್ವಾಮಿತ್ರನ ರಾಜ್ಯದಲ್ಲಿ. ವಿಶ್ವಾಮಿತ್ರನು ಋಷಿಯಾಗುವುದಕ್ಕಿಂತ ಹಿಂದೆ ರಾಜನಾಗಿದ್ದ. ಮಹಾ ಪ್ರತಾಪಶಾಲಿ, ರಾಜ್ಯವನ್ನು ಚೆನ್ನಾಗಿ, ನ್ಯಾಯವಾಗಿ ಆಳುತ್ತಿದ್ದ. ಇವನ ಆಳ್ವಿಕೆಯಲ್ಲಿ ಪ್ರಜೆಗಳೆಲ್ಲರೂ ನೆಮ್ಮದಿಯಿಂದ ಸುಖವಾಗಿದ್ದರು. ಒಂದು ಬಾರಿ ಇವನು, ಹೆಂಡತಿ, ಮಕ್ಕಳು ಮತ್ತು ಸೈನ್ಯದೊಡನೆ ತನ್ನ ರಾಜ್ಯವನ್ನು ಪ್ರದಕ್ಷಿಣೆ ಮಾಡುತ್ತ ವಸಿಷ್ಟನಿದ್ದ ಆಶ್ರಮಕ್ಕೆ ಬಂದ. ಈ ಆಶ್ರಮ ಬಹಳ ಚೆನ್ನಾಗಿತ್ತು, ಬ್ರಹ್ಮಲೋಕದಂತೆ ಪ್ರಕಾಶಿಸುತ್ತ ಇತ್ತು.

ವಸಿಷ್ಟ ಋಷಿಯಾದರೂ, ತನ್ನ ದೇಶದ ದೊರೆ ವಿಶ್ವಾಮಿತ್ರನಿಗೆ ಸೂಕ್ತವಾದ ಸತ್ಕಾರವನ್ನು ಮಾಡಲು ಮನಸ್ಸು ಮಾಡಿದ. ವಿಶ್ವಾಮಿತ್ರ, ಈ ಋಷಿಯು ತನ್ನ ಅಪಾರವಾದ ಸೈನ್ಯ ಮತ್ತು ಹಿಂಬಾಲಕರಿಗೆ ಹೇಗೆ ಸತ್ಕರಿಸಿಯಾನು, ಎಲ್ಲಿಂದ ಅವರಿಗೆ ಅನ್ನ, ತುಪ್ಪ ಇತ್ಯಾದಿ ಒದಗಿಸಿಯಾನು ಎಂದು ಕುತೂಹಲಗೊಂಡ. ವಸಿಷ್ಟನ ಹತ್ತಿರ ಶಬಳೆ ಎಂಬ ಕೆಂದು ಬಣ್ಣದ ಒಂದು ಹಸು ಇತ್ತು. ಇದು ಸ್ವರ್ಗಲೋಕದ ಕಾಮಧೇನುವೆಂಬ ದೇವತೆಗಳ ಹಸುವಿನ ಮಗಳು. ವಸಿಷ್ಟ, ಈ ಹಸುವನ್ನು ಕರೆದು "ಶಬಳೆ ತಾಯಿ, ನಮ್ಮ ಮಹಾರಾಜ ವಿಶ್ವಾಮಿತ್ರ ನಮ್ಮ ಆಶ್ರಮಕ್ಕೆ ಬಂದಿದ್ದಾನೆ. ಅವನ ಪ್ರಜೆಗಳಾದ ನಾವು ಅವನಿಗೆ ತಕ್ಕ ಸತ್ಕಾರವನ್ನು ಮಾಡಬೇಕು. ಅವನ ಅಪಾರ ಹಿಂಬಾಲಕರಿಗೆ ಮೃಷ್ಟಾನ್ನಭೋಜನವನ್ನು ಏರ್ಪಾಡು ಮಾಡಲು ನಿನ್ನ ಕೈಯಿಂದಲೇ ಸಾಧ್ಯ. ನಮ್ಮ ಆಶ್ರಮದ ಗೌರವವನ್ನು ಕಾಪಾಡು" ಎಂದು ಆಜ್ಞೆಮಾಡಿದೆ. ಕಾಮಧೇನುವಿನ ಮಗಳಾದುದರಿಂದ, ಅತ್ಯಲ್ಪ ಕಾಲದಲ್ಲೆ ಪ್ರತಿಯೊಬ್ಬರೂ ದಣಿಯುವಂತೆ ಮೃಷ್ಟಾನಭೋಜನವನ್ನು ಬಡಿಸಿ ತಿನ್ನಿಸಿದಳು. ಈ ಚಮತ್ಕಾರವನ್ನು ನೋಡುತ್ತಿದ್ದ ವಿಶ್ವಾಮಿತ್ರ ಇಂತಹ ಸಕಲ ಇಷ್ಟಗಳನ್ನು ಪೂರೈಸಬಲ್ಲ ಶಬಳೆಯನ್ನು ತಾನು ಪಡೆದೇಪಡೆಯಬೇಕೆಂದು ನಿಶ್ಚಯಿಸಿದ. ವಸಿಷ್ಟನಿಗೆ "ನಿನಗೆ ಬೇಕಾದಷ್ಟು ಚಿನ್ನ, ಆನೆ, ಕುದುರೆ ಕೊಡುತ್ತೇನೆ. ಒಂದು ಕೋಟಿ ಹಸುಗಳನ್ನು ಕೊಡುತ್ತೇನೆ. ಶಬಳೆಯನ್ನು ನನಗೆ ಕೊಡು. ನಾನು ನಿನ್ನ ರಾಜ. ನನ್ನ ರಾಜ್ಯದಲ್ಲಿರುವ ಇಂತಹ ಹಸು, ರಾಜನಾದ ನನ್ನ ಹತ್ತಿರವೇ ಇರಬೇಕು" ಎಂದ. ವಸಿಷ್ಟ ಶಬಳೆಯನ್ನು ಕೊಡಲು ಒಪ್ಪಲಿಲ್ಲ. "ನನ್ನ ಆಶ್ರಮಕ್ಕೆ, ನನ್ನ ಶಿಷ್ಯರಿಗೆ, ನನ್ನ ಯಜ್ಞಗಳಿಗೆ ಈ ಹಸು ಬೇಕೇಬೇಕು. ಇದು

ನನಗೆ ದೇವತೆಗಳು ಕೊಟ್ಟ ಬಹುಮಾನ. ಇದೊಂದು ಹಸುವಿದ್ದರೆ ಸಾಕು. ನನಗೆ ಮತ್ತಾವ ಚಿನ್ನ, ರತ್ನ, ಕುದುರೆ, ಆನೆ ಬೇಕಿಲ್ಲ" ಅಂದ. ವಿಶ್ವಾಮಿತ್ರನಿಗೆ ಕೋಪ ಬಂತು. ತನ್ನ ಆಳುಗಳಿಗೆ 'ಶಬಳೆಯನ್ನು ಕಟ್ಟಿ ಎಳೆದುಕೊಂಡು ಹೋಗಿ' ಎಂದು ಆಜ್ಞಾಪಿಸಿದ. ಶಬಳೆಯ ದೈವಶಕ್ತಿಯಿಂದ, ಸೈನಿಕರು ಹುಟ್ಟಿ, ವಿಶ್ವಾಮಿತ್ರನ ಆಳುಗಳನ್ನೂ ಸೈನ್ಯವನ್ನೂ ಧ್ವಂಸಮಾಡಿದರು. ವಸಿಷ್ಟ ವಿಶ್ವಾಮಿತ್ರರಿಗೆ ದೊಡ್ಡ ಯುದ್ಧವೇ ಷುರುವಾಯಿತು. ಈ ಯುದ್ಧದಲ್ಲಿ ವಿಶ್ವಾಮಿತ್ರ ತನ್ನ ಸೈನ್ಯವೆಲ್ಲವನ್ನೂ, ಮಕ್ಕಳನ್ನೂ ಕಳೆದುಕೊಂಡು ಸೋತ. ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡಿ ವರಗಳನ್ನು ಪಡೆದು ಮತ್ತೆ ವಸಿಷ್ಟನ ಬಳಿ ಬಂದು ಯುದ್ಧವಾಡಿದ. ಆಗಲೂ ಸೋತ. ಕೊನೆಗೆ, ರಾಜ್ಯ ತೊರೆದು, ತಾನು ವಸಿಷ್ಟನಂತೆ ಬ್ರಹ್ಮಬಲವನ್ನು ಪಡೆಯಲು ಉಗ್ರ ತಪಸ್ಸು ಮಾಡಿ ಬ್ರಹ್ಮರ್ಷಿಯಾದ.

ಈ ಕಥೆಯನ್ನು ಯಾಕೆ ಹೇಳಿದೆ ಅಂದರೆ ಹಿಂದಿನ ಆರ್ಯರಿಗೆ, ಅವರು ರಾಜರೇ ಆಗಲೀ ಸಾಮಾನ್ಯರೇ ಆಗಲಿ, ಋಷಿಗಳೇ ಆಗಲೀ ಗೋವು ಇಷ್ಟ ದೇವತೆಯಾಗಿತ್ತು ಅನ್ನುವುದನ್ನು ತಿಳಿಸುವುದಕ್ಕೆ. ಗೋವು, ಬಯಸಿದ್ದನ್ನು ಕೊಡುವ ಕಾಮಧೇನುವಾಗಿತ್ತು

ಅದಕ್ಕೋಸ್ಕರವೇ ಆರ್ಯರಿಗೆ ಗೋದಾನಕ್ಕಿಂತ ಹಿರಿದಾದ ಮತ್ತಾವ ದಾನವೂ ಇರಲಿಲ್ಲ. ಇದಕ್ಕೆ ಒಂದು ಕತೆ ಇದೆ. ಅದನ್ನೂ ಹೇಳಿಬಿಡುತೀನಿ: ಈ ಕತೆ ಚ್ಯವನಮಹರ್ಷಿಗೆ ಸಂಬಂಧಪಟ್ಟದ್ದು. ಇವನೂ ಕೂಡ ಭೃಗು ಮಹರ್ಷಿಯ ಮಗ. ಒಕ್ಕಣ್ಣು ಶುಕ್ರಾಚಾರ್ಯರ ತಮ್ಮ. ಮಹಾತಪಸ್ವಿ. ಒಂದು ಬಾರಿ ಅವನು ಉಗ್ರತಪಸ್ಸಿನಲ್ಲಿದ್ದ. ಅವನ ಮೇಲೆ ಹುತ್ತವೇ ಬೆಳೆಯಿತು. ಕಣ್ಣುಗಳ ಮುಂದೆ ಮಾತ್ರ ಹುತ್ತದಲ್ಲಿ ಕಂಡಿ ಬಿಟ್ಟಿತ್ತು. ಒಂದು ಬಾರಿ ಅಲ್ಲಿಯ ರಾಜ ಶರ್ಯಾತಿ ಎಂಬುವನ ಮಗಳು, ಸುಕನ್ಯೆ, ಈ ವನಕ್ಕೆ ಆಟವಾಡಲು ಬಂದಳು; ಈ ಹುತ್ತಕ್ಕೆ ಬಂದಳು. ಹುತ್ತದ ಕಂಡಿಯಲ್ಲಿ ಎರಡು ಮಣಿ ಹೊಳಪುತ್ತಿತ್ತು. ಚೇಷ್ಟೆಯ ಹುಡುಗಿ. ಸುಮ್ಮನಿರದೆ ಒಂದು ಮುಳ್ಳಿನಿಂದ ಈ ಮಣಿಗಳನ್ನು ಕುಕ್ಕಿದಳು. ಅವಳು ಕುಕ್ಕಿದ್ದು ಚ್ಯವನ ಮಹರ್ಷಿಯ ಕಣ್ಣುಗಳು. ಋಷಿ ಕೋಪದಿಂದಲೂ, ನೋವಿನಿಂದಲೂ ಇವಳನ್ನೂ, ಇವಳ ತಂದೆಯನ್ನೂ ಶಪಿಸಿದ. ಈ ಶಾಪದಿಂದ ಪಾರಾಗಲು

ಸುಕನ್ಯೆ ಈ ಋಷಿಯನ್ನೇ ಮದುವೆಯಾಗಿ ಅವನ ಶುಶ್ರೂಷೆ ಮಾಡಿ ಅಶ್ವಿನಿ ದೇವತೆಗಳ ಸಹಾಯದಿಂದ ಅವನ ಕಣ್ಣುಗಳನ್ನೂ, ಯೌವನವನ್ನೂ ವಾಪಸ್ಸು ಪಡೆದಳು.

ಮತ್ತೊಮ್ಮೆ, ಈ ಋಷಿ ಮತ್ತೊಂದು ಉಗ್ರತಪಸ್ಸನ್ನು ಕೈಕೊಂಡ— ನದಿಯ ನಡುನೀರಿನಲ್ಲಿ ನಿಶ್ಚಲನಾಗಿ ನಿಂತು. ಅವನ ಮೇಲೆ ಪಾಚಿ ಕಟ್ಟಿತು. ಯಾವುದೋ ಮರದ ರೆಂಬೆಯೆಂದು ತಿಳಿದು ಅಲ್ಲಿಗೆ ಬಂದ ಬೆಸ್ತರು ಮೀನಿ ಗೋಸ್ಕರ ನದಿಯೊಳಕ್ಕೆ ಬಲೆ ಬೀಸಿದರು. ಈ ಬಲೆಗೆ ಚ್ಯವನ ಸಿಕ್ಕಿಕೊಂಡ. ಬೆಸ್ತರು ಬಲೆಯೆಳೆದಾಗಲೇ ಈ ಋಷಿಯನ್ನು ಕಂಡದ್ದು. ಒಬ್ಬ ಋಷಿ ಹೀಗೆ ಬೆಸ್ತರ ಬಲೆಗೆ ಸಿಕ್ಕಿಕೊಳ್ಳುವುದು ದೇಶಕ್ಕೆ ಹಾನಿ. ಇವನನ್ನು ಬಿಡಿಸಿಕೊಳ್ಳಲು ಅಲ್ಲಿಯೇ ವಿಹಾರಾರ್ಥವಾಗಿದ್ದ ನಹುಷನೆಂಬ ರಾಜ, ಬೆಸ್ತರಿಗೆ " ಈ ಋಷಿ ತೂಗುವಷ್ಟು ಚಿನ್ನವನ್ನು ಕೊಡುತ್ತೇನೆ. ಅವರನ್ನು, ಬಿಟ್ಟುಕೊಡಿ " ಅಂದ. ಅವರು ಒಪ್ಪಿದರು. ಚ್ಯವನನ್ನೂ ಒಂದು ತಕ್ಕಡಿತಟ್ಟೆಯಲ್ಲಿ ಕೂರಿಸಿ ಮತ್ತೊಂದರಲ್ಲಿ ಚಿನ್ನ ಹೇರಿದರು. ಎಷ್ಟು ಚಿನ್ನ ಹಾಕಿದರೂ ತಕ್ಕಡಿ ಏಳಲಿಲ್ಲ. ದಿಕ್ಕು ತೋಚದೆ ತನ್ನ ರಾಜ್ಯವನ್ನೆ ಅವರಿಗೆ ಒತ್ತೆ ಇಟ್ಟ. ಉಹುಂ. ತಕ್ಕಡಿ ಏಳಲಿಲ್ಲ. ಮುಂದೇನು ಮಾಡಬೇಕು ಎಂದು ಪೇಚಾಡುತ್ತಿದ. ಆಗ ಅಲ್ಲಿಗೆ ಗವಿಜಾತ ಎಂಬ ಮುನಿ ಬಂದ. ಅವನು ಹೇಳಿದ " ಈ ಚಿನ್ನವೂ ಬೇಕಿಲ್ಲ ; ರಾಜ್ಯವೂ ಬೇಕಿಲ್ಲ; ಚ್ಯವನಮಹರ್ಷಿಯನ್ನು ಬಿಡಿಸಿಕೊಳ್ಳಲು ಒಂದೇ ಮಾರ್ಗ. ಒಂದು ಹಸುವನ್ನು ಬೆಸ್ತರಿಗೆ ದಾನಮಾಡು " ಎಂದು ಹೇಳಿ ಹೊರಟುಹೋದ. ನಹುಷ ಹಾಗೆ ಮಾಡಲು, ತಕ್ಕಡಿ ಇದ್ದಕ್ಕಿದ್ದಂತೆ ಎದ್ದಿತು. ಚ್ಯವನನ ಬಿಡುಗಡೆಯಾಯಿತು." ಈ ಕತೆಯ ಅರ್ಥ ಗೋವು ಚಿನ್ನಕ್ಕಿಂತಲೂ, ರಾಜ್ಯಕ್ಕಿಂತಲೂ, ಸಕಲ ಐಶ್ವರ್ಯಗಳಿಗಿಂತಲೂ ಶ್ರೇಷ್ಟ ಎಂದು ತಿಳಿಸುವುದಕ್ಕಾಗಿ.

ಆರ್ಯರಿಗೆ ಗೋವು ಎಷ್ಟು ಮಹತ್ವದ ವಸ್ತು ಎನ್ನುವುದಕ್ಕೆ ಅವರ ಕೆಲವು ಪದಗಳೇ ಸಾಕ್ಷಿ. ಗೋತ್ರ ಅಂತ ಕರೆಯುತ್ತೇವಲ್ಲ, ಅದರ ಮೂಲ ಅರ್ಥ— ಗೋವಿನ ಕುಲ ಅಂತ. ಯಾವ ಗೋವಿನ ಮಂದೆಯವನು, ಯಾವ ಮಂದೆಯಿಂದ ಗೋವು ತಂದದ್ದು, ಕೊಟ್ಟದ್ದು, ಕೊಂಡದ್ದು, ಎಂಬುದನ್ನು ಸೂಚಿಸುವ ಪದ ಗೋತ್ರ. ಕ್ರಮೇಣ ಆ ಗೋವಿನ ಹೆಸರೇ ಗೋಪಾಲಕನ ಗೋತ್ರ

ವಾಯಿತು. ಋಷಿಗಳೂ ಕೂಡ ಗೋಪಾಲಕರಾಗಿದ್ದುದರಿಂದ ಅವರಿಗೆ ಅವರ ಕುಲಕ್ಕೆ, ಶಿಷ್ಯವರ್ಗಕ್ಕೆ ಈ ಗೋತ್ರದ ಹೆಸರು ಉಳಿದಿರಬಹುದು.

ಋಷಿಗಳು ಯಾಕೆ ಗೋವುಗಳನ್ನು ಸಾಕುತ್ತಿದ್ದರು—ತಪಸ್ಸು, ಪೂಜೆ ಪುನಸ್ಕಾರ ಬಿಟ್ಟು ? ಇದಕ್ಕೆ ಕಾರಣವಿದೆ. ಋಷಿಗಳು ನಿರಂತರವೂ ಹೋಮ ಮಾಡಬೇಕು ; ಯಜ್ಞಗಳನ್ನು ಮಾಡಬೇಕು. ಯಜ್ಞಕ್ಕೆ ತುಪ್ಪ, ಬೆಣ್ಣೆ, ಹಾಲು ಬೇಕೇಬೇಕು. ಇವಕ್ಕಾಗಿ ಅವರು ದನಗಳನ್ನು ಸಾಕಲೇಬೇಕು—ಗೋಪಾಲಕರಾಗಲೇಬೇಕು. ದನಗಳಿಗೆ ಮೇವು ಬೇಕಲ್ಲವೆ, ಮೇವಿಗೆ ಮಳೆ ಬೇಕು. ಋಷಿಗಳು ಯಜ್ಞ ಮಾಡುವ ಉದ್ದೇಶಗಳಲ್ಲಿ, ಲೋಕದಲ್ಲಿ ಮಳೆ ಬೆಳೆ ಸಮೃದ್ಧಿಯಾಗಿ ಇರಲೀ ಎಂಬುದೂ ಒಂದು.

ಋಷಿಗಳೊಬ್ಬರೇ ಅಲ್ಲ ಗೋಪಾಲನೆ ಮಾಡುತ್ತಿದ್ದದ್ದು. ರಾಜರೂ ಗೋಪಾಲಕರು ಆಗಿದ್ದರು. ಮೊದಮೊದಲು ದೊಡ್ಡ ಗೋಪಾಲಕರೇ ರಾಜರಾದರು ಅಂತ ಹಿಂದೆಯೇ ಹೇಳಿದ್ದೇನೆ. ಸೀತೆಯ ತಂದೆ ಜನಕಮಹಾರಾಜ, ರಾಮನ ಪೂರ್ವಿಕನೂ ಸಗರ ಚಕ್ರವರ್ತಿಯ ಮೊಮ್ಮಗನೂ ಆದ ದಿಲೀಪನೂ ಗೋಪಾಲಕರೇ ಆಗಿದ್ದರು.

ನಾವು ಮುದ್ದಾಗಿ ಮಕ್ಕಳನ್ನು ಹಲವಾರು ಹೆಸರುಗಳಿಂದ ಕರೆಯುವಂತೆ ಆರ್ಯರು ದನಗಳನ್ನೂ ಅನೇಕ ಹೆಸರುಗಳಿಂದ ಕರೆಯುತ್ತಿದ್ದರು. ಸಂಸ್ಕೃತದಲ್ಲಿ ಗೋವಿಗೆ ಎಷ್ಟು ಹೆಸರುಗಳಿವೆ ಎಂಬುದನ್ನು ಒಂದು ಬಾರಿ ಸಂಸ್ಕೃತದ ನಿಘಂಟಿನಲ್ಲಿ ನೋಡುತ್ತಿದೆ. ತಾಳು, ನನ್ನ ಜೇಬಿನ ಪುಸ್ತಕದಲ್ಲಿ ಗುರುತು ಮಾಡಿಕೊಂಡಿದ್ದೇನೆ......... ಆ. ಇಲ್ಲಿದೆ ಕೇಳು.

ಅಘ್ನ್ಯ (ಅಂದರೆ ಕೊಲ್ಲತಕ್ಕದಲ್ಲ), ರೋಹಿಣಿ (ಕೆಂಪು ಹಸು—ಅದಕ್ಕೋಸ್ಕರವೇ ರೋಹಿಣೀ ನಕ್ಷತ್ರವೂ ಕೆಂಪಗಿದೆ), ಮಹಾ (ಶ್ರೇಷ್ಠ), ಮಹೇಂದ್ರಿ (ಇಂದ್ರಾಣಿ), ಈಜ್ಯ (ಹೊಗಳತಕ್ಕದ್ದು), ದೋಧ್ರಿ (ಹಾಲು ಕೊಡತಕ್ಕದ್ದು), ಕಲ್ಯಾಣಿ, ಭದ್ರ (ಮಂಗಳಕರವಾದದ್ದು), ಧೇನು (ಬಯಸಿದ್ದನ್ನು ಕೊಡತಕ್ಕದ್ದು), ಭೂರಿಮಹೀ (ಭಾರಿ ಆಸ್ತಿ), ಪಾವನಿ (ಪುಣ್ಯವಾದದ್ದು), ಬಾಹುಳ (ಭಾಗ್ಯವನ್ನು ಹೆಚ್ಚಿಸುವುದು), ಅಧಿತಿ (ದೇವರುಗಳ ತಾಯಿ), ಜಗತಿ (ಜಗತ್ತು), ಸರಸ್ವ (ಗೊತ್ತಿಲ್ಲ), ಶರ್ಕರಿ (ಹಾಲಿನಲ್ಲಿ ಸಕ್ಕರೆ ಹೊಂದಿರುವುದು), ಶತಾದನ (ನೂರು ಜನರಿಗೆ ಪಾಯಸಕ್ಕೆ ಹಾಲು ಒದಗಿಸ

ತಕ್ಕದ್ದು), ರತ್ನ, ಕಾಮ್ಯ (ಕೇಳಿದ್ದನ್ನು ಕೊಡುವುದು), ಜ್ಯೋತಿ, ವಿಶ್ರುತಿ ಎಲ್ಲರ ಬಾಯಲ್ಲೂ ಹೊಗಳಿಸಿಕೊಳ್ಳುವುದು), ಹಯ್ಯ (ಅದೇ ಅರ್ಥ), ಚಂದ್ರ, ಸರಸ್ವತಿ, ವರ್ಷ (ಸುಲಭವಾಗಿ ವರ್ಷವಾಗುವುದು) ಇತ್ಯಾದಿ. ಈ ನಿಘಂಟಿ ನಲ್ಲಿ ಗೋ ಎಂಬ ಪದದಿಂದ ಬಂದ ಪದಗಳು ಒಂದು ಪುಟ ತುಂಬಿವೆ. ಗೋ ಎಂಬುದಕ್ಕೆ ಎಷ್ಟು ಅರ್ಥವಿದೆ ಗೊತ್ತೆ. ಹಾಲು, ನಕ್ಷತ್ರ, ಆಕಾಶ, ಸಿಡಿಲು, ಬೆಳಕಿನ ಕಿರಣ, ವಜ್ರ, ಸ್ವರ್ಗ, ಭೂಮಿ, ಮಾತು, ಪದ, ವಿದ್ಯೆ, ಸರಸ್ವತಿ, ಮಾತೆ, ಜಲ, ಕಣ್ಣು, ಸೂರ್ಯ, ಚಂದ್ರ ಇತ್ಯಾದಿ.

ಆರ್ಯರ ನಿತ್ಯಜೀವನ ಗೋಮಯವಾಗಿತ್ತು. ಗೋವಿಗೆ ಸಂಭಂದ ಪಟ್ಟ ಪ್ರತಿಯೊಂದು ವಸ್ತುವಿಗೂ ಒಂದು ಪ್ರತ್ಯೇಕ ಹೆಸರು. ದನದ ಕೊಟ್ಟಿಗೆಗೆ ಕನಿಷ್ಟ 9 ಹೆಸರು—ಗೋಗೋಷ್ಠ, ಗೋತೀರ್ಥ, ಗೋಧಾನಿ, ಗೋತ್ರ, ಗೋವಾಟ, ಗೋವಾಸ, ಗೋವ್ರಜ, ಗೊಶಾಲಾ, ಗೋಸ್ಥಾನ. ಸಗಣಿಗೂ ಅನೇಕ ಹೆಸರು—ಗೋಕೃತಂ, ಗೋಗ್ರಂಥಿ, ಗೋಪುರಿಷಂ, ಗೋಷಕೃತ್, ಗೋಹನಂ ಇತ್ಯಾದಿ.

ಇದು ಗೋವುಗಳ ವಿಷಯವಾಯಿತು. ಇನ್ನು ಗೋವಿನಿಂದ ಬರುವ ಉತ್ಪನ್ನಗಳ ಬಗ್ಗೆ ಆರ್ಯರಿಗೆ ಏನು ಇಷ್ಟ, ಆಸಕ್ತಿ, ಗೌರವ.

ಮಹಾವಿಷ್ಣುವಿನ ನೆಲೆ ಕ್ಷೀರಸಾಗರ—ಪಾಲ್ಗಡಲು, ಅಂತಲೇ ಅವನನ್ನು ಕ್ಷೀರಸಾಗರಶಯನ ಎನ್ನುವುದು. ಸಪ್ತ ಸಾಗರಗಳಲ್ಲಿ ಇದೂ ಒಂದು. ನೀನು ಸಮುದ್ರಮಥನದ ಕತೆ ಕೇಳಿರಲೇಬೇಕು."

"ಅಮ್ಮ ಒಂದು ಬಾರಿ ಹೇಳಿದ್ದಳು. ಮರೆತುಹೋಗಿದೆ,"

"ಕಳ್ಳ, ಮರೆಯುವವನೇ ನೀನು, ನನ್ನಿಂದ ಈ ಕತೆಯನ್ನು ಹೊರಡಿಸು ವುದಕ್ಕೆ ಈ ರೋಪುಹಾಕುತ್ತಿರುವುದು ನನಗೆ ಚೆನ್ನಾಗಿ ಗೊತ್ತು. ಹೋಗಲಿ, ಸೂಕ್ಷ್ಮವಾಗಿ ಹೇಳುತ್ತೇನೆ ಹಿಂದೆ ಹೇಳಿದೆನಲ್ಲ; ಅಧಿತಿ, ಧಿತಿ ಎಂಬ ಅಕ್ಕ ತಂಗಿಯರ ಮಕ್ಕಳಿಗೆ—ಸುರ ಅಸುರರಿಗೆ ದಾಯಾದಿ ಮತ್ಸರ ತುಂಬ. ಯಾವಾಗಲೂ ಜಗಳ. ಅಸುರರು ಬಲಾಢ್ಯರು. ಸುರರಿಗೆ ಆಗಾಗ್ಗೆ ಕಾಟ ಕೊಡುತ್ತಿದ್ದರು. ಇವರಿಂದ ಪಾರಾಗಲು ಸುರರು ವಿಷ್ಣುವಿನ ಮರೆಹೊಕ್ಕರು. ವಿಷ್ಣು ಒಂದು ಉಪಾಯ ಹೇಳಿದ. "ಕ್ಷೀರಸಾಗರವನ್ನು ಕಡೆದರೆ ಅಮೃತ ಬರುತ್ತೆ. ಇದನ್ನು ಉಂಡವರು ಸಾಯುವುದಿಲ್ಲ. ಅಸುರರಿಗೆ ಇದು ಸಿಗದಂತೆ

ಮಾಡಿ ನೀವು ಕುಡಿದಿದ್ದೇ ಆದರೆ ಅವರಿಂದ ನಿಮಗೆ ಭಯವೇ ಇರುವುದಿಲ್ಲ." ಆದರೆ ಇಂತಹ ಮಹಾಸಾಗರವನ್ನು ಕಡೆಯುವುದೆಂತು? ಮತ್ತುಕೋಲು ಯಾವುದು, ಹುರಿ ಎಲ್ಲಿಂದ. ಅದಕ್ಕೂ ವಿಷ್ಣು ಸಲಹೆ ನೀಡಿದ. ಮಂದಪರ್ವತ ವನ್ನು ಎತ್ತಿ ಮತ್ತುಕೋಲಾಗಿಯೂ, ಆದಿಶೇಷನನ್ನು ಹುರಿಯಾಗಿಯೂ ಮಾಡಿಕೊಂಡು, ಕಡೆಯಿರಿ. ನಿಮ್ಮ ದಾಯಾದಿಗಳಿಗೆ ಅಮೃತದ ಆಸೆ ಹುಟ್ಟಿಸಿ ಅವರ ಸಹಾಯದಿಂದ ಈ ಪರ್ವತವನ್ನು ಎತ್ತಿ" ಅಂತ. ಅಮೃತದ ಆಸೆಗೆ ದಾಯಾದಿಗಳು ಒಂದುಗೂಡಿ, ಮಂದರಪರ್ವತವನ್ನು ಎತ್ತಿ ತಂದು, ಆದಿಶೇಷ ನನ್ನು ಅದಕ್ಕೆ ಬಿಗಿದು ಕಡಲನ್ನು ಕಡೆಯಲು ಆರಂಭಿಸಿದರು. ಮೊದಲು ಹಾಲಾಹಲವೆಂಬ ವಿಷ ಉಕ್ಕಿತು. ಸುರರೂ, ಅಸರರೂ ನಾಶವಾಗುವುದ ರಲ್ಲಿದ್ದರು. ಆಗ, ಶಿವ ಅದನ್ನು ನುಂಗಿ ಗಂಟಲಲ್ಲೇ ಇರಿಸಿಕೊಂಡು ವಿಷಕಂಠ, ನೀಲಕಂಠನಾದ. ಆಮೇಲೆ ಈ ಮಥನದಿಂದ ಲಕ್ಷ್ಮಿ, ಕಾಮಧೇನು, ಧನ್ವಂತರಿ ಬಂದರು. ಲಕ್ಷ್ಮಿ ಮಹಾವಿಷ್ಣುವನ್ನು ಸೇರಿದಳು. ಕಾಮಧೇನು ಇಂದ್ರ ಲೋಕದ ಹಸುವಾಯಿತು. ಧನ್ವಂತರಿ ದೇವತೆಗಳ ವೈದ್ಯನಾದ. ಕೊನೆಗೆ ಅಮೃತ ಬಂತು. ಅಲ್ಲಿಯತನಕ ಒಗ್ಗೂಡಿ ಕೆಲಸ ಮಾಡಿದ ದಾಯಾದಿಗಳಿಗೆ ಇದರ ಹಂಚಿಕೆ ವಿಷಯದಲ್ಲಿ ಜಗಳ ಬಂತು. ವಿಷ್ಣು, ಇನ್ನೊಂದು ಉಪಾಯ ವನ್ನು ಹುಡುಕಿದ. ಮೋಹಿನಿ ವೇಶ ಹಾಕಿಕೊಂಡು ಅಮೃತವನ್ನು ಬಡಿಸಿದ. ಅಸುರರು ಮೋಹಿನಿ ರೂಪವನ್ನು ನೋಡುತ್ತಲೇ, ಏನು ಬಡಿಸುತ್ತಾಳೆಂಬುದನ್ನು ಗಮನಿಸಲಿಲ್ಲ. ಮೋಹಿನಿ ಅಮೃತವನ್ನು ಸುರರಿಗೆ ಮಾತ್ರ ಬಡಿಸಿ, ಅದರಂತಿ ರುವ ಬೇರೊಂದು ವಸ್ತುವನ್ನು ಅಸುರರಿಗೆ ಬಡಿಸಿದಳು. ಸುರರು ಅಮರ ರಾದರು. ಅಸುರರನ್ನು ಸಂಹಾರ ಮಾಡಿದರು.

ಈ ಕತೆಗೆ ಬಹಳ ಅರ್ಥವಿದೆ. ಹಾಲು ಅಮೃತಪ್ರಾಯ. ಜನ ಗಳನ್ನು ಚಿರಂಜೀವಿಗಳಾಗಿ, ಆರೋಗ್ಯಕರವಾಗಿ, ಧೃಡವಾಗಿ, ಬುದ್ಧಿವಂತಿ ಗಳಾಗಿ ಮಾಡುವ ವಸ್ತು. ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ ಜೀವ ಭಾಗ್ಯ ಕೊಡತಕ್ಕ ವಸ್ತು. ಹಾಲಿನಿಂದ ಸಂಪತ್ತು; ಹಾಲು ಲಕ್ಷ್ಮಿ; ಹಾಲಿ ನಿಂದ ಇಷ್ಟಾರ್ಥಸಿದ್ಧಿ; ಕುಡಿದು ಲವಲವಿಕೆಯಿಂದ ಇಷ್ಟವಾದುದನ್ನು ಪಡೆ ಯುವ ಸಾಮರ್ಥ್ಯ; ಹಾಲು, ಕಾಮಧೇನು; ಹಾಲಿನಿಂದ ಎಲ್ಲರೂ ಆರೋಗ್ಯ ವಾಗಿರಲು ಸಾಧ್ಯ; ಹಾಲು, ಧನ್ವಂತರಿ.


ಹಾಲು ಬೆಣ್ಣೆ ಅಮೃತಪ್ರಾಯ.

ಹಾಲಿನ ಬಗ್ಗೆ ಆರ್ಯರಿಗೆ ಅಷ್ಟು ಗೌರವವಿದ್ದುದರಿಂದಲೋ ಏನೋ ಈ ಸಮುದ್ರಮಥನದ ಕತೆಯನ್ನು ಕಟ್ಟಿರಬೇಕು.

ಅವರ ಧರ್ಮಶಾಸ್ತ್ರದ ಪ್ರಕಾರ—ಮನುಧರ್ಮಶಾಸ್ತ್ರದ ಪ್ರಕಾರ, ತಂದೆಯು, ಪ್ರತಿಯೊಬ್ಬ ಮಗನಿಗೂ, ಕನಿಷ್ಟ 10 ದನಗಳನ್ನಾದರೂ ಬಿಟ್ಟು ಹೋಗಬೇಕು ಎಂಬ ನಿಯಮವಿದೆ. ಕಿಟ್ಟಿಗೆ, ಭಾವ ಹತ್ತು ದನಗಳನ್ನಾದರೂ ಕೊಡಬೇಕಲ್ಲವೇ. ನಿಮ್ಮ ತಂದೆ ನಿನಗೆ 10 ದನಗಳನ್ನು ಕೊಡಿಸಿಕೊಟ್ಟರೆ ಅವನ್ನು ಸಾಕುತ್ತೀಯಾ."

"ದೊಡ್ಡವನಾದ ಮೇಲೆ ಸಾಕುತ್ತೇನೆ. ಈಗ ಕರು ಸಾಕಬಲ್ಲೆ. ಅದನ್ನು ಹೇಗೆ ಸಾಕಬೇಕು ಅನ್ನುವುದನ್ನು ನಿನ್ನಿಂದ ತಿಳಿದುಕೊಳ್ಳಬೇಕು."

ತಿಳಿದುಕೊಳ್ಳುವಿಯಂತೆ. ಈಗ ಆರ್ಯರ ಕತೆ, ಪುರಾಣ ಮುಗಿಯಿತು. ಮಧ್ಯಾಹ್ನ ಆರ್ಯರ ದನಗಳ ಪರಿಚಯವನ್ನಾದರೂ ಮಾಡಿಕೊಳ್ಳೋಣ. ನನ್ನ ಕತೆ ಬೆಳೆಸಬಾರದು ಅಂತ ಎಷ್ಟು ಹಿಡಿದರೂ ಬೆಳೆಯುತ್ತಲೇ ಇದೆ. ನಡಿ ಊಟ ರೆಡಿಯಾಗಿರಬೇಕು."



ಚಿತ್ರ ೧೪. ಆರ್ಯರ ವಲಸೆ ಮಾರ್ಗ ಮತ್ತು ಭಾರತದ ದನದ ತಳಿಗಳ ಹರವು

೭. ರಾಮಣ್ಣ ಆರ್ಯರ ಕತೆ ಆರಂಭಿಸಿದ

ಊಟ ಲಘುವಾಗಿಯೇ ಇತ್ತು. 2-3 ದಿವಸದ ಹಬ್ಬದ ಊಟವಾದ ಮೇಲೆ, ಈ ಲಘು ಊಟ ಹಿತಕರವಾಗಿಯೇ ಇತ್ತು. ಹೊಟ್ಟೆ ಭಾರವಿಲ್ಲವಾದುದರಿಂದ, ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು, ರಾಮಣ್ಣ ಆರ್ಯರ ದನಗಳ ಕತೆಯನ್ನು ಆರಂಭಿಸಿದ.

" ಆರ್ಯರು ಭಾರತಕ್ಕೆ ಬಂದಾಗ ಯಾವ ಯಾವ ಬಗೆಯ ದನಗಳನ್ನು ತಂದರೋ ತಿಳಿಯದು. ಆದರೆ, ಅವರು ನಮ್ಮ ದೇಶಕ್ಕೆ ಬರುವ ಹೊತ್ತಿಗೆ ಅವರಲ್ಲಿ ಕೆಲವು ತರಹ ಹಸುಗಳು ಇದ್ದಿರಬೇಕು ಅನ್ನುವುದಕ್ಕೆ ಅಮರಕೋಶ ಸಾಕ್ಷಿ. ಅದರಲ್ಲಿ, ಶ್ಯಬಳೀಧವಳಾದಯಃ, ಅಂತಿದೆ. ಶ್ಯಬಳಿ ಅಂದರೆ ಚುಕ್ಕೆ ಇರುವ ದನ, ಬಣ್ಣದ ದನ ಅಂತ. ಧವಳ ಅಂದರೆ ಬಿಳಿಯದು. ವಸಿಷ್ಟನ ಹಸು, ಕಾಮಧೇನುವಿನ ಮಗಳ ಹೆಸರು ಶ್ಯಬಳೆ ಅಂತ ಇರುವುದರಿಂದ ಆರ್ಯರಲ್ಲಿ ಬಿಳಿಯ ದನಗಳಲ್ಲದೆ ಬಣ್ಣದ ದನಗಳೂ ಇದ್ದಿರಬೇಕು. ಆದರೆ ಯಾವ ಕಾರಣದಿಂದಲೋ ಏನೋ ಆರ್ಯರ ದನಗಳ ಈಗಿನ ತಳಿಗಳು ಬೆಳ್ಳಗೇ ಇರುತ್ತವೆ. ಬಣ್ಣದ ದನಗಳನ್ನು ಅವರು ಮೋಹಿಸದಂತಿಲ್ಲ.

ಆರ್ಯರ ಮೂಲದನಗಳ ಯಾವುವಾದರೂ, ಆ ದನಗಳಿಂದ 9 ಸ್ಪಷ್ಟ ತಳಿಗಳು ರೂಪಗೊಂಡಿವೆ. ಈ ತಳಿಗಳ ಈಗಿನ ತವರನ್ನು ಭಾರತದ ಭೂಪಟದ ಮೇಲೆ ಗುರುತು ಮಾಡಿದರೆ ಒಂದು ತಮಾಷೆ ವಿಷಯ ಎದ್ದು ಕಾಣುತ್ತೆ. ಆರ್ಯರು ಇಂಡಿಯಾಕ್ಕೆ ಹಿಂದೂಕುಷ್ ಪರ್ವತದ ಕಣಿವೆಗಳ ಮೂಲಕ ಬಂದರಲ್ಲವೆ ? ಅವರು ಮೊದಲು ನೆಲೆಸಿದ್ದು ಈಗಿನ ಪಂಜಾಬಿನಲ್ಲಿ

–ಸಪ್ತ ಸಿಂಧು ಪ್ರದೇಶದಲ್ಲಿ. ಇಲ್ಲಿ ನೆಲೆಸಿದ್ದಾಗಲೇ ಋಗ್ವೇದ ರೂಪಗೊಂಡದ್ದು. ಋಗ್‌ವೇದದಲ್ಲಿ ಗಂಗಾ, ಯಮುನಾ ನದಿ ಪ್ರಸ್ತಾಪವಾಗಲೀ, ಅಕ್ಕಿಯ ಹೆಸರಾಗಲೀ ಇಲ್ಲ. ಕಾರಣ : ಇವು ಆಗಿನ ಆರ್ಯರಿಗೆ ತಿಳಿಯದು. ಇಲ್ಲಿ ನೆಲೆಸಿದ ಬಹು ವರ್ಷಗಳಾದ ಮೇಲೆ, ಅವರ ಜನಸಂಖ್ಯೆ ಹೆಚ್ಚಿದಂತೆ, ಆರ್ಯರ ಕೆಲವು ಕುಲಗಳು ಪೂರ್ವಕ್ಕೂ ದಕ್ಷಿಣಕ್ಕೂ ವಲಸೆ ಎತ್ತಿದವು. ಪೂರ್ವಕ್ಕೆ ಗಂಗಾ ಯಮುನಾ ಬಯಲಿನಲ್ಲಿ ಹರಡಿಕೊಂಡರು. ದಕ್ಷಿಣಕ್ಕೆ ಚೆಂಬಾಲ್ ನದೀ ಕಣಿವೆ ಮೂಲಕ ಮಾಳವ ಪ್ರದೇಶವನ್ನು ಆಕ್ರಮಿಸಿಕೊಂಡರು. ಅಲ್ಲಿಂದ ನರ್ಮದಾ ಕಣಿವೆಗೂ, ತಪತೀನದೀ ಮುಖದ ಕಡೆಗೂ ಹೋದರು. ಪೂರ್ವಕ್ಕೆ ಹೋದ ಆರ್ಯರಲ್ಲಿ ಕೆಲವರು ಬಿಹಾರ್ ಸೇರುವುದಕ್ಕೆ ಮುಂಚೆಯೆ ದಕ್ಷಿಣಕ್ಕೆ ವಿಂಧ್ಯಪರ್ವತದ ಕಡೆ ಬಂದರು. ಅದನ್ನು ಕ್ರಮೇಣ ದಾಟಿ ಗೋದಾವರಿ ಕೃಷ್ಣಾ ನದಿ ಕಣಿವೆಗಳಿಗೆ ಹರಡಿದರು. ಇವರ ವಲಸೆ ಮಾರ್ಗವನ್ನು ಭೂಪಟದ ಮೇಲೆ ಗುರುತು ಮಾಡಿ, ತಳಿ ಗುರುತಿಸಿದ ಭೂಪಟವನ್ನು ಇದರೊಂದಿಗೆ ನೋಡಿದರೆ ನಾನು ಹೇಳಿದ ತಮಾಷೆ ವಿಷಯ ವ್ಯಕ್ತವಾಗುತ್ತೆ. ಆರ್ಯರು ಯಾವ ಮಾರ್ಗಗಳಲ್ಲಿ ಹೋದರು, ಎಲ್ಲೆಲ್ಲಿ ನೆಲೆಸಿದರು ಅಲ್ಲಿ ಆರ್ಯರ ದನಗಳ ತಳಿಗಳು ಇಂದಿಗೂ ಇವೆ. ಈ ತಳಿಗಳಿಗೂ ಹರಪ್ಪ ಜನರ ತಳಿಗಳಿಗೂ ಸ್ಪಷ್ಟವಾದ ವ್ಯತ್ಯಾಸಗಳಿರುವುದರಿಂದ, ಚರಿತ್ರೆ ಓದದೆಯೇ ಆರ್ಯರು ಯಾವ ಯಾವ ಮಾರ್ಗಗಳ ಮೂಲಕ ಎಲ್ಲೆಲ್ಲಿ ಪ್ರಸರಿಸಿದರು ಎಂಬುದನ್ನು ಅವರ ದನದ ತಳಿಗಳಿಂದಲೇ ಹೇಳಬಹುದು. (ಚಿತ್ರ 14)

ಇನ್ನು ಈ ದನಗಳನ್ನು ವರ್ಣಿಸೋಣ.

ಮೊದಲು ಹರಿಯಾಣ ತಳಿ. ಇದೇ ಆರ್ಯರು 3500 ವರ್ಷಗಳ ಹಿಂದೆ ತಮ್ಮೊಡನೆ ತಂದ ಮೂಲ ತಳಿಯೆಂದು ಕೆಲವು ಪ್ರವೀಣರು ಹೇಳುತ್ತಾರೆ. ಈ ತಳಿಯನ್ನು ಹರಿಯಾಣ ತಳಿಯೆಂದು ಕರೆಯುತ್ತಿರುವುದು ಈಚೆಗೆ. ಕುರುಕ್ಷೇತ್ರ, ಪಾಣಿಪಟ್ ಮುಂತಾದ ಪುರಾಣ ಇತಿಹಾಸ ಪ್ರಸಿದ್ಧವಾದ ಸ್ಥಳಗಳಿರುವುದು ಈ ಹರಿಯಾಣ ಪ್ರಾಂತದಲ್ಲೇ. ಈ ಪ್ರದೇಶಕ್ಕೆ ಹರಿಯಾಣ ಎಂಬ ಹೆಸರು ಯಾಕೆ ಬಂತು ಗೊತ್ತೆ? ಹರಿ–ಹರಿತ್ತು–ಹಸುರು ಇದರ ಪಸರ—ಹಸಿರು ತುಂಬಿದ ಪ್ರದೇಶ ಅಂತ. ಆರ್ಯರ ಕಾಲದಲ್ಲಿ ಇದು ಹೆಚ್ಚು ಹಸುರಿನ ಹುಲ್ಲುಗಾವಲುಗಳಿಂದ ತುಂಬಿತ್ತು. ಸರಸ್ವತೀ ನದಿಯ ಬಯಲಾ

ಗಿತ್ತು. ಜಲ ಸಮೃದ್ಧಿ, ತೃಣ (ಹುಲ್ಲು) ಸಮೃದ್ಧಿಯ ಪ್ರದೇಶ. ಈ ಪ್ರದೇಶದಲ್ಲೇ ಪಾಂಡವರು, ಕೌರವರು ಹುಟ್ಟಿದ್ದು, ಬೆಳೆದದ್ದು, ಕಾದಾಡಿದ್ದು, ಅಳಿದದ್ದು. ಇಂದ್ರಪ್ರಸ್ಥ—ಈಗಿನ ದೆಹಲಿ, ಹಸ್ತಿನಾಪುರ, ಈ ಹರಿಯಾಣ ಪ್ರದೇಶಕ್ಕೆ ಸೇರಿದ್ದು.

ಈ ಹರಿಯಾಣ ತಳಿ, ಎತ್ತಿನ ತಳಿಯೂ ಹೌದು, ಹಾಲಿನ ತಳಿಯೂ ಹೌದು. ಈ ಎರಡು ಉದ್ದೇಶಗಳನ್ನೂ ಪೂರೈಸುವುದರಿಂದ ಈ ತಳಿ ಹರಿಯಾಣದವರಿಗೆ ಮಾತ್ರವಲ್ಲ; ಅಕ್ಕಪಕ್ಕದ ಪ್ರದೇಶದ ರೈತರಿಗೂ ಅಚ್ಚುಮೆಚ್ಚು.

ಈಗ ಇದನ್ನು ಪಂಜಾಬ್, ರಾಜಾಸ್ಥಾನದ ಈಶಾನ್ಯ ಭಾಗ, ಉತ್ತರ ಪ್ರದೇಶದ ಪಶ್ಚಿಮಸೀಮೆಯಲ್ಲಿ ಸಾಕುತ್ತಿದ್ದಾರೆ.

ಈ ಕಡೆ ಬೇಸಿಗೆಯಲ್ಲಿ ಉರಿಬಿಸಿಲು; ಚಳಿಗಾಲದಲ್ಲಿ ಬಹಳ ಕೊರೆತ. ಇಂತಹ ಹವಾಗುಣವನ್ನು ಈ ತಳಿಯ ದನಗಳು ಕಷ್ಟವಿಲ್ಲದೆ ಎದುರಿಸಬಲ್ಲವು. ಇಲ್ಲಿಯ ಮಣ್ಣಿನಲ್ಲಿ ಸುಣ್ಣದ ಅಂಶ ಹೆಚ್ಚು. ಆದುದರಿಂದ ಮೇವು ಪುಷ್ಟಿಕರ. ಈ ಕಾಳು ಮೇವನ್ನು ತಿಂದ ಜನ, ದನ ದಷ್ಟಪುಷ್ಟವಾಗಿ ಬೆಳೆಯುತ್ತಾರೆ ಅಂತ ಹೇಳಿದ್ದೀನಲ್ಲ. ಈ ದನ ಸುಮಾರು $1^1/_4$ ಮಿ. ಎತ್ತರಕ್ಕೆ, $1\frac{1}{3}$ ಮಿ. ಉದ್ದಕ್ಕೆ ಬೆಳೆದಿರುತ್ತೆ. ತುಂಬು ದೇಹ; ಸುಮಾರು 360–540 ಕಿಲೊ ತೂಗುತ್ತೆ. ಸಜ್ಜೆ, ಗೋಧಿ, ಬಾರ್ಲಿ (ಯವಧಾನ್ಯ) ತೊಗರಿ, ಎಣ್ಣೆ ಬೀಜಗಳು ಬೆಳೆಯುವ ಪ್ರದೇಶ; ಒಳ್ಳೆ ಪುಷ್ಟಿಕರವಾದ ಮೇವೂ, ಮೇವಿನ ಬೆಳೆಗಳೂ ಸಿಗುತ್ತವೆ. ಇಲ್ಲಿಯ ಜನರು ದನಗಳನ್ನು ಚೆನ್ನಾಗಿ ಮೇಯಿಸಿ, ಚೆನ್ನಾಗಿ ತಿನ್ನಿಸಿ ಸಾಕುತ್ತಾರೆ. ಇವನ್ನು, ಗಮನವಿಟ್ಟು, ಬೆರಕೆಯಾಗದಂತೆ ಅಭಿವೃದ್ಧಿ ಮಾಡುತ್ತಾರೆ.

ಇದರ ಚಿತ್ರವನ್ನು ನೋಡು; ಇಲ್ಲಿದೆ. (ಫೋಟೋ 6) ಮೊದಲು ನಮಗೆ ತೋಚುವುದು ಈ ದನಗಳ ಒಪ್ಪಾದ ಮೈಕಟ್ಟು. ದೇಹಕ್ಕೆ ತಕ್ಕ ತಲೆ, ಕತ್ತು, ಕಾಲುಗಳು. ಮೊಟಕೂ ಅಲ್ಲ; ಲಂಬವೂ ಅಲ್ಲ. ಅಡಕವಾದ ದೇಹ; ಎತ್ತಿದ ತಲೆ—ಜಂಬದಿಂದ ನಿಲ್ಲುತ್ತದೆ. ಎಷ್ಟೇ ಆಗಲಿ ಆರ್ಯರ ಮೂಲ ದನವಲ್ಲವೆ. ಕೃಷ್ಣನ ದನವಲ್ಲವೇ. ನೂರಾರು ವರ್ಷಗಳಿಂದ ಸಾವಿರಾರು ಜನರಿಂದ ಪೂಜಿತವಾದ ದನವಲ್ಲವೇ. ಇಂತಹ ದನ ತಲೆಯೆತ್ತಿ ನಿಲ್ಲಲೇಬೇಕು, ಅಲ್ಲವೆ?

ಇದರ ಮುಖ ನೋಡು. ಆರ್ಯರಂತೆಯೇ ಉದ್ದ ; ಕಿರಿದು. ಎರಡು ಕೊಂಬುಗಳ ಮಧ್ಯೆ ನೆತ್ತಿಯ ಮೇಲೆ ಶಿಖಿ—ಮಾಳೆಮಣಿ. ಇದು ಈ ತಳಿಯ ವಿಶೇಷ ಲಕ್ಷಣ. ಇದರ ಮೂತಿ ಅಗಲ ಮತ್ತು ಕಪ್ಪು. ತುಂಬು ಕಣ್ಣು— ಹೆಮ್ಮೆಯಿಂದ, ತುಂಬು ಆರೋಗ್ಯದಿಂದ ಹೊಳಪುತ್ತಿರುತ್ತೆ. ಕಿವಿ ಚಿಕ್ಕದು ; ಸ್ವಲ್ಪ ಜೋಲುಬಿದ್ದಿರುತ್ತೆ. ಇಂತಹ ಭಾರಿದನಕ್ಕೆ ಕೋಡು ಮಾತ್ರ ಮೋಟು ; 15-22 ಸೆಂಮಿ. ಮಾತ್ರ. ಹರಪ್ಪ ದನಗಳಲ್ಲಿರುವಂತೆ ಘನವಾದ, ಮಜಭೂತಾದ ಕೋಡುಗಳಿಲ್ಲ. ಗೂಳಿಗಳಲ್ಲಿ ಡುಬ್ಬ ಚೆನ್ನಾಗಿ ಬೆಳೆದಿರುತ್ತೆ. ಕತ್ತು ಸುಮಾರು ಉದ್ದ; ಗಂಗೊದಲು ತೆಳುವು. ಕಾಲೂ ತೆಳುವು. ಕಪ್ಪಿನ ಗಟ್ಟಿಯಾದ ಸುಲಕ್ಷಣವಾದ ಗೊರಸು. ಬೆನ್ನು ನೋಡು. ನೇರವಾಗಿ ಉದ್ದಕ್ಕೆ ಇದೆ. ಚಪ್ಪೆಗಳು ಅಗಲವಾಗಿವೆ ; ಸ್ವಲ್ಪ ಇಳಿದಿರುತ್ತೆ. ಬಾಲ ಸ್ವಲ್ಪ ಮೋಟಕೇ ಎನ್ನಬಹುದು. ಬಾಲ ಉದ್ದವಾಗಿದ್ದರೆ ಈ ದನ ಇನ್ನೂ ಚೆನ್ನಾಗಿ ಕಾಣಿಸುತ್ತಿತ್ತು. ಕುಚ್ಚು ಕಪ್ಪು. ಹರಿಯಾಣ ದನಗಳ ಕೆಚ್ಚಲು ದೊಡ್ಡದು; ಮುಂದಿನ ಮೊಲೆಗಳು ಹಿಂದಿನ ಮೊಲೆಗಳಿಗಿಂತ ಉದ್ದ.

ಇದರ ಬಣ್ಣ ಬಿಳುಪಾದರೂ ಆ ಬಿಳುಪು ಕೂದಲನಿದು ; ಚರ್ಮ ಕಪ್ಪು.

ಹರಿಯಾಣ ಎತ್ತುಗಳು ಬಲಯುತವಾದವು. ಉಳುವುದಕ್ಕೆ, ಗಾಡಿ ಎಳೆಯುವುದಕ್ಕೆ ಯೋಗ್ಯವಾದವು.

ಈ ತಳಿಯಲ್ಲಿ ಒಂದು ಅವಗುಣವೇನೆಂದರೆ, ನಾಲ್ಕು ವರ್ಷವಾದರೂ ಕರು ಹಾಕುವುದಿಲ್ಲ. ಕರು ಹಾಕಲು 4½ ವರ್ಷ ವಯಸ್ಸಾಗಬೇಕು. ಹಾಲಿಗಾಗಿ ಅಷ್ಟು ಕಾಲ ಕಾಯಬೇಕು. ನಮ್ಮ ಅನೇಕ ದನಗಳಲ್ಲಿ ಹಸು, ಹೆಣ್ಣುಗರವನ್ನು ಗಂಡುಗರುವಿಗಿಂತ ಒಂದೆರಡು ದಿನ ಮುಂಚಿತವಾಗಿಯೇ ಈಯುತ್ತವೆ.

ಈ ದನ ಚೆನ್ನಾಗಿ ಸಾಕಿದರೆ ಸುಮಾರು 10 ತಿಂಗಳು ಕಾಲ ಹಾಲು ಕೊಡುತ್ತೆ ; 3½ ತಿಂಗಳ ಕಾಲ ನಿಲ್ಲಿಸುತ್ತೆ. ಅನೇಕ ದನ 7-9 ಲೀಟರ್ ಹಾಲು ಕೊಡುತ್ತೆ. ಹೆಚ್ಚು ಹಾಲು, 5 ಅಥವಾ 6 ನೆಯ ಕರಾವಿನಲ್ಲಿ. ಹೆಚ್ಚು ಕಾಲ ಹಾಲು ಕೊಡುವುದು 4 ನೆಯ ಕರಾವಿನಲ್ಲಿ.

ಆರ್ಯರ ಎರಡನೆಯ ತಳಿ **ಮೇವತಿ.** ಇದು ವ್ರಜದೇಶದ ತಳಿ. ಪಂಜಾಬಿನಿಂದ ಆರ್ಯರು ದಕ್ಷಿಣಕ್ಕೆ—ಈಗಿನ ಮಥುರ, ಭರತಪುರದ ಕಡೆ

ಬಂದರು. ಈ ಪ್ರದೇಶವನ್ನು ಬ್ರಜ, ವ್ರಜ ಎನ್ನುತ್ತಾರೆ. ವ್ರಜ ಅಂದರೆ ಹಿಂಡು. ದನದ ಮಂದೆಯ ನೆಲ. ಕೃಷ್ಣನು ಹುಟ್ಟಿದ್ದು ಈ ವ್ರಜಗಳು ಹೆಚ್ಚಾಗಿದ್ದ—ದೊಡ್ಡ ದೊಡ್ಡ ದನದ ಮಂದೆಗಳಿದ್ದ ಪ್ರದೇಶ. ಅವನ ಕಾಲದಲ್ಲಿ ಗೊಲ್ಲರು ಭಾರಿ ದನದ ಹಿಂಡುಗಳನ್ನು, ಮೇವಿದ್ದ ಕಡೆ ಅಟ್ಟಿಕೊಂಡು ಹೋಗಿ ಅದರ ಹಿಂದೆಯೇ ತಮ್ಮ ಸಂಸಾರಗಳನ್ನು ಜನಗಳನ್ನೂ ಸಾಮಾನುಸರಂಜಾಮು ಗಳನ್ನೂ ಸಾಗಿಸಿ, ಈ ಹೊಸ ಕಾವಲಿನಲ್ಲಿ ಜೋಪಡಿಗಳನ್ನು, ರೊಪ್ಪಗಳನ್ನು ಹಾಕಿ ಬೀಡುಬಿಡುತ್ತಿದ್ದರು; ಬಿಡಾರ ಹೂಡುತ್ತಿದ್ದರು. ಈ ಪ್ರದೇಶದಲ್ಲಿ ವ್ರಜಗಳೂ ಬಿಡಾರಗಳೂ ಹೇರಳವಾಗಿದ್ದುದರಿಂದ ಇದನ್ನು ವ್ರಜದೇಶವೆಂದೇ ಕರೆಯುವುದು. ಇದರ ಒಡೆಯ, ಈಶ, ಬ್ರಜೇಶ—ಕೃಷ್ಣ.

ಮೇವತಿ ಈ ಪ್ರದೇಶದ ತಳಿ. ದೆಹಲಿಯ ದಕ್ಷಿಣ ಭಾಗ, ರಾಜಾಸ್ಥಾನದ ಅಳ್ವಾರ್, ಭರತಪುರ, ಉತ್ತರ ಪ್ರದೇಶದ ಮಥುರ—ಇವನ್ನೂ ಒಳಗೊಂಡಿರುವ ಭಾಗಕ್ಕೆ ಮೇವತ್ ಅಂತ ಕರೆಯುತ್ತಾರೆ. ಮೇವತ್ತಿನ ದನ ಮೇವತಿಯಾಯಿತು.

ಈ ದನ ಆರ್ಯರ ದನವಾದರೂ, ಹರಿಯಾಣದಂತೆ ಮೂಲತಳಿಯಲ್ಲ. ಬಹಳ ಹಿಂದೆಯೇ ಬಹುಶಃ ಆರ್ಯರ ಕಾಲದಲ್ಲೆ, ಅಕ್ಕಪಕ್ಕದ ದನಗಳೊಂದಿಗೆ ಅವರ ದನ ಬೆರೆತು ಈ ತಳಿ ರೂಪಗೊಂಡಿರಬೇಕು. ಇದರಲ್ಲಿ ಗುಜರಾತಿನ ಗಿರ್ ತಳಿಯ ಲಕ್ಷಣಗಳೂ ಕೆಲವಿವೆ.

ಈ ಮೇವತ್ ಪ್ರದೇಶ, ರಾಜಸ್ಥಾನದ ಮರುಭೂಮಿಯ ಅಂಚಿನಲ್ಲಿದೆ. ಒಣಪ್ರದೇಶ. ಕಲ್ಲುಮರಳು ಜಾಸ್ತಿ. ಮೇವು ಕಡಿಮೆ. ಇಂತಹ ಪ್ರದೇಶಕ್ಕೆ ಹೊಂದಿಕೊಂಡು ಮೇವತಿ ದನ ಬೆಳೆದಿದೆ. ಆದುದರಿಂದ ಗಟ್ಟಿಮುಟ್ಟಾಗಿರುತ್ತವೆ. ಉಳುವುದಕ್ಕೆ, ಗಾಡಿಗೆ, ಆಳವಾದ ಬಾವಿಗಳಿಂದ ನೀರೆತ್ತುವುದಕ್ಕೆ ತಕ್ಕ ಶಕ್ತಿ ಈ ದನಗಳಿಗೆ ಇದೆ. ಹೆಚ್ಚು ಮೇವು ಇಲ್ಲದೆಯೆ, ಚೆನ್ನಾಗಿ ಕೆಲಸ ಮಾಡುವ ದನ. ಹಸುಗಳೂ ಕೂಡ, ಹರಿಯಾಣ ಹಸುಗಳಂತೆ ಹೆಚ್ಚು ಹಾಲು ಕೊಡದಿದ್ದರೂ ಸುಮಾರು ಹೆಚ್ಚಾಗಿಯೇ—ದಿನಕ್ಕೆ 4–5 ಲಿ. ನಷ್ಟು ಹಾಲು ಕೊಡುತ್ತವೆ.

ಸಾಮಾನ್ಯವಾಗಿ ಈ ದನಗಳು ಬೆಳ್ಳಗಿದ್ದರೂ ಕೆಲವು ದನಗಳಲ್ಲಿ ಕೆಂಪು ಛಾಯೆ ಕಾಣಿಸಿಕೊಳ್ಳುತ್ತೆ. ಕಾರಣ, ಈ ತಳಿಯಲ್ಲಿ ಹರಿಯುವ ಗಿರ್ ತಳಿಯ

ರಕ್ತ. (ಗಿರ್ ತಳಿಯ ಬಣ್ಣ ಕೆಂಪು), ಹರಿಯಾಣ ದನದಂತೆ ಇದರ ಮುಖವೂ ಉದ್ದ. ಆದರೆ ಹಣೆ ಸ್ವಲ್ಪ ಉಬ್ಬು (ಗಿರ್ ಲಕ್ಷಣ). ಕಣ್ಣಿನ ಸುತ್ತಲೂ ಕಪ್ಪು ಮಚ್ಚೆ, ಕಿವಿ ಜೋತಿರುತ್ತೆ. ದೇಹಕ್ಕೆ ಒಪ್ಪಾದ ಕಾಲಿಲ್ಲ. ಸ್ವಲ್ಪ ಉದ್ದ. ಗಂಗೊದಲು ಜೋತಿರುತ್ತೆ. ಇದರ ಬಾಲ ಉದ್ದವಾಗಿಯೇ ಇರುತ್ತೆ. ಕುಚ್ಚು ಹಿಮ್ಮಡಿ ಮುಟ್ಟುತ್ತಿರುತ್ತೆ. ಈ ದನಗಳು ಸಾಧು. ಎಷ್ಟೇ ಆದರೂ ಕಿಟ್ಟ— ಕೃಷ್ಣ ಸಾಕಿದ ದನಗಳಲ್ಲವೇ. ಸಾಧುವಾಗಿಲ್ಲದಿದ್ದರೆ, ಮುಂದಿನ ಹಲ್ಲು ಉದುರಿಸಿದಂತೆ ಎಲ್ಲಾ ಹಲ್ಲುಗಳನ್ನೂ ಉದುರಿಸುತ್ತಿದನೋ ಏನೋ !" ಇಬ್ಬರೂ ನಗುತ್ತಿದ್ದಾಗ ಅಕ್ಕ ಕಾವೇರಮ್ಮ ತಟ್ಟೆಯಲ್ಲಿ ಜೋಂಡ, ಕಾಫಿ ಹಿಡಿದುಕೊಂಡು ಬಂದರು. "ಏನೋ ರಾಮು, ಕಿಟ್ಟ ಬಹಳ ನಗ್ತಾ ಇದ್ದಾನೆ. ನೀನು ಬಂದಾಗಲಿಂದ ಪುಸ್ತಕ ಹಿಡಿದಿಲ್ಲ. ನಿನ್ನ ಬಾಲ ಪಟ್ಟಾಗಿ ಹಿಡಿದುಬಿಟ್ಟಿದ್ದಾನೆ. ಈವಾಗೇನು ಪೀಡಿಸುತ್ತಿದ್ದಾನೆ, ನಿನ್ನ. ಆವಾಗಲಿಂದ ಮಾತಾಡುತ್ತಲೇ ಇದ್ದೀ"

"ಏನೂ ಇಲ್ಲ, ಅಕ್ಕ. ದನಗಳ ವಿಚಾರ ಕೇಳ್ತಿದ್ದ, ಹೇಳ್ತಿದ್ದೆ. ಭಾವ ನಂತೂ ನನ್ನ ಕಾಗದಕ್ಕೆ ಸರಿಯಾಗಿ ಉತ್ತರ ಕೊಡಲಿಲ್ಲ. ಕಿಟ್ಟಿಗಾದರೂ ದನದ ಹುಚ್ಚು ಹಿಡಿಸಿದರೆ, ಭಾವನ ಮನಸ್ಸೂ ದನಗಳ ಕಡೆ ವಾಲಬಹುದು."

"ವಾಲ್ತಿದೆ. ಸ್ವಲ್ಪ ನಾನು ಹೇಳಿದೆ. ರಿಟೈರ್ ಆದ ಮೇಲೆ ಏನಾದರೂ ಹವ್ಯಾಸ ಇಟ್ಟುಕೊಳ್ಳುವುದು ಒಳ್ಳೆಯದು ಅಂತ. ಮೊದಲು ಬೇಡ ಅವೆಲ್ಲ. ನನಗೇನು ಗೊತ್ತು; ಹಸು ಸಾಕುವುದು; ತಾಪತ್ರಯ; ತಲೆನೋವು ಯಾಕೆ ಕೊಳ್ಳೋದು, ಈ ಇಳಿವಯಸ್ಸಿನಲ್ಲಿ, ಅಂದರು. ಆದರೆ ನೀನು ತಂದ ದನದ ಪುಸ್ತಕಗಳನ್ನು ತಿರುವಿಹಾಕುತ್ತಿದ್ದಾರೆ"

"ಹಾಗಾದರೆ ನಾನು ನಿಮ್ಮೂರಿಗೆ ಬಂದದ್ದು ಸಾರ್ಥಕವಾಯಿತು. ನಡಿಯೋ ಸುತ್ತಾಡಿಕೊಂಡು ಬರೋಣ. ಅಕ್ಕ, ಇನ್ನೆರಡು ಮೂರು ದಿವಸ ಕಿಟ್ಟಿಯನ್ನು ಮಾತಾಡಿಸಬೇಡ. ಪುಸ್ತಕ ಹಿಡಿಯಲಿಲ್ಲ ಅಂತ ಬಯ್ಯ ಬೇಡ. ಈ ದನದ ಕಥೆಯನ್ನು ನಾನು ಹೋಗುವುದರೊಳಗಾಗಿ ಮುಗಿಸಿಬಿಡಬೇಕು."

೮. ರಾಮಣ್ಣ ಆರ್ಯರ ದನದ ಕತೆ ಮುಗಿಸಿದ

ಸಾಯಂಕಾಲ ಮತ್ತೆ ಪಾರ್ಕು ಮತ್ತೆ ದನಗಳ ಕತೆ. "ಮಧ್ಯಾಹ್ನ ಮೇವತಿ ದನದ ಕತೆ ಹೇಳಿ ಮುಗಿಸಿದೆ. ಈಗ **ರಥ್** ಎಂಬ ತಳಿಯ ವಿಷಯ ಹೇಳುತೀನಿ. ಈ ತಳಿ ಮೇವತಿ ಪ್ರದೇಶಕ್ಕೆ ಸಮೀಪದಲ್ಲೆ ಇದೆ. ಇದು ಅಷ್ಟು ಪ್ರಸಿದ್ಧಿಯಾದ ತಳಿಯಲ್ಲ. ರಾಜಾಸ್ಥಾನದ ಆಳ್ವಾರ್ ಕಡೆ ಇದನ್ನೂ ಸಾಕುತ್ತಾರೆ. ಇದರ ಮುಖ್ಯ ಗುಣವೇನೆರದರೆ ಇದನ್ನು ಹೆಚ್ಚು ಖರ್ಚಿಲ್ಲದೆ ಸಾಕಬಹುದು. ನೂರಾರು ವರ್ಷಗಳಿಂದ ಮೇವು ಕಡಿಮೆ ಇರುವ ಪ್ರದೇಶದಲ್ಲಿ ವಿಕಾಸಗೊಂಡ ಈ ತಳಿ, ಹೆಚ್ಚು ಮೇವಿಲ್ಲದೆಯೇ ತೃಪ್ತಿಕರವಾಗಿ ಕೆಲಸ ಮಾಡುತ್ತೆ. ಇದಕ್ಕೆ ಕಾರಣ ಇದರ ಮಧ್ಯಮ ಗಾತ್ರ. ಎತ್ತರದಲ್ಲೂ, ತೂಕದಲ್ಲೂ ಹರಿಯಾಣ ದನಗಳಿಗಿಂತ ಕಡಿಮೆ. ಇದು ಬಡವರ ದನವೆಂದು ಪ್ರಸಿದ್ಧಿಯಾಗಿದೆ. ಇಲ್ಲಿಯ ಹಳ್ಳಿರಸ್ತೆಗಳಲ್ಲಿ ಮರಳು ತುಂಬಿರುತ್ತೆ. ಮರಳುಮೇಲೆ ಗಾಡಿ ಎಳೆಯುವುದು ಕಷ್ಟ. ಆದರೆ, ಈ ದನ ಆ ಕೆಲಸವನ್ನು ಚೆನ್ನಾಗಿಯೇ ಮಾಡುತ್ತೆ—ಸ್ವಲ್ಪ, ಒಂಟೆಗಳ ತರಹ. ದಿನಕ್ಕೆ 32 ಕಿಮೀ. ಗಾಡಿ ಎಳೆಯಬಲ್ಲವು. ಮತ್ತೊಂದು ವಿಶೇಷ ಈ ದನದಲ್ಲಿ—ಇವು ಹೆಚ್ಚು ಕಾಲ ಬದಕುತ್ತವೆ.

ಹಸುಗಳು ಸ್ವಲ್ಪ ಚೆನ್ನಾಗಿಯೇ ಹಾಲನ್ನು ಕರೆಯುತ್ತವೆ. ಹೆಚ್ಚು ತೀನಿಯಿಲ್ಲದೆಯೆ, ಹಸಿ ಮೇವು ಇಲ್ಲದೆಯೆ ಸುಮಾರು 5½-7 ಲಿ. (4-5 ಮೈಸೂರು ಸೇರು) ಹಾಲು ಕೊಡುತ್ತವೆ. ಆದರೆ ಹಾಲು ಕೊಡುವ ಕಾಲ ಮಾತ್ರ ಕಡಿಮೆ—ಕೇವಲ 7 ತಿಂಗಳು, ಅಷ್ಟೆ.

ಇದರ ಚಿತ್ರ ನೋಡು (ಫೋಟೊ 8) ಬಿಳಿ ಬಣ್ಣ. ಉದ್ದದ ಮುಖ, ಚಪ್ಪಟೆ ಹಣೆ, ಅಗಲದ ಮೂತಿ. ಕಪ್ಪು ರೆಪ್ಪೆ, ಮೋಟು ಕೋಡು, ಸಣ್ಣ, ಜೋತಿರುವ ಕಿವಿ. ಸ್ವಲ್ಪ ಉದ್ದಾನೆ ಕತ್ತು. ಸುಮಾರಾದ ಡುಬ್ಬ. ಬಲಯುತವಾದ ಚಪ್ಪೆ. ನೆಟ್ಟಗಿರುವ ಗಟ್ಟಿಯಾದ ಕಾಲು; ಆದರೆ, ಮೋಟು ಬಾಲ.

ಆರ್ಯಜನರ ನಾಲ್ಕನೆಯ ತಳಿ **ನಗೋರಿ.** ಆರ್ಯರು ಬ್ರಜ್ ಪ್ರದೇಶದಿಂದ ನೈರುತ್ಯಕ್ಕೆ, ಮರುಭೂಮಿಯ ಅಂಚನ್ನೆ ಹಿಡಿದು ಜೋದ್‌ಪುರ್, ಅಜ್ಮೀರ್ ಮತ್ತು ಮಾರ್ವಾಡ್ ಪ್ರದೇಶಕ್ಕೆ ಬಂದರು. ಈ ಮಾರ್ವಾಡ್ ಪ್ರದೇಶ; ಮಾರ್ವಾಡಿಗಳ ತವರು. ಉತ್ತರ ಗುಜರಾತಿಗೆ ಸಮೀಪದಲ್ಲೇ ಇದೆ. ಈ ಸ್ಥಳ ಆರ್ಯರ, ಹರಪನ್ನರ ಸಂಕರಪ್ರದೇಶ. ಇವರ ದನಗಳೂ ಇಲ್ಲಿ ಬೆರೆತವು—ನಗೋರಿ ಎಂಬ ಹೊಸ ತಳಿ ರೂಪಿತವಾಯಿತು. ಈ ಪ್ರದೇಶ ಬರ ಪ್ರದೇಶ ಕ್ಷಾಮಗಳ ತವರು. ಕ್ಷಾಮದಲ್ಲಿ ದನಗಳು ಮೇವಿಗಾಗಿ ತಮ್ಮ ನೆಲೆಯಿಂದ ಬಹುದೂರ ಸಾಗುತ್ತವೆ. ಆಗ, ಅಲ್ಲಿಯ ದನಗಳೊಂದಿಗೆ ಬೆರಕೆಯಾಗುವುದು ಸಾಮಾನ್ಯ. ಈಗಲೂ ಕೂಡ, ಈ ದನಗಳನ್ನು ಸಾಕುವ ಬಂಜಾರರು ಇವನ್ನು ಬರಗಾಲದಲ್ಲಿ ದೂರದ ಸಿಂಧ್, ಗುಜರಾತ್ ಮತ್ತು ಮಾಳವಾ ಪ್ರದೇಶಗಳಿಗೆ ಅಟ್ಟಿಕೊಂಡು ಹೋಗುತ್ತಾರೆ. (ಫೋಟೊ 9)

ಇದರ ಚಿತ್ರ ನೋಡು, ಮೊದಲು ಈ ನಗೋರಿ ದನಗಳಲ್ಲಿ ತೋರುವುದು ಅವುಗಳ ಕೋಲುಕಾಲು—ಉದ್ದ, ತೆಳುವು. ಆಶ್ಚರ್ಯವೇನೆಂದರೆ, ಈ ದನಗಳಿಗೆ ಇಂತಹ ಕಾಲುಗಳು ಇರುವುದರಿಂದಲೇ, ಇವನ್ನು ಮೋಹಿಸುವುದು; ಇವಕ್ಕೆ ಗಿರಾಕಿ. ಇದನ್ನು ಉತ್ತರ ಪ್ರದೇಶದ ಅಮೃತಮಹಲ್ ಎನ್ನಬಹುದು. ಕಾಲು ಉದ್ದವಾಗಿರುವುದರಿಂದ ವೇಗವಾಗಿ ನಡೆಯುತ್ತೆ. ಗಂಟೆಗೆ $9\frac{3}{5}$ ಕಿಮೀ. ವೇಗದಲ್ಲಿ ಗಾಡಿಗಳನ್ನು ಎಳೆದುಕೊಂಡು ಹೋಗುತ್ತವೆ. ದಿನಕ್ಕೆ 48-64ಕಿಮೀ. ಮೈಲಿ ನಡೆಯಬಲ್ಲವು., ನಡಗೆ, ಓಟ ಅಮೃತಮಹಲ್ ದನದಂತೆ ಆದರೂ, ಅದರ ಕೋಪ ನಗೋರಿ ದನಗಳಿಗಿಲ್ಲ. ಸಾಧುವಾದ ದನಗಳು. ರಾಜಾಸ್ಥಾನದಲ್ಲಿ ಕಬ್ಬಿಣದ ಚಕ್ರದ ಗಾಡಿಗಳು ಸ್ವಲ್ಪ ಜಾಸ್ತಿ. ಇವುಗಳನ್ನು ಈ ದನಗಳು ಸಲೀಸಾಗಿ ಎಳೆದುಕೊಂಡು ಹೋಗುತ್ತವೆ. ಅದಕ್ಕಾಗಿಯೇ ಇವು ಪ್ರಸಿದ್ಧಿ. ಇದನ್ನು ಕೊಳ್ಳಲು ಮೇಲಾಟ.

ಅಮೃತಮಹಲಿನಂತೆ ಕೆಲಸಮಾಡಿದರೂ, ಈ ತಳಿಯ ಹಸುಗಳು

ಹಾಲನ್ನೂ, ತಕ್ಕಮಟ್ಟಿಗೆ ಹೆಚ್ಚಾಗಿಯೇ—ಸುಮಾರು 5½–7 ಲೀ. ಗಳಷ್ಟು ಕೊಡುತ್ತವೆ.

ಇದು ಭಾರಿ ದನವಲ್ಲ. ಸುಮಾರು 315 ಕಿಲೊ ತೂಕ, ಸ್ವಲ್ಪ ಎತ್ತರದ್ದು—ಸುಮಾರು 1.3 ಮೀ; ಸ್ವಲ್ಪ ಉದ್ದವೂ ಹೆಚ್ಚು. ಆರ್ಯರ ದನಗಳಂತೆ ಇದರ ಮುಖವೂ ಉದ್ದ, ಕಿರಿದು, ಹಣೆ ಚಪ್ಪಟೆ. ಚಿತ್ರದಲ್ಲಿ ಕಾಣದಿದ್ದರೂ ಇದರ ಕಣ್ಣುರೆಪ್ಪೆಗಳು ಭಾರ. ಆದುದರಿಂದ ಕಣ್ಣು ಚಿಕ್ಕದಾಗಿ ಕಾಣಿಸುತ್ತೆ. ಆದರೆ, ಕಿವಿ ಮಾತ್ರ ದೊಡ್ಡದು ; ಜೋತುಬಿದ್ದಿರುತ್ತೆ. ಕೊಂಬು ಮೋಟು. ಗಂಗೊದಲು ಅಷ್ಟು ದೊಡ್ಡದಲ್ಲ. ಆದರೆ ಹರಪ್ಪ ದನಗಳಂತೆ ಇದರ ಡುಬ್ಬ ದಪ್ಪ. ಆದರೆ ತುಂಬಿರುವುದಿಲ್ಲ; ಕೆಲವು ವೇಳೆ ಜೋತಿರುತ್ತೆ. ಬಾಲ ಸುಮಾರು ಉದ್ದ. ತುಂಬು ಕೆಚ್ಚಲು.

ಬಣ್ಣ ಬಿಳುಪು. ಇದರ ಒಂದು ತಮಾಷೆ ವಿಷಯ ಚಿತ್ರದಲ್ಲಿ ಕಾಣಬಹುದು. ಕರು ಬಹಳ ಚಿಕ್ಕದು. ಹುಟ್ಟುಕರುವಿನ ತೂಕ, ಕೇವಲ 10–12 ಕಿಲೊ. ಅದೇ, ಕಾಂಕ್ರೇಜ್ ದನದ ಕರು 20½ -22½ ಕಿಲೊ ತೂಗುತ್ತೆ.

ನಗೋರಿ ಎತ್ತುಗಳಿಗೆ ರಾಜಾಸ್ಥಾನವಲ್ಲದೆ, ಪಂಜಾಬು, ಗುಜರಾತು, ಮಧ್ಯಪ್ರದೇಶಗಳಲ್ಲೂ ಗಿರಾಕಿ. ಬಲೋತ್ರ ಎಂಬ ಕಡೆ ದನದ ಜಾತ್ರೆಯಲ್ಲಿ ಈ ದನಗಳ ಮಾರಾಟ ಬಹಳ ಹೆಚ್ಚು.

ಮೇವತಿ, ರಥ್ ಮತ್ತು ನಗೋರಿ ತಳಿಗಳು ಪಂಜಾಬಿನ ದಕ್ಷಿಣಕ್ಕೆ ಇರುವ ಪ್ರದೇಶಗಳು. ಆರ್ಯರು ಪೂರ್ವಾಭಿಮುಖವಾಗಿ ಹೋದಾಗ ಯಾವ ಯಾವ ದನದ ತಳಿಗಳನ್ನು ರೂಪಿಸಿಕೊಂಡರು ? ಒಂದು ಆಶ್ಚರ್ಯವೇನೆಂದರೆ ಈ ಪೂರ್ವಕ್ಕೆ ಹೋದ ಆರ್ಯಜನ ಹೊಸ ತಳಿಗಳನ್ನು ಹೆಚ್ಚಾಗಿ ಬೆಳೆಸಲಿಲ್ಲ. ತಮ್ಮ ದನಗಳನ್ನು ಕೊಂಡೊಯ್ದರು. ಉತ್ತರ ಪ್ರದೇಶ ಮತ್ತು ಬಿಹಾರಿನಲ್ಲಿ ಆರ್ಯರ ದನಗಳ ಹೊಸತಳಿಗಳು ವಿರಳ. **ಬಚಾರ್** ಎಂಬ ತಳಿ ಮಾತ್ರ ಸ್ವಲ್ಪ ಹೊಸದಾಗಿ ಕಾಣುತ್ತೆ. ಆದರೆ ಇದರ ಲಕ್ಷಣಗಳನ್ನು ನೋಡಿದರೆ ಇದು ಹರಿಯಾಣದ ಉಪತಳಿಯೇ ಹೊರತು ಹೊಸ ತಳಿಯಲ್ಲ. ಈ ಬಚಾರ್ ತಳಿ ಎತ್ತಿನ ತಳಿ-ಬಡಪ್ರದೇಶದ ತಳಿ. ಇವನ್ನು, ಮಿಲಿಟರಿ ಸಾಮಾನುಗಳನ್ನು ಎಳೆಯಲು ಈಸ್ಟ್ ಇಂಡಿಯಾ ಕಂಪನಿಯವರು ಬಹಳವಾಗಿ ಉಪಯೋಗಿಸುತ್ತಿದ್ದರಂತೆ. ಹೆಚ್ಚು ಭಾರ ಎಳೆಯಬಲ್ಲವು. (ಫೋಟೊ 10)

ಈಗ ಇದರ ತವರು ಬಿಹಾರಿನ ಸೀತಾಮರ್ಹಿ ಜಿಲ್ಲೆ. ಇದರ ಬಣ್ಣ ನೆರೆ; ಬೆನ್ನು ನೇರ. ಸಣ್ಣ ಕತ್ತು; ಬಲವಾದ ಹೆಗಲು. ಹಣೆ ಅಗಲ. ಹಣೆಗೆತಕ್ಕಂತೆ ದೊಡ್ಡ ಕಣ್ಣುಗಳು. ಸುಮಾರು ಗಾತ್ರದ ಡುಬ್ಬ. ಗಂಗೊದಲು ಸುಮಾರು ಗಾತ್ರ. ಸುಲಕ್ಷಣವಾದ ಬಲಯುತವಾದ ಕಾಲುಗಳು. ದಪ್ಪ ಮೋಟುಬಾಲ.

ಗಂಗಾ ಯಮುನಾ ನದಿ ಬೈಲಿನಿಂದ ಕೆಲವು ಆರ್ಯರ ಗುಂಪು ದಕ್ಷಿಣಕ್ಕೆ ವಿಂಧ್ಯಪರ್ವತದ ಕಡೆ ಹರಡಿದರು ಅಂದನಲ್ಲ. ಈ ಗುಂಪು ಕೆಲವು ಹೊಸ ತಳಿಗಳನ್ನು ರೂಪಿಸಿಕೊಂಡಿತು. ಮೊದಲನೆಯದು **ಗಾವ್‌ಲಾವ್** (Gaolao) ಎಂಬ ತಳಿ. (ಫೋಟೊ 11) ಈ ತಳಿಯ ತವರು ಗೋದಾವರಿಯ ಉಪನದಿಗಳಾದ ವರ್ದಾ ಮತ್ತು ಪೈನ್ ಗಂಗಾ ಸೀಮೆಯದು. ಎರಡನೆಯದು ಓಂಗೋಲ್—ಆಂಧ್ರಪ್ರದೇಶದ ಕೃಷ್ಣಾ ನದಿಮುಖದಲ್ಲಿ. ಮೂರನೆಯದು ಕೃಷ್ಣಾ ನದೀ ಕಣಿವೆಯ ತಳಿ—ಮೈಸೂರಿನ ಉತ್ತರಭಾಗದಲ್ಲಿ. ಗಾವ್‌ಲಾವ್ ತಳಿ ಆರ್ಯರು ಉತ್ತರದಿಂದ ದಕ್ಷಿಣಕ್ಕೆ ಬಂದ ಮಾರ್ಗದ ಮಧ್ಯೆ ಇದೆ-ಮಹಾರಾಷ್ಟ್ರದ ವಿದರ್ಭದಲ್ಲಿ ವರ್ಧಾ ನಾಗಪುರದ ಕಡೆ—ಗುಡ್ಡಬೆಟ್ಟಗಳ ಪ್ರದೇಶ. ಇದು ಎತ್ತಿನ ತಳಿ. ಬಹುತರ, ಆರ್ಯರು ತಮ್ಮ, ದಕ್ಷಿಣಾಪಥದಲ್ಲಿ ತಮ್ಮ ಸಾಮಾನು ಸರಂಜಾಮುಗಳನ್ನು ಎಳೆಯಲು ಅನುಕೂಲವಾಗುವಂತೆ ಈ ತಳಿಯನ್ನು ಅಭಿವೃದ್ಧಿಪಡಿಸಿರಬೇಕು. ಮರಾಟರು 18 ನೆಯ ಶತಮಾನದಲ್ಲಿ ಇವನ್ನು ತಮ್ಮ ಯುದ್ಧಸಾಮಗ್ರಿಗಳನ್ನು ಮಧ್ಯಪ್ರದೇಶದ ಗುಡ್ಡಗಾಡುಗಳ ಮೂಲಕ ಶೀಘ್ರವಾಗಿ ಸಾಗಿಸಲು, ವೇಗದ ನಡೆಯ ಈ ತಳಿಯನ್ನು ಹೆಚ್ಚಾಗಿ ಬೆಳೆಸಿದರು, ಅಲ್ಲದೆ, ಸೈನಿಕರಿಗೆ ಹಾಲೂ ಮೊಸರು ಒದಗಿಸಲು ಈ ತಳಿ ಅನುಕೂಲವಾಗಿತ್ತಂತೆ. ಆದರೆ ಈಗ ಈ ತಳಿ ಹಾಲಿಗೆ ಹೆಸರನ್ನು ಪಡೆದಿಲ್ಲ. ಚೆನ್ನಾಗಿ ಸಾಕಿದರೆ $2^3/_4$–3 ಕಿಲೊ ಹಾಲು ಕೊಡುತ್ತೆ ಅಷ್ಟೆ.

ಈ ತಳಿ ಗಾಡಿಗೇ ಅಲ್ಲದೆ ವ್ಯವಸಾಯದ ಕೆಲಸಗಳಿಗೂ ಒದಗಿಬರುತ್ತೆ. ದಿನಕ್ಕೆ 8–10 ಗಂಟೆ ಕಾಲ, ವರ್ಷದ 9 ತಿಂಗಳು ದುಡಿಯಬಲ್ಲವು. ಹೆಚ್ಚು ಭಾರವನ್ನೂ ಎಳೆಯಬಲ್ಲವು.

ಇವನ್ನು ಹಗುರವಾದ ಗಾಡಿಗಳಿಗೆ ಕಟ್ಟಿ, ಗಾಡಿ ಓಡಿಸುವ ಪಂದ್ಯಗಳು ಈ ಕಡೆ ವಿಶೇಷ,

ಇವು ಸುಮಾರು ಎತ್ತರದ ದನಗಳು. ಹಗುರವಾದ ಉದ್ದ ದೇಹ;

ಬಹಳ ಉದ್ದವಾದ ಕಿರಿದಾದ ತಲೆ. ಮೊನಚಾಗಿರುವ ಮೂತಿ. ಇದರ ಕಣ್ಣನ್ನು ಗಮನಿಸಬೇಕು. ಬಾದಾಮಿ ಆಕಾರದ ಕಣ್ಣು—ದುಂಡು ಕಣ್ಣಲ್ಲ. ಚೀನಿ ಜಪಾನರಂತೆ ಈ ಕಣ್ಣು ಯಾಸೆಯಾಗಿರುತ್ತೆ.

ಚಿಕ್ಕ ಕಿವಿ ಮೇಲೆದ್ದಿರುತ್ತೆ. ಕೋಡು ಮೋಟು—ಗೂಟದಂತೆ. ಕತ್ತು ಚಿಕ್ಕದು; ಆದರೆ ಡುಬ್ಬ ಚೆನ್ನಾಗಿ ಬೆಳೆದಿರುತ್ತೆ; ಒಂದು ಕಡೆಗೆ ಜೋತು ಬಿದ್ದಿರುತ್ತೆ. ಕಾಲು ಗಟ್ಟಿ; ಬೆಟ್ಟಗುಡ್ಡಗಳಲ್ಲಿ ಓಡಾಡಲು ಗಟ್ಟಿ ಇರಲೇಬೇಕು. ಇಲ್ಲಿ ಓಡಾಡಲು ಅನುಕೂಲವಾಗಿರುವಂತೆ ಗೊರಸು ಗಟ್ಟಿಯಾಗಿರುತ್ತೆ.

ಗಂಗೊದಲು ಭಾರಿ; ಬಹಳ ಇಳಿಬಿದ್ದಿರುತ್ತೆ-ಕಾಂಕ್ರೇಜ್ ದನಗಳಂತೆ. ಬಾಲ ಚಿಕ್ಕದು.

ಇದರ ಬಣ್ಣ ಬಿಳಿ; ಎತ್ತುಗಳ ಬಣ್ಣ ನರೆ. ಇದರ ತೂಕ ಸುಮಾರು 270 ಕಿಲೊ, ಅಷ್ಟೆ.

ಇನ್ನು ಎರಡನೆಯ ತಳಿ—**ಓಂಗೊಲ್**, ಬಹಳ ಪ್ರಸಿದ್ಧವಾದ ತಳಿ. ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ; ಬ್ರಸಿಲ್, ಫಿಜಿ, ಶ್ರೀಲಂಕ, ಇಂಡೊನೇಸಿಯ ಮಲಯ, ಅಮೆರಿಕದಲ್ಲೂ ಪ್ರಸಿದ್ಧ. ಇದನ್ನು ನೆಲ್ಲೂರು ತಳಿಯಂತಲೂ ಕರೆಯುತ್ತಾರೆ. (ಫೋಟೊ 12)

ಈಗ ಇದರ ತವರು ಆಂಧ್ರ ಪ್ರದೇಶದ ಕೃಷ್ಣ, ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ—ಕೃಷ್ಣಾ ಪಾಲಾರ್ ಪ್ರದೇಶದಲ್ಲಿ. ಈ ಪ್ರದೇಶದಲ್ಲಿ ನದಿಗಳು ಉಪನದಿಗಳು ಮಳೆಗಾಲದಲ್ಲಿ ಪ್ರವಾಹದಿಂದ ಉಕ್ಕುವುದು ಜಾಸ್ತಿ. ಅದಕ್ಕೋಸ್ಕರ ನದೀ ದಂಡೆಗಳಲ್ಲಿ ಬೇಸಾಯ ಮಾಡುವುದಿಲ್ಲ. ಹುಲ್ಲು ಬೆಳೆದುಕೊಳ್ಳಲು ಬಿಡುತ್ತಾರೆ. ಈ ಹುಲ್ಲುಗಾವಲುಗಳಿರುವುದರಿಂದ ಈ ದನಗಳಿಗೆ ಬಹಳ ಅನುಕೂಲ. ಈ ಕಾವಲುಗಳು ಹೆಚ್ಚಾಗಿರುವುದು ಓಂಗೋಲು ಮತ್ತು ಕಂಡುಕೂರು ತಾಲ್ಲೋಕುಗಳಲ್ಲಿ. ಅಲ್ಲಿಯೇ ಈ ತಳಿಯ ದನಗಳು ಹೆಚ್ಚು—ಪ್ರಸಿದ್ಧಿ.

ಓಂಗೋಲು ದನ, ಬಹಳ ಸುಂದರವಾದ, ಲಕ್ಷಣವಾದ ದನ. ನೋಡುವುದಕ್ಕೆ ಮಾತ್ರವೇ ಅಲ್ಲ, ಅದರ ಗುಣಗಳೂ ಬಹಳ ಒಪ್ಪ. ಕೆಲಸಮಾಡುವುದರಲ್ಲಿ, ಹಾಲು ಕೊಡುವುದರಲ್ಲಿ, ನೇಗಿಲಿಗೆ, ಗಾಡಿಗೆ ಈ ದನ ಹೆಸರೆತ್ತಿದ್ದು. ಸಾಲದುದಕ್ಕೆ ಬಹಳ ಸಾಧು.

ಇದು ಭಾರಿ ದನ. ಹಸುಗಳು 400–450 ಕಿಲೊ ತೂಗಿದರೆ, ಗೂಳಿಗಳು 500-570 ಕಿಲೊ ತೂಗುತ್ತೆ. 1·3 ರಿಂದ 1·5 ಮಿ. ಎತ್ತರಕ್ಕೆ 1·3–1·6 ಮಿ. ಉದ್ದಕ್ಕೆ ಬೆಳೆದಿರುವ ಈ ದನ ಗಂಭೀರ. ಕಾಲುಗಳು ಉದ್ದವಾಗಿರುತ್ತೆ. ಬಲವಾಗಿರುತ್ತೆ. ಆದರೆ ಮೈ ಭಾರ ಹೆಚ್ಚಾಗಿರುವುದರಿಂದ ಇದರ ನಡಗೆ ನಿಧಾನ. ಗಂಟೆಗೆ 3-5 ಕಿಮಿ. ಮಾತ್ರ. ಆದರೆ ಅದೇ ಮೈ ಭಾರ, ಭಾರಿ ಹೊರೆ ಹಾಕಿದ ಗಾಡಿಗಳನ್ನು ಎಳೆಯಲು ಅನುಕೂಲವಾಗುತ್ತೆ.

ಇದರ ಡುಬ್ಬ ಮಜಭೂತಾಗಿರುತ್ತೆ. ದೊಡ್ಡ ಗಂಗೊದಲು ಅಗಲವಾದ ಹಣೆ. ಸುಂದರವಾದ, ಸೌಮ್ಯವಾದ ಕಪ್ಪು ಕಣ್ಣು. ಕಣ್ಣಿನ ಕೂದಲೂ ಕಪ್ಪು; ಕಾಡಿಗೆ ಹಚ್ಚಿದ ಹಾಗೆ. ಬಿಳಿಯ ಮುಖಕ್ಕೆ ಈ ಕಪ್ಪು ಕಣ್ಣು ಬಹಳ ಚೆನ್ನಾಗಿ ಒಪ್ಪುತ್ತೆ. ಕಣ್ಣು ಸುತ್ತಲೂ ಕಪ್ಪು ಉಂಗುರ. ಕಿವಿಯೂ ಕೂಡ ದೇಹಕ್ಕೆ, ತಲೆಗೆ ಒಪ್ಪುವಂತೆ ಉದ್ದಕ್ಕೆ ಇದೆ. ಕೋಡು ಮಾತ್ರ ಮೋಟು; ಗೂಟದ ಹಾಗೆ. ಇದೂ ಒಳ್ಳೆಯದೆ. ಹಾಯುವಹಾಗಿಲ್ಲ. ಅನೇಕ ಕಡೆ, ದೊಡ್ಡ ಕೋಡು ದನಗಳಿಂದ ಅಪಾಯ—ದನಕ್ಕೊ, ಜನಕ್ಕೊ. ಜಗಳ ಆಡಿ ಕೋಡು ಮುರಿದುಕೊಳ್ಳುವುದುಂಟು. ಅದಕ್ಕೋಸ್ಕರ, ಎಳೆಗರುವಿನಲ್ಲಿ ಈ ಕೋಡಿನ ಸುಳಿಯನ್ನು ಸುಟ್ಟುಬಿಡುತ್ತಾರೆ. ಆಗ ಕೋಡು ಬೆಳೆಯುವುದಿಲ್ಲ. ಓಂಗೋಲು ದನದಲ್ಲಿ ಹೀಗೆ ಮಾಡಬೇಕಾಗಿಯೇ ಇಲ್ಲ. ಕೋಡೆ ಜೋರಾಗಿ ಬೆಳೆಯುವುದಿಲ್ಲ.

ಈ ದನಗಳ ಬಣ್ಣ ಬಿಳುಪು. ಆದರೆ ಗೂಳಿಗಳಂತೆ ತಲೆ, ಕತ್ತು ಮತ್ತು ಡುಬ್ಬ ಕಪ್ಪು ಛಾಯೆಯು ಮೇಲಿರುತ್ತೆ.

ಇದರ ಹಾಲು ಗಟ್ಟಿ. ಶೇ. 15 ರಷ್ಟು ಜಿಡ್ಡು (ಬೆಣ್ಣೆ). ಈ ದನ ಕ್ರಮವಾಗಿ ಕರು ಹಾಕುತ್ತಿರುತ್ತೆ—ಹದಿನಾರು ಹದಿನೇಳು ತಿಂಗಳಿಗೆ ಒಮ್ಮೆ. ತನ್ನ ಜೀವಮಾನದಲ್ಲಿ ಸುಮಾರು 6–7 ಕರು ಹಾಕುತ್ತೆ. ಕರು ಹಾಕಿದ ಮೇಲೆ 10 ತಿಂಗಳು ಹಾಲು ಕರೆಯುತ್ತೆ; ನಾಲ್ಕು ತಿಂಗಳು ನಿಲ್ಲಿಸುತ್ತೆ. ದಿನಕ್ಕೆ ಸುಮಾರು 4-4½ ಲೀ. ಹಾಲು ಕೊಡುತ್ತೆ. (3-3½ ಮೈಸೂರು ಸೇರು).

ಈ ದನದ ಒಂದು ತಮಾಷೆ; ನಗೋರಿ ದನ, ಕೇವಲ 10–12 ಕಿಲೊ ತೂಗುವ ಕರು ಹಾಕಿದರೆ ಓಂಗೋಲು ದನ 27–30 ಕಿಲೊ

ತೂಗುವ ಕರು ಹಾಕುತ್ತೆ. ಕೆಲವು 38 ಕಿಲೊ—ನಿನ್ನಷ್ಟು ತೂಕದ ಕರು ಗಳನ್ನು ಈದಿವೆ. ಹೋರಿಗರದ ತೂಕ, ಇತರ ದನಗಳಂತೆಯೇ, ಹೆಣ್ಣುಗರದ ತೂಕಕ್ಕಿಂತ, ಹೆಚ್ಚು; ಈಯುಲು ನಿಧಾನ. ಇದರ ಮತ್ತೊಂದು ತಮಾಷೆ: ಕೆಲವು ಕರುಗಳು ಹುಟ್ಟಿದಾಗ ಕೆಂಪಗಿರುತ್ತವೆ, ಅಥವಾ ಕೆಂಪು ಬಣ್ಣದ ಚುಕ್ಕೆ ಗಳಿರುತ್ತವೆ. ಆದರೆ 6 ತಿಂಗಳಲ್ಲಿ ಈ ಬಣ್ಣ ಬದಲಾಗುತ್ತದೆ.

ನೀನು ಸಾಕಬೇಕಾದ್ದು ಈ ಓಂಗೋಲ್ ದನದ ಕರು, ಇಲ್ಲವೇ ಸಾಹಿ ವಾಲ್. ನನಗೆ ಈ ದನ ಬಹಳ ಒಪ್ಪಿಗೆಯಾದರೂ ಸಾಹೀವಾಲ್ ದನದ ಮೇಲೇ ಹೆಚ್ಚು ಅಕ್ಕರೆ.

ಈ ದನ ನಮ್ಮ ದೇಶದ ಅದರಲ್ಲೂ ದಕ್ಷಿಣ ಭಾರತದ ಹೆಮ್ಮೆ. ಎಲ್ಲ ರೀತಿಯಲ್ಲೂ ಸಮರ್ಪಕವಾದ ದನ.

ದಕ್ಷಿಣ ಭಾರತದಲ್ಲಿ ಆರ್ಯರ ದನದ ಮೂರನೆಯ ತಳಿ ನಮ್ಮ ಮೈಸೂರಿನಲ್ಲಿ ಇದೆ—ಕೃಷ್ಣಾ ನದಿ ಕಣಿವೆಯಲ್ಲಿ ಹೆಸರೂ ಕೃಷ್ಣಾ. ಆದರೆ ಇದು ಆರ್ಯರೇ ದಕ್ಷಿಣಕ್ಕೆ ತಂದ ತಳಿಯಲ್ಲ. ಯಾಕೆಂದರೆ ಇದು ಇತ್ತೀಚಿನ ತಳಿ. ಕಳೆದ ಶತಮಾನದಲ್ಲಿ, ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರದಲ್ಲಿ ಕೆಲವು ರಾಜರುಗಳು ರೂಪಿಸಿದ ತಳಿ. (ಫೋಟೊ 13)

ಈ ತಳಿ ಆಂಧ್ರದ ಓಂಗೋಲ್, ಕಾಥೇವಾಡಿನ ಗಿರ್, ಗುಜರಾತಿನ ಕಾಂಕ್ರೇಜ್, ಮತ್ತು ಮೈಸೂರಿನ ಹಳ್ಳಿಕಾರಿನ ಸಂಗಮವೆನ್ನಬಹುದು ಈ ತಳಿಗಳ ಕೆಲವು ಉತ್ತಮ ಲಕ್ಷಣಗಳನ್ನು ಕೂಡಿಸಿ, ಈ ಪ್ರದೇಶದ ಜಿಗುಟಿನ ಕರಿ ಎರೆಮಣ್ಣಿನಲ್ಲಿ ಕೆಲಸಮಾಡುವಂತಹ ತಳಿಯನ್ನು ಈ ರಾಜರು ಎತ್ತಿದರು. ಸಾಂಗ್ಲಿ ಮಹಾರಾಜರು ಈ ತಳಿಯ ಉತ್ಪತ್ತಿ ಅಭಿವೃದ್ಧಿಗೆ ಬಹಳ ಮೆಹನತ್ತು ಮಾಡಿದರು. ಈಗ ಈ ತಳಿ ಸತಾರ, ಬೆಳಗಾಂವೆ, ಧಾರವಾಡ, ಬಿಜಾಪುರ, ಕೊಲ್ಹಾಪುರ, ಸಾಂಗ್ಲಿಗಳಲ್ಲಿ ಹೆಚ್ಚು.

ಈ ತಳಿಯ ಮೊದಲಿನ ವಿಶೇಷ ಅದರ ಗಾತ್ರ. ಭಾರಿ ದನ. ಹಸುಗಳ ತೂಕ 320 ಕಿಲೊ; ಎತ್ತುಗಳದ್ದು 540 ಕಿಲೊ. ಎತ್ತರ $1^1/_4$-$1^1/_2$ ಕಿಲೊ. ಉದ್ದ $1^1/_2$-$1^3/_4$ ಮೀ. ಎರಡನೆಯ ವಿಶೇಷ, ಈ ತಳಿ ದನಗಳ ವಿವಿಧ ಲಕ್ಷಣ. ಇದು ಕನಿಷ್ಟ 4 ತಳಿಗಳ ಸಂಗಮವಾಗಿರುವುದರಿಂದ, ಈ ತಳಿಯಲ್ಲಿ ವೈವಿಧ್ಯ ಹೆಚ್ಚು.

ಇದರ ಬಣ್ಣ ನರೆ. ಹೋರಿ ಮತ್ತು ಎತ್ತುಗಳಲ್ಲಿ ಚಪ್ಪೆ ಭಾಗ ಕಪ್ಪಾಗಿ ರುತ್ತೆ; ಕೆಲವು ವೇಳೆ ಕಂದು, ಬಿಳುಪು. ಕಪ್ಪು ಕಲೆಗಳೂ ಕಾಣಿಸುತ್ತವೆ. ತಲೆ ಗಿರ್ ದನಗಳಂತೆ ಉಬ್ಬಿರುತ್ತೆ. ಕೋಡು ಮುಂದಕ್ಕೆ ಒಳ ಚಾಚಿ ಬೆಳೆ ಯುತ್ತೆ. ಕತ್ತು ಮೋಟು, ದಪ್ಪ. ಗಂಗೊದಲು ಜೋತಿರುತ್ತೆ. ಕಿವಿ ಚಿಕ್ಕದು. ಕಾಲು ಮೋಟು, ಆದರೆ ದಪ್ಪ; ಬಲಯುತವಾಗಿರುತ್ತೆ.

ಇದು ಎತ್ತಿನ ತಳಿ. ಬೇಸಾಯಕ್ಕೆ, ಅದರಲ್ಲೂ ಜಿಗುಟುಮಣ್ಣಿನ ಬೇಸಾ ಯಕ್ಕೆ, ಅನುಕೂಲವಾದದ್ದು. ಆದರೆ ಒರಟು ಅಥವಾ ಕಲ್ಲು ನೆಲದಲ್ಲಿ ಬೇಗ ಸುಸ್ತುಬೀಳುತ್ತೆ; ಇದರ ಗೊರಸು ಮೃದುವಾಗಿರುವುದರಿಂದ ಹೀಗೆ. ಈ ದನ ಗಳು 2 ಟನ್ನು ಹೊರೆಯನ್ನೂ ಎಳೆಯಬಲ್ಲವು. ಆದರೆ ನಡಿಗೆ ನಿಧಾನ.

ಈ ತಳಿಯಲ್ಲಿ ಗಿರ್ ಮತ್ತು ಓಂಗೋಲ್ ರಕ್ತವಿರುವುದರಿಂದ ಸಾಕಷ್ಟು ಹಾಲು ಸಿಗುತ್ತದೆ—ಸುಮಾರು 3½ ಲಿ. ದಿನಕ್ಕೆ. 10 ತಿಂಗಳು ಹಾಲು. ಆಮೇಲೆ 5-5½ ತಿಂಗಳು ಹಾಲು ನಿಲ್ಲಿಸುತ್ತೆ. ಮೊದಲನೆಯ ಕರು 4 ವರ್ಷ ವಾದ ಮೇಲೆ. ಸಾಧು ದನ.

ಮೂತ್ತೊಂದು ಆರ್ಯರ ದನಗಳ ತಳಿಯ ವಿಷಯ ಹೇಳಿ ಈ ದನಗಳ ವೃತ್ತಾಂತವನ್ನು ಮುಗಿಸೋಣ. ಈ ತಳಿ ಇರುವುದು ಈಗಿನ ಪಾಕಿಸ್ಥಾನದಲ್ಲಿ. ಇದು ಈಗಿನ ಇಂಡಿಯಾದ ತಳಿಯಲ್ಲದಿದ್ದರೂ ಇದರ ವಿಚಾರ ಹೇಳುವುದಕ್ಕೆ ಒಂದು ಕಾರಣ ಇದೆ.

ಹಿಂದೆ ನಿನಗೆ ಹೇಳಿದೆ—ಆರ್ಯರು ಭಾರತಕ್ಕೆ ಬರುವುದಕ್ಕೆ ಮುಂಚೆಯೇ ಸಿಂಧೂ ನದಿ ಬಯಲಿನಲ್ಲಿ ಒಂದು ನಾಗರಿಕ ಜನಾಂಗವಿತ್ತೆಂದು —ಹರಪ್ಪ ಜನ. ಇದ್ದಕಿದ್ದಂತೆ ಬಹಳ ಮೇಲ್ಮಟ್ಟದ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದ, ಈ ಜನ ಕ್ರಿ. ಪೂ. 1500 ರಲ್ಲಿ ನಿರ್ನಾಮವಾದಂತೆ ಕಂಡುಬರುತ್ತೆ. ಈ ಜನ ಇವರ ನಾಗರೀಕತೆ ಹಠಾತ್ತನೆ ಅಳಿಯಲು ಏನು ಕಾರಣವೆಂಬುದರ ಬಗ್ಗೆ ಇತಿಹಾಸಕಾರರು ಅನೇಕ ಊಹಾಪೋಹೆಗಳನ್ನು ಮಾಡಿದ್ದಾರೆ. ಇದು ಇನ್ನೂ ದೊಡ್ಡ ಸಮಸ್ಯೆಯೇ ಆಗಿದೆ. ಹರಪ್ಪ ಜನರು ಅವರ ಮುದ್ರೆಗಳ ಮೇಲೆ ಕೆತ್ತಿರುವ ಲಿಪಿಯನ್ನು ಇನ್ನೂ ಯಾರು ಸರಿಯಾಗಿ ಓದಿಲ್ಲ. ಇದನ್ನು ಓದುವ ತನಕ ಈ ಸಮಸ್ಯೆ ಸಮರ್ಪಕವಾಗಿ ಬಗೆಹರಿಯ ಲಾರದು. ಆದರೆ ಈ ಜನ ಹೇಗೆ ಮಾಯವಾದರು ಎನ್ನುವ ಬಗ್ಗೆ ಊಹೆ

ಮಾಡಲು ಅಡ್ಡಿಯಿಲ್ಲ. ಕೆಲವು ಪ್ರವೀಣರ ಪ್ರಕಾರ ಈ ಜನದ ಅಳಿವಿಗೂ, ಆರ್ಯರ ಭಾರತ ಪ್ರದೇಶಕ್ಕೂ ಸಂಬಂಧವಿದೆ. ಇವರನ್ನು ಹಿಂದೆಟ್ಟಿದ್ದು, ಇವರ ನಾಗರೀಕತೆಯನ್ನು ಮುಕ್ತಾಯಗೊಳಿಸಿದ್ದು ಆರ್ಯರು ಎಂಬುದು ಇವರ ಅಭಿಪ್ರಾಯ. ಇದಕ್ಕೆ ಕೆಲವು ಸ್ವಾರಸ್ಯವಾದ ರುಜುವಾತು ಕೊಡುತ್ತಾರೆ. ಆರ್ಯರಿಗೆ ಅದರಲ್ಲೂ ಋಗ್ವೇದದ ಆರ್ಯರಿಗೆ—ಭಾರತಕ್ಕೆ ಹೊಸದಾಗಿ ಬಂದು ಪಂಜಾಬಿನಲ್ಲಿ ನೆಲೆಸಿದ ಆರ್ಯರಿಗೆ ಅಚ್ಚುಮೆಚ್ಚಿನ ದೇವ—ಇಂದ್ರ. ಅವನಿಗೆ ಅನೇಕ ಹೆಸರುಗಳು. ಅದರಲ್ಲಿ ಮುಖ್ಯವಾದದ್ದು ಪುರಂಧರ—ಪುರಗಳನ್ನು ನಾಶಮಾಡುವವ. ಅವನ ಅಸ್ತ್ರ—ವಜ್ರಾಯುಧ. ಇದರ ಮೂಲಕ ಕಟ್ಟೆಗಳನ್ನು ಒಡೆದು ಪ್ರವಾಹ ಹರಿಸುವ ಶಕ್ತಿ ಪಡೆದಿದ್ದಾನೆ ಎಂದು ಋಗ್ವೇದದಲ್ಲಿ ತಿಳಿಸಿದೆ. ಬೇಕಾದಾಗ ಮಳೆ ಹುಯ್ಯಿಸಿ, ಪ್ರವಾಹ ಉಕ್ಕಿಸಿ ಊರುಕೇರಿಗಳನ್ನು ನಾಶಮಾಡಬಲ್ಲನಂತೆ. ಈ ಪುರಗಳು, ಊರುಕೇರಿಗಳು, ಕಟ್ಟೆಗಳು ಯಾರವು—ಆರ್ಯರ ಶತ್ರುಗಳದ್ದು, ಹರಪ್ಪ ಜನರದ್ದು ಎಂದು ಈ ಪ್ರವೀಣರ ಮತ.

ಋಗ್ವೇದ ಆರ್ಯರ ಪೂಜ್ಯ ಗ್ರಂಥ. ಇದರ ಕೆಲಭಾಗ, ಆರ್ಯರು ಭಾರತಕ್ಕೆ ಬರುವುದಕ್ಕೆ, ಮುಂಚೆಯೇ ಪ್ರಚಾರದಲ್ಲಿತ್ತು ಅದು ರೂಪಗೊಂಡದ್ದು ಅವರು ಪಂಜಾಬಿನಲ್ಲಿ ನೆಲಸಿ ಅಭಿವೃದ್ಧಿಯಾದಾಗ. ಈ ಗ್ರಂಥದಲ್ಲಿ ಆಗಿನ ಸ್ಥಿತಿಗತಿಗಳು, ಆರ್ಯರ ಆಸೆ ಗುರಿಗಳು ನಿರೂಪವಾಗಿವೆ. ಅಲ್ಲಿ ಆರ್ಯರ ಶತ್ರುಗಳ ವರ್ಣನೆ ಇದೆ. ಈ ಶತ್ರುಗಳು ಆವರಿಗಿಂತ ಕಪ್ಪಾಗಿದ್ದವರು, ಅನಾಸಿಕರು—ಅವರಿಗಿಂತ ತಟ್ಟೆ ಮೂಗು ಇದ್ದ, ಮೂಗೇ ಕಾಣದಂತಹ ಜನ. ಆರ್ಯರಿಗೆ ತಮ್ಮ ಬಣ್ಣದ ವಿಷಯದಲ್ಲಿ ಬಲು ಹೆಮ್ಮೆ. ಅದಕ್ಕೋಸ್ಕರವೇ ಅವರ ಜಾತಿಯ ಚೌಕಟ್ಟನ್ನು ವರ್ಣಾಶ್ರಮ ಧರ್ಮ ಎಂದು ಕರೆದರು. ಅವರಿಗಿಂತ ಕಪ್ಪಾಗಿದ್ದ ಜನರನ್ನು ಅವರು ಜಾತಿಬಾಹಿರರೆಂದೂ, ಶತ್ರುಗಳೆಂದೂ ಭಾವಿಸಿದ್ದರು. ಈ ಶತ್ರು ಜನ ಹರಪ್ಪ ಜನಗಳೇ ಆಗಿರಬೇಕು. ಯಾಕೆಂದರೆ ಇವರ ಬಣ್ಣ ಸ್ವಲ್ಪ ಕಪ್ಪು; ಇವರ ಮೂಗು ಮೋಟು. ಇವರ ನದಿಗಳಿಗೆ ಕಟ್ಟೆಹಾಗಿ ಆ ನೀರಿನಿಂದ ಬೇಸಾಯಮಾಡಿ, ಪಟ್ಟಣಗಳನ್ನೂ ಕೋಟೆಕೊತ್ತಲೆಗಳನ್ನೂ ಕಟ್ಟಿ, ಆರ್ಯರಿಗಿಂತ ಉತ್ತಮವಾದ ನಾಗರಿಕ ಜೀವನವನ್ನು ನಡೆಸುತ್ತಿದ್ದ ಜನ. ಅವರ ಊಟ ಉಪಚಾರ, ನಡೆನುಡಿ, ದೇವರು ದಿಂಡರು, ಸಂಪ್ರದಾಯ,

ಕಸಬು, ಜೀವನ ಕ್ರಮ ಎಲ್ಲವು ಆರ್ಯರ ಸಂಸ್ಕೃತಿಗೆ ವಿರೋಧವಾಗಿತ್ತು. ಆದುದರಿಂದ ಈ ಹರಪ್ಪ ಜನರನ್ನು ಅವರು ಶತ್ರುಗಳೆಂದೇ ಭಾವಿಸಿರಬೇಕು. ಅವರ ನಗರಗಳನ್ನು, ಕೋಟೆಕೊತ್ತಲಗಳನ್ನು ನಾಶಮಾಡಿದ ಸಾಹಸಿ, ಇಂದ್ರ –ಪುರಂದರ. ಈ ಶತ್ರುನಾಶಕ, ಆರ್ಯರ ದೇವರಾದ. ಈ ಕಾರ್ಯ, ಆಕ್ರಮಣ ಮತ್ತು ನಾಶ ಹಠಾತ್ತನೆ ಆಯಿತು ಎಂಬುದಕ್ಕೆ ಕೆಲವು ಕುರುಹುಗಳಿವೆ. ಇವಕ್ಕೆ ಇದ್ದಹಾಗೆ ತಮ್ಮ ನಗನಾಣ್ಯಗಳನ್ನು ಬಿಟ್ಟು ಓಡಿದಂತೆ ಅನೇಕ ಅವ ಶೇಷಗಳು ದೊರೆತಿವೆ. ಈ ಆಕ್ರಮಣವಾದಾಗ ಅನೇಕ ಜನ ಮಡಿದರು. ಅವರ ಮೂಳೆಗಳು ರಾಶಿ ರಾಶಿಯಾಗಿ ಕೆಲವೆಡೆ ಬಿದ್ದಿವೆ.

ಈ ಹರಪ್ಪ ಜನದ ಕೆಲವರು ಆರ್ಯರ ಆಕ್ರಮಣದಿಂದ ಪಾರಾಗಲು ಪೂರ್ವಕ್ಕೂ, ದಕ್ಷಿಣಕ್ಕೂ ಓಡಿಹೋದರೆಂಬುದಕ್ಕೆ ಸಾಕ್ಷ್ಯಗಳು ದೊರೆತಿವೆ. ಒಂದು ಗುಂಪು ದಕ್ಷಿಣಕ್ಕೆ ಬಹುದೂರ ಬಂದಿತ್ತೆಂದೂ, ಆ ಗುಂಪೇ ದ್ರಾವಿಡ ರೆಂದು ಕೆಲವರು ತಿಳಿಸುತ್ತಾರೆ.

ಈ ಆಕ್ರಮಣದ ಕುರುಹನ್ನು ಸಿಂಧ್ ಕಣಿವೆಯ ಪಶ್ಚಿಮದಲ್ಲಿ ಕಾಣ ಬಹುದು. ಆರ್ಯರು, ಈ ಜಾಗಕ್ಕೆ ಬಂದಾಗ ಅವರೊಡನೆ ತಂದ ದನದ ಒಂದು ತಳಿ ಈಗಲೂ ಕೂಡ ಇಲ್ಲಿದೆ. ಇದು ಬಿಟ್ಟು, ಆರ್ಯರ ದನದ ತಳಿಗಳು ಸಿಂಧ್ ಕಣಿವೆಯಲ್ಲಿ ಇಲ್ಲವೇ ಇಲ್ಲ. ಈ ತಳಿಯನ್ನು—ಆರ್ಯರು ತಂದ ತಳಿಯನ್ನು, ಬಾಗ್ನಾರಿ ಅಂತ ಕರೆಯುತ್ತಾರೆ. ಇದು ಆರ್ಯರೊಡನೆ ಬೋಲಾನ್ ಕಣಿವೆ ಮೂಲಕ ಭಾರತಕ್ಕೆ ಬಂದಿರಬಹುದೆಂದು ನಂಬಲಾಗಿದೆ. ಈಗ ಈ ತಳಿಯ ದನಗಳು ಹೆಚ್ಚಾಗಿರುವುದು ಬಲೂಚಿಸ್ಥಾನದ ಕಲಾಟ್ ಪ್ರದೇಶದಲ್ಲಿ. ಇದು ಬಿಳಿಯ ದನ. ಇದರ ಡುಬ್ಬ ಹರಪ್ಪ ದನಗಳಲ್ಲಿ ಇರುವಂತೆ ದೊಡ್ಡದಲ್ಲ. ಇದರ ಕೋಡು ಆರ್ಯರ ದನಗಳಂತೆ ಮೋಟು. ಈ ಲಕ್ಷಣಗಳಿಂದ ಇದು ಹರಪ್ಪ ಜನರ ತಳಿಯಲ್ಲ, ಆರ್ಯರದು ಎಂದು ನಿರ್ಧರಿಸಿದ್ದಾರೆ.

ಇದು ಈಗಿನ ಇಂಡಿಯ ತಳಿಯಲ್ಲವಾದುದರಿಂದ ನಮ್ಮ ದನದ ಕತೆ, ಭಾರತದ ದನದ ಕತೆಯಾಗಿರುವುದರಿಂದ, ಇದರ ವಿಷಯ ಇಲ್ಲಿಗೇ ನಿಲ್ಲಿಸಿ ಆರ್ಯರ ದನಗಳ ಕತೆಯನ್ನು ಮುಗಿಸೋಣ.

ನಡಿ, ಮನೆಗೆ ಹೋಗಿ ಊಟ ಕತ್ತರಿಸೋಣ. ಹಸಿವಾಗುತ್ತಿದೆ, ಈ ಪೊತ್ತು ಏನು ಅಡಿಗೆ ಗೊತ್ತುತಾನೆ?"

"ನಿನಗೆ ಬಲು ಇಷ್ಟವಾದದ್ದೆ. ಬಿಳಿಬೇಳೆ ಹುಳಿ ಅನ್ನ, ಹುರುಳಿ ಅಪ್ಪಳ, ಬೂದುಕುಂಬಳದ ಸಂಡಿಗೆ."

"ಹಾಗಾದರೆ ಬೇಗ ನಡಿ. ಬಾಯಲ್ಲಿ ಆಗಲೇ ಜೊಲ್ಲು ಸುರಿಯುತ್ತಿದೆ."

ಮಾವ ಅಳಿಯ ನಗುತ್ತ ಮನೆಗೆ ಬಂದರು.

೯. "ದ್ರಾವಿಡರ ದನಗಳೂ ಇವೆಯೇ ಮಾವ?"

ಮಾರನೆಯ ದಿನ : ಮನೆಯಲ್ಲೇ ದೋಸೆ—ತಮ್ಮನ ಬೆಳಗಿನ ಫಲ ಹಾರಕ್ಕೆ. ಆಮೇಲೆ ಕಿಟ್ಟಿಯ ಪ್ರಶ್ನೆ.

"ಮಾವ, ಹರಪ್ಪ ಜನರ ದನಗಳಾಯಿತು. ಆರ್ಯರ ದನಗಳಾಯಿತು. ಹಾಗೆ, ದ್ರಾವಿಡ ದನಗಳೂ ಇವೆಯೆ?"

"ಏನೋ ತಮಾಷೆ ಮಾಡ್ತೀಯೆ. ನಾನು ಹೇಳುತ್ತಿರುವುದು ಕಗ್ಗ, ಬುರುಡೆ ಅಂತ ಮಾಡಿದ್ದೀಯೊ. ನಾನು ಹೇಳಿದ ಪ್ರತಿಯೊಂದು ಅಂಶಕ್ಕೂ ದಾಖಲೆ ಇದೆ—ಚರಿತ್ರೆಯಲ್ಲಿ, ಭೂಗೋಳದಲ್ಲಿ, ಪ್ರಾಚ್ಯಸಂಶೋಧನೆ ಪುಸ್ತಕ ಗಳಲ್ಲಿ, ಪಶುವಿಜ್ಞಾನದಲ್ಲಿ. ಹೌದು. ಹರಪ್ಪ ದನಗಳಂತೆಯೇ, ಆರ್ಯರ ದನ ಗಳಂತೆಯೇ ದ್ರಾವಿಡ ದನವೂ ಇವೆ. ಅಲ್ಲದೆ ಈ ದನಗಳು ಹರಪ್ಪ ಆರ್ಯರ ದನಗಳಿಗಿಂತ ಪುರಾತನವಾದದ್ದು ; ಅವುಗಳಿಗಿಂತ ಪ್ರತ್ಯೇಕ ಲಕ್ಷಣಗಳನ್ನು ತಾಳಿದ್ದು. ಇನ್ನೂ ಒಂದು ವಿಸ್ಮಯ, ಈ ದನಗಳನ್ನು ದ್ರಾವಿಡ ದನಗಳು ಎನ್ನುವುದಕ್ಕೆ ಬದಲು ಮೈಸೂರು ದನಗಳೆಂದು ಕರೆಯುವುದು ಇನ್ನೂ ಸರಿ. ಯಾಕೆಂದರೆ ದಕ್ಷಿಣಭಾರತದ ಪ್ರತಿಯೊಂದು ದನದ ತಳಿಯಲ್ಲೂ ಮೈಸೂರಿನ ಹಳ್ಳಿಕಾರ್ ದನದ ರಕ್ತ ಹರಿಯುತ್ತಿದೆ. ಈ ತಳಿಗಳೆಲ್ಲವಕ್ಕೂ ಹಳ್ಳಿಕಾರ್ ದನವೇ ಮೂಲ ತಳಿ. ಕಾಥೇವಾಡಿನ ಗಿರ್ ತಳಿ ಬಿಟ್ಟರೆ ನಮ್ಮ ಭಾರತದ ದನಗಳ ಪೈಕಿ ಅತ್ಯಂತ ಪ್ರಾಚೀನವಾದ, ಹರಪ್ಪಜನರು, ಆರ್ಯರು ಭಾರತಕ್ಕೆ ಕಾಲಿಡುವ ಮುಂಚೆಯಿಂದಲೇ ಇದ್ದ, ಇರುವ, ತಳಿ ನಮ್ಮ ಮೈಸೂರಿನ ಹಳ್ಳಿ ಕಾರ್ ದನ. ಈ ದನ ಹೊರದೇಶದಲ್ಲ. ಹೊರದೇಶದ ದನದ ಸಂಪರ್ಕವಿಲ್ಲ.

ಈ ದೇಶದಲ್ಲೇ ಬೆಳೆದು ರೂಪಗೊಂಡ ತಳಿ, ಹಳ್ಳಿಕಾರ್. ಈ ಹಳ್ಳಿಕಾರಿನಲ್ಲಾಗಲೀ, ಈ ಗುಂಪಿಗೆ ಸೇರಿದ ಇತರ ದ್ರಾವಿಡ ದನಗಳಲ್ಲಿ ಆಗಲೀ, ಇಲ್ಲಿಯತನಕ ತಿಳಿಸಿದ ದನಗುಂಪುಗಳ ವಿಶೇಷ ಲಕ್ಷಣಗಳು ಇರುವುದಿಲ್ಲ. ಮತ್ತೆ, ಈ ದ್ರಾವಿಡ ದನದ ವಿಶೇಷ ಲಕ್ಷಣಗಳು ಇತರ ಗುಂಪಿನ ದನಗಳಲ್ಲೂ ಇಲ್ಲ. ಆದುದರಿಂದಲೇ ಈ ದ್ರಾವಿಡ ಅಥವಾ ಮೈಸೂರು ದನಗಳನ್ನು ಪ್ರತ್ಯೇಕವಾದ ಗುಂಪಿಗೆ ಸೇರಿಸಿದ್ದಾರೆ.

ಹರಪ್ಪ ದನಗಳಲ್ಲಿ ಕೊಂಬು ಲೈರ್ ಆಕಾರ. ತಲೆ ಅಗಲ. ಚಪ್ಪಟೆಯಾದ ಹಣೆ. ತೆಳು ಮುಖ ಕಣ್ಣು, ಸುತ್ತ ಮೂಳೆ ಸ್ವಲ್ಪ ಎದ್ದು ಕಾಣುತ್ತೆ. ನೆರೆ ಬಣ್ಣ. ಭಾರಿ ಗಂಗೊದಲು.

ಆರ್ಯರ ದನಗಳ ಕೊಂಬು ಮೋಟು. ತಲೆ ಉದ್ದ, ಕಿರಿದು, ಕಣ್ಣು ಗುಡ್ಡೆ ಮೂಳೆ ಎದ್ದು ಕಾಣುವುದಿಲ್ಲ. ಮೊಖ ಸ್ವಲ್ಪ ಉಬ್ಬು.

ಆದರೆ ದ್ರಾವಿಡ ದನಗಳಾದ ಹಳ್ಳಿಕಾರ್, ಅಮೃತಮಹಲ್, ಕಂಗಾಯಂ, ಕಿಲ್ಲಾರಿ ದನಗಳಲ್ಲಿ ಎದ್ದು ಕಾಣುವ ವಿಶಾಲವಾದ ಹಣೆ, ಒತ್ತಾಗಿ ಉದ್ದವಾಗಿ ಹಿಂದಕ್ಕೆ ಬಾಗಿದ ಕೋಡು, ಅಡಕವಾದ ದೇಹ, ರೋಷ, ಹೇಳಿಸಿಕೊಳ್ಳದೆ ಕೆಲಸಮಾಡುವ ಚಲ—ಈ ಲಕ್ಷಣಗಳು ಇತರ ಗುಂಪಿನ ದನಗಳಲ್ಲಿ ಇಲ್ಲ.

"ಚೆನ್ನಾಗಿದೆ, ಕೇಳುವುದಕ್ಕೆ. ಇದು ಬಹು ಹಳೆಯದು ; ಹೊರದೇಶದ ಸಂಪರ್ಕವಿಲ್ಲ. ನಮ್ಮಲ್ಲೆ ಹುಟ್ಟಿದ್ದು ಅಂದೆಯಲ್ಲ; ಇದನ್ನು ಸಾಕಿದ ದ್ರಾವಿಡರೂ ಇಲ್ಲಿಯವರೇ? ಹರಪ್ಪ ಕಡೆಯಿಂಥ ದ್ರಾವಿಡರು ದಕ್ಷಿಣಕ್ಕೆ ಬಂದರು. ಆರ್ಯರು ಸಿಂಧು ಕಣಿವೆಯನ್ನು ಆಕ್ರಮಿಸಿಕೊಂಡ ಮೇಲೆ ಅಂದೆಯಲ್ಲ."

"ಇದು ತೊಡಕಿನ ಪ್ರಶ್ನೆ. ಇದರಲ್ಲಿ ಎರಡು ಪ್ರಶ್ನೆ ಬೆರೆತುಹೋಗಿದೆ. ಹೊರದೇಶದ ಸಂಪರ್ಕವಿಲ್ಲ, ಹೇಗೆ ಅಂತ? ಮೊದಲನೆಯದು, ದ್ರಾವಿಡರು ಲಾಗಾಯಿತಸಿಂದಲೂ ಇಲ್ಲದಿದ್ದರೆ, ಹೊರಗಿನವರೆ. ಹೊರಗಿನವರಾಗಿದ್ದರೆ ಅವರ ದನದ ಸಂಪರ್ಕ ಈ ದನಗಳಲ್ಲಿ ಇರಬೇಕಲ್ಲ. ಇವೆಲ್ಲಾ ಸೇರಿಕೊಂಡುಹೋಗಿವೆ ನಿನ್ನ ಪ್ರಶ್ನೆಯಲ್ಲಿ. ಈ ತೊಡಕನ್ನು ಸ್ವಲ್ಪ ಬಿಡಿಸೋಣ.

ಮೊದಲು ದ್ರಾವಿಡ ದನಗಳಲ್ಲಿ ಹೊರದನಗಳ ಸಂಪರ್ಕ ಯಾಕೆ ಇಲ್ಲ? ಇದನ್ನು ವಿಷದಪಡಿಸಲು ಸ್ವಲ್ಪ ಭೂಗೋಳ ಹೇಳಬೇಕು.

ಭಾರತದ ಉತ್ತರ ಭಾಗಕ್ಕೂ ದಕ್ಷಿಣ ಭಾಗಕ್ಕೂ ಮೇಲ್ಮೈನಲ್ಲಿ ವ್ಯತ್ಯಾಸವಿದೆ. ಉತ್ತರದ ಬಹುಪಾಲು ಮೈದಾನ—ಬಯಲು. ಒಂದು ಕಡೆ ಯಿಂದ ಮತ್ತೊಂದೆಕಡೆಗೆ ಜನ, ದನ ಚಲಿಸಲು ಅಡಚಣೆಗಳು ಕಡಿಮೆ. ದಕ್ಷಿಣದ ಅನೇಕ ಭಾಗ ಒತ್ತಾದ ಅರಣ್ಯ. ಗುಡ್ಡ ಬೆಟ್ಟಗಳಿಂದ ತುಂಬಿದೆ. ಈ ರೀತಿಯ ಚಲನೆಗೆ ಅಡಚಣೆ ಸ್ವಲ್ಪ ಹೆಚ್ಚು. ಇವೆರಡಕ್ಕೂ ಮಧ್ಯೆ ವಿಂಧ್ಯ ಪರ್ವತ. ಹಿಮಾಲಯ ಮತ್ತು ವಿಂಧ್ಯಪರ್ವತಗಳ ಮಧ್ಯದ ಪ್ರದೇಶ ಮೈದಾನ ವಾದುದರಿಂದ ಆರ್ಯರು ಪಂಜಾಬಿನಲ್ಲಿ ನೆಲೆಸಿದ ಮೇಲೆ, ಈ ಬಯಲುಸೀಮೆ ಯಲ್ಲಿ ಪ್ರಸರಿಸುವುದಕ್ಕೆ, ಅವರ ಹಿಂದೆ ಅವರ ದನಗಳೂ ಹರಡುವುದಕ್ಕೆ ಹೆಚ್ಚು ಅಡಚಣೆಯಾಗಲಿಲ್ಲ. ಅಲ್ಲದೆ ಅವರ ಕಸಬು ಗೋಪಾಲನೆ ಆಗಿದ್ದರಿಂದ ಅವರ ದನಗಳಿಗೆ ಬೇಕಾದಷ್ಟು ಹುಲ್ಲುಗಾವಲುಗಳು ಇಲ್ಲಿ ದೊರೆತುದರಿಂದ, ಅವರ ಆಟಪಾಠಗಳಿಗೆ ಮೈದಾನವೇ ಅನುಕೂಲವಾದ್ದರಿಂದ ಇವರು ಬಹುಕಾಲ ವಿಂಧ್ಯ ಪರ್ವತವನ್ನು ದಾಟ ದಕ್ಷಿಣಭಾರತಕ್ಕೆ ವಲಸೆಯೆತ್ತಲು ಆವಶ್ಯಕತೆಯಿರಲಿಲ್ಲ. ಕೆಲವು ಸಾಹಸಿಗಳು ಇದನ್ನು ದಾಟಿ ದಕ್ಷಿಣಕ್ಕೆ ಬಂದಾಗ ಅಲ್ಲಿಯ ಕಾಡುಗಳು ಗುಡ್ಡ ಬೆಟ್ಟಗಳು ಆರ್ಯರ ಪ್ರಸರಣಕ್ಕೆ ಅನುಕೂಲವಲ್ಲವೆಂದು ಅರಿತರು. ಇದ ರಿಂದಾಗಿ ದಕ್ಷಿಣಭಾರತಕ್ಕೆ ಆರ್ಯರ ಸಂಪರ್ಕವಾಗಲೀ, ಅವರ ದನಗಳ ಸಂಪರ್ಕವಾಗಲೀ ಬಹಳ ಕಾಲ ಇರಲಿಲ್ಲ. ಹೀಗಾಗಿ ದಕ್ಷಿಣಭಾರತದವರು —ದ್ರಾವಿಡರು, ತಮ್ಮದೇ ಆದ ವಿಶಿಷ್ಟ ಸಂಪ್ರದಾಯ ಸಂಸ್ಕೃತಿಗಳನ್ನು ಹೊರ ಸಂಪರ್ಕವಿಲ್ಲದೆ ಬೆಳೆಸಿಕೊಂಡರು. ಅವರ ದನಗಳು ಕೂಡ ಹೊರ ದನಗಳ ಸಂಪರ್ಕವಿಲ್ಲದೆಯೇ ವಿಶಿಷ್ಟ ರೀತಿಯಲ್ಲಿ ವಿಕಾಸಗೊಂಡವು.

ಆರ್ಯರ ಮುಖ್ಯ ವೃತ್ತಿ ಪಶುಪಾಲನೆ. ಪಶುಪಾಲನೆಯ ಉದ್ದೇಶ ಹಾಲು, ಬೆಣ್ಣೆ ತುಪ್ಪ ಇತ್ಯಾದಿ. ಬೇಸಾಯ ಉಪಕಸಬು—ಬಹಳ ಕಾಲ, ಅವರು ಗೆದ್ದ ಜನಾಂಗಗಳಿಂದ ನಡೆಸಿಕೊಂಡು ಬಂದ ಕಸಬು. ಹೀಗಾಗಿ ಇಲ್ಲಿಯ ದನದ ತಳಿ—ಹಾಲಿನ ತಳಿಗಳಾದವು.

ದ್ರಾವಿಡರ ಮುಖ್ಯ ಕಸಬು ಬೇಸಾಯ. ಬೇಸಾಯಕ್ಕೆ ಎತ್ತು ಬೇಕೇ ಬೇಕು. ಆದುದರಿಂದ ಇವರು, ದನಗಳನ್ನು ಎತ್ತಿಗಾಗಿಯೇ ಬೆಳೆಸಿದರು. ಆದ ಕ್ಕೋಸ್ಕರವೇ ದಕ್ಷಿಣಭಾರತದ ತಳಿಗಳು ಮುಖ್ಯವಾಗಿ ಎತ್ತಿನ ತಳಿಗಳೇ ಹೊರತು ಹಾಲಿನ ತಳಿಗಳಲ್ಲ.

ಇನ್ನು ನಿನ್ನ ಎರಡನೆಯ ಪ್ರಶ್ನೆ. ದ್ರಾವಿಡರು ಈ ಪ್ರದೇಶದ ಜನರೇ, ಹೊರಗಿನಿಂದ ಬಂದವರೇ ಅಂತ. ದ್ರಾವಿಡರೂ ಕೂಡ, ಭಾರತಕ್ಕೆ ಹೊರಗಿನಿಂದ ಬಂದವರು. ಇವರು ಬರುವುದಕ್ಕೆ ಮುಂಚೆ ಇಲ್ಲಿದ್ದವರು ಬೇರೆ ಮಾನವ ಕುಲ. ಆ ಕುಲದ ಉಳಿಕೆಗಳೇ ಆದಿವಾಸಿಗಳು; ಗುಡ್ಡಗಾಡಿನ ಗಿರಿಜನರು. ನೀಲಗಿರಿ, ಬಿಳಿಗಿರಿರಂಗನಬೆಟ್ಟ, ಗೋಪಾಲಸ್ವಾಮಿ ಬೆಟ್ಟ ಮುಂತಾದೆಡೆ ವಾಸಿಸುತ್ತಿರುವ ತೋಡರು, ಬಡಗರು, ಸೋಲಿಗರು, ಎರವರು, ಕೊರಗರು, ಕುಡಿಯರು, ಕೋಟರು, ಪರಿಯರು ಇತ್ಯಾದಿ. ಇವರ ಮುಖಚರ್ಯೆಯಲ್ಲೂ, ಆಸ್ಟ್ರೇಲಿಯ ದೇಶದ ಆದಿವಾಸಿಗಳ ಮುಖಚರ್ಯೆಯಲ್ಲೂ ಕೆಲವು ಸಾಮಾನ್ಯ ಲಕ್ಷಣಗಳಿವೆ. ಆದುದರಿಂದ ನಮ್ಮ ಆದಿವಾಸಿಗಳನ್ನು ಆಸ್ಟ್ರೇಲಾಯಿಡ್ ಮಾನವ ಬುಡಕಟ್ಟಿಗೆ ಸೇರಿದವರೆಂದು ಹೇಳುತ್ತಾರೆ."

"ಆಸ್ಟ್ರೇಲಿಯಾ ಅಷ್ಟು ದೂರದಲ್ಲಿದೆ. ಇಂಡಿಯಾಕ್ಕೂ ಆಸ್ಟ್ರೇಲಿಯಾಗೂ ಮಧ್ಯೆ ದೊಡ್ಡ ಸಾಗರವೆ ಇದೆ. ಆದುದರಿಂದ ಅಲ್ಲಿಯ ಆದಿವಾಸಿಗಳಿಗೂ ನಮ್ಮ ಆದಿವಾಸಿಗಳಿಗೂ ಸಂಬಂಧ ಹೇಗೆ, ಮಾವ ?"

"ನಿನ್ನದು ಸರಿಯಾದ ಪ್ರಶ್ನೆ. ಈಗ ಈ ಎರಡು ದೇಶಗಳ ಮಧ್ಯೆ ಮಹಾಸಾಗರವಿದೆ ನಿಜ. ಆದರೆ, ಒಂದು ಕಾಲದಲ್ಲಿ, ಸಾವಿರಾರು ವರ್ಷಗಳ ಹಿಂದೆ, ಇವೆರಡು ದೇಶಗಳಿಗೂ ಭೂಸಂಪರ್ಕವಿತ್ತಂತೆ. ಆಗ್ಗೆ ದಕ್ಷಿಣ ಆಫ್ರಿಕ, ದಕ್ಷಿಣ ಇಂಡಿಯ ಮತ್ತು ಆಸ್ಟ್ರೇಲಿಯಾ ಒಂದಕ್ಕೊಂದು ಸೇರಿಕೊಂಡಿತ್ತಂತೆ. ಮೆಡಿಟರೇನಿಯನ್ ಸಮುದ್ರ ಈಗಿನ ಹಿಮಾಲಯದವರೆವಿಗೂ ಹರಡಿತ್ತಂತೆ. ಗಂಗಾ ಯಮುನಾ ಬೈಲು, ಈ ಸಾಗರದ ಒಂದು ಭಾಗವಾಗಿತ್ತಂತೆ. ಆದರೆ ಭೂಕಂಪದಿಂದ ಕೆಲವು ಪ್ರದೇಶಗಳು ತಗ್ಗಿ ಸಮುದ್ರಸಾಗರಗಳಾದವು. ಕೆಲವು ಭೂಭಾಗವಿದ್ದು ಪರ್ವತಪ್ರಸ್ಥಭೂಮಿಗಳಾದವಂತೆ.

ಆದುದರಿಂದ, ಆಸ್ಟ್ರೇಲಾಯಿಡ್ ಮಾನವ ಬುಡಕಟ್ಟು, ನಮ್ಮ ದೇಶದಲ್ಲೂ, ಆಸ್ಟ್ರೇಲಿಯಾದಲ್ಲೂ ಹರಡಲು ಹಿಂದೆ ಅಡಚಣೆಗಳಿರಲಿಲ್ಲ. ಈ ವಿಷಯ ಬೇಡ. ಹನುಮಂತನ ಬಾಲ ಬೆಳೆದಂತೆ ಮತ್ತೆ ನಮ್ಮ ಮಾತು ಎಲ್ಲೆಲ್ಲಿಗೊ ಬೆಳೆಯುತ್ತೆ.

ಏನು ಹೇಳುತ್ತಿದ್ದೆ—ದ್ರಾವಿಡರಿಗೆ ಮುಂಚೆ ದಕ್ಷಿಣ ಭಾರತದಲ್ಲಿ ಬೇರೊಂದು ಮಾನವ ಬುಡಕಟ್ಟು ಇತ್ತು ಅಂತ. ಈ ಆದಿವಾಸಿಗಳಿಗೂ ಪಶು

ಪಾಲನೆಯಲ್ಲಿ ಬಹಳ ಆಸಕ್ತಿ. ಆದರೆ ಅವರ ಪಶುಗಳು ದನಗಳಲ್ಲ—ಎಮ್ಮೆಗಳು. ನಮ್ಮ ಮೈಸೂರಿನ ಗಿರಿ ಜನರಿಗೆ, ದನಗಳಿಗಿಂತ ಎಮ್ಮೆಯೇ ಶ್ರೇಷ್ಠ. ಆರ್ಯರಿಗೆ ದನಗಳು ಹೇಗೆ ಆಸ್ತಿಯಾಗಿತ್ತೊ ಈ ಗಿರಿಜನರಿಗೆ ಇಂದಿಗೂ ಕೂಡ ಎಮ್ಮೆಯೇ ಆಸ್ತಿ. ಆರ್ಯರು ಮದುವೆಯಲ್ಲಿ ಅಳಿಯನಿಗೆ ದನಗಳನ್ನು ಬಳುವಳಿಯಾಗಿ ಕೊಡುತ್ತಿದ್ದರು. ಗಿರಿಜನರು ಈಗಲೂ ಎಮ್ಮೆಯನ್ನೇ ಮದುವೆಯಲ್ಲಿ ಕೊಡುವ ಸಂಪ್ರದಾಯವಿಟ್ಟುಕೊಂಡಿದ್ದಾರೆ. ಎಮ್ಮೆ ಕರು ಹಾಕಿದರೆ ಅದರ ಹುಟ್ಟಿದ ಹಬ್ಬವನ್ನು ಮಾಡುತ್ತಾರೆ. ಆರ್ಯರ ಪ್ರಾರ್ಥನೆ, ಗೋವಿಂದನನ್ನು, ಕುರಿತದ್ದಾದರೆ ಇವರದು ಎಮ್ಮೆಯನ್ನು ಕುರಿತು. "ದೇವರೆ ನಮ್ಮ ಎಮ್ಮೆಗಳನ್ನು ಕಾಪಾಡು ; ಅವುಗಳನ್ನು ರೋಗದಿಂದ ಪಾರು ಮಾಡು ; ದುಷ್ಟಮೃಗಗಳಿಂದ ರಕ್ಷಿಸು ; ಮೇವು ನೀರು ಸಮೃದ್ಧಿಯಾಗಿ ಸಿಕ್ಕಲಿ" ಅಂತ ಕೇಳಿಕೊಳ್ಳುತ್ತಾರೆ. ಆರ್ಯರ ಪ್ರಾರ್ಥನೆಯೂ ಇದೇ ಆಗಿತ್ತು. ವ್ಯತ್ಯಾಸ ಇಷ್ಟೆ. ಗಿರಿಜನರ ಕನ್ನಡ ಬೆರೆತ ಭಾಷೆಯ ಬದಲು ಸಂಸ್ಕೃತ ; ಎಮ್ಮೆಯ ಬದಲು ಹಸು.

ಈ ಆದಿವಾಸಿಗಳು ಎಮ್ಮೆಗೆ ಹಿರಿಯ ಸ್ಥಾನವನ್ನು ಕೊಟ್ಟಿದ್ದರಿಂದ ಅವರು ದನಗಳ ಬೆಳವಣಿಗೆಗೆ, ತಳಿಯ ಅಭಿವೃದ್ಧಿಗೆ ಗಮನಕೊಟ್ಟಿರಲಾರರು. ಇದನ್ನು ಅಭಿವೃದ್ಧಿಪಡಿಸಿದವರು ದ್ರಾವಿಡರೇ ಇರಬೇಕು. ಇವರ ಮೂಲ ದನ ಇಲ್ಲಿಯೇ ಇದ್ದ ಸ್ಥಳದ ದನ. ಈ ದನವನ್ನು ತಮ್ಮ ಬೇಸಾಯಕ್ಕೆ ನೆರವಾಗುವಂತೆ—ಬೇಸಾಯಕ್ಕೆ ಉತ್ಕೃಷ್ಟವಾದ ಎತ್ತುಗಳು ಸಿಗುವಂತೆ ರೂಪಿಸಿಕೊಂಡಿರಬೇಕು.

ಈ ದ್ರಾವಿಡರು ಯಾರು, ಎಲ್ಲಿಂದ ಬಂದರು, ಯಾವಾಗ ಬಂದರು ಎಂಬುದನ್ನು ಖಚಿತವಾಗಿ ಹೇಳಲು ಇತಿಹಾಸಕಾರರಿಗೆ ಇನ್ನೂ ಆಗಿಲ್ಲ. ದ್ರಾವಿಡರ ಮುಖಚರ್ಯೆ, ಕೆಲವು ಪೂಜಾವಿಧಿಗಳು, ಗುಡಿಸಂಪ್ರದಾಯಗಳು ಮುಂತಾದ ಪರಿಶೀಲನೆಯಿಂದ ಇವರು ಮೆಡಿಟರೇನಿಯನ್ ಸಮುದ್ರತೀರದ ಜನಗಳೆಂದು ಪರಿಗಣಿಸಲಾಗಿದೆ. ಈ ಜನ, ಅರಬ್ಬೀಸಮುದ್ರದ ಮೂಲಕ ದಕ್ಷಿಣ ಭಾರತವನ್ನು ಸುಮಾರು 4,500 ವರ್ಷಗಳ ಹಿಂದೆ ಸೇರಿದರೆಂದು ಕೆಲವರು ಹೇಳುತ್ತಾರೆ. ಮೊದಲು ಇವರು ಪಶ್ಚಿಮ ತೀರದಲ್ಲಿ ನೆಲೆಸಿದರೆಂದೂ ಅನಂತರ ಘಟ್ಟ ಏರಿ ಪೂರ್ವ ಭಾಗಗಳಿಗೆ ಬಂದರೆಂದೂ ತಿಳಿಸುತ್ತಾರೆ. ಕೇರಳದಲ್ಲಿ ಮುಸ್ರಿ ಎಂಬ ರೇವುಪಟ್ಟಣವಿದೆ; ಸ್ಕೈರಿ ಎಂಬ ಒಂದು ಪಂಗಡವಿದೆ.

ಈ ಎರಡು ಹೆಸರುಗಳೂ ಅಸ್ಸೀರಿಯಾ (Assyria) ದೇಶದ ಪ್ರಾಚೀನ ಜನದ ಗುಂಪಿನ ಹೆಸರುಗಳಂತೆ. ಅಸ್ಸೀರಿಯ, ಪಶ್ಚಿಮ ಏಷ್ಯಾದ ಟೈಗ್ರೀಸ್, ಯುಫ್ರೆಟಸ್ ನಡುವಣ ಸಾಮ್ರಾಜ್ಯವಾಗಿತ್ತು ದ್ರಾವಿಡರ ಮೂಲ ಜನಾಂಗ ಇಲ್ಲಿಯವರೇ ಇದ್ದರೂ ಇರಬಹುದು.

ಮೆಡಿಟರೇನಿಯನ್ ಜನದ ಮತ್ತೊಂದು ಗುಂಪು ಸಿಂಧು ಕಣಿವೆಯನ್ನು ಸೇರಿತೆಂದೂ, ಆ ಜನವೇ ಹರಪ್ಪ ಜನರೆಂದು ಕೆಲವು ಪ್ರವೀಣರು ಹೇಳುತ್ತಾರೆ. ಇವರ ಭಾಷೆ ಯಾವುದು ಎಂಬುದು ಅವರ ಲಿಪಿ ಓದುವತನಕ ಹೇಳಲು ಸಾಧ್ಯವಿಲ್ಲ. ಆದರೆ ಕೆಲವರು ಪ್ರವೀಣರು ಇವರದು ದ್ರಾವಿಡ ಭಾಷೆಯೆನ್ನುತ್ತಾರೆ. ಬಲೂಚಿಸ್ಥಾನದ ಒಂದು ಕಡೆ ಬ್ರೌಹಿ ಎಂಬ ಜನಾಂಗ ದ್ರಾವಿಡಭಾಷೆಯೊಂದನ್ನು ಆಡುತ್ತಿದ್ದರಂತೆ. ಈ ಕಾರಣಗಳಿಂದ ಸಿಂಧೂನದಿ ಜನರು ದ್ರಾವಿಡರು ಎಂದು ಹೇಳುತ್ತಾರೆ. ಈ ಜನ ಆರ್ಯರ ಆಕ್ರಮಣದಿಂದ ತಮ್ಮ ದೇಶವನ್ನು ಬಿಡಬೇಕಾಯಿತೆಂದೂ ಕೆಲವು ಜನ ದಕ್ಷಿಣಕ್ಕೆ ತಿರುಗಿ, ದಕ್ಷಿಣ ಭಾರತಕ್ಕೆ ಬಂದರೆಂದೂ. ಇಲ್ಲಿ ಆಗಲೇ ಬಂದ ದ್ರಾವಿಡರೊಂದಿಗೆ ಈ ದ್ರಾವಿಡ ಜನಲು ಕೂಡಿಕೊಂಡಿತೆಂದೂ ಹೇಳುತ್ತಾರೆ. ಸಿಂಧ್‌ಗೂ ನಮಗೂ ಸಂಬಂಧವಿದೆಯೆಂದು ಶಂ. ಭಾ. ಜೋಷಿ ಎಂಬ ಕನ್ನಡದ ಪ್ರವೀಣರು ಹೇಳುತ್ತಾರೆ. ಬಿಜಾಪುರದ ಸಿಂದಗಿ ಬಳ್ಳಾರಿಯ ಸಿಂದವಾಡಿ ಈ ಕಾಲದಲ್ಲಿ ವಲಸೆಯೆತ್ತಿದ ಸಿಂಧುಕಣಿವೆ ಜನಗಳ ಸ್ಥಳಗಳಾಗಿದ್ದಿರಬಹುದು. ನಮ್ಮ ಕರ್ನಾಟಕ ಸಂಗೀತದಲ್ಲೂ ಅನೇಕ ರಾಗಗಳು ಸಿಂಧಿನಿಂದ ಬಂದಿರಬೇಕು—ಸಿಂಧು ಭೈರವಿ, ಸಿಂಧು ಕನ್ನಡ, ಸಿಂಧುಗೌರಿ, ಸಿಂಧು ಮಂದಾರಿ, ಸಿಂಧುವಾಹಿನಿ, ಸಿಂಧು ರಾಮಕ್ರಿಯ, ಸೈಂಧವಿ ಮುಂತಾದವು.

ಇದು ಹೇಗಾದರೂ ಇರಲಿ. ನಮ್ಮ ಮೈಸೂರಿನ ಅಥವಾ ದ್ರಾವಿಡ ದನಗಳ ವಿಚಾರವಾಗಿ ಹೇಳುವುದಾದರೆ, ಮೆಡಿಟರೇನಿಯನ್ ಕಡೆಯಿಂದ ಮೊದಲು ನೆಲಸಿದ ದ್ರಾವಿಡರಾಗಲಿ ಸಿಂಧಿನಿಂದ ತರಾತುರಿಯಲ್ಲಿ ಬಂದ ಸಿಂಧು ದ್ರಾವಿಡರಾಗಲೀ ಅವರೊಂದಿಗೆ ಯಾವ ದನಗಳನ್ನೂ ತರಲಿಲ್ಲವೆನ್ನುವುದು ಖಂಡಿತ. ಮೊದಲು ಬಂದ ದ್ರಾವಿಡರು ಸುಮಾರಾದ ದೋಣಿಗಳಲ್ಲಿ ಅರಬ್ಬಿ ಸಮುದ್ರವನ್ನು ದಾಟಿಬಂದರು. ಈ ದೋಣಿಗಳಲ್ಲಿ ದನಗಳನ್ನು ತುಂಬಲು ಸಾಧ್ಯವಿಲ್ಲ. ಸಿಂಧ್ ದ್ರಾವಿಡರು, ತರಾತುರಿಯಲ್ಲಿ ಆಸ್ತಿಪಾಸ್ತಿ

ಬಿಟ್ಟು ಓಡಿಬಂದರು. ಅವರೂ ಕೂಡ ಜತೆಯಲ್ಲಿ ದನಗಳನ್ನು ತರಲು ಆಗಲಿಲ್ಲ. ಹೀಗಾಗಿ ಹೊರದನಗಳ ಸಂಪರ್ಕವಿಲ್ಲದೆಯೇ ನಮ್ಮ ದ್ರಾವಿಡ ದನಗಳು ರೂಪುಗೊಂಡವು. ಇನ್ನು ರೂಪಗೊಳಿಸಿದವರು ಇಲ್ಲಿಯ ಆದಿವಾಸಿಗಳಲ್ಲ; ದ್ರಾವಿಡರೇ ಅಂತ ಆಗಲೇ ಹೇಳಿದ್ದೇನೆ.

ದ್ರಾವಿಡರು ಕೂಡ ಆರ್ಯರಂತೆಯೇ ದನಕಾರರು. ಹಟ್ಟಿಕಾರರು. ದನಗಳ ಬಗ್ಗೆ ಇವರಿಗಿದ್ದ ಆಸಕ್ತಿಗೆ ಮಮತೆಗೆ, ಹರಪ್ಪ ಜನರ ಮುದ್ರೆಗಳ ಮೇಲೆ ಪದೇ ಪದೇ ಕೆತ್ತಿರುವ ಗೂಳಿಯ ಚಿತ್ರವೇ ಸಾಕ್ಷಿ. ಹಿಂದೆ ಹೇಳಿದ ಹಾಗೆ ಆರ್ಯರ ಆಸಕ್ತಿ ಹಸುವಿನಲ್ಲಿ. ದ್ರಾವಿಡರ ಆಸಕ್ತಿ ಗೂಳಿ ಎತ್ತುಗಳಲ್ಲಿ. ಆರ್ಯರು ಪಶುಪಾಲಕರು—ಹಾಲು, ಮೊಸರು, ತುಪ್ಪ ಬಯಸುವ ಜನ. ದ್ರಾವಿಡರು ಬೇಸಾಯಗಾರರು. ಬೇಸಾಯಕ್ಕೆ ಬೇಕಾದದ್ದು ಎತ್ತು. 'ಎತ್ತು ಇಲ್ಲದ ಬೇಸಾಯ ಎತ್ತೆತ್ತಲೊ' ಎಂಬ ಗಾದೆಯೇ ಇದೆ. ಆದುದರಿಂದ ದ್ರಾವಿಡರು ಮೆಚ್ಚುತ್ತಿದ್ದುದು, ಪೂಜಿಸುತ್ತಿದ್ದುದು, ಸಾಕುತ್ತಿದ್ದುದು ಗಂಡು ದನ—ಗೂಳಿ, ಎತ್ತು. ದ್ರಾವಿಡರು ಮೂಲದಲ್ಲಿ ಶೈವರು, ಶಿವನೇ ಅವರ ಆರಾಧ್ಯ ದೇವ. ಶಿವ—ಪಶುಪತಿ—ಪಶುಗಳ ಗೂಳಿಗಳ ಒಡೆಯ. ಶಿವನ ವಾಹನ ವೃಷಭ, ನಂದಿ, ಬಸವ. ಈಗಲೂ ಕೂಡ ಶಿವನನ್ನು, ನಂದಿಯನ್ನು, ಬಸವನನ್ನು ದಕ್ಷಿಣಭಾರತದಲ್ಲಿ ಪೂಜಿಸುವಷ್ಟು ಉತ್ತರಭಾರತದಲ್ಲಿ ಪೂಜಿಸುವುದಿಲ್ಲ. ಅಲ್ಲಿ ಪೂಜಿಸುವುದು ಹೆಚ್ಚಾಗಿ ಕೃಷ್ಣನನ್ನು—ಗೋಪಾಲ, ಗೋವಿಂದ ಮುರಲಿಧರ, ಕ್ಷೀರಸಾಗರಶಯನ, ವೇಣುನಾದಲೋಲ, ನವನಿತಚೋರ ಕೃಷ್ಣನನ್ನು. ಕೃಷ್ಣ ಗೊಲ್ಲ. ರಾಧೆ ಗೊಲ್ಲತಿ. ಈ ಗೊಲ್ಲಗೊಲ್ಲತಿಯರೆ ಆರ್ಯರಿಗೆ—ಅವರ ವಂಶಸ್ಥರಿಗೆ ಪ್ರೀತಿಯ ದೇವದೇವತೆ.

ಕೆಲವು ತಜ್ಞರ ಪ್ರಕಾರ, ಶಿವ, ರುದ್ರ ಇವರುಗಳನ್ನೂ ಆರ್ಯರು ತಮ್ಮ ದೇವಗಣದಲ್ಲಿ ಸೇರಿಸಿಕೊಂಡದ್ದು, ದ್ರಾವಿಡರ ಸಂಪರ್ಕವಾದ ಮೇಲೆ ; ದ್ರಾವಿಡ ಸಂಸ್ಕೃತಿ, ಆರ್ಯ ಸಂಸ್ಕೃತಿ, ಪರಸ್ಪರ ಸಂಯೋಗವಾದ ಮೇಲೆ.

ಇಷ್ಟೆಲ್ಲಾ ಯಾಕೆ ಹೇಳಿದೆ ಎಂದರೆ ದ್ರಾವಿಡರಿಗೆ ಎತ್ತು ಬಹಳ ಮೆಚ್ಚು. ಅದಕ್ಕೋಸ್ಕರವೇ ದ್ರಾವಿಡರ ದನದ ತಳಿಗಳು ಎತ್ತಿನ ತಳಿಗಳೇ ವಿನಾ ಹಾಲಿನ ತಳಿಗಳಲ್ಲ. ಹಾಲಿಗೆ ಎಮ್ಮೆ. ನಮ್ಮ ಜನಕ್ಕೆ ಹಾಲಿನ ಮೇಲೆ ವ್ಯಾಮೋಹ ಕಮ್ಮಿ. ಉತ್ತರ ಭಾರತದಲ್ಲಿ ಪ್ರತಿ ಹಳ್ಳಿಯಲ್ಲೂ ಪ್ರತಿಯೊಬ್ಬರೂ ಹಾಲು

ಮೊಸರನ್ನು ಕುಡಿಯುತ್ತಾರೆ. ತುಪ್ಪ ಅಂದರೆ ಪ್ರಾಣ ಬಿಡುತ್ತಾರೆ. "ಸಾಲ ವನ್ನಾದರೂ ಮಾಡಿ ತುಪ್ಪ ತಿನ್ನು" ಎಂಬ ಆರ್ಯೋಕ್ತಿಯನ್ನ ಪದಶಃ ಪರಿ ಪಾಲಿಸುತ್ತಾರೆ. ಆದೇ, ನಮ್ಮಲ್ಲಿ, ಪಟ್ಟಣದವರನ್ನು ಬಿಟ್ಟರೆ ಹಳ್ಳಿಗಳಲ್ಲಿ ಹಾಲನ್ನು ಕುಡಿಯುವವರು ಮಕ್ಕಳೇ ಹೊರತು ದೊಡ್ಡವರಲ್ಲ. ಅವರು ಕರೆದ ಹಾಲು, ತೆಗೆದ ಬೆಣ್ಣೆ, ಕಾಸಿದ ತುಪ್ಪ ಮುಖ್ಯವಾಗಿ ಮಾರಾಟಕ್ಕೆ ವಿನಾ ಸ್ವಂತ ಉಪಯೋಗಕ್ಕೆ ಅಲ್ಲ. ನಮ್ಮಲ್ಲಿ ಹಸುವಿಗಿಂತ ಎತ್ತೇ ಮುಖ್ಯ ವೆನ್ನುವುದಕ್ಕೆ ಮತ್ತೊಂದು ಸಾಕ್ಷಿ:

ನಮ್ಮ ದಕ್ಷಿಣದೇಶದಲ್ಲಿ ನಡೆಯುವಷ್ಟು ಭಾರಿ ದನದ ಜಾತ್ರೆಗಳು ಉತ್ತರ ಭಾರತದಲ್ಲಿ ನಡೆಯುವುದಿಲ್ಲ. ನಮ್ಮ ಮೈಸೂರಿನಲ್ಲೇ ಅನೇಕ ಕಡೆ ದೀಪಾವಳಿ, ಕುಯ್ಯಲಾದನಂತರ ದನದ ಜಾತ್ರೆಗಳು ಜರಗುತ್ತವೆ. ನೀನು ಅಲ್ಲಿಗೆ ಹೋಗಿ ನೋಡಿದರೆ ಗೊತ್ತಾಗುತ್ತೆ. ನಮ್ಮವರಿಗೆ ಎತ್ತು ಎಷ್ಟು ಅಚ್ಚು ಮೆಚ್ಚು ಅಂತ. ಈ ಜಾತ್ರೆಗಳಿಗೆ ಬರುವುದು ಎತ್ತುಗಳೇ ಹೊರತು ಹಸುಗಳಲ್ಲ. ನಮ್ಮ ಜಾತ್ರೆಗಳನ್ನು ದನದ ಜಾತ್ರೆ ಅನ್ನುವ ಬದಲು ಎತ್ತಿನ ಜಾತ್ರೆ ಅಂತಲೇ ಕರೆಯಬೇಕು. ದೊಡ್ಡಬಳ್ಳಾಪುರದ ಹತ್ತಿರ ಘಾಟಿ ಸುಬ್ರಮಣ್ಯ ಎಂಬ ಒಂದು ಕ್ಷೇತ್ರವಿದೆ. ಅಲ್ಲಿ ಪ್ರತಿವರ್ಷವೂ ಜನವರಿ ತಿಂಗಳಲ್ಲಿ ಭಾರಿ ದನದ ಜಾತ್ರೆ ನಡೆಯುತ್ತೆ. ಇಲ್ಲಿ ಮಾರಾಟವಾಗುವಷ್ಟು ದನ ಮತ್ತೆಲ್ಲೂ ಇಲ್ಲ. ಈ ದನಗಳೆಲ್ಲವೂ ಎತ್ತುಗಳೇ. ಔಷಧಿಗೂ ಒಂದು ಹಸು ಸಿಗುವುದಿಲ್ಲ. ಅಂತಹ ಅದ್ಭುತವಾದ ದನದ ಸಂಪಣಿ ಬೇರೆ ಇಲ್ಲ.

ಆರ್ಯರು ತಮ್ಮ ಐಶ್ವರ್ಯವನ್ನೂ, ಆಸ್ಥಿಯನ್ನೂ ತಮ್ಮಲ್ಲಿರುವ ಹಸುವಿನ ಸಂಖ್ಯೆಯಿಂದ ಅಳೆಯುತ್ತಿದ್ದರೆ ದ್ರಾವಿಡರು ತಮ್ಮ ಆಸ್ತಿಯನ್ನು—ಅವರ ಆಸ್ತಿ ಜಮೀನು ತಾನೆ—ತಮ್ಮ ಎತ್ತಿನ ಸಂಖ್ಯೆಯಿಂದ ಅಳೆಯು ತ್ತಿದ್ದರು —ಈ ಎಕರೆ, ಹೆಕ್ಟಾರ್ ಬರುವುದಕ್ಕೆ ಮುಂಚೆ. "ನಿನಗೆ ಎಷ್ಟು ಜಮೀನು ಇದೆ" ಎಂದು ಒಬ್ಬ ರೈತನನ್ನು ಕೇಳಿದರೆ 2 ಏರುಳ, 4 ಏರುಳ, ಅನ್ನುತ್ತಿದ್ದ. ಏರು ಅಂದರೆ ನೇಗಿಲು ಕಟ್ಟುವುದು. 2 ಜತೆ ಉಳುವಷ್ಟು ಜಮೀನು ಅಂತ ಅರ್ಥ.

ದ್ರಾವಿಡರ ಪೈಕಿ ದನಗಳನ್ನು ಲಾಗಾಯಿತನಿಂದಲೂ ಹೆಚ್ಚು ಮೆಹತ್ತಿ ನಿಂದ ಸಾಕುತ್ತಿದ್ದವರು ಮೈಸೂರಿನ ಜನ. ಈ ಕಾರಣದಿಂದಲೇ ದ್ರಾವಿಡ

ದನದ ತಳಿಗಳೆಲ್ಲಕ್ಕೂ ಮೂಲವಾದ ಹಳ್ಳಿಕಾರ್ ತಳಿ, ಮೈಸೂರಿನಲ್ಲೇ, ಮೈಸೂರು ಗೊಲ್ಲರಿಂದಲೇ ಬೆಳೆಯಿತು. ಇವರು, ಲಾಗಾಯಿತನಿಂದ ದನ ಗಾರರು ಆಗಿದ್ದರು ಎಂಬುದಕ್ಕೆ ಶಂ. ಬಾ. ಜೋಷಿಯವರು ಒಂದೆರಡು ದೊಡ್ಡ ಪುಸ್ತಕಗಳನ್ನೇ ಬರೆದಿದ್ದಾರೆ. ಬಹಳ ಸ್ವಾರಸ್ಯವಾದ, ವಿದ್ವತ್ತಿನಿಂದಕೂಡಿದ ಪುಸ್ತಕಗಳು. ಅವರ ಪ್ರಕಾರ, ಮೈಸೂರಿನ ಮೂಲ ಜನ ಹಟ್ಟಿಕಾರರು, ಹಾಲುಮತದವರು, ವೇದದಲ್ಲಿ ಬರುವ ತುರ್ವಶರು, ಅನಾರ್ಯ ಜನ. ಯಾದವರೂ ಕೂಡ—ಬಲರಾಮ, ಕೃಷ್ಣ, ದ್ರಾವಿಡ ವರ್ಗದ ಹಟ್ಟಿಕಾರರೆ. ಕೃಷ್ಣನ ಬಣ್ಣ ಕಪ್ಪು; ಶ್ಯಾಮಲವರ್ಣ, ಆದುದರಿಂದ ಈತ ಆರ್ಯನಲ್ಲ. ದ್ರಾವಿಡಕುಲದವನು. ಕೃಷ್ಣನ ನಂಟರಾದ ಕಂಸ, ಜರಾಸಂಧ, ಶಿಶುಪಾಲ, ರುಕ್ಮಿ ಮುಂತಾದವರು ಆರ್ಯರ ವಿರೋಧಿಗಳು. ಅವರ ಸಂಪ್ರದಾಯ ವನ್ನು ಎದುರಿಸುತ್ತಿದ್ದವರು—ಅನಾರ್ಯರು. ಕೃಷ್ಣನ ಭಕ್ತರನ್ನು ದಾಸರೆಂದು ಕರೆಯುತ್ತಾರೆ ಅಲ್ಲವೆ—ಪುರಂದರದಾಸ, ಕನಕದಾಸ, ಕಬೀರದಾಸ, ಸೂರ ದಾಸ ಇತ್ಯಾದಿ ದಾಸ ಎಂಬ ಪದ ಆರ್ಯರು ದ್ರಾವಿಡರನ್ನು 'ದಸ್ಯು'ಗಳು ಎಂಬುದಾಗಿ ಕರೆಯುತ್ತಿದ್ದ ಪದದಿಂದ ಬಂದದ್ದು. ಕೃಷ್ಣನ ಹಿಂಬಾಲಕರು ದಾಸರು. ಮೈಸೂರನ್ನು ಒಂದು ಕಾಲದಲ್ಲಿ ಆಳಿದ ಗಂಗರು, ತಾವು ತುರ್ವಶ ವಂಶದವರೆಂದು, ಮೊದಲು ಗಂಗಾ ಯಮುನಾ ನದಿ ಕಡೆ ಇದ್ದವರೆಂದು. ಆರ್ಯರ ಮೇಲಾಳ್ವಿಕೆಗೆ ಒಪ್ಪದೆ ದಕ್ಷಿಣಕ್ಕೆ ಬಂದರೆಂದೂ ಗಂಗರೆಂದು ಕರೆದು ಕೊಂಡರಂತೆ.

ಯಾದವ ಎಂಬ ಪದ ಯಾದಸ್—ನೀರು ಎಂಬ ಪದದಿಂದ ಬಂದಿದೆ ಯಂತೆ. ಆದಕಾರಣ ಯಾದವರು ಜಲಸಂಚಾರಿಗಳಾಗಿರಬೇಕು; ದೋಣಿ ಹಡಗುಗಳನ್ನು ನಡೆಸುವ ಕಲೆ ಕಲಿತಿರಬೇಕು. ಆರ್ಯರು ಸಮುದ್ರ ಕಂಡದ್ದು ಭಾರತದಲ್ಲಿ ನೆಲೆಸಿದ ಬಹುಕಾಲವಾದ ಮೇಲೆ-ವಂಗದೇಶಕ್ಕೆ ಬಂದಾಗ. ಅವರು ಭೂಮಿಕುಲ. ಇವರು ಯಾದವರನ್ನು ಹಾಗೆ ಕರೆದದ್ದು ಅವರು ಸಮುದ್ರ ಜನ ಅಂತಿರಬೇಕು. ಅವರ ಪಟ್ಟಣ ದ್ವಾರಕವೂ ಕೂಡ ಸಮುದ್ರದ ಪಕ್ಕದಲ್ಲಿಯೇ. ಇವರು ದ್ರಾವಿಡರು-ಮೆಡಿಟರೇನಿಯನ್ ಸಮುದ್ರದ ಕಡೆ ಯಿಂದ ಬಂದವರು ಎಂದು ತಿಳಿದು ಇವರನ್ನು ಯಾದವರು ಎಂದು ಕರೆದರಂತೆ.

ಹೀಗೆ ಅನೇಕ ದೃಷ್ಟಾಂತರಗಳನ್ನು ಕೊಟ್ಟು, ಜೋಶಿಯವರು,

ಯಾದವರೂ, ದ್ರಾವಿಡರೂ ದನಗಾರರೂ, ಹಟ್ಟಿಕಾರರೂ, ಹಾಲುಮತ ದವರೂ ಒಂದೇ ಕುಲ ಎಂದು ಸಮರ್ಥಿಸಿದ್ದಾರೆ.

ಅಂದಮೇಲೆ ದ್ರಾವಿಡರು, ಅದರಲ್ಲೂ ಮೈಸೂರಿನವರು, ಪುರಾತನ ಕಾಲದಿಂದ ದನಗಳನ್ನು ಸಾಕುತ್ತ ಇದ್ದುದರಿಂದ ಅವರು ಉತ್ಕೃಷ್ಟವಾದ ದನದ ತಳಿಗಳನ್ನು ರೂಪಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಇವರ ದನಗಳನ್ನು ದ್ರಾವಿಡ ದನಗಳು ಎಂದು ಕರೆದರೆ ತಪ್ಪೇನಿಲ್ಲ.

ಇಲ್ಲಿಗೆ ದ್ರಾವಿಡರ ಕತೆ ಮುಗಿಯಿತು. ಇನ್ನು ಇವರ ದನಗಳ ವಿಷಯ ತಿಳಿದುಕೊಳ್ಳೋಣ. ಹೋಗಿ ಸ್ನಾನ ಮಾಡಿ, ಊಟ ಮಾಡಿ, ಮಧ್ಯಾಹ್ನ ಈ ಹಳ್ಳಿಕಾರ್ ದನದ ವಿಷಯ ಪ್ರಾರಂಭಿಸೋಣ.

೧೦. "ಹಳ್ಳಿಕಾರ್, ಅಮೃತಮಹಲ್–ಇವು ಒಂದೇ, ಬೇರೆಯೆ ?"

ಮಧ್ಯಾಹ್ನ ಹೆಚ್ಚು ಪೀಠಿಕೆಯಿಲ್ಲದೆ ದನದ ಕತೆ ಆರಂಭವಾಯಿತು.

"ದ್ರಾವಿಡರ ದನಗಳಲ್ಲಿ ಎಲ್ಲದರಲ್ಲೂ ಹಳ್ಳಿಕಾರ್ ದನದ ರಕ್ತ ಹರಿಯು ತ್ತಿರುವುದರಿಂದ ಮೊದಲು ಇದರ ವಿಷಯ ತೆಗೆದುಕೊಳ್ಳೋಣ. ಮೈಸೂರಿನ ದನಗಳಲ್ಲಿ ಅತ್ಯುತ್ತಮ ತಳಿ, ಹಳ್ಳಿಕಾರ್ ಅಲ್ಲವೆ. ಇದರ ಪರಿಚಯಕ್ಕೆ ಈ ಚಿತ್ರ ನೋಡು. ಎಲ್ಲಿ, ಮೈಸೂರಿನ, ಹಟ್ಟಿಕಾರ ಕಿಟ್ಟಿ, ಇದನ್ನ ವರ್ಣಿಸು, ನೋಡುವ"

"ಹಸು ಬೆಳ್ಳಗಿದೆ; ಗೂಳಿ ಕಪ್ಪಗಿವೆ."

"ಕಪ್ಪಲ್ಲ. ನರೆ. ದಪ್ಪನರೆ ಬಣ್ಣ. ಆಮೇಲೆ ?"

"ಕಾಂಕ್ರೇಜಿನಷ್ಟು ಭಾರಿ ದನವಲ್ಲ. ಬೊಜ್ಜು ಇಲ್ಲ, ಮಾಂಸಖಂಡ ಎದ್ದು ಕಾಣುತ್ತೆ. ಅದರಲ್ಲೂ ಹೆಗಲು ಚಪ್ಪೆ ಕಡೆ"

"ರೈಟ್. ಇದು ಸುಮಾರು ಗಾತ್ರದ ದನ. ಅಡಕವಾದ ದೇಹ–ಮಾಂಸಖಂಡಯುತವಾದ ದೇಹ. ಜಟ್ಟಿಯ ತರಹದ ಮೈಕಟ್ಟು. 1·2–1·5 ಮಿ. ಎತ್ತರ. ಆದರೆ ದೇಹ ಉದ್ದ : 1·6–2 ಮಿ. ಇಲ್ಲಿಯತನಕ ನೀನು ಈ ಚಿತ್ರದ ಪುಸ್ತಕದಲ್ಲಿ, ಹಸು ಹೋರಿ ಎರಡರ ಚಿತ್ರಗಳನ್ನು ನೋಡಿದ್ದೀ. ಸಾಮಾನ್ಯವಾಗಿ ಹಸುವಿನ ಬೆಳವಣಿಗೆ ಹೋರಿಗಿಂತ ಕಡಿಮೆ ಅಲ್ಲವೆ–ಎತ್ತರ ದಲ್ಲಿ, ಉದ್ದದಲ್ಲಿ, ಗಾತ್ರದಲ್ಲಿ. ಆದರೆ ಹಳ್ಳಿಕಾರ್ ದನಗಳಲ್ಲಿ ಹಸುಗಳಿಗೂ ಎತ್ತು ಹೋರಿಗಳಿಗೂ ಬೆಳವಣಿಗೆಯಲ್ಲಿ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ.

ಹಸುವಿನ ದೇಹದ ವೈಕಟ್ಟು ಮಾಂಸಖಂಡಯುತವಾಗಿದೆ. ಆದರೆ ಡುಬ್ಬ ಮಾತ್ರ ಅಷ್ಟು ದೊಡ್ಡದಾಗಿರುವುದಿಲ್ಲ. ಹಸುವಿನ ಕೋಡು ಒರಟಾಗಿರದ ತೆಳುವಾಗಿ ಹಸನಾಗಿರುತ್ತೆ. ಈ ತಳಿಯ ಕೋಡು ನೋಡು. ಈ ಬಗೆಯ ಕೋಡು ಈ ದ್ರಾವಿಡ ದನಗಳ ವೈಶಿಷ್ಟ್ಯ. ಮತ್ತಾವ ದನದಗಳಲ್ಲೂ ಹೀಗಿರುವುದಿಲ್ಲ. ಕೋಡುಗಳು ಬಹಳ ಹತ್ತಿರವಿರುತ್ತೆ–ಕೋಡಿಗಿಂತ ಕೋಡಿನ ಬುಡ. ಮೊದಲು ಕೋಡು ಹಿಂದಕ್ಕೆ ಬೆಳೆಯುತ್ತೆ. ತುದಿಯ ಹತ್ತಿರ ಬಾಗುತ್ತೆ. ಗೂಳಿ ಕೊಂಬು ಡುಬ್ಬವನ್ನು ಮುಟ್ಟುವಷ್ಟು ಹಿಂದಕ್ಕೆ ಬೆಳೆಯುತ್ತೆ. ಇದರ ಉದ್ದ ಎಷ್ಟು ಗೊತ್ತೆ–ಸುಮಾರು 45 ಸೆಂಮಿ. ಕೊಂಬಿನ ತುದಿ ಸ್ವಲ್ಪ ಕಪ್ಪು. ಮೇಯುವಾಗ ಈ ತುದಿ ಡುಬ್ಬವನ್ನು ಮುಟ್ಟವಷ್ಟು ಹತ್ತಿರವಿರುತ್ತೆ. ಈ ತೆರದ ಕೋಡು ದಕ್ಷಿಣಭಾರತದ ದನದ ತಳಿಗಳಲ್ಲೂ ಇರುತ್ತೆ. ಅದಕ್ಕೇ ಇವುಗಳ ಮೂಲ ಹಳ್ಳಿಕಾರ್ ಅಂತ ಹೇಳುವುದು. ಇದರ ತಲೆ, ಮುಖ ಹೇಗೆ ಕಾಣುತ್ತೆ ?"

"ಮುಖ ಉದ್ದವಾಗಿದೆ, ಹಣೆ ಅಗಲವಾಗಿದೆ. ಬಾಗಿದೆ. ಕಣ್ಣು ಮುಖಕ್ಕೆ ಸಣ್ಣ. ಕಿವಿಯೂ ಚಿಕ್ಕದು, ಮೊನೂಚಾಗಿದೆ; ಜೋತುಬಿದ್ದಿಲ್ಲ."

"ಚೆನ್ನಾಗಿಯೇ ವರ್ಣಿಸುತ್ತಿದ್ದೀಯ. ಇದರ ತಲೆ, ನೀನು ಹೇಳಿದ ಹಾಗೆಯೇ, ಉದ್ದ. ಮೂತಿಯ ಕಡೆ ಕಿರಿದಾಗಿ ಬರುತ್ತೆ. ಹಣೆ—ಈ ತಲೆಗಳ ವೈಶಿಷ್ಟ್ಯ. ಅಗಲವಾಗಿರುತ್ತೆ—ನನ್ನ ಹಣೆಯತರಹ. ಅಲ್ಲದೆ ಈ ಹಣೆ ಸ್ವಲ್ಪ ಉಬ್ಬಿ ಹಿಂದಕ್ಕೆ ಸರಿಯುತ್ತೆ. ನನ್ನ ಹಣೆಯಹಾಗೆಯೇ. ಹೀಗಿರುವುದರಿಂದ ಇದರ ಹಣೆ ಬಹಳ ಅಗಲವಾಗಿ ಕಾಣುತ್ತೆ. ಆರ್ಯರ ದನದ ಮುಖ ಸುಮಾರು ಚಪ್ಪಟೆ. ಆದರೆ ಇದರ ಹಣೆ ಮಧ್ಯೆ ಉದ್ದಕ್ಕೆ ದೋಣಿಯತರಹ ತಗ್ಗು ಇರುತ್ತೆ. ಈ ದೋಣಿ ಹಣೆಯೂ ಇದರ ವಿಶೇಷ ಲಕ್ಷಣ. ಇದರ ಮೂತಿ ಕಪ್ಪು, ನೀನು ಹೇಳುವ ಹಾಗೆ ಸಣ್ಣ, ಆದರೆ ಚುರುಕಾಗಿರುತ್ತೆ; ಸಾಮಾನ್ಯವಾಗಿ ಕೆಂಪೇರಿರುತ್ತೆ. ಕಿವಿ ಅಡ್ಡಕ್ಕೆ ಶಟಂನೆ ನಿಂತಿರುತ್ತೆ.

ಇದರ ಕತ್ತು ನೋಡು—ಉದ್ದ, ತೆಳು. ಈ ತೆಳುವಿನ ಕತ್ತೂ ಈ ತಳಿಯ ವಿಶೇಷ. ಗಂಗೊದಲು ಕೂಡ ತೆಳು; ಅಷ್ಟು ಎತ್ತಿ ಕಾಣುವುದಿಲ್ಲ.

ಇದರ ಕಾಲುಗಳನ್ನು ನೋಡು. ಎಷ್ಟು ಬಲಿಷ್ಟವಾಗಿರುತ್ತೆ. ಈ ಕಾಲುಗಳ–ಮುಂಗಾಲುಗಳ ಮಧ್ಯದ ಅಂತರ ಅಗಲ. ಹೀಗಿರುವುದರಿಂದ

ಇದರ ಎದೆ, ಎದೆಗುಂಡಿ ಚೆನ್ನಾಗಿ ಬೆಳೆಯಲು ಅವಕಾಶ. ಇದು ಒಳ್ಳೆಯದೆ. ಇದು ಕೆಲಸದ ದನ. ನಡೆಯುವ, ಓಡುವ, ಎಳೆಯುವ ದನ. ಎದೆ ಅಗಲ ವಿಲ್ಲದಿದ್ದರೆ, ಈ ಕೆಲಸಕ್ಕೆ ತಕ್ಕ ಹೃದಯವಾಗಲೀ ಶ್ವಾಸಕೋಶಗಳಾಗಲೀ ಬೆಳೆಯುವುದು ಕಷ್ಟ.

ಇದರ ಗೊರಸು ನೋಡು. ಒತ್ತಾಗಿ, ಗಟ್ಟಿಯಾಗಿ, ಕಪ್ಪಗೆ ಇರುತ್ತೆ. ಬೆನ್ನು ನೇರವಾಗಿರುತ್ತೆ. ಬೆನ್ನು ನೇರವಿಲ್ಲದಿದ್ದರೆ ಚೆನ್ನಾಗಿ ಕೆಲಸಮಾಡ ಲಾರದು.

ಈ ಹಳ್ಳಿಕಾರ್ ತಳಿಯಲ್ಲಿ "ಗುಜ್ಜುಮಾವು" ಅಂತ ಒಂದು ಜಾತಿ ಇದೆ. ಇದು ನಾಗಮಂಗಲದ ಕಡೆ ಹೆಚ್ಚು. ಇದರ ಬೆನ್ನು ಹಳ್ಳಿಕಾರ ದನಕ್ಕಿಂತ ಉದ್ದ. ದೇಹವೂ ಉದ್ದ. ಈ ಉದ್ದ ದೇಹವಿರುವುದರಿಂದ ನಡೆಗೆ, ಎಳೆಯು ವುದು ಸುಲಭ. ಆದುದರಿಂದಲೇ ಈ ಗುಜ್ಜುಮಾವು ದನವನ್ನು ರೈತರು ಬಹಳ ಮೆಚ್ಚುತ್ತಾರೆ. ಇದನ್ನು ಬೆಳೆಸುವವರು ಇದರ ಮಂದೆಗಳನ್ನು ಹೆಗ್ಗಡದೇವನ ಕೋಟೆ ಕಾಡುಗಳಿಗೆ ಅಟ್ಟಿಕೊಂಡು ಹೋಗಿ ಅಲ್ಲಿ ಮುಂದಾಗಿಯೇ ಬರುವ ಮೇವನ್ನು ಮೇಯಿಸಿ ದಷ್ಟಪುಷ್ಟವಾಗಿ ಸಾಕುತ್ತಾರೆ.

ಈ ದನವನ್ನು ಹಳ್ಳಿಕಾರ್ ದನದಿಂದ ಗುರುತಿಸಲು ಇನ್ನೊಂದು ಪಾಯಿಂಟ್ ಇದೆ: ಮೊಖದ ಮೇಲೆ ಚುಕ್ಕೆ, ಸಾಮಾನ್ಯವಾಗಿ ಇದರ ಬಣ್ಣ ಕಪ್ಪು ನೆರೆ. ಚುಕ್ಕೆ ಬಿಳುಪು. ಈ ದನವನ್ನು ಪಳಗಿಸುವುದು ಸ್ವಲ್ಪ ಕಷ್ಟ. ಆದರೆ ಪಳಗಿದನಂತರ ಹೇಳಿದಹಾಗೆ ಕೇಳುತ್ತೆ; ಅಮೃತಮಹಲ್ ದನದಂತೆ ಅಲ್ಲ. ಇದು ಮುದಿಯಾದರು ತನ್ನ ರೋಷಾವೇಷವನ್ನು ಬಿಡುವುದಿಲ್ಲ. ಇದು ಯಾಕೆ ಅಂತ ಮುಂದೆ ತಿಳಿಸುತ್ತೇನೆ. ಸದ್ಯಕ್ಕೆ ಈ ಹಳ್ಳಿಕಾರ್ ವಿಷಯ. ಇದರ ಮೈ ಹೊಳಪುತ್ತಿರುತ್ತೆ. ಕಾರಣ, ಇದರ ಸಣ್ಣ ಕೂದಲು ನಯವಾಗಿ ಇರುವುದರಿಂದ. ಇದರ ಬಾಲ ಉದ್ದಕ್ಕೆ ಇರುತ್ತೆ; ಕುಚ್ಚು ಕಪ್ಪು.

ಹಳ್ಳಿಕಾರ್ ದನ ಕಸರತ್ತು ಮಾಡಿದವನ ಮೈಕಟ್ಟಿನಂತೆ ಸ್ವಲ್ಪವೂ ಬೊಜ್ಜು ಇಲ್ಲದೆ, ಬಲಿತ ಮಾಂಸಖಂಡಗಳಿಂದ ತುಂಬಿದೆ, ಅಲ್ಲವೆ. ಹೀಗೆ ಇರುವುದರಿಂದ ಇದು ದಿನಕ್ಕೆ ಕಚ್ಚಾರಸ್ತೆಯಲ್ಲೂ 48–64 ಕಿ.ಮೀ. ದೂರ ಗಾಡಿ ಎಳೆಯಬಲ್ಲದು. ಇದನ್ನು ಚಾವಟಿಯಿಂದ ಹೊಡೆಯಬೇಕಿಲ್ಲ. ಕಡ್ಡಿ ಯಿಂದ ತಿವಿಯಬೇಕಿಲ್ಲ, ಬಾಲವನ್ನು ತಿರುಚಬೇಕಿಲ್ಲ, ಒದೆಯಬೇಕಿಲ್ಲ, ಗುದ್ದ

ಬೇಕಿಲ್ಲ, ಅರಚಬೇಕಿಲ್ಲ. ತಾನಾಗಿಯೇ ಚುರುಕಾಗಿ ಕೆಲಸಮಾಡುತ್ತೆ. ಈ ದನಕ್ಕೆ ಸ್ವಾಭಿಮಾನ ಹೆಚ್ಚು. ಬಯ್ಸಿಕೊಳ್ಳುವುದು, ಹೊಡೆಸಿಕೊಳ್ಳುವುದು, ಒದೆಸಿಕೊಳ್ಳುವುದು ಈ ಹಳ್ಳಿಕಾರ್ ದನಕ್ಕೆ ತುಂಬ ಅವಮಾನ. ಕೆಲವರಿದ್ದಾರೆ. ತಾಯಿ ಬಯ್ದು ಹೊರತು ಪುಸ್ತಕ ಹಿಡಿಯುವುದಿಲ್ಲ. ಹೇಳಿಸಿಕೊಂಡು, ಓದು ವುದಕ್ಕೆ ಕೂರುತ್ತಾರೆ."

"ನಾನೇನು ಹಾಗೆ ಮಾಡುತ್ತಿಲ್ಲ ಮಾವ. ಅಮ್ಮನನ್ನೇ ಕೇಳು, ಬೇಕಾದರೆ. ಅಮ್ಮ ಹೇಳುವುದಕ್ಕೆ ಮುಂಚೆಯೇ ಓದಿಕೊಳ್ಳುತ್ತೀನಿ."

"ಹಾಗಾದರೆ ನೀನೂ ಹಳ್ಳಿಕಾರ್ ; ಸ್ವಾಭಿಮಾನಿ. ದನಕ್ಕೆ ಹೋಲಿಸಿದೆ ಅಂತ ಕೋಪ ಬರುತ್ತೇನೊ. ದನಕ್ಕಲ್ಲ, ದನದ ಗುಣಕ್ಕೆ ಹೋಲಿಸಿದೆ ಅಷ್ಟೆ. ಹೋಗು."

"ಹಳ್ಳಿಕಾರ್ ದನಕ್ಕೂ ಅಮೃತಮಹಲ್ ದನಕ್ಕೂ ಏನು ವ್ಯತ್ಯಾಸ, ಮಾವ."

"ಗುಣದಲ್ಲೆ ? ಲಕ್ಷಣಗಳಲ್ಲೆ. ಗುಣದಲ್ಲಿ ಎರಡಕ್ಕೂ ಸ್ವಾಭಿಮಾನ-ಹೇಳಿಸಿಕೊಳ್ಳದೆ ಕೆಲಸ ಮಾಡುವ ಛಲ ಇದೆ. ಆದರೆ ಅಮೃತಮಹಲ್ ದನಕ್ಕೆ ಕೋಪ ಹೆಚ್ಚು.

ಹಳ್ಳಿಕಾರ್ ದನ ಮುಖ್ಯವಾಗಿ ತುಮಕೂರು, ಹಾಸನ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ದನ. ಅಮೃತಮಹಲ್ ದನದ ವ್ಯಾಪ್ತಿ ಇನ್ನೂ ಹೆಚ್ಚು—ಚಿಕ್ಕಮಗಳೂರು, ಚಿತ್ರದುರ್ಗ, ಬೆಂಗಳೂರು, ಪೂರ್ವ ಶಿವಮೊಗ್ಗ. ಹಳ್ಳಿಕಾರ್ ದನಗಳ ಮುಖ್ಯ ಕೇಂದ್ರ—ನಾಗಮಂಗಲ, ಗುಬ್ಬಿ, ಕುಣಿಗಲು."

"ಈ ದನಕ್ಕೆ 'ಹಳ್ಳಿಕಾರ್' ಅಂತ ಯಾಕೆ ಹೆಸರು ಬಂತು, ಮಾವ. ಎಲ್ಲಾ ದನಗಳ ಹಳ್ಳಿಯವೆ. ಹಳ್ಳಿಯವರದೆ"

"ನಿಜ. ಆದರೆ ಇದನ್ನು ರೂಪಿಸಿದವರು ಹಳ್ಳಿಕಾರ್ ಜಾತಿಯ ಜನ. ಈ ಜಾತಿ ಒಕ್ಕಲಿಗರಲ್ಲಿ ಒಂದು ಜಾತಿ. ಈ ಜಾತಿಯ ಒಕ್ಕಲಿಗರು ಹೆಚ್ಚಾಗಿ ಇರುವುದು ತುಮಕೂರು, ಮೈಸೂರು, ಮಂಡ್ಯ, ಹಾಸನ, ಕುಣಿಗಲ್ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ.

ಹಿಂದೆ ದನಗಳನ್ನು ಸಾಕುತ್ತಿದ್ದ ಜನ ಗೊಲ್ಲರು, ಹಳ್ಳಿಕಾರರು. ಮೊದಲು, ಗೊಲ್ಲರ ಕಸಬು ಅವರ ಹೆಸರಿಗೆ ತಕ್ಕಂತೆ, ದನ ಸಾಕುವುದು,

ತುಪ್ಪ ಮಾರುವುದು. ಇವರಲ್ಲಿ 2 ಬಗೆ—ಕಾಡು ಗೊಲ್ಲರು, ಊರುಗೊಲ್ಲರು ಅಂತ. ಇವರ ಆರಾಧ್ಯ ದೇವ ಕೃಷ್ಣ. ಕಾಡುಗೊಲ್ಲರು ದೊಡ್ಡ ದನದ ಮಂದೆಗಳನ್ನು ಕಾಡುಮೇಡುಗಳಲ್ಲಿ ಮೇಯಿಸಿ ಸಾಕುತ್ತಿದ್ದರು. ಒಂದೆಡೆ ನೆಲೆಸದೆ ಮೇವು ಎಲ್ಲಿ ಸಿಗುತ್ತೊ ಅಲ್ಲಿಗೆ ಹಿಂಡನ್ನು ಅಟ್ಟಿಕೊಂಡು ಹೋಗಿ ಟಿಕಾಣಹಾಕುತ್ತಿದ್ದರು. ಇವರ ಉಪ ಪಂಗಡಗಳ ಹೆಸರನ್ನು ನೋಡಿದರೆ ಗೊಲ್ಲರಿಗೂ, ಪಶುಪಾಲನೆಗೂ ಎಷ್ಟು ನಿಕಟಸಂಬಂಧವಿತ್ತೆಂದು ಗೊತ್ತಾಗುತ್ತೆ. ದೊಡ್ಡಿ (ದನದ ದೊಡ್ಡಿ ಕಟ್ಟುವವರು) ಗೌಳಿ (ಎಮ್ಮೆ ಸಾಕುವವರು, ಹಾಲು ಮಾರುವವರು) ಗಾಯಕವಾಡಿ (ಹಾಡು ಹೇಳುವವರು) ಗೋಪಾಲ, ಕಾವಾಡಿಗ, ಕೊಳಲು, ಮಂದೆ, ಯಾದವ ಕುಲ ಇತ್ಯಾದಿ. ಇವರು ಹಾಡುವ ಅಥವಾ ಕೊಳಲಿನಿಂದ ಊದುವ ರಾಗಗಳನ್ನು ಕರ್ನಾಟಕ ಸಂಗೀತದಲ್ಲಿ ಗೌಳ ರಾಗ, ಗೌಳಿ ಪಂಟು ಅಂತ ಕರೆಯುತ್ತಾರೆ.

ಗೊಲ್ಲರು ಎಲ್ಲ ಬಗೆಯ ದನಗಳನ್ನೂ ಸಾಕುತ್ತಿದ್ದರು. ಹೀಗಾಗಿ, ಪ್ರತ್ಯೇಕವಾದ, ನಿರ್ದಿಷ್ಟ ಲಕ್ಷಣಗಳಿರುವ ತಳಿಗಳನ್ನು ಅಭಿವೃದ್ಧಿಪಡಿಸಲಿಲ್ಲ.

ಹಳ್ಳಿಕಾರರು ಹಾಗಲ್ಲ. ಇವರು ಜೇಸಾಯಗಾರರು. ಜೇಸಾಯದ ಜತೆಗೆ, ಉತ್ತಮವಾದ ಕೆಲವು ರಾಸುಗಳನ್ನಿಟ್ಟುಕೊಂಡು, ಬಹಳ ನಿಗಾ ಕೊಟ್ಟು, ಸರಿಯಾದ ಲಕ್ಷಣಗಳಿರುವ ದನಗಳನ್ನೇ ಆರಿಸಿ, ಬೆಳೆಸಿ, ಶ್ರೇಷ್ಠವಾದ ಹಳ್ಳಿಕಾರ್ ತಳಿಯನ್ನು ರೂಪಿಸಿದರು. ಅವರ ತಳಿಗೆ ಅವರ ಜಾತಿಯ ಹೆಸರೇ ಬಂತು. ಹಳ್ಳಿಕಾರರ ದನ ಹಳ್ಳಿಕಾರ್ ಆಯಿತು. ಗೊಲ್ಲರ ದನ ಬೆರಕೆ ದನವಾಗಿ, ಅವರ ಹೆಸರು ಯಾವ ತಳಿಗೂ ಬರದೆಹೋಯಿತು.

ಈಗ ನೀನು ಹಿಂದೆ ಕೇಳಿದ ಪ್ರಶ್ನೆ: ಹಳ್ಳಿಕಾರ್ ದನಕ್ಕೂ ಅಮೃತ ಮಹಲ್‌ಗೂ ಏನು ವ್ಯತ್ಯಾಸ ಅಂತ.

ಹಳ್ಳಿಕಾರ್ ದನ ಶುದ್ಧ ತಳಿ ; ಅಮೃತಮಹಲ್ ಸ್ವಲ್ಪ ಬೆರಕೆ. ಹಳ್ಳಿಕಾರ್ ದನ, ಇದಕ್ಕೆ ಸ್ವಲ್ಪ ಚರಿತ್ರೆ ಹೇಳಬೇಕಾಗುತ್ತೆ. ವಿಜಯನಗರದ ರಾಜ್ಯದ ಕೊನೆಗಾಲದಲ್ಲಿ–16 ನೆಯ ಶತಮಾನದಲ್ಲಿ, ಆ ರಾಜ್ಯದ ರಾಯ ಭಾರಿ, ವಿಜಯನಗರದಿಂದ ಕೆಲವು ಶುದ್ಧವಾದ ಹಳ್ಳಿಕಾರ್ ದನಗಳನ್ನು ಶ್ರೀರಂಗಪಟ್ಟಣಕ್ಕೆ ತಂದ. ಈ ರಾಜ್ಯ ಅಳಿದ ಮೇಲೆ, ಈ ಕರುಹಟ್ಟಿ-ಈ ಮಂದೆ, ಮೈಸೂರಿನ ಒಡೆಯರ ಕೈಸೇರಿತು. ಇವರು ಇದನ್ನು ಕಾಪಾಡಿಕೊಂಡು

ಬಂದರು. ರಾಜ್ಯದಲ್ಲಿ ಅಲ್ಲಲ್ಲೆ ದೊಡ್ಡ ಹುಲ್ಲುಗಾವಲುಗಳನ್ನು ಆರಿಸಿ, ಈ ಮಂದೆಯನ್ನು ವಿಭಾಗಿಸಿ, ಅಲ್ಲಿ ಬಿಟ್ಟು ಅವುಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಮಾಡಿದರು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ, ಈ ದನಗಳನ್ನು ಗಮನ ದಿಂದ ಸಾಕಲು, ಅರಮನೆಗೆ ಬೇಕಾದ ಹಾಲು, ಮೊಸರು, ಬೆಣ್ಣೆ, ತುಪ್ಪ ಒದಗಿಸಲು "ಬೆಣ್ಣೆ ಚಾವಡಿ" ಎಂಬ ಹೆಸರಿನಿಂದ ಒಂದು ಪ್ರತ್ಯೇಕ ಇಲಾಖೆ ಯನ್ನು ಸ್ಥಾಪಿಸಿದರು. ಈ ಇಲಾಖೆ ಈ ತಳಿಯ ದನಗಳನ್ನು ಇನ್ನೂ ಚೆನ್ನಾಗಿ ಅಭಿವೃದ್ಧಿ ಪಡಿಸಿತು. ಉತ್ತಮವಾದ ರಾಸುಗಳಿಗೆ, ಗುರುತು ಹಚ್ಚಲು ಮೈಯ್ಯಿನ ಮೇಲೆ ಗುರುತು ಬರೆಹಾಕುವ ಕ್ರಮ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು, ಆದರೆ ಈ ಕ್ರಮವನ್ನು 'ಬೆಣ್ಣೆ ಚಾವಡಿ'ಯವರು ಬಹಳ ಹಿಂದೆಯೇ ಆಚರಣೆಗೆ ತಂದಿದ್ದರು.

ಒಡೆಯರಿಂದ ಮೈಸೂರು ರಾಜ್ಯ ಹೈದರಾಲಿಯ ವಶಕ್ಕೆ ಬಂತು. ಜತೆಗೆ ಬೆಣ್ಣೆ ಚಾವಡಿಯ ದನಗಳೂ ಇವನ ಕೈಸೇರಿದವು. ಇವನು ಅನೇಕ ಪಾಳೇ ಗಾರರನ್ನೂ, ರಾಜರನ್ನೂ ಸೋಲಿಸಿ ಅವರ ಉತ್ತಮವಾದ ದನಗಳನ್ನು ಬೆಣ್ಣೆ ಚಾವಡಿಗೇರಿಸಿದ. ಈ ದನಗಳಿಂದ–ಅದರಲ್ಲೂ ಎತ್ತುಗಳಿಂದ, ಅವನಿಗೆ ಲಾಭ ಒಂದುದಲ್ಲದೆ, ಅವನ ಯುದ್ಧಗಳಿಗೆ ನೆರವಾದವು. ಹಿಂದೆ ಯುದ್ಧದಲ್ಲಿ ಚತುರಂಗ ಬಲವಿರುತ್ತಿತ್ತು. ಆನೆ, ಕುದುರೆ, ಒಂಟೆ, ಕಾಲಾಳುಗಳು ಅಂತ. ಎತ್ತು ಗಳನ್ನು ಯುದ್ಧದ ಅಂಗವಾಗಿ ಮಾಡಿದ ಸಾಹಸ ಹೈದರಾಲಿಗೆ ಸೇರತಕ್ಕದ್ದು. ಇವನ ಸೈನ್ಯದಲ್ಲಿ ಸುಮಾರು 60 ಸಾವಿರ ಎತ್ತುಗಳೇ ಇದ್ದವಂತೆ. ಇವನ್ನೂ ಅವನ ರಾಜ್ಯದಲ್ಲಿ ಯುದ್ಧದ ಸಾಮಗ್ರಿಗಳನ್ನು ಸಾಗಿಸಲು ಅನುಕೂಲವಾಗು ವಂತೆ ಅಲ್ಲಲ್ಲೆ ಇರಿಸಿದ್ದನಂತೆ. ಇವುಗಳ ಸಹಾಯದಿಂದ 2–2½ ದಿವಸಗಳಲ್ಲಿ 160 ಕಿ.ಮೀ. ದೂರ ಯುದ್ಧದ ಸಾಮಗ್ರಿಗಳನ್ನು ಸಾಗಿಸುತ್ತಿದ್ದನಂತೆ. ಸೋತಾಗ ಅತ್ಯಲ್ಪ ಕಾಲದಲ್ಲಿ ತನ್ನ ಗುಂಡು ಮದ್ದು ಆಯುಧಗಳನ್ನು, ಶತ್ರುಗಳ ಕೈಗೆ ಸಿಗದಂತೆ, ಎತ್ತಿನ ಗಾಡಿಗಳಲ್ಲಿ ಹೇರಿ ಬಹಳ ದೂರ ಸಾಗಿಸಿ ಬಿಡುತ್ತಿದ್ದನಂತೆ.

ಹೈದರಿನ ಮರಣಾನಂತರ, ಇವನ ಮಗ ಟಿಪ್ಪೂ ಈ ದನಗಳ ಇಲಾಖೆ ಯನ್ನು ಇನ್ನೂ ಚೆನ್ನಾಗಿ ವ್ಯವಸ್ಥೆಗೊಳಿಸಿದ. 'ಬೆಣ್ಣೆ ಚಾವಡಿ' ಇಲಾಖೆಗೆ 'ಅಮೃತಮಹಲ್' ಎಂಬ ಹೆಸರು ಕೊಟ್ಟವನೇ ಟಿಪ್ಪೂಸುಲ್ತಾನ್. ಈ

ಇಲಾಖೆ, ಅರಮನೆಗೆ, ಪರಿವಾರದವರಿಗೆ, ಸೈನ್ಯಕ್ಕೆ, ಅಮೃತಪ್ರಾಯವಾದ ಹಾಲು, ತುಪ್ಪ ಒದಗಿಸುತ್ತಿದ್ದುದಲ್ಲದೆ ಅವನ ಯುದ್ಧಗಳಲ್ಲೂ ಅಮೃತಪ್ರಾಯವಾದಂತಹ ನೆರವನ್ನು ನೀಡಿತು. ಒಂದು ಬಾರಿ ಮೈಸೂರಿನ ಪಶ್ಚಿಮದಲ್ಲಿರುವ ಬಿದನೂರು ಬ್ರಿಟಿಷರ ವಶವಾಗುವುದರಲ್ಲಿತ್ತು. ಆಗ, ಟಿಪ್ಪು, ದಕ್ಷಿಣದಲ್ಲಿ ಯುದ್ಧದಲ್ಲಿ ತೊಡಗಿದ್ದ. ಬಿದನೂರಿನ ಕಷ್ಟಸ್ಥಿತಿಯ ಸುದ್ದಿ ತಲುಪಿದ ಕೂಡಲೆ ಅವನ ಸೈನ್ಯ ಸಾಮಗ್ರಿಗಳನ್ನು ಒಂದೇ ತಿಂಗಳಲ್ಲಿ ಬಿದನೂರಿಗೆ ತಂದು ಅದನ್ನು ಮತ್ತೆ ವಶಪಡಿಸಿಕೊಂಡ. ಇನ್ನೊಂದು ಬಾರಿ 2 ದಿನಗಳಲ್ಲಿ 108 ಕಿಮೀ. ದೂರ ತನ್ನ ಸೈನ್ಯವನ್ನು ಚಲಿಸಿ ಶತ್ರುಗಳನ್ನು ಅಚ್ಚರಿಗೊಳಿಸಿದ.

ಟಿಪ್ಪುವಿಗೆ ತನ್ನ ದನಗಳ ಮಂದೆ ಬಗ್ಗೆ ಬಹಳ ಆಸಕ್ತಿ, ಹೆಮ್ಮೆ. ವರ್ಷಕ್ಕೊಮ್ಮೆ ತನ್ನ ದನಗಳೆಲ್ಲವನ್ನೂ ನೋಡಲು ಖುದ್ದಾಗಿ ತನ್ನ ಮುಂದೆಯೇ ದನಗಳನ್ನು ಕೂಡಿಸಿ ವೀಕ್ಷಿಸುತ್ತಿದ್ದ. ಚೆನ್ನಾಗಿ ಸಾಕಿದವರಿಗೆ ಬಹುಮಾನಗಳನ್ನು ಕೊಡುತ್ತಿದ್ದ.

ಹೈದರ್ ಮತ್ತು ಟಿಪ್ಪು, ತಮ್ಮ ಯುದ್ಧಗಳಲ್ಲಿ ದನಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುತ್ತಿದ್ದುದನ್ನು ಅವರೊಡನೆ ಯುದ್ಧಮಾಡುತ್ತಿದ್ದ ಬ್ರಿಟಿಷರು ಕಂಡು, ಮೆಚ್ಚಿಕೊಂಡು, ತಾವೂ ಈ ತಳಿಯ ದನಗಳನ್ನು ಸಾಕಿ ಬೆಳೆಸಲು ಶುರುಮಾಡಿದರು. ಮರಾಠ ಯುದ್ಧಗಳಲ್ಲಿ ಫ್ರಿಟ್ಸ್‌ಲರ್ ಎಂಬ ಸೇನಾನಾಯಕ, 25 ದಿವಸಗಳಲ್ಲಿ ಸುಮಾರು 560 ಕಿ.ಮೀ. ದೂರ ಯುದ್ಧದ ಶಸ್ತ್ರಾಸ್ತ್ರಗಳನ್ನು ಸಾಗಿಸಿ, ಪೇಶ್ವೆಗಳನ್ನು ಹಿಮ್ಮೆಟ್ಟಿ ಓಡಿಸಿದ. ಡ್ಯೂಕ್ ಆಫ್ ವೆಲ್ಲಿಂಗಟನ್ ಎಂಬ ಸೇನಾಪತಿ ತನ್ನ ಸೈನ್ಯವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಬಹಳ ಬೇಗ ಕೊಂಡೊಯ್ದು, ಶತ್ರುಗಳನ್ನು ಗೆಲ್ಲಲು ಈ ಅಮೃತಮಹಲ್ ದನಗಳೇ ಕಾರಣ ಎಂದು ಕೊಂಡಾಡಿದ್ದಾನೆ. ಮುಂದೆ ಇದೇ ಜಯಶೀಲ ಸೇನಾಪತಿಯು ಸ್ಪೇನಿನಲ್ಲಿ ಅವನ ಸೈನ್ಯವು ಸೋತು ಹಿಮ್ಮೆಟ್ಟಬೇಕಾದಾಗ ಹೇಳಿದ: "ನನಗೆ ಇಂಡಿಯದಲ್ಲಿ ನೆರವಾದ ಅಮೃತಮಹಲ್ ದನಗಳು ಇಲ್ಲಿ ದೊರೆತಿದ್ದರೆ ಈ ಕಠಿನ ಸೋಲನ್ನು ಅನುಭವಿಸಬೇಕಾಗುತ್ತಿರಲಿಲ್ಲ."

ಈ ಅಮೃತಮಹಲ್ ದನ (ಫೋಟೊ 15) ದಕ್ಷಿಣಭಾರತದಲ್ಲೇ ಅಲ್ಲ ಉತ್ತರ ಭಾರತದ ಯುದ್ಧಗಳಲ್ಲೂ ಬ್ರಿಟಿಷರಿಗೆ ಸಹಾಯಮಾಡಿದೆ. ಹೋದ

ಶತಮಾನದ ಮಧ್ಯೆ ಬ್ರಿಟಿಷರು, ಅಫ್ಘನ್ ಯುದ್ಧಮಾಡಲು ತಮ್ಮ ಸೈನ್ಯದಲ್ಲಿ 250 ಅಮೃತಮಹಲ್ ಎತ್ತುಗಳನ್ನು ತೆಗೆದುಕೊಂಡುಹೋಗಿದ್ದರಂತೆ. ಇವು ಇದ್ದುದರಿಂದಲೇ ಅಲ್ಲಿಯ ಗುಡ್ಡಗಾಡುಗಳ ಮೂಲಕ ತಮ್ಮ ಫಿರಂಗಿ, ಮದ್ದು ಮತ್ತು ಇತರ ಸಾಮಗ್ರಿಗಳೆಲ್ಲವನ್ನೂ, ಸ್ವಲ್ಪವೂ ಕಳೆದುಕೊಳ್ಳದೆ, ಸುರಕ್ಷಿತವಾಗಿ ಸಾಗಿಸಿದರಂತೆ. ಅನೇಕ ದಿನ ಈ ಎತ್ತುಗಳನ್ನು ಬಿಡುವಿಲ್ಲದೆ, 16 ಗಂಟೆಗಳ ಕಾಲ ಒಂದೇ ಸಮನೆ, ಗಾಡಿಗೆ ಕಟ್ಟಬೇಕಾಯ್ತುಂತೆ. ಆದರೂ ಕೂಡ ಅವು ಸುಸ್ತಾಗಲಿಲ್ಲ.

ಒಂದನೆಯ ಮಹಾಯುದ್ಧದಲ್ಲಿ (1914–18) ಕೂಡ ಈ ದನಗಳನ್ನು ಮೆಸಪೊಟೋಮಿಯದಲ್ಲಿ ಬಳಸಿದರು. ಇದಕ್ಕಾಗಿ ಮೈಸೂರು ಟ್ರಾನ್ಸ್‌ಪೋರ್ಟ್ ಕೋರ್ (Mysore Transport Corps) ಎಂಬ ಸೈನ್ಯ ವಿಭಾಗವನ್ನೇ ಸ್ಥಾಪಿಸಿದ್ದರು. ಇವು ಮಾಡಿದ ಕೆಲಸ, ಕೊಟ್ಟ ನೆರವನ್ನು, ಮೆಚ್ಚಿ, ಅಲ್ಲಿಯ ಸೇನಾನಾಯಕ ಹೇಳಿದನಂತೆ: 'ಈ ದನಗಳು ಹೇಸರುಗತ್ತೆಯಂತೆಯೇ ಚುರುಕಾಗಿ ನಡೆಯಬಲ್ಲವು. ಬಲವಿಲ್ಲದ ಹಂಗಾಮಿ ಪಾಂಟೂನ್ ಸೇತುವೆಗಳನ್ನು ದಾಟುವಾಗ ಹುಷಾರಿನಿಂದ, ಸೇತುವೆ ಜಗ್ಗಿಸದೆ ಏಕಪ್ರಕಾರವಾಗಿ ನಡೆಯುತ್ತವೆ. ಹೇಸರುಗತ್ತೆಗಳು ಅಡ್ಡಾದಿಡ್ಡಿಯಾಗಿ ನುಗ್ಗಿ ಈ ಸೇತುವೆಗಳನ್ನು ಉರುಳಿಸಿಯಾವು. ಇವು ಎಂದಿಗೂ ಇಲ್ಲ. ಅಲ್ಲದೆ ಬಹಳ ಕೆಟ್ಟ ರಸ್ತೆಗಳಲ್ಲಿ, ಬಹಳ ಪ್ರತಿಕೂಲವಾಗಿರುವ ಮೆಸಪೊಟೋಮಿಯ ಹವಾಮಾನದಲ್ಲೂ ಕೆಲಸಮಾಡಿವೆ." ಎರಡನೆಯ ಮಹಾಯುದ್ಧದಲ್ಲೂ ಇವನ್ನು ಪೂರ್ವ ಆಫ್ರಿಕ, ಅಬಿಸೀನಿಯಾ ಕಡೆ ಯುದ್ಧ ಸಾಮಗ್ರಿಗಳ ಸಾಗಣಿಕೆಗೆ ಬಳಸಿದರು.

ಮತ್ತೊಬ್ಬರು ಹೇಳಿದ್ದಾರೆ: ಅಮೃತಮಹಲ್ ದನಗಳಿಗೂ, ಇತರ ದನಗಳಿಗೂ, ಚುರುಕಿನಲ್ಲಿ, ಜೂಜಿನ ಕುದುರೆಗೂ ಜಟಕಾ ಕುದುರೆಗೂ ಯಾವ ವ್ಯತ್ಯಾಸವಿದೆಯೋ ಆ ವ್ಯತ್ಯಾಸ ಇವಲ್ಲಿವೆ, ಅಂತ. $^{3}/_{4}$-1 ಟನ್ನು ಭಾರವನ್ನೂ ಸಲೀಸಾಗಿ ಎಳೆಯಬಲ್ಲದು; ಇಷ್ಟು ಚುರುಕಾಗಿ ಕೆಲಸ ಮಾಡಬಲ್ಲ ದನ, ಈ ದೇಶದಲ್ಲಿ ಯಾಕೆ, ಮತ್ತಾವ ದೇಶದಲ್ಲೂ ಇಲ್ಲ. ಟಿಪ್ಪೂಸುಲ್ತಾನನಂತರ, ಈ ಅಮೃತಮಹಲ್ ಇಲಾಖೆ ಸರಿಯಾಗಿ ಕೆಲಸ ಮಾಡಲಿಲ್ಲ. ಸಾಕಷ್ಟು ಗಮನಕೊಡದೆ ಇದ್ದುದರಿಂದ ಈ ತಳಿ ಕೆಟ್ಟಿತು;

ಸ್ವಲ್ಪ ಬೆರಕೆಯಾಯಿತು. ಈ ಮಂದೆಯನ್ನು ಚದುರಿಸಿ ಮಾರಿಬಿಟ್ಟಾಗ ಒಳ್ಳೆಯ ರಾಸುಗಳನ್ನು ಈಜಿಪ್ಟಿನ ಪಾಷಾಕೊಂಡೊಯ್ದ. ಕಳಪೆ ರಾಸುಗಳೇ ಈ ಇಲಾಖೆಯಲ್ಲಿ ಉಳಿದವು.

ಆದರೆ, ಸುಮಾರು ನೂರು ವರ್ಷಗಳ ಕೆಳಗೆ, ಬ್ರಿಟಿಷರು ಪುನಃ ಈ ದನಗಳ ಕಡೆಗೆ ಗಮನಕೊಟ್ಟು ಅತ್ಯಲ್ಪ ಕಾಲದಲ್ಲೇ ತಳಿಯನ್ನು ಮತ್ತೆ ಉತ್ತಮಪಡಿಸಿದರು. ಆದರೆ ಹಿಂದೆ ನಡೆಸಿದ ಅಲಕ್ಷ್ಯದಿಂದ, ಈ ತಳಿ ಅಷ್ಟು ಶುದ್ಧವಾಗಲಿಲ್ಲ. ಅಮೃತಮಹಲ್ ದನ ಸ್ವಲ್ಪ ಕಲಬೆರಕೆಯಾಗಿಯೇ ಉಳಿದಿದೆ. ಇವುಗಳಲ್ಲಿ ಮೂರು ಜಾತಿ; ಹಳ್ಳಿಕಾರ್, ಹಾಗಲುವಾಡಿ ಮತ್ತು ಚಿತ್ರದುರ್ಗ ತಳಿಗಳು. ಇವುಗಳು ದೂರದಿಂದ ಒಂದೇ ತಳಿಯಂತೆ ಕಂಡರೂ ವ್ಯತ್ಯಾಸಗಳಿವೆ.

ಹಾಗಲವಾಡಿ, ತುಮಕೂರಿನ ಗುಬ್ಬಿ ತಾಲ್ಲೂಕಿನ ಹಾಗಲುವಾಡಿ ಪಾಳೆಯಗಾರ ಅಭಿವೃದ್ಧಿಪಡಿಸಿದ ತಳಿ. ಇವನ್ನು ಟಿಪ್ಪು ತನ್ನ ಮಂದೆಗೆ ಸೇರಿಸಿಕೊಂಡ ತರುವಾಯ ಇದು ಹಳ್ಳಿಕಾರ್ ದನದೊಂದಿಗೆ ಸೇರಿಹೋಯಿತು. ಚಿತ್ರದುರ್ಗ ತಳಿ, ಅಲ್ಲಿಯ ಪಾಳೆಯಗಾರ, ಗೊಲ್ಲರ ದನಗಳಲ್ಲಿ ಬಹಳ ಚೆನ್ನಾದುವನ್ನು ಆರಿಸಿ ಅಭಿವೃದ್ಧಿಪಡಿಸಿದ ತಳಿ. ಇದೂಕೂಡ, ಆಮೇಲೆ, ಹೈದರಿನ ಮಂದೆಗೆ ಸೇರಿಹೋಯಿತು. ಇದರ ತಲೆ ಸ್ವಲ್ಪ ಸಣ್ಣ, ಕೋಡು ಉದ್ದ; ತೆಳು. ಬಣ್ಣ ಬಿಳಪು, ಈಗಲೂಕೂಡ ಅಮೃತಮಹಲ್ ದನಗಳಲ್ಲಿ ಈ ಲಕ್ಷಣಗಳು ಅಲ್ಲಲ್ಲೆ ಕಾಣಿಸಿಕೊಳ್ಳುತ್ತವೆ.

ಈಗಿನ ಅಮೃತಮಹಲ್ ದನಗಳಿಗೂ, ಹಳ್ಳಿಕಾರ್ ದನಗಳಿಗೂ ಮುಖ್ಯ ವ್ಯತ್ಯಾಸವೇನು ಅಂತ ನೀನು ಕೇಳಬಹುದು. ಮೊದಲು ಬಣ್ಣದಲ್ಲಿ; ಹಳ್ಳಿಕಾರ್ ದನದ ಬಣ್ಣ ತಿಳಿ ಅಥವಾ ಅಚ್ಚಸರೆ. ಮೊಖದ ಮೇಲೆ, ಗಂಗೊದಲಿನ ಮೇಲೆ ಬಿಳಿಯ ಮಚ್ಚೆಗಳಿರುತ್ತವೆ. ಹಸುಗಳ ಬಣ್ಣವೂ, ನರೆ, ಹೆಗಲು ಮತ್ತು ಚಪ್ಪೆ ಸ್ವಲ್ಪ ಕಪ್ಪುಛಾಯೆ. ಆದರೆ ಬಿಳಿ ಮಚ್ಚೆಗಳು ಇರುವುದಿಲ್ಲ.

ಹಳ್ಳಿಕಾರ್ ದನದ ಹಣೆ ಉಬ್ಬಿರುತ್ತೆ. ಹಣೆಯ ಮಧ್ಯೆ ನೇರವಾಗಿರುವ ಕುಳಿ–ದೋಣಿ ಇರುತ್ತೆ. ಕೋಡುಗಳು, ಹತ್ತಿರಕ್ಕೆ ಇರುತ್ತವೆ ಮತ್ತು ಲಂಬವಾಗಿ ಹೊರಡುತ್ತವೆ. ಈ ಕೋಡುಗಳು ಸ್ವಲ್ಪ ಕಪ್ಪು; ಮೊದಲು ಸ್ವಲ್ಪ

ಹೊರಕ್ಕೆ ಹಿಂದಕ್ಕೆ ಬಾಗಿ ಆಮೇಲೆ ಮುಂದಕ್ಕೆ ಬಗ್ಗುತ್ತವೆ. ಮೂತಿ ಕಪ್ಪು; ಅಗಲ. ಕೆಲವಲ್ಲಿ ಮೂತಿಮೇಲೆ ಬಿಳಿಯ ಮಚ್ಚೆ ಇರುತ್ತೆ.

ಅಮೃತಮಹಲ್ ದನದ ಹಣೆ ಉಬ್ಬಿರುವುದಿಲ್ಲ; ಕುಳಿಯೂ ಬಿದ್ದಿರುವುದಿಲ್ಲ. ಕೋಡುಗಳು ಸ್ವಲ್ಪ ದೂರ, ಹಿಂದಕ್ಕೆ ಹೊರಕ್ಕೆ ಬೆಳೆದು ಮುಂಬಾಗುತ್ತವೆ. ಬಣ್ಣ ಸ್ವಲ್ಪ ಹಗುರ, ಕಣ್ಣು ಕೆಂಪೇರಿರುತ್ತೆ; ಮೂತಿ ಕಪ್ಪು; ಮಚ್ಚೆಗಳಿಲ್ಲ.

ಹಳ್ಳಿಕಾರ್ ದನದ ಕತ್ತು ಚಿಕ್ಕದು; ತೆಳು, ಗಂಗೊದಲು ತೆಳು. ಅಮೃತಮಹಲ್ ದನದ ಕತ್ತು ಉದ್ದ, ದಪ್ಪ. ಗಂಗೊದಲು ಚೆನ್ನಾಗಿ ಬೆಳೆದಿರುತ್ತೆ. ಡುಬ್ಬವೂ ಪುಷ್ಟವಾಗಿರುತ್ತೆ; ಬಾಲ ಮೊನೂಚು, ಕುಚ್ಚು ದೊಡ್ಡದು.

ಅಮೃತಮಹಲ್ ದನ ಅಷ್ಟು ಚುರುಕಾಗಿರುವುದಕ್ಕೆ ಪ್ರತಿಕೂಲ ಹವಾಗುಣ, ಕಚ್ಚಾ ರಸ್ತೆ, ಮೇಲಿನ ಅಭಾವಗಳನ್ನು ಎದರಿಸುವುದಕ್ಕೆ, ಬಹಳ ದೂರ, ವೇಗದಿಂದ ನಡೆಯಬಲ್ಲ ಶಕ್ತಿ ಹೊಂದಿರುವುದಕ್ಕೆ ಕಾರಣ ಗೊತ್ತೆ ? ಇವು ಕಾಡಿನ ದನಗಳಾಗಿರುವುದರಿಂದ.

" ಇವು ಕಾಡುದನವೇ, ಮಾವ ? "

" ನೋಡಿದೆಯಾ, ನನ್ನ ಮಾತುಗಳನ್ನು ಸರಿಯಾಗಿ ಕೇಳುತ್ತಿಲ್ಲ. ನಾನು ಹೇಳಿದ್ದು ಇವು **ಕಾಡಿನ ದನಗಳು** ಅಂತ; **ಕಾಡುದನ** ಅಂತ ಅಲ್ಲ. ಈ ದನಗಳು ಕಾಡುಗಳಲ್ಲಿ—ಅಮೃತಮಹಲ್ ಕಾವಲುಗಳಿರುವುದು ಕಾಡುಗಳ ಬಳಿಯಲ್ಲೇ—ಹುಟ್ಟಿ ಬೆಳೆಯುತ್ತವೆ. ಪ್ರಾಯಕ್ಕೆ ಬಂದನಂತರ ಅವನ್ನು ಹಿಡಿದು ಪಳಗಿಸುತ್ತಾರೆ.

ಇವನ್ನು ಹೇಗೆ ಪಳಗಿಸುತ್ತಾರೆ ಗೊತ್ತೆ ? ನಮ್ಮ ಮೈಸೂರಿನವರು ಚತುರರು. ಆನೆಗಳನ್ನು ಪಳಗಿಸಲು ಖೆಡ್ಡಾ ಏರ್ಪಾಡು ಮಾಡಿಕೊಂಡಿದ್ದಾರೆ. ಈ ಬಗೆಯ ಖೆಡ್ಡಾ ಮತ್ತಾವ ದೇಶದಲ್ಲೂ ಇಲ್ಲ. ಹಾಗೆಯೇ ಕಾಡಿನ ದನಗಳನ್ನು ಪಳಗಿಸಲು ಒಂದು ಕ್ರಮವನ್ನು ರೂಪಿಸಿಕೊಂಡಿದ್ದಾರೆ. ಈ ಕ್ರಮವನ್ನು ಮತ್ತಾವ ಕಡೆಯೂ ಅನುಸರಿಸುವುದಿಲ್ಲ.

ಅಮೃತಮಹಲ್ ಮಂದೆಗಳನ್ನು ಸಾಕಲು ರಾಜ್ಯದ ಬೇರೆ ಬೇರೆ ಕಡೆ ಸುಮಾರು 240 ಕಾವಲುಗಳನ್ನು ಏರ್ಪಡಿಸಿದ್ದರು. ಇದ್ದರು ಅಂತ ಯಾಕೆ

ಹೇಳುತ್ತೀನಿ ಅಂದರೆ ಈಗ ಅಷ್ಟು ಕಾವಲುಗಳಾಗಲೀ, ಬೆಳೆಸಿ ಪಳಗಿಸುವ ಕ್ರಮವಾಗಲೀ, ಮೊದಲಿನಂತೆ ಇಲ್ಲ. ನಾನು ಹೇಳುತ್ತಿರುವುದು ಹಿಂದೆ ಅನುಸರಿಸುತ್ತಿದ್ದ ಪದ್ಧತಿ.

ಈ ಕಾವಲುಗಳು, ಸರ್ಕಾರಿ ಕಾವಲುಗಳು—ಇಲ್ಲಿ ಮತ್ಯಾರೂ ದನ ಮೇಯಿಸಲಾಗದು. ಕಾವಲುಗಳ ವಿಸ್ತೀರ್ಣ ಸುಮಾರು 4 ಲಕ್ಷ ಎಕರೆ, ಅಂದರೆ ಒಂದೊಂದು ಕಾವಲು 1500–1700 ಎಕರೆಯಷ್ಟು ದೊಡ್ಡವು, ಈ ಕಾವಲುಗಳಲ್ಲಿ ಸುಮಾರು 12 ಸಾವಿರ ದನಗಳನ್ನು ಇಟ್ಟಿದ್ದರು.

ಒಂದೊಂದು ಮಂದೆಯಲ್ಲಿ ಸುಮಾರು 300 ದನಗಳಿರುವಂತೆ, ಇವು ಗಳನ್ನು ನೋಡಿಕೊಳ್ಳಲು ತಕ್ಕ ಸಿಬ್ಬಂದಿಗಳನ್ನು ಇಟ್ಟಿದ್ದರು—ಸರ್ವೆಗಾರರು, ದರೋಗ ಇತ್ಯಾದಿ, ಒಂದೊಂದು ಹಿಂಡಿಗೂ ಕೆಲವು ಕಾವಲುಗಳು ಮೀಸಲು. ಕಾವಲಿನಲ್ಲಿ ಮೇವು ಕಡಿಮೆಯಾದರೆ ಪಕ್ಕದ ಕಾಡುಗಳಲ್ಲೇ ಮೇಯಲು ಬಿಡುತ್ತಿದ್ದರು. ಹೀಗಾಗಿ, ಈ ದನಗಳು ಹುಟ್ಟುವುದು, ಬೆಳೆಯುವುದು ಕಾಡು, ಕಾವಲುಗಳಲ್ಲಿ; ಬಿಸಿಲು, ಮಳೆಯಲ್ಲಿ. ಮರದ ನೆರಳೇ ಇವುಗಳ ನೆಲೆ. ದುಷ್ಟ ಮೃಗಗಳಿಂದ ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಕಾಪಾಡಲು ಗೊಲ್ಲರಿಲ್ಲ. ಯಾರು ಇವನ್ನು ಕರೆಯುವುದಿಲ್ಲ. ಕೆಚ್ಚಲಿನ ಹಾಲೆಲ್ಲವೂ ಕರುಗಳಿಗೆ. ಯಾರ ಅಂಕೆ ಆತಂಕಗಳೂ ಇಲ್ಲದೆ, ಕಾಡು ಮೇಡುಗಳಲ್ಲಿ ಓಡಾಡುವ ಈ ದನಗಳು ಕಷ್ಟ ಸಹಿಷ್ಣುಗಳಾಗಿರುವುದರಲ್ಲಿ ಆಶ್ಚರ್ಯವೆಲ್ಲಿ. ಶತ್ರುಗಳಿಂದ ಪಾರಾಗಲು ಕಾಲು ಚುರುಕಾಗಿರಬೇಕಲ್ಲವೆ ? ವೇಗದಿಂದ ಓಡುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕಲ್ಲವೆ.

ಇಂತಹ ಕಾಡಿನ ದನಗಳನ್ನು ಊರಿನ ಕೆಲಸಗಳಿಗೆ—ಉಳುವುದಕ್ಕೆ, ಗಾಡಿಗೆ, ಪಳಗಿಸುವುದು ಪ್ರಯಾಸದ ಕೆಲಸ. ಹೀಗೆ ಮಾಡಲು ಒಂದು ಕ್ರಮ ರೂಪಿಸಿಕೊಂಡಿದ್ದಾರೆ. ಮೊದಲು, 5 ರಿಂದ 12 ತಿಂಗಳಿನ ಹೋರಿಗರು ಗಳನ್ನು ಕಸಿಮಾಡುತ್ತಾರೆ. ಇವುಗಳಿಗೆ ಮೂರು ವರ್ಷವಾದಾಗ ಇವನ್ನು ಹಿಡಿದು, ದೊಡ್ಡ ದೊಡ್ಡಿಗೆ, ಕಿರಿದಾದ ಬಾಗಿಲು ಮೂಲಕ ಅಟ್ಟುತ್ತಾರೆ. ಇದರ ಮಧ್ಯದಲ್ಲಿ ಒಂದು ಸಣ್ಣ ಚಚ್ಚೌಕವಾದ ರೊಪ್ಪವಿರುತ್ತೆ. ಈ ರೊಪ್ಪಕ್ಕೆ 4 ಮೀ. ಎತ್ತರವಿರುವ ಮರದ ಕಂಬಗಳಿಂದ ಬೇಲಿ ಕಟ್ಟುತ್ತಾರೆ. ಈ ದನಗಳನ್ನು ದೊಡ್ಡಿಯಿಂದ ರೊಪ್ಪಕ್ಕೆ ನುಗ್ಗಿಸಿ ಬಾಗಿಲು ಮುಚ್ಚುತ್ತಾರೆ. ಇವನ್ನು

ಪಳಗಿಸಲು ಈ ಕೆಲಸದಲ್ಲಿ ನುರಿತ ಪ್ರತ್ಯೇಕ ಸಿಬ್ಬಂದಿ ಇರುತ್ತೆ. ಇವರು ಬೇಲಿ ಮೇಲೆ ಕೂತು, ಉದ್ದ ಹಗ್ಗದ ತುದಿಯನ್ನು ಸರಿಗುಣಿಕೆ (ಜೀರು ಗುಣಿಕೆ) ಹಾಕಿ, ಕೊಂಬಿನ ಮೇಲೆ ಎಸೆದು ಎಳೆಯುತ್ತಾರೆ. ಗುಣಿಕೆ ಕೊಂಬನ್ನು ಬಿಗಿಯುತ್ತೆ. ಹಗ್ಗದ ಮತ್ತೊಂದು ತುದಿಯನ್ನು ಬೇಲಿ ಹೊರಗೆ ಇರುವ ಜನಕ್ಕೆ ಕಂಬಗಳ ಮೂಲಕ ಕೊಡುತ್ತಾರೆ. ಇವರು ಈ ತುದಿಯನ್ನು ಎಳೆದು ದನಗಳನ್ನು ಬೇಲಿ ಹತ್ತಿರಕ್ಕೆ ತರುತ್ತಾರೆ. ಆ ಮೇಲೆ ಹಗ್ಗವನ್ನು ಕಂಬಗಳಿಗೆ ಬಿಗಿಯಾಗಿ ಕಟ್ಟುತ್ತಾರೆ. ರೊಪ್ಪದಲ್ಲಿದ್ದ ದನಗಳೆಲ್ಲ ವನ್ನು ಬೇಲಿ ಕಂಬಗಳ ಒತ್ತಿಗೆ ಕಟ್ಟಿ ಹಾಕಿದ ಮೇಲೆ, ರೊಪ್ಪದ ಬಾಗಿಲನ್ನು ತೆಗೆದು ಪಳಗಿದ ಎತ್ತುಗಳನ್ನು ರೊಪ್ಪದೊಳಗೆ ಬಿಡುತ್ತಾರೆ. ಒಂದೊಂದು ಕಾಡಿನ ಎತ್ತಿಗೂ ಒಂದೊಂದು ಪಳಗಿದ ಎತ್ತನ್ನು ಜತೆಗೂಡಿಸುತ್ತಾರೆ. ಪಳಗಿದ ಎತ್ತಿನ ಕತ್ತಿನ ಹಗ್ಗಕ್ಕೆ ಕಾಡಿನ ದನವನ್ನು ಕಟ್ಟುತ್ತಾರೆ. ಹೀಗೆ ಕಟ್ಟಿದ ಮೇಲೆ ಕೊಂಬಿನ ಹಗ್ಗವನ್ನು ಸಡಿಲಿಸುತ್ತಾರೆ. ಹೊಸದನ ಓಡುವು ದಕ್ಕೆ ಹೋಗುತ್ತೆ. ಆದರೆ ಪಳಗಿದ ದನ ಇದನ್ನು ಹದ್ದಿನಲ್ಲಿಡುತ್ತೆ. ಹೀಗೆ ಒಂದೆರಡು ದಿವಸ, ನೂರಾರು ಸಲ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟು ವಿಫಲವಾಗಿ ಸುಸ್ತಾಗುತ್ತೆ. ಆಮೇಲೆ ಅದಕ್ಕೆ ಭಾರವಾದ ಮರದ ದಿಮ್ಮಿ ತುಂಡುಗಳನ್ನು ಕಟ್ಟುತ್ತಾರೆ. ಪಳಗಿದ ದನವನ್ನು ಜತೆ ಬಿಡಿಸುತ್ತಾರೆ. ಈ ದಿಮ್ಮಿಯನ್ನು ಎಳೆದುಕೊಂಡು ಪರಾರಿಯಾಗುವುದು ಕಷ್ಟ. ಕ್ರಮೇಣ, ಪಳಗಿದ ಮೇಲೆ, ತುಂಡುಗಳನ್ನು ಕಿತ್ತು ಹತ್ತಿರವೇ ಮೇಯಲು ಬಿಡುತ್ತಾರೆ. ಇವನ್ನು ಕೆಲಸಕ್ಕೆ ಚೆನ್ನಾಗಿ ಪಳಗಿಸಲು ಮೂರು ವರ್ಷ ಬೇಕಾಗುತ್ತೆ. ಆರು ವರ್ಷದ ಎತ್ತುಗಳನ್ನು, ಗಾಡಿಗಳಿಗೆ, ನೇಗಿಲುಗಳಿಗೆ ಪಳಗಿಸುತ್ತಾರೆ.

ಈ ಪಳಗಿಸುವ ಕೆಲಸ ಕಷ್ಟ; ಬಹುಕಾಲ ಹಿಡಿಯುತ್ತೆ. ಪಳಗುವ ಹೊತ್ತಿಗೆ ದನಕ್ಕೆ 6–7 ವರ್ಷ ವಯಸ್ಸಾಗಿ ಹೋಗಿ ಬಿಡುತ್ತೆ. ಅದಕ್ಕೋಸ್ಕರ ಈ ದನಗಳನ್ನು ಕಾಡಿನ ದನಗಳಾಗಿ ಬೆಳೆಸುವುದರ ಬದಲು, ಚಿಕ್ಕ ವಯಸ್ಸಿನಿಂದಲೇ ಪಶುಪಾಲನಾ ಫಾರಂಗಳಲ್ಲಿ, ಕೊಟ್ಟಿಗೆಗಳಲ್ಲಿ ಸಾಕುವ ಕ್ರಮವನ್ನು ಈಗ ಅನುಸರಿಸುತ್ತಿದ್ದಾರೆ. ಆದರೂ ಒಂದು ಕಾಲದಲ್ಲಿ ಇವು ಕಾಡಿನ ದನಗಳಾಗಿದ್ದುದರಿಂದ ಕಾಡಿನ ವಾಸನೆ ಈ ತಳಿಗಳಲ್ಲಿ ಮಾಯವಾಗುವುದೇ ಇಲ್ಲ. ಚೆನ್ನಾಗಿ ಪಳಗಿದ್ದರೂ ಕಾಡು ಸ್ವಭಾವವನ್ನು, ರೋಷಾವೇಶಗಳನ್ನು

ಸ್ವಲ್ಪವಾದರೂ ಉಳಿಸಿಕೊಂಡೇ ಇವೆ." "ಈ ದನಗಳನ್ನು ಇಷ್ಟು ಲೇಟಾಗಿ ಕೆಲಸಕ್ಕೆ ಹಾಕ್ತಾರಲ್ಲ. ಎಷ್ಟು ದಿವಸ ಬದುಕುತ್ತವೆ, ಇವು".

"ಸುಮಾರು 17-18 ವರ್ಷ ಕಾಲ."

"ಈ ದನಗಳು ಹಾಲನ್ನು ಕೊಡುವುದೇ ಇಲ್ಲವೆ."

"ಕೊಡದೆ ಏನು. ಕರುಗಳಿಗೆ ಆಗುವಷ್ಟು ; ಸಾಕುವವರಿಗೆ ಬೇಕಾಗುವಷ್ಟು ಅಲ್ಲ. ಆದರೆ, ಫಾರಂಗಳಲ್ಲಿ ಚೆನ್ನಾಗಿ ತಿಂಡಿ ಹಾಕಿದಾಗ (2-3) ಲೀ. ($1^1/_2$-2 ಸೇರು) ಹಾಲು ಕೊಡುತ್ತದೆ ಮೈಸೂರಿನ ಹತ್ತಿರ ರಾಯನ ಕೆರೆ ಎಂಬ ಅರಮನೆಗೆ ಸೇರಿದ ಕರುಹಟ್ಟಿ ಇತ್ತು. ಅಲ್ಲಿ, ಒಂದು ಅಮೃತ ಮಹಲ್ ಹಸು 12 ಲೀಟರ್ (9 ಸೇರು) ಹಾಲು ಕೊಡುತ್ತಿತ್ತು. 6-8 ಸೇರು ಹಾಲು ಕೊಡುವ ದನಗಳು ಕೆಲವಿವೆ ;

ಹಳ್ಳಿಕಾರ ಹಸುವನ್ನು ಚೆನ್ನಾಗಿ ಸಾಕಿದರೆ ಇವಕ್ಕಿಂತ ಹೆಚ್ಚು ಹಾಲು ಕೊಡಬಲ್ಲವು.

ಈ ಎರಡು ತಳಿಗಳು ಹಾಲನ್ನು ಕಡಿಮೆ ಕೊಟ್ಟರೂ ಗಟ್ಟಿ ಹಾಲನ್ನು ಕೊಡುತ್ತವೆ. ಇವುಗಳ ಹಾಲು ಹಳದಿಯ ಮೇಲೆ ಇರುತ್ತವೆ. ಇವುಗಳ ಬೆಣ್ಣೆ ತುಪ್ಪವೂ ಹಳದಿಯ ಮೇಲೇ ಇರುತ್ತೆ. "ಹಾಲಿನಂತೆ ಬೆಳ್ಳಗೆ", ಎಂಬ ಮಾತಿಗೆ ಇದರ ಹಾಲು ವಿರೋಧ.

ಈ ಹಳದೀ ಬಣ್ಣವಿರುವುದು ಒಳ್ಳೆಯದೇ. ಇದರಲ್ಲಿ ವಿಟಾಮಿನ್ A ಅಂಶ ಹೆಚ್ಚಾಗಿರುವುದರಿಂದಲೇ ಹಳದಿ ಬಣ್ಣ. ಮಾವಿನ ಹಣ್ಣು, ಹಲಸಿನ ಹಣ್ಣು, ಕ್ಯಾರೆಟ್ಟು (ಗಾಜಲು) ಹಳದಿಯಾಗಿರುವುದು ಈ A ವಿಟಾಮಿನ್ ಹೆಚ್ಚಾಗಿರುವುದರಿಂದಲೇ. ಈ ಬಣ್ಣಕ್ಕೆ ಕೆರೊಟೀನ್ (Carotene) ಅಂತಾರೆ. ಬಹಳ ರುಚಿಕರವಾದ, ಪುಷ್ಟಿಯಾದ ಹಾಲು, ಈ ದನಗಳದ್ದು."

"ಮೈಸೂರಿನಲ್ಲಿ ಈ ಎರಡೇ ತಳಿಗಳೇ ಇರುವುದು ?".

"ಯಾಕೆ ಎರಡು, ಕೃಷ್ಣಾ ದನ ಮೈಸೂರಿನ ತಳಿಯಲ್ಲಿವೆ. ಇವಲ್ಲದೆ ಇನ್ನೊಂದು ತಳಿ ಇದೆ. ಕಾನಕಾನಹಳ್ಳಿ, ಕೊಳ್ಳೆಗಾಲದ ಕಡೆ-ಮಹದೇಶ್ವರ ದನ ಅಂತ (ಫೋಟೋ 17) ಇದನ್ನು **ಮಹದೇಶ್ವರ ಬೆಟ್ಟದ ದನ,** ಬೆಟ್ಟ ಸಾಲ್, ಕಾವೇರಿ, ಮಲೈಮಾಡ್, ಆಲಂಬಾಡಿ, ಲಂಬಾಡಿ, ಸೇಲಂ ದನವೆಂದು ಕರೆಯುತ್ತಾರೆ. ಮಹದೇಶ್ವರ ಬೆಟ್ಟ ಇರುವುದು ಮೈಸೂರು ಜಿಲ್ಲೆಯ

ಕೊಳ್ಳೆಗಾಲದಲ್ಲಿ. ಇದು ಗುಡ್ಡಗಾಡು ಸೀಮೆ; ಹುಲ್ಲು ಗಾವಲುಗಳು, ಮೇವು ಹೆಚ್ಚು. ಆದುದರಿಂದ ಈ ಪ್ರದೇಶದ ದನಗಳ ಮೈಕಟ್ಟು ಬೆಳೆಯಲು ಅನುಕೂಲವಾಗಿದೆ. ಆದಕ್ಕಾಗಿಯೋ ಈ ತಳಿಯ ದನ ಇತರ ತಳಿ ದನಗಳ ಗಿಂತ ಭಾರಿ. ಇದನ್ನು ಸೇಲಂ, ಕೊಯಂಬತ್ತೂರು ಜಿಲ್ಲೆಗಳಲ್ಲೂ ಕಾಣಬಹುದು.

ಇದರ ಚಿತ್ರ ಬೇರೆ ಪುಸ್ತಕದಲ್ಲಿದೆ. ಇಲ್ಲಿಗೆ ಅದನ್ನು ತಂದಿಲ್ಲ. ಇದು ಹೇಗಿದೆ ಎಂಬುದನ್ನು ಜ್ಞಾಪಕವಿದ್ದಷ್ಟು ಹೇಳುತ್ತೇನೆ. (ಫೋಟೊ 17)

ಇದರ ಬಣ್ಣ ಕಪ್ಪು; ಕೆಲವು ಕೆಂಪು ಮೇಲೆ ಇರುತ್ತೆ. ತಲೆ ದಪ್ಪ. ಮೂತಿಯೂ ದಪ್ಪ. ಹಣೆ ಅಗಲ, ಕೊಂಬು ಹಳ್ಳಿಕಾರ್ ದನಗಳಿಗಿಂತ ದಪ್ಪ; ಮೋಟು, ಸ್ವಲ್ಪ ಹೆಚ್ಚಾಗಿ ಮುಂದಕ್ಕೆ ಬಾಗಿರುತ್ತೆ. ಕತ್ತು ಚಿಕ್ಕದು, ದಪ್ಪ, ಕಣ್ಣು ದೊಡ್ಡದು. ಗಂಗೊದಲು ಅಗಲ, ದಪ್ಪ, ಮಡಿಕೆ ಬಿದ್ದಿರುತ್ತೆ. ಕಿವಿ ದೊಡ್ಡದು, ನೇರ, ದೊಡ್ಡ ಡುಬ್ಬ. ಕಾಲು ಕುಳ್ಳು; ದಪ್ಪ. ಗೊರಸು ಅಗಲ; ಹಿರಿದಿರುತ್ತೆ; ಮೃದು. ಆಗಾಗ್ಗೆ ಲಾಳ ಕಟ್ಟಿಸುತ್ತಿರಬೇಕು. ಬೆನ್ನು ನೇರವಿಲ್ಲ; ಚಪ್ಪೆ ಕಡೆ ಎತ್ತರ, ಬಾಲ ಉದ್ದ, ದಪ್ಪ. ಚರ್ಮವೂ ದಪ್ಪ, ಕಪ್ಪು. ದನ ಸಾಧು; ಹೇಳಿದ ಹಾಗೆ ಕೇಳುತ್ತೆ; ಮಕ್ಕಳು ಕೂಡ ಇವನ್ನು ನಿಭಾಯಿಸಬಹುದು. ಹಳ್ಳಿಕಾರ್, ಅಮೃತ ಮಹಲ್ ದನಕ್ಕಿಂತ ಹೆಚ್ಚು ಹಾಲು ಕೊಡುತ್ತೆ.

ದೇಹ ಭಾರವಾದುದರಿಂದ ಇದರ ನಡಗೆ ಸ್ವಲ್ಪ ನಿಧಾನ. ಆದರೆ ಹೆಚ್ಚು ಭಾರ ಎಳೆಯಬಲ್ಲದು. ಇದನ್ನು ನಂದಿ, ಕೋಲಾರದ ಕಡೆಯೂ ಸಾಕುತ್ತಾರೆ. ಆದರೆ ಇಲ್ಲಿಯ ದನ, ಬೆಟ್ಟದ ಸಾಲಿನಷ್ಟು ದೊಡ್ಡ ದನವಲ್ಲ. ಇವಲ್ಲಿ ಸ್ವಲ್ಪ ವ್ಯತ್ಯಾಸವಿದೆ. ತಲೆ ಉದ್ದ, ಕೋಡು ತೆಳು, ಗಂಗೊದಲು ತೆಳು.

ದ್ರಾವಿಡ ದನಗಳ ಮುಂದಿನ ತಳಿ **ಕಂಗಾಯಂ** ಇದು ಪ್ರಸಿದ್ಧ ತಳಿ. ಕೊಯಂಬತ್ತೂರು ಕಡೆಯದು. ಈ ಜಿಲ್ಲೆಯ ಧಾರಾಪುರಂ ಬಳಿ ಇರುವ ಕಂಗಾಯಂ ಪ್ರದೇಶದ ದನವಾದುದರಿಂದ ಇದನ್ನು ಕಂಗಾಯಂ ದನವೆಂದು ಕರೆದಿದ್ದಾರೆ. ಇವನ್ನು ಈಗ ತಿರುಚಿರಪಳ್ಳಿ ಮತ್ತು ಮಧುರೈ ಜಿಲ್ಲೆಗಳಲ್ಲೂ ಸಾಕುತ್ತಿದ್ದಾರೆ.

ಈ ತಳಿಯಲ್ಲಿ ಮೈಸೂರು ದನಗಳ ಲಕ್ಷಣಗಳಿವೆ. ಜತೆಗೆ ಓಂಗೋಲು ದನದ ಲಕ್ಷಣಗಳೂ ಕೆಲವಿವೆ. ಅಂದರೆ ಇದು ದ್ರಾವಿಡಾರ್ಯ ದನ, ಓಂಗೋಲ್ ರಕ್ತ ಈ ದನಗಳಲ್ಲಿ ಹರಿಯುತ್ತಿರುವುದರಿಂದ ಇದು ಮೈಸೂರು ದನಗಳಿಗಿಂತ ಭಾರಿ. ಹಸು ಸುಮಾರು 385 ಕಿಲೊ ತೂಗುತ್ತೆ; ಎತ್ತು 540 ಕಿಲೊ—ನಮ್ಮ ದನದ ಒಂದೂವರೆಯಷ್ಟು. ಇದರ ಎತ್ತರವೂ ಹೆಚ್ಚು 1·2–1·4 ಮೀ. ಉದ್ದವೂ ಜಾಸ್ತಿ–1·4–1·7 ಮೀ. ಕರುವಿನ ತೂಕ 19–21 ಕಿಲೊ.

ಇದರ ಬಣ್ಣ ಬಿಳುಪು ಅಥವಾ ನರೆ. ಓಂಗೊಲಿನಿಂದ ಈ ಬಣ್ಣ ಬಂದಿರಬಹುದು. ಈ ತಳಿಯನ್ನು ಬಹಳ ಶ್ರದ್ಧೆಯಿಂದ ಅಭಿವೃದ್ಧಿ ಪಡಿಸುತ್ತಿದ್ದಾರೆ. ಇದನ್ನು ವೃದ್ಧಿ ಮಾಡುವ ಜನ ತಮ್ಮದೇ ಆದ ಸ್ವಂತ ಹುಲ್ಲು ಗಾವಲುಗಳನ್ನು ಇಟ್ಟುಕೊಂಡು ಇವುಗಳಲ್ಲಿ ಕೊಳಕಟ್ಟಿ ಹುಲ್ಲು (ಒಂದು ಜಾತಿ ಹುಲ್ಲು Pennisetum cenchroides) ಬೆಳೆಸುತ್ತಾರೆ. ಈ ಹುಲ್ಲು ಗಾವಲು ಗಳಲ್ಲೇ ರೊಪ್ಪಗಳನ್ನು ಹಾಕಿ, ಹಸು, ಕಡಸು, ಕರು ಎತ್ತು, ಗೂಳಿಗಳನ್ನು ಪ್ರತ್ಯೇಕವಾಗಿಡುತ್ತಾರೆ. ಉಪಯೋಗವಿಲ್ಲದ ಅಥವಾ ಅಡ್ಡ ತಳಿಗಳನ್ನು ಮಾರುಬಿಡುತ್ತಾರೆ. ಈ ಪ್ರದೇಶದಲ್ಲಿ ಹಸುಗಳನ್ನು ಎತ್ತುಗಳಂತೆ ನೇಗಿಲಿಗೆ ಹೂಡುವುದು, ಗಾಡಿಕೆ ಕಟ್ಟುವುದು ವಾಡಿಕೆ. ಆದುದರಿಂದ ಹಸುಗಳು, ಅಡ್ಡ ತಳಿಗಳು ವ್ಯರ್ಥವಾಗುವುದಿಲ್ಲ. ಈ ಪದ್ಧತಿ ಬೇರೆ ಕಡೆ ವಿರಳ. ಇದರಿಂದ ಒಳ್ಳೆಯ ಆರಿಸಿದ ದನಗಳನ್ನೇ ಸಾಕಿ ತಳಿಯನ್ನು ಶುದ್ಧವಾಗಿಡಲು ಸಾಧ್ಯವಾಗಿದೆ.

ಈ ತಳಿ, ಮುಖ್ಯವಾಗಿ ಎತ್ತಿನ ತಳಿ. ಚುರುಕು; ಬಲಿಷ್ಟ ಎತ್ತು. 2-3 ವರ್ಷದ ಎತ್ತುಗಳನ್ನೇ ಕೆಲಸಕ್ಕೆ ಹೂಡುತ್ತಾರೆ. 1 ಟನ್ನು ಭಾರವನ್ನು ಸುಲಭವಾಗಿ ಎಳೆಯುತ್ತೆ. ನಡೆಗೆ, ಗಂಟೆಗೆ ಸುಮಾರು 6½ ಕಿ.ಮೀ. ದಿನಕ್ಕೆ 8-10 ಗಂಟೆ ಕಾಲ ಕೆಲಸ ಮಾಡಬಲ್ಲವು. 10-12 ವರ್ಷಗಳ ಕಾಲ ಕೆಲಸಮಾಡುತ್ತಲೇ ಇರುತ್ತವೆ. ಎತ್ತಿನ ತಳಿಯಾದರೂ ಸುಮಾರು 2½ ಲೀ. ಹಾಲು ಸಿಗುತ್ತದೆ-ದಿನಕ್ಕೆ. ಕೆಲವು ಇನ್ನೂ ಜಾಸ್ತಿಯಾಗಿ ಕರೆಯುತ್ತವೆ.

ಈಗ ಈ ದನದ ವರ್ಣನೆ. ಈ ತಳಿಯಲ್ಲಿ ಎರಡುವಿಧ-ಒಂದು ಸಣ್ಣದು ; ಇನ್ನೊಂದು ದೊಡ್ಡದು, ಎರಡರಲ್ಲೂ ಅಡಕವಾದ ದೇಹ ; ಮೋಟಾದ ದಪ್ಪಕಾಲುಗಳು ; ಚೆನ್ನಾಗಿ ಬಲಿತ ಗೊರಸು. ಚಿಕ್ಕ ದನದಲ್ಲಿ ಕೋಡು ನೇರ ; ಸ್ವಲ್ಪಕ್ಕೆ ಹಿಂದಕ್ಕೆ ಸರಿದಿರುತ್ತೆ. ದೊಡ್ಡ ದನದಲ್ಲಿ ಕೋಡು ಉದ್ದ ; ಹೊರಕ್ಕೂ ಹಿಂದಕ್ಕೂ, ಚಾಚಿ ಬೆಳೆಯುತ್ತೆ. ಕೊಡಿನ ತುದಿಭಾಗ ಒಂದಕ್ಕೊಂದು ಮುಟ್ಟುವಂತಿರುತ್ತೆ.

ದೊಡ್ಡ ದನದ ಚಿತ್ರ ಇಲ್ಲಿದೆ; ನೋಡು. (ಫೋಟೊ 16) ಬಣ್ಣ ಆಗಲೇ ಹೇಳಿದೆ ಕರುಗಳ ಬಣ್ಣ ಮೊದಲು ಕಂದು. ಎರಡು ವರ್ಷಗಳಲ್ಲಿ ನರೆ ಬಣ್ಣಕ್ಕೆ ತಿರುಗುತ್ತೆ. ವಯಸ್ಸಾಗುತ್ತ ಬೆಳ್ಳಗಾಗುತ್ತೆ. ಗಂಡು ದನ ವಯಸ್ಸಾದಂತೆ ಕಪ್ಪಾಗುತ್ತೆ ; ಹಸು ಬಿಳಚುತ್ತೆ.

ಈ ಬಣ್ಣದ ಬದಲಾವಣೆ ಈ ತಳಿಯ ವಿಶೇಷ.

ಇದರ ತಲೆ ಸುಮಾರು ಗಾತ್ರ ; ದೇಹಕ್ಕೆ ತಕ್ಕಷ್ಟು ಗಾತ್ರ. ಸ್ವಲ್ಪ ನೇರ. ಕಿವಿ ಸಣ್ಣ ; ಮೊನುಚು ಕಣ್ಣು ಕಪ್ಪು ; ಸುತ್ತಲೂ ಕಪ್ಪು ಉಂಗುರ. ಕತ್ತು ಮೋಟು, ದಪ್ಪ. ಬೆನ್ನು ಮೋಟು, ಅಗಲ. ನೇರಕ್ಕೆ ಇರುತ್ತೆ. ಗಂಗೊದಲು ತೆಳು. ಡುಬ್ಬ ಹುಲುಸಾಗಿರುತ್ತೆ. ಬಾಲ ಸುಮಾರು ಉದ್ದ.

ಕಂಗಾಯಂ ಅಂದರೆ ಪಲಯಕೋಟೆ ಪಟ್ಟೆಗಾರರ ಹೆಸರು ಜ್ಞಾಪಕಕ್ಕೆ ಬರುತ್ತೆ. ಇವರಷ್ಟು ದೊಡ್ಡ, ದನದ ತಳಿ ಅಭಿವೃದ್ಧಿಕಾರರು ನಮ್ಮ ದೇಶದಲ್ಲಿ ಮತ್ತೊಬ್ಬರಿಲ್ಲ. ಬಹಳ ಶಾಸ್ತ್ರೀಯ ರೀತಿಯಲ್ಲಿ ಈ ಕಂಗಾಯಂ ತಳಿಯನ್ನು ರೂಪಿಸುತ್ತಿದ್ದಾರೆ. ಪಲಯಕೋಟೆ ಕೊಯಂಬತ್ತೂರು ಜಿಲ್ಲೆಯಲ್ಲಿದೆ. ಅವರಿಗೆ ವಿಶಾಲವಾದ ಹುಲ್ಲುಗಾವಲಿದೆ-ಇಲ್ಲಿ ; ಸುಮಾರು 1500-2000 ದನ ಇಟ್ಟಿದ್ದಾರೆ. ಪ್ರತಿವರ್ಷ ಏನೂ ಇಲ್ಲ ಅಂದರೂ 300-350 ಗೂಳಿಗಳನ್ನೇ ಮಾರುತ್ತಾರೆ. ಇವರ ಗೂಳಿಗಳಿಗೆ ಬಹಳ ಮೆಚ್ಚಿಗೆ. ಕಂಗಾಯಂ ಲಕ್ಷಣಗಳೆಲ್ಲವೂ ಶುದ್ಧವಾಗಿ ಇರುತ್ತವೆ. ಇವರು ತಮ್ಮ ಹುಲ್ಲುಗಾವಲನ್ನು 100-200 ಎಕರೆ ತಾಕುಗಳಾಗಿ ವಿಂಗಡಿಸಿ ಒಂದೊಂದು ತಾಕಿಗೂ ಕೊರಕಾಪಳ್ಳಿ ಬೇಲಿ ಹಾಕಿದ್ದಾರೆ. ಕರಾವು ಹಸು, ಹಾಲು ನಿಲ್ಲಿಸಿದ ಹಸು, ಕಡಸು, ಕರುಗಳನ್ನು ಪ್ರತ್ಯೇಕವಾಗಿ ಈ ತಾಕುಗಳಲ್ಲಿಟ್ಟಿದ್ದಾರೆ. ಪ್ರತಿಯೊಂದು

ತಾಕಿನಲ್ಲೂ ಕುಡಿಯಲು, ಕೊಟ್ಟಿಗೆ ತೊಳೆಯಲು ನೀರಿನ ವ್ಯವಸ್ಥೆ ಮಾಡಿದ್ದಾರೆ. ಹಸುವಿನ ಮಂದೆಯಲ್ಲಿ ಶ್ರೇಷ್ಟವಾದ ಗೂಳಿಗಳನ್ನು ಬಿಡುತ್ತಾರೆ.

ಮಾರಾಟಕ್ಕೆ ಮುಂಚೆ, ಎತ್ತುಗಳಿಗೆ, ಬಳ್ಳಾರಿ ಜಾಲಿ ಮರದ ಕಾಯಿಗಳನ್ನು ತಿನ್ನಿಸುತ್ತಾರೆ. ಇದರಿಂದ ಅವುಗಳು ಮೈ ತುಂಬಿಕೊಂಡು, ಚರ್ಮ ಹೊಳಪುತ್ತದೆ. ಇಂತಹ ಎತ್ತುಗಳಿಗೆ ಒಳ್ಳೆ ಬೆಲೆ ಸಿಗುತ್ತದೆ. ಇವರ ಮಂದೆಯಲ್ಲಿ ಹೆಚ್ಚು ಹಾಲು ಕೊಡುವ ತಳಿಯನ್ನು ಎತ್ತಲು ಪ್ರಯತ್ನ ನಡೆಯುತ್ತಿದೆ.

ದಕ್ಷಿಣ ಭಾರತದ ಮತ್ತೊಂದು ತಳಿ-**ಬರ್ಗೂರು** ತಳಿ (ಫೋಟೊ 18) ಇದೂ ಕೂಡ ಕೊಯಂಬತ್ತೂರು ಜಿಲ್ಲೆಯದು-ಅಲ್ಲಿಯ ಗುಡ್ಡ ಪ್ರದೇಶದ ಬರ್ಗೂರು ಕಡೆಯದು. ಇವು ಮೈಸೂರು ದನಗಳಂತೆಯೇ ಇರುತ್ತವೆ; ಆದರೆ ಇನ್ನೂ ಸಣ್ಣ ತಲೆ. ಅಷ್ಟು ದೊಡ್ಡದಲ್ಲ. ಇವೂ ಕೂಡ ರೋಷಾವೇಶದ ದನ; ಪಳಗಿಸುವುದು ಕಷ್ಟ. ಆದರೆ ಚುರುಕಿಗೆ, ಹೆಚ್ಚು ಹೊತ್ತು ಕೆಲಸಮಾಡುವ ಸಾಮರ್ಥ್ಯಕ್ಕೆ, ನಡೆಗೆಗೆ, ಪ್ರಸಿದ್ಧಿ. ಇವುಗಳ ಬಣ್ಣ ಕೆಂಪು ಬಿಳಪು. ಬಾಲ ಮೋಟು. ಕೊಂಬು ಹಿಂದಕ್ಕೆ ಬೆಳೆಯುತ್ತೆ.

ಇಲ್ಲಿಗೆ ದ್ರಾವಿಡರ ತಳಿಗಳ ಕತೆ ಮುಗಿಯಿತು. ಆದರೆ ಮೈಸೂರು ದನಗಳಂತೆಯೇ ಅವುಗಳ ರಕ್ತ ಹರಿಯುತ್ತಿರುವ ತಳಿ ಮಹಾರಾಷ್ಟ್ರದಲ್ಲಿದೆ. ಕಿಲ್ಲಾರಿ ಅಂತ ಇದರ ಹೆಸರು (ಫೋಟೊ 19) ಇದನ್ನು ಮೊದಲು ಸಾಕುತ್ತಿದ್ದವರು 'ಕಿಲ್ಲಾರ'ರೆಂಬ ಗೊಲ್ಲರು. ಅಂತಲೇ ಅವರ ಹೆಸರು ಅವರ ತಳಿಗೂ ಬಂತು.

ಕಿಲ್ಲಾರಿ ದನಗಳಲ್ಲಿ ನಾಲ್ಕು ವಿಧ-ಕೆಲವು ಅಮೃತಮಹಲ್ ದನದಂತೆಯೇ ಇವೆ. ಮೈಸೂರಿನ ಸರಹದ್ದಿನಲ್ಲಿ. ನಕಲಿ ಕಿಲ್ಲಾರಿ ಎಂಬ ಜಾತಿಯೂ ಇದೆ. ಈಚಿನದು. ಇದು ಹೊಸ ತಳಿಯಾದುದರಿಂದ, ಕಿಲ್ಲಾರಿ ದನವನ್ನು ಹೋಲುವುದರಿಂದ ಇದನ್ನು ನಕಲಿ ಕಿಲ್ಲಾರಿ ಅಂತ ಕರೆಯುತ್ತಾರೆ.

ಕಿಲ್ಲಾರಿ ಪ್ರದೇಶದಲ್ಲಿ ಮಳೆ ಕಡಿಮೆ; ನಿಶ್ಚಿತವಲ್ಲ. ಕ್ಷಾಮಗಳು ಆಗಾಗ್ಗೆ ತಲೆದೊರುತ್ತಿರುತ್ತವೆ. ಇದು ಮಳೆ ನೆರಳಿನ (Rain Shadow) ಪ್ರದೇಶ."

"ಮಳೆ ನೆರಳು ಕಟ್ಟುತ್ತಯೋ, ಮಾವ" ಎಂದು ನಗುತ್ತಲೇ ಕೇಳಿದ. ಕಿಟ್ಟಿಯ ಪ್ರಶ್ನೆಗೆ, ರಾಮಣ್ಣ ಭೂಗೋಳದ ಪಂಡಿತನಂತೆ ಉತ್ತರಿಸಿದ.

"ನೈರುತ್ಯ ಮಾರುತ ಅರಬ್ಬೀ ಸಮುದ್ರದಿಂದ ಜಲಹೊತ್ತು ಪಶ್ಚಿಮ ಘಟ್ಟಗಳ ಮೇಲೆ ವಿಪರೀತ ಮಳೆಯನ್ನು ಸುರಿಸುತ್ತದೆ. ಈ ಘಟ್ಟವನ್ನು ದಾಟಿ, ಘಟ್ಟದ ಪೂರ್ವ ಭಾಗಕ್ಕೆ ಬೀಸುವ ಹೊತ್ತಿಗೆ ಈ ಮಾರುತವು ಜಲ ರಹಿತವಾಗುತ್ತದೆ. ಹಿಗಾಗಿ, ಈ ಭಾಗಗಳಲ್ಲಿ ಮಾರುತ ಬೀಸಿದರೂ ಮಳೆ ಕಡಿಮೆ, ಅನಿಶ್ಚಿತ. ಇಂತಹ ಘಟ್ಟ ಪೂರ್ವ ಪ್ರದೇಶಗಳನ್ನು ಮಳೆ ನೆರಳಿನ ಪ್ರದೇಶವೆಂದು ಭೂಗೋಳದ ಪಂಡಿತರು ಕರೆಯುತ್ತಾರೆ. ಹೇಗಿದೆಯೋ, ನನ್ನ ಭೂಗೋಳದ ಪಾಟ."

"ಮೇಷ್ಟ್ರು ಹೇಳುವ ಹಾಗೆ ಇದೆ. ನಿದ್ದೆ ಬರಿಸುತ್ತೆ."

"ಕಳ್ಳ, ಮೇಷ್ಟ್ರ ಮೇಲೆ ಚಾಡಿ ಹೇಳ್ತಿಯೊ. ಸಟಿ ಯಾಕೆ ಹೇಳಲಿ, ನನಗೂ ಭೂಗೋಳದ ತರಗತಿಯಲ್ಲಿ ನಿದ್ದೆ ಬರ್ತಿತ್ತು. ಅದಿರಲಿ. ಈ ಪ್ರದೇಶ ಸತಾರ, ಸಾಂಗ್ಲಿ, ಸೊಲ್ಲಾಪುರ. ಅಹಮದನಗರ ಜಿಲ್ಲೆಗಳನ್ನು ಒಳಗೊಂಡಭಾಗ. ಈ ಕಡೆ ಬೀಳುವ ಸ್ವಲ್ಪ ಮಳೆಯಿಂದಲೇ ಬೇಗ ಬೇಗನೆ ಉತ್ತು, ಬಿತ್ತಿ, ಹರಗಿ (ಕುಂಟೆ ಹೊಡೆದು) ಬೇಸಾಯದ ಕೆಲಸಗಳನ್ನು ಮುಗಿಸಬೇಕಾಗಿದೆ. ಹೀಗೆ ಮಾಡಲು ಕೆಲಸಗಳನ್ನು ಬಿರ ಬಿರ್ರನೆ ಮಾಡುವ ದನಗಳು ಬೇಕು. ಈ ದನವೇ **ಕಿಲ್ಲಾರಿ** ದನ. ಗಲಾಟೆಯಿಲ್ಲದೆ ಚುರುಕಾಗಿ ಕೆಲಸಮಾಡುತ್ತವೆ. ಮೈಲಿ ಗಟ್ಟಲೆ ನಡೆದರೂ ಸುಸ್ತಾಗುವುದಿಲ್ಲ. ಗಂಟೆಗೆ 5–7 ಕಿ. ಮೀ. ವೇಗದಲ್ಲಿ ಸುಮಾರು $^3/_4$ ಟನ್ನು ಹೊರೆಯನ್ನು ಎಳೆಯುತ್ತವೆ. ದಿನದಲ್ಲಿ 8–10 ಗಂಟೆ ಕಾಲ, ವರ್ಷದಲ್ಲಿ 200–300 ದಿನ ನಿರಾಯಾಸವಾಗಿ ದುಡಿಯುತ್ತೆ. 2-3 ವರ್ಷಗಳಲ್ಲೆ ನೊಗಹಾಕಬಹುದು. ಗೂಳಿಗಳನ್ನೂ ಕೂಡ 'ಕೆಲಸಕ್ಕೆ ಹೂಡಬಹುದು.

ಇದರ ಚಿತ್ರನೋಡು....ಬಣ್ಣದಲ್ಲಿ ಕಿಲ್ಲಾರಿ ದನ ಒಂದೇ ಬಗೆ ಕೆಲವು ನರೆಬಿಳುಪು; ಮುಖದಮೇಲೆ ಬಿಳಿ ಮಚ್ಚೆ ಕೆಲವು ಬಿಳಪು. ಮೂತಿ ತಿಳಿಕೆಂಪು. ಗೊರಸೂ ಕೂಡ ತಿಳಿಗೆಂಪು. ಕರುಗಳು ಕೆಂಪಗೆ ಹುಟ್ಟುತ್ತವೆ.

ಇದರ ದೇಹ ಅಡಕವಾಗಿ ಮಾಟವಾಗಿರುತ್ತದೆ. ಹಣೆ ಉದ್ದ, ಕಿರಿದು; ಸ್ವಲ್ಪ ಉಬ್ಬು. ಹಣೆಯ ಮಧ್ಯೆ ನೇರಕ್ಕೆ ಇರುವ ಕುಳಿ-ನಮ್ಮ

ದನಗಳಂತೆ. ಕಣ್ಣು ಸಣ್ಣ-ಸ್ವಲ್ಪ ಉದ್ದ, ಉಬ್ಬು, ಕಿವಿ ಮೊನೂಚು, ಸಣ್ಣ ; ಕಿವಿಯ ಒಳ ಬಣ್ಣ-ತೆಳು ಹಳದಿ. ಕೊಂಬು ಉದ್ದ, ಮೊನೂಚು, ಹಿಂದಕ್ಕೆ ಚಾಚಿರುತ್ತದೆ. ಆ ಮೇಲೆ ಮೇಲಕ್ಕೆ ಬೆಳೆಯುತ್ತದೆ. "ಈ ಬಿಲ್ಲು ಕೊಂಬು ಈ ತಳಿಯ ವಿಶೇಷ, ಕೊಂಬಿನ ಬಣ್ಣ, ಕಪ್ಪು, ಕೆಲವುದರಲ್ಲಿ ತಿಳಿಗೆಂಪು.

ಕತ್ತು ಮೋಟು. ಗಂಗೊದಲು ತೆಳು. ಸುಮಾರು ದಪ್ಪದ ಡುಬ್ಬ ಕಾಲು ದುಂಡು, ನೇರ. ಗೊರಸಿನ ತಳಿ ಚಿಕ್ಕದು. ಬಾಲ ಉದ್ದ. ಕೂದಲು ಹೊಳಪು.

ತೂಕ ಸುಮಾರು 340–450 ಕಿಲೊ. 1·3–1·4 ಮಿಾ. ಎತ್ತರ, 1-1·3 ಮಿಾ. ಉದ್ದ. ಕರುವಿನ ಹುಟ್ಟು ತೂಕ, ಈ ತಳಿಗೆ ಭಾರಿಯೇ ಎನ್ನಬೇಕು-18–20 ಕಿಲೊ. ಹಸುವಿನಿಂದ ಹಾಲು ಕಡಿಮೆ.

ಈ ತಳಿಯನ್ನು ಬಿಜಾಪುರದ ಕಡೆಯಲ್ಲೂ ಸಾಕುತ್ತಾರೆ.

ಇಲ್ಲಿಗೆ ದ್ರಾವಿಡರ ದನಗಳ ಗುಂಪಿನ ಕತೆಯೂ ಮುಗಿಯಿತು. ಈ ಕತೆ ಲಂಬವಾಗಿಯೇ ಬೆಳೆದಿದೆ. ಅಕ್ಕ, ಯಾಕೆ ಕಾಫಿ ತರಲಿಲ್ಲ."

"ಮರತೇ ಹೋಯಿತು ಮಾವ, ನಿನ್ನ ಕತೆ ಕೇಳುವುದರಲ್ಲಿ ಅಮ್ಮ ಅವರ ಫ್ರೆಂಡ್ ಮನೆಗೆ ಹೋದರು. ಹೋಗುವುದಕ್ಕೆ ಮುಂಚೆ ಫ್ಲಾಸ್ಕಿನಲ್ಲಿ ಕಾಫಿ ಇಟ್ಟು ಡಬ್ಬದಲ್ಲಿ ಚಕ್ಕಲಿ ಇಟ್ಟ, ರಾಮುವಿಗೆ ಕೊಡು. ಸಾಯಂ ಕಾಲದ ಹೊತ್ತಿಗೆ ಬರುತ್ತೇನೆ ಎಂದು ಹೇಳಿ ಹೋದಳು. ತಾಳು, ತಂದು ಕೊಡುತ್ತೇನೆ.

ರಾಮಣ್ಣ ಕತೆ ಮುಗಿಸುವ ಭರದಲ್ಲಿ, ಕಿಟ್ಟಿ ಕತೆ ಕೇಳುವ ಆಸೆಯಲ್ಲಿ ಇಬ್ಬರಿಗೂ ಕಾಫಿ, ಚಕ್ಕುಲಿ ನಿಧಾನವಾಯಿತು. ಹೆಚ್ಚು ಚಕ್ಕುಲಿಗಳೂ ಮಾಯವಾದವು.

೧೧. "ಬಣ್ಣದ ದನಗಳು ನಮ್ಮಲ್ಲಿ ಇಲ್ಲವೇ ?"

ರಾಮಣ್ಣನ ರಜ ಮುಗಿಯುತ್ತ ಬಂತು. ಇನ್ನೂ ಇದ್ದರೂ 2 ದಿವಸ ಮಾತ್ರ. ಅಷ್ಟರಲ್ಲೇ ಈ ದನಗಳ ಕತೆಯನ್ನು ಮುಗಿಸಬೇಕೆಂದು ಸಂಕಲ್ಪ ಮಾಡಿದ್ದ.

ಅಂದು ಸಾಯಂಕಾಲ ಭಾವನೊಡನೆ ಕಾಲ ಕಳೆದ. ಕಿಟ್ಟಿಗೆ ಇವರ ಮಾತಿನಲ್ಲಿ ಜಾಗವಿಲ್ಲದಿದ್ದುದರಿಂದ, ತನ್ನ ಸ್ನೇಹಿತರ ಮನೆಗೆ ಹೊರಟ.

ತಾನು ದನದ ಪುಸ್ತಕಗಳನ್ನು ತಂದಿರುವುದು, ಕಿಟ್ಟಿಗೆ ದನದ ಕತೆಯನ್ನು ಹೇಳುತ್ತಿರುವುದು ಭಾವನಿಗೆ ಚೆನ್ನಾಗಿ ಗೊತ್ತಿತ್ತು. ಅಕ್ಕ ಭಾವನೊಂದಿಗೆ ಈ ಪ್ರಸ್ತಾಪ ಮಾಡಿಯಾಗಿತ್ತು. ಭಾವನೂ ಕೆಲವು ದನಗಳನ್ನು ಕಟ್ಟಲು ಒಪ್ಪಿಕೊಂಡರು. ರಾಮಣ್ಣ ಅಕ್ಕನ ಊರಿಗೆ ಬಂದ ಉದ್ದೇಶ ತಾನು ನಿರೀಕ್ಷಿಸಿದಕ್ಕಿಂತ ಸುಲಭವಾಗಿಯೇ ಸಫಲಗೊಂಡಿತ್ತು. ಇನ್ನು ಉಳಿದದ್ದು, ಬೇಗ ಬೇಗನೆ ದನದ ಕತೆಯನ್ನು ಕಿಟ್ಟಿಗೆ ಹೇಳಿ ಮುಗಿಸುವುದು ಅಷ್ಟೆ.

ಮಾರನೆಯ ಬೆಳಿಗ್ಗೆ ಈ ಕತೆ ಶುರುವಾಯಿತು.

"ಹರಪ್ಪನ್ನರ ದನವಾಯಿತು, ಆರ್ಯರ ದನವಾಯಿತು. ದ್ರಾವಿಡರ ದನವೂ ಆಯಿತು. ಇನ್ನು ಯಾವ ಕುಲ ಉಳಿದಿದೆ. ಯಾರದ್ದೂ ಇಲ್ಲ. ನಿರ್ದಿಷ್ಟವಾಗಿ ಯಾವ ಕುಲವೂ ಬೆಳಸದ ಕೆಲವು ದನಗಳಿವೆ—ಪಶ್ಚಿಮ ಭಾರತದಲ್ಲಿ–ಮುಖ್ಯವಾಗಿ ಗುಜರಾತ್—ಸಿಂಧ್ ಕಡೆ. ಈ ದನಗಳು ಇಲ್ಲಿಯ ತನಕ ಹೇಳಿದ ಯಾವ ದನದ ಗುಂಪಿಗೂ ಸೇರಿಸಲಾಗುವುದಿಲ್ಲ. ಅವುಗಳದೆ

ಒಂದು ಗುಂಪು ಇರುವಂತಿದೆ. ಈ ಗುಂಪಿನ ಮೂಲದನ—ಗಿರ್ ತಳಿ ನಮ್ಮ ಹಳ್ಳಿಕಾರ್ ದನದಂತೆ ಹೊರ ದೇಶದ ದನಗಳ ಸಂಪರ್ಕವಿಲ್ಲದೆಯೇ, ಬಹಳ ಪ್ರಾಚೀನ ಕಾಲದಲ್ಲೇ, ಸೌರಾಷ್ಟ್ರದ ಗಿರ್ ಪ್ರದೇಶದಲ್ಲಿ ರೂಪಗೊಂಡು ಇಂದಿಗೂ ಹಾಲಿನ ಉತ್ಪತ್ತಿಗೆ, ಭಾರದ ಕೆಲಸಗಳಿಗೆ ಪ್ರಸಿದ್ಧಿಯಾಗಿದೆ. ಇಲ್ಲಿಯ ತನಕ ಹೇಳಿದ ದನಗಳ ಬಣ್ಣ, ತಿಳಿ-ಬಿಳುಪು, ನರೆ. ಆದರೆ ಈ ಗಿರ್ ತಳಿ ಮತ್ತು ಆ ಗುಂಪಿನ ದನಗಳು ಬಣ್ಣದ ದನಗಳು—ಪಾಶ್ಚಾತ್ಯ ದನಗಳಂತೆ. ಈ ದನಗಳು ಪಾಶ್ಚಾತ್ಯ ದನಗಳಂತೆ ಮುಖ್ಯವಾಗಿ ಹಾಲಿನ ತಳಿಗಳು-ಭಾರತ ದಲ್ಲಿ ಹೆಚ್ಚು ಹಾಲು ಕೊಡುವ ದನಗಳೇ ಇವು. ಬಣ್ಣ, ಹಾಲಿನ ಉತ್ಪತ್ತಿ ಸಾಮರ್ಥ್ಯ ಬಿಟ್ಟರೆ, ಈ ದನಗಳಿಗೂ, ಪಾಶ್ಚಾತ್ಯ ದನಗಳಿಗೂ ಮತ್ತಾವ ಹೋಲಿಕೆಗಳೂ ಇರುವುದಿಲ್ಲ. ಇವು ಇಂಡಿಯ ದನಗಳು-ಡುಬ್ಬದ ದನಗಳು-ಸೆಬು ಅಥವಾ ಬ್ರಾಹ್ಮಣೀ ದನಗಳು.

ಈ ಗುಂಪಿನ ದನಗಳಲ್ಲೂ, ಈ ಗುಂಪಿಗೇ ವಿಶಿಷ್ಟವಾದ ಲಕ್ಷಣಗಳಿವೆ. ಈ ಲಕ್ಷಣಗಳನ್ನು ಮತ್ತಾವ ದನದ ಗುಂಪಿನಲ್ಲಿಯೂ ಕಾಣಲಾರವು.

ಈ ಗುಂಪನ್ನು ಪಶ್ಚಿಮ ದನಗಳು, ಬಣ್ಣದ ದನಗಳು ಅಂತ ಕರೆಯು ವುದಕ್ಕಿಂತ 'ಗಿರ್' ಗುಂಪು ಎಂದು ಕರೆಯುವುದೇ ಉಚಿತ. ಯಾಕೆಂದರೆ ಈ 'ಗಿರ್' ತಳಿಯ ರಕ್ತವು ಹೆಚ್ಚಾಗಿಯೋ ಕಡಿಮೆಯಾಗಿಯೋ ಈ ಗುಂಪಿನ ದನಗಳಾದ ಕೆಂಪು ಸಿಂಧಿ, ಸಾಹಿಲಾಲ್, ದೇವೋನಿ, ನಿಮಾರಿ ಮತ್ತು ಡಾಂಗಿ ತಳಿಗಳಲ್ಲಿ ಹರಿಯುತ್ತಿದೆಯೆನ್ನಬಹುದು.

ಈ ಗುಂಪಿನ ದನಗಳು ಭಾರಿಯಾದ ಸಡಿಲವಾದ ಮೈ ಕಟ್ಟನ್ನು ಹೊಂದಿವೆ. . ಜೋತು ಬಿದ್ದಿರುವ ಗಂಗೊದಲು: ಅತಿ ವಿಶಾಲವಾದ ಎದ್ದು ಕಾಣುವ ಹಣೆ, ಪಕ್ಕಕ್ಕೆ ಬೆಳೆದು ಕೆಲವು ವೇಳೆ ಸುರಳಿಯಾಗುವ ಕೋಡು ಗಳು, ಕೆಂಪು, ಕೆಂಪು-ಬಿಳಪು ಮಿಶ್ರಿತ ಬಣ್ಣ, ಈ ಗುಂಪಿನ ಇತರ ವಿಶೇಷ ಲಕ್ಷಣಗಳು.

ಈ ಗುಂಪಿಗೆ ಆಧಾರ ತಳಿ 'ಗಿರ್' ತಳಿಯಾದುದರಿಂದ ಈ ತಳಿಯ ರೂಪ, ಲಕ್ಷಣಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ಎಲ್ಲಿ, ಆ ಪುಸ್ತಕ ಕೊಡು. ಇಲ್ಲಿದೆ ನೋಡು....ಗಿರ್ ದನಗಳ ಚಿತ್ರ (ಫೋಟೊ 20)

ಈ ಚಿತ್ರ ನೋಡಿದರೆ ಇದರ ಪ್ರಮುಖ ಲಕ್ಷಣ-ಇದರ ಹಣೆ. ಇಷ್ಟು

ವಿಶಾಲವಾದ ಹಣೆ ಮತ್ತಾವ ದನಗಳಿಗೂ ಇರುವುದಿಲ್ಲ. ಈ ಹಣೆ ನೆತ್ತಿಯ ಮೇಲಕ್ಕೂ ಹರಡಿರುತ್ತೆ ; ಹಣೆಯ ಮೂಳೆ ಕಣ್ಣುಗಳ ಮೇಲೂ ಹಬ್ಬಿರುವುದರಿಂದ. ಕಣ್ಣುಗಳು ಮುಚ್ಚಿದ ಹಾಗೆ ಕಾಣುತ್ತೆ-ದನ ನಿದ್ದೆ ಮಾಡುವಂತೆ. ನಿದ್ದೆ ಕಣ್ಣಿನ ದನ ಅನ್ನಿಸಿಕೊಳ್ಳುತ್ತೆ.

ಇದರ ದೇಹ ಸಡಿಲ, ಹಾಗೆ ದೇಹದ ಅನೇಕ ಭಾಗಗಳೂ ಸಡಿಲ ; ಜೋತು ಬಿದ್ದಿರುತ್ತವೆ. ಕಿವಿ ನೋಡು. ಎಷ್ಟು ಉದ್ದಕ್ಕೆ ಇದೆ, ಎಷ್ಟು ಕೆಳಗೆ ಇಳಿ ಬಿದ್ದಿದೆ. ಚಿಕ್ಕ ದನಗಳಲ್ಲಿ ಕಿವಿ, ದವಡೆಯನ್ನೂ ಮುಟ್ಟುತ್ತೆ. ಕಿವಿಯ ರಚನೆ ನೋಡು. ಮುಂಭಾಗಕ್ಕೆ ತೆರದಿದೆ. ಮುದುರಿಕೊಂಡ ದೊಡ್ಡ ಎಲೆ ಇದ್ದ ಹಾಗೆ ಇದೆ. ಕಿವಿಯ ತುದಿ ಕಚ್ಚು ಬಿದ್ದಿದೆ. ಈ ಕಚ್ಚು ಕಿವಿ ಈ ತಳಿಯ ವಿಶೇಷ. ಕಿವಿ ಎಷ್ಟು ಅಗಲ ನೋಡು—15–23 ಸೆಂ. ಮೀ. ಅಗಲ. ಉದ್ದ-23–42 ಸೆಂ. ಮೀ. ಇದರ ಗಂಗೊದಲು ನೋಡು. ಕಾಂಕ್ರೇಜ್ ದನದಷ್ಟು ದೊಡ್ಡದಾಗಿಲ್ಲದಿದ್ದರೂ ಸೀರೆ ನೆರಿ ಹಿಡದಂತೆ ಜೋತಿದೆ. ಹೊಟ್ಟೆಯ ತಳಭಾಗದಲ್ಲೂ, ಚರ್ಮ ಸಡಿಲವಾಗಿ ಇಳಿಬಿದ್ದಿರುತ್ತೆ.

ಇದರ ಕೋಡಿನಲ್ಲಿ ಏನು ವಿಶೇಷ ? ”

“ ಸುರಳಿ ಬಿದ್ದ ಹಾಗೆ ಇದೆ, ಅಲ್ಲವೆ, ಮಾವ ? ”

“ ಧೈರ್ಯವಾಗಿ ಹೇಳು. ನಿಜ, ಕೋಡು ಬುಡದಿಂದ ತಳಕ್ಕೆ, ಆ ಮೇಲೆ ಹಿಂದಕ್ಕೆ ಬೆಳೆಯುತ್ತೆ. ಪುನಃ ಸ್ವಲ್ಪ ಮೇಲಕ್ಕೆ ಮುಂದಕ್ಕೆ ಹೋಗುತ್ತೆ. ಆ ಮೇಲೆ ಒಳ ದಿಕ್ಕಿಗೆ ಬಾಗಿ ಸುರಳಿಯಾಗುತ್ತೆ. ಇದು ಈ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣುವುದಿಲ್ಲ.

ನನಗೆ ಪುರಸೊತ್ತು ಇದ್ದಾಗ, ಬೆಂಗಳೂರಿಗೆ ಹೋದಮೇಲೆ, ನಮ್ಮ ಮುಖ್ಯ ದನಗಳ ಕೋಡಿನ ರೂಪವನ್ನು ಚಿತ್ರಿಸಿ ಕಳುಹಿಸಿಕೊಡುತ್ತೇನೆ. ಅನೇಕವೇಳೆ, ಕೋಡು-ಕಿವಿಗಳಿಂದಲೇ ಕೆಲವು ತಳಿಗಳನ್ನು ಗುರುತಿಸಬಹುದು. ಈ ಗಿರ್ ದನದ ಕೋಡು, ಕಿವಿ, ನೋಡಿದಾಗ ಒಂದು ಗಾದೆ ಜ್ಞಾಪಕಕ್ಕೆ ಬರುತ್ತೆ. ಸ್ನೇಹಿತರ ಬಗ್ಗೆ ಈ ಗಾದೆ ಹೇಳ್ತಾರೆ. “ ಮೊದಲು ಬಂದ ಕಿವಿಗಿಂತ ಆ ಮೇಲೆ ಬೆಳೆದ ಕೋಡೇ ಉದ್ದ ”. ಆದರೆ ಈ ಗಿರ್ ದನದಲ್ಲಿ

ಮಾತ್ರ ಹಾಗಲ್ಲ ಮೊದಲು ಹೊರಟ ಕಿವಿ. ಅದರ ಜೀವ ಪರ್ಯಂತ, ಆ ಮೇಲೆ ಹುಟ್ಟಿದ ಕೋಡಿಗಿಂತ ಉದ್ದವಾಗಿಯೇ ಉಳಿಯುತ್ತದೆ.

ಹಣೆ ಅಗಲವಾಗಿರುವುದರಿಂದ, ತಲೆಯ ತಳಭಾಗ, ಮೂತಿ ಮುಂತಾದವು ಚಿಕ್ಕದಾಗಿ ಕಾಣುತ್ತೆ.

ಇದರ ಬಾಲ ಉದ್ದ. ಕುಚ್ಚು ನೆಲಕ್ಕೆ ತಗಲುತ್ತೆ. ಕತ್ತು ಸುಮಾರು ಉದ್ದ. ಡುಬ್ಬ ಚೆನ್ನಾಗಿ ಬೆಳೆದಿರುತ್ತೆ. ಕಾಲುಗಳು ಅಡ್ಡಕ್ಕೆ, ಅಗಲವಾಗಿ ಬೆಳೆಯುತ್ತೆ. ದ್ರಾವಿಡ ದನಗಳಂತೆ ನವುರಾಗಿ ಬಲಿಷ್ಟವಾಗಿರುವುದಿಲ್ಲ.

ಇದರ ಅಂಗಾಂಗಗಳೆಲ್ಲಾ ಸಡಿಲ ಅಂತ ಹೇಳುತ್ತಿದ್ದೆ. ಇದರ ಚರ್ಮವೂ ಸಡಿಲ, ಮೃದು. ಇದರ ಕೂದಲು ಮೋಟು, ಹೊಳಪುತ್ತಿರುತ್ತೆ. ಈ ದೊಡ್ಡ ದನಕ್ಕೆ ಅದರ ಗೊರಸು ಚಿಕ್ಕದು ಅಂತಲೇ ಹೇಳಬೇಕು. ಕಪ್ಪು, ಸುಮಾರು ಗಟ್ಟಿ.

ಇನ್ನು ಇದರ ಬಣ್ಣ. ಕೆಲವು ದನಗಳಲ್ಲಿ ದೇಹವೆಲ್ಲವೂ ಕೆಂಪಾಗಿದ್ದರೂ, ಸಾಮಾನ್ಯವಾಗಿ ಇದರದು ಮಿಶ್ರ ಬಣ್ಣ, ಹಳದಿ ಕೆಂಪಿನಿಂದ ಹಿಡಿದು ಕಪ್ಪು ಬಣ್ಣದ ತನಕ ಇರುವ ದನಗಳಿವೆ. ಅಚ್ಚ ಕೆಂಪು ಇಲ್ಲವೇ ಕಂದು ಬಣ್ಣದ ಮಚ್ಚೆ ಇರುವ ಬಿಳಿಯ ದನಗಳನ್ನೇ ಈ ತಳಿಯನ್ನು ಸಾಕುವವರು ಮೋಹಿಸುತ್ತಾರೆ.

ಈ ಗಿರ್ ದನ ಭಾರಿ ತೂಕ ಸುಮಾರು 390 ಕಿಲೊನಿಂದ 540 ಕಿಲೊ. ಹುಟ್ಟು ಕರು ಸುಮಾರು 22½–25 ಕಿಲೊ. ತೂಗುತ್ತೆ. ಇದರ ಎತ್ತರ 120-135 ಸೆಂ. ಮಿ. ಉದ್ದ ಜಾಸ್ತಿ ; 1.4-1.5 ಮಿ.

ಈ 'ಗಿರ್' ದನ ಮತ್ತು ಈ ಗುಂಪಿನ ದನಗಳು, ಹಾಲಿನ ಉತ್ಪತ್ತಿಗೆ ಹೆಸರೆತ್ತಿದವು. ಸರಾಸರಿ ದಿನ ಒಂದಕ್ಕೆ 4½ ಲೀ. ಹಾಲು. ಸುಮಾರು 10–11 ತಿಂಗಳು ಕಾಲ, 4-6 ತಿಂಗಳು ಹಾಲು ನಿಲ್ಲಿಸುತ್ತೆ. 7 ಲೀಟರ್ (5 ಸೇರು), ಹಾಲು ಕೊಡುವ ದನ ಸಾಮಾನ್ಯ. ಸಾಯಂಕಾಲದ ಹೊತ್ತು ಬೆಳಗ್ಗೆಗಿಂತ ಸ್ವಲ್ಪ ಹೆಚ್ಚು ಹಾಲು ಕೊಡುತ್ತೆ.

ಇದರ ಹಾಲು ಗಟ್ಟಿ. ಸುಮಾರು ಶೇ. 4½ ರಷ್ಟು ಜಿಡ್ಡು ಇರುತ್ತೆ. ಮೊದಲಿನ ಕರು ಹಾಕುವುದು ನಾಲ್ಕು ವರ್ಷ ವಯಸ್ಸು ತುಂಬಿದ ಮೇಲೆ.

ಇದು ಹಾಲಿನ ತಳಿಯಾದರೂ, ಎತ್ತುಗಳು ಬೇಸಾಯದ ಕೆಲಸಗಳಿಗೆ ಒದಗುತ್ತವೆ. ಸುಮಾರು 1/₂ ಟನ್ನು ಭಾರ ಎಳೆಯುತ್ತವೆ—ನಿಧಾನವಾಗಿ, ಬಹುದೂರ, ಗಲಾಟೆಯಿಲ್ಲದೆ. ಎತ್ತು ದನ ಎರಡೂ ಸಾಧು—ಅಲ್ಲಿಯ ಜನರಂತೆ, ಗುಜರಾತಿಗಳಂತೆ.

ಈ ದನವನ್ನು ಹೆಚ್ಚಾಗಿ ಸಾಕಿ, ಬೆಳೆಸಿ, ಮಾರುವವರು ರಬಾರಿ, ಭರ್‌ವಾಡ್, ಮಲ್ದಾರಿ, ಅಹಿರ್ ಮುಂತಾದ ಗೊಲ್ಲರು. ಇವರೂ ಕೂಡ ನಿಂತೆಡೆ ನಿಲ್ಲುವುದಿಲ್ಲ. ಮೇವು ಇದ್ದ ಕಡೆ ಟಿಕಾಣಿ. ಈ ದನಗಳನ್ನು ಮಳೆಗಾಲದಲ್ಲಿ ಊರು ಹತ್ತಿರದ ಹುಲ್ಲುಗಾವಲುಗಳಲ್ಲಿ ಮೇಯಿಸಿ, ಚಳಿಗಾಲ ದಲ್ಲಿ ಗಿರ್‌ಪ್ರದೇಶಕ್ಕೆ ಅಟ್ಟಿಕೊಂಡು ಹೋಗುತ್ತಾರೆ. ಗಿರ್ ಪ್ರದೇಶ ಬಹಳ ಪ್ರಸಿದ್ಧವಾದದ್ದು, ಕಣೋ. ಯಾತಕ್ಕೆ ಹೇಳು?........ಗೊ....ತ್ತಿ....ಲ್ಲ....! ನಾನೇ ಹೇಳಿ ಬಿಡುತ್ತೇನೆ. ಹಿಂದೆ ಸಿಂಹ ನಮ್ಮ ದೇಶದಲ್ಲಿ ಅನೇಕ ಕಡೆ ಇತ್ತು. ಆದರೆ ಇದು ಹುಲಿ ಚಿರತೆಗಳಂತೆ ಮುಚ್ಚಿಟ್ಟುಕೊಂಡು ಬಾಳುವ ಪ್ರಾಣಿಯಲ್ಲ. ಧೈರ್ಯವಾಗಿ ಓಡಾಡುತಿತ್ತು. ಬಂದೂಕ, ಗುಂಡು ಸಾಮಾನ್ಯವಾದ ಮೇಲೆ ಹೇಡಿ ಶಿಕಾರಿಗಳು, ರಾಜಗಂಭೀರದಿಂದ, ನಿರ್ಭಯ ದಿಂದ ಹೋಗುತ್ತಿದ್ದ ಈ ಸಿಂಹಗಳಿಗೆ ದೂರದಿಂದ ಗುಂಡಿಟ್ಟು ಅವನ್ನು ನಿರ್ನಾಮ ಮಾಡಿದರು. ಈ ಸಿಂಹ ಏಷ್ಯಾಸಿಂಹ—ಇಂಡಿಯದಲ್ಲಿ ಮಾತ್ರ ಇದ್ದದ್ದು. ಇದರ ಕುಲವೇ ಮಾಯವಾಗದಿರಲೆಂದು, ಇವನ್ನು ಶಿಕಾರಿಗಳ ಗುಂಡಿನಿಂದ ಕಾಪಾಡಲು ಗಿರ್ ಗುಡ್ಡಗಾಡನ್ನು ಸಿಂಹಗಳ ಅಭಯ ಪ್ರದೇಶ ವೆಂದು ಸಾರಿ, ಅಲ್ಲಿ ಯಾರೂ ಬೇಟೆಯಾಡದಂತೆ ಕಾನೂನು ಮಾಡಿದರು. ಈಗ ಭಾರತದಲ್ಲಿ ಸಿಂಹಗಳಿರುವುದು, ಈ ಗಿರ್ ಪ್ರದೇಶದಲ್ಲಿ ಮಾತ್ರ—ಸುಮಾರು 300-400 ಅಷ್ಟೆ.

ಈ ಗಿರ್ ಪ್ರದೇಶ ರಮ್ಯವಾದ ಪ್ರದೇಶ. ವನಮೃಗಗಳು ಇಲ್ಲಿ ಯಾವ ಭಯವೂ ಇಲ್ಲದೆ ಓಡಾಡುತ್ತಿರುತ್ತವೆ. ಅವು, ಹೀಗೆ ನಿರ್ಭೀತಿಯಾಗಿ ಓಡಾಡುವುದನ್ನು ನೋಡುವುದೇ ಬಹಳ ಸೊಗಸಾದ ಅನುಭವ.

ಸೌರಾಷ್ಟ್ರದಲ್ಲಿ—ಗಿರ್ ಪ್ರದೇಶವಿರುವುದೇ ಇಲ್ಲಿ—ಒಂದು ವಿಶೇಷ ಪದ್ಧತಿ, ಮತ್ತೆಲ್ಲೂ ಇಲ್ಲದ ಪದ್ಧತಿ ಇದೆ. ನಮ್ಮಲ್ಲಿ, ಅದರಲ್ಲೂ ಕುರಿ ಹೆಚ್ಚಾಗಿರುವ ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ, ಭೂಮಿಯ ಫಲವತ್ತನ್ನು

ಹೆಚ್ಚಿಸಿಕೊಳ್ಳಲು, ಉತ್ತಮ ಜೆಳೆ ಬೆಳೆಯಲು ಕುರಿಯ ಹಿಂಡುಗಳನ್ನು ಜಮೀನಿನ ಮೇಲೆ ಒಂದೆರಡು ರಾತ್ರಿ ತಂಗಿಸುತ್ತಾರೆ, ಕುರುಬರು. ಒಂದು ಜಮೀನು ಆದ ಮೇಲೆ ಮತ್ತೊಂದು ಜಮೀನಿನಲ್ಲಿ ಕುರಿ ಕೂಡುತ್ತಾರೆ. ಇದರಿಂದ ಕುರುಬರಿಗೆ ಕಾಳು, ದುಡ್ಡು. ರೈತರಿಗೆ ಹುಲುಸಾದ ಜೆಳೆ. ಸೌರಾಷ್ಟ್ರದಲ್ಲಿ ಕುರಿ ಕೂಡುವುದರ ಬದಲು, ಈ ಗಿರ್ ದನದ ಮಂದೆಗಳನ್ನು ಕೂಡುತ್ತಾರೆ.

ಗಿರ್ ದನಗಳನ್ನು ನಮ್ಮ ದೇಶದಲ್ಲಿ ಅನೇಕ ಕಡೆ, ನಾಟಿ ದನವನ್ನು ಉತ್ತಮಗೊಳಿಸಲು ಸಾಕುತ್ತಾರೆ. ಕೃಷ್ಣಾ ದನ ರೂಪಗೊಂಡದ್ದು ಈ ಗಿರ್ ದನಗಳಿಂದಲೇ. ಈ ತಳಿಯ ದನಗಳಿಗೆ ಹೊರದೇಶಗಳಲ್ಲೂ ಗಿರಾಕಿ ಇತ್ತು. ದಕ್ಷಿಣ ಅಮೆರಿಕದಲ್ಲಿ—ಬ್ರಸಿಲಿನಲ್ಲಿ ಇದನ್ನು ಮಾಂಸದ ತಳಿಯಾಗಿ ಸಾಕಲು ಒಳ ತರಿಸಿಕೊಂಡು ಬೆಳೆಸಿದರು. ಆದರೆ ಇದನ್ನು ತಿಳಿದು ಸರ್ಕಾರ, ಈ ದನಗಳನ್ನು ಬ್ರಸಿಲಿಗೆ ಕಳುಹಿಸಲು ನಿರ್ಭಂಧಮಾಡಿದರು.

ಈ ಗುಂಪಿನ ಎರಡನೆಯ ಮುಖ್ಯ ತಳಿ—ಸಾಹಿವಾಲ್ (ಫೋಟೊ 21) ಭಾರತ ವಿಭಜನೆಯಾದನಂತರ ಇದರ ತವರು—ಮಾಂಟ್ಗಮರಿ ಜಿಲ್ಲೆ ಪಾಕಿಸ್ಥಾನಕ್ಕೆ ಸೇರಿಹೋಗಿದೆ. ಆದರೆ, ಇದು ಬಹಳ ಶ್ರೇಷ್ಟವಾದ ಹಾಲಿನ ತಳಿಯಾಗಿರುವುದರಿಂದ, ಸಾಹಿವಾಲ್ ಹಿಂಡುಗಳನ್ನು, ವಿಭಜನೆಗೆ ಮುಂಚೆಯೇ ಅನೇಕ ಕಡೆ ಸಾಕುತಿದ್ದರು. ಆದುದರಿಂದ ಇದನ್ನು ಭಾರತದ ತಳಿಯೆಂದು ಕರೆದರೂ ತಪ್ಪಿಲ್ಲ. ಈ ತಳಿಯ ದನಗಳು ಅನೇಕ ಭಾರತೀಯರ ಮೆಚ್ಚುಗಗೆ ಪಾತ್ರವಾಗಿ, ಅವರ ಜೀವನದಲ್ಲಿ ಹಾಸು ಹೊಕ್ಕಾಗಿ ಇರುವುದರಿಂದ, ಇದು ಭಾರತದ ದನವೇ.

ಇದರ ಮೊದಲು ತವರು, ಹಿಂದೆ ಹೇಳಿದ ಹಾಗೆ ಮಾಂಟ್ಗಮರಿ ಜಿಲ್ಲೆ-ಹಳೆಯ ಪಂಜಾಬಿನ ಮಧ್ಯ ಭಾಗದ್ದು—ರಾವಿ ನದಿಯ ಸುತ್ತಮುತ್ತ. ಈಗ, ಇಲ್ಲಿಯ ನಿರಾವರಿ ಕಾಲುವೆಗಳಿಂದ, ಇದು ಜಲಸಮೃದ್ಧಿ ಪ್ರದೇಶ. ಈ ಕಾಲುವೆಗಳನ್ನು ತೋಡಲು ಮುಂಚೆ ಇದು ಒಣ ಪ್ರದೇಶ—ಮರಳು ಮಣ್ಣಿನ ಮೈದಾನ; ಕಾಡುಗಳ ಕಡೆ, ನದೀ ದಂಡೆಗಳಲ್ಲಿ ಅನೇಕ ಹುಲ್ಲುಗಾವಲುಗಳು ಇದ್ದ ಪ್ರದೇಶ. ಆರ್ಯರು ಭಾರತಕ್ಕೆ ಬಂದಾಗ ಬಹಳವಾಗಿ ಮೆಚ್ಚಿಕೊಂಡ ಪ್ರದೇಶ, ದನಗಳನ್ನು ಸಾಕಲು ಬಹಳ ಯೋಗ್ಯವಾದ ಪ್ರದೇಶ. ಇದರಿಂದಾಗಿ,

ಈ ಪ್ರದೇಶಕ್ಕೆ ವಾಯುವ್ಯದಿಂದ ಅಫ್ಗಾನಿಸ್ಥಾನದ ಗೊಲ್ಲರೂ ದಕ್ಷಿಣದಿಂದ ರಾಜಾಸ್ಥಾನದ ಮತ್ತು ಗುಜರಾಥಿನ ಕಾಥೇವಾಡದ ಗೊಲ್ಲರೂ ತಮ್ಮ ದನಗಳನ್ನು ಅಟ್ಟಿಕೊಂಡು ಬಂದು ಇಲ್ಲೇ ನೆಲೆಸಿದರು. ಇವರ ತಳಿಗಳು— ಅಫ್ಗಾನಿಸ್ಥಾನದ ಕೆಲವು ದನಗಳೂ ದಕ್ಷಿಣ ಭಾಗದ ಗಿರ್ ದನಗಳೂ ಬೆರೆತು ಈ ಸಾಹಿವಾಲ್ ತಳಿ ರೂಪಗೊಂಡಿತು. ಇವನ್ನು ಸಾಕಿದವರು ಜಂಗ್ಲಿ ಎಂಬ ಜಾತಿಯ ಗೊಲ್ಲರು; ದೊಡ್ಡ ಹಿಂಡುಗಳನ್ನು ಸಾಕುತ್ತಿದ್ದ ಜನ. ಆದರೆ ನಿರಾಪರಿ ಕಾಲುವೆಗಳು ಈ ಪ್ರದೇಶದಲ್ಲಿ ಹರಿದ ಮೇಲೆ, ಹುಲ್ಲುಗಾವಲುಗಳು ಮಾಯವಾಗಿ ಗದ್ದೆ ತೋಟಗಳಾದವು. ಜತೆಗೆ ಗೊಲ್ಲರ ಹಿಂಡುಗಳೂ ಮಾಯವಾದವು; ಗೊಲ್ಲರೂ ಮಾಯವಾದರು. ಆದರೂ ಇವರು ಎತ್ತಿದ, ಅಭಿವೃದ್ಧಿ ಪಡಿಸಿದ 'ಸಾಹಿವಾಲ್' ತಳಿ ಮಾತ್ರ ಹಾಲಿನ ಉತ್ಪತ್ತಿಗೆ ಪ್ರಸಿದ್ಧಿಯಾಗಿ ಈಗಲೂ ಬಾಳುತ್ತಿದೆ.

ನನಗೆ ಈ ದನ ಕಂಡರೆ ಬಹಳ ಇಷ್ಟ. ನನ್ನ ಅಭಿಪ್ರಾಯದಲ್ಲಿ ಈ ದನಕ್ಕಿಂತ ಸುಂದರವಾದ, ಸುಲಕ್ಷಣವಾದ, ಸುರದ್ರೂಪಿಯಾದ, ಮುದ್ದಾದ ದನ ಬೇರೊಂದಿಲ್ಲ. ಇದರ ಕಣ್ಣಿನ ಚೆಲುವಿಗೆ ನನ್ನ ಮನಸ್ಸು, ಹೃದಯ ಮಾರಿ ಹೋಗಿದೆ. ಹೃದಯವನ್ನು ಹಿಂಡುವ ನಾಯಿಗಳ ಕಣ್ಣುಗಳಂತೆ, ಸಾಕಿದ ಒಡೆಯನನ್ನು ನಂಬಿ, ನಿಷ್ಠೆ. ಭಕ್ತಿ ಸೂಸುವಂತೆ ಈ ಸಾಹಿವಾಲಿನ ಕಣ್ಣುಗಳೂ ಅಷ್ಟೇ ಪ್ರೇಮಮಯ, ಸೌಮ್ಯ, ಶಾಂತ.

ಮಾಟವಾದ ದೇಹ, ತುಂಬಿದ ಕೆಚ್ಚಲು, ನೀಳವಾದ ಬಾಲ, ನೆಲವನ್ನು ಕಚ್ಚುವ ಕಪ್ಪು ಕುಚ್ಚು, ಜೋತ, ನೇವರಿಸಬೇಕೆನ್ನಿಸುವ ಗಂಗೊದಲು, ಚುರುಕಾದ ಕಿವಿ, ವೋಟು ಕೋಡು, ಥಳ ಥಳಿಸುವ ಕೆಂಪು ಕಂದು ಬಣ್ಣ, ನನ್ನ ನಾಯಿಯ ಬಣ್ಣ, ಗಂಭೀರವಾದ ನಡೆಗೆ—ಈ ದನವನ್ನು ನೋಡಿದರೆ ಅಪ್ಪಿ, ನೆವರಿ, ಗಂಗೊದಲನ್ನು ಕೆರೆದು ಮುಖವನ್ನು ಮುದ್ದಿಡಬೇಕು ಎನ್ನಿಸುತ್ತದೆ."

"ಅಷ್ಟು ಚೆನ್ನಾಗಿದೆಯೇ ಈ ಹಸು. ಇದನ್ನು ನೋಡಿಸು, ಮಾವ."

"ಇದರ ಚಿತ್ರ ಯಾಕೋ ನನ್ನ ವರ್ಣನೆ ಸಾಲದೇನೊ? ನೋಡು. ಇಲ್ಲಿದೆ (ಫೋಟೊ 21) ನನ್ನ ವರ್ಣನೆಯಲ್ಲಿ ಏನಾದರೂ ಅತಿಶಯೋಕ್ತಿ ಇದೆಯೆ. ಇಷ್ಟುದನಗಳ ಚಿತ್ರಗಳನ್ನು ನೋಡಿದ್ದೀಯಲ್ಲಾ. ಇಷ್ಟುಸುಂದರವಾದ ದನವನ್ನು

ನೋಡಿದ್ದೀಯಾ? ನೀನು ಸಾಕಿದರೆ ಈ ದನ ಸಾಕು. ಆಗ ಕಿಟ್ಟೆಯ ಸಾಹಿವಾಲ್ ದನ, ಕೃಷ್ಣನ ಹರಿಯಾಣ ದನಕ್ಕಿಂತ ಮುದ್ದಾಗಿರುತ್ತೆ."

"ನೀನು ಹೇಳಿದ ಹಾಗೆ ಇದು ಚೆಂದುಳ್ಳ ದನ, ಮಾವ. ಬಹಳ ಮುದ್ದಾಗಿದೆ, ನಮ್ಮ ಕಡೆ ಇದು ಸಿಗುತ್ತದೆಯೆ, ನನಗೆ ಇದರೊಂದು ಕರುವನ್ನು ಕೊಡಿಸಿದರೆ ಚೆನ್ನಾಗಿ ಸಾಕುತ್ತೇನೆ."

"ಈ ದನ ಬೆಂಗಳೂರಿನಲ್ಲಿ, ಕೆಲವರಲ್ಲಿ ಇದೆ. ಈ ದನಗಳು ಪಂಜಾಬಿನಲ್ಲೆ ಅಲ್ಲ. ದೆಹಲಿಯಲ್ಲಿ, ಉತ್ತರ ಪ್ರದೇಶದಲ್ಲಿ, ಬೆಂಗಾಳಿನಲ್ಲಿ ಇದೆ. ಚೆನ್ನಾಗಿಯೇ ಅಭಿವೃದ್ಧಿಯಾಗಿದೆ. ಹೀಗಿರುವಾಗ ನಮ್ಮ ಮೈಸೂರಿನಲ್ಲಿ—ನಮ್ಮ ಹಿತಕರ ವಾತಾವರಣದಲ್ಲಿ—ಈ ದನಗಳು ಚೆನ್ನಾಗಿಯೇ ಬಾಳಬಹುದು. ನಿನಗೆ ಒಂದು ಪುಟ್ಟ ಹೆಣ್ಗರು ಕೊಡಿಸಲು ಬೆಂಗಳೂರಿಗೆ ಹೋದಮೇಲೆ ಪ್ರಯತ್ನ ಮಾಡುತ್ತೇನೆ."

"ಆಮೇಲೆ, ಇದು ಗಿರ್ ತಳಿ ಗುಂಪಿಗೆ ಸೇರಿದ್ದು, ಅಂದೆಯಲ್ಲ. ಆದರೆ ಇದರ ಹಣೆ, ಕೊಂಬೇ ಬೇರೆ ರೀತಿ ಇದೆ ಅಲ್ಲವೆ".

"ಗಿರ್ ಗುಂಪಿಗೆ ಸೇರಿದಾಕ್ಷಣ, ಅದರ ಹಾಗೇ ಇರಬೇಕಿಲ್ಲ. ಅದರ ಕೆಲವು ಲಕ್ಷಣಗಳಿವೆ, ಅಷ್ಟೆ, ಇದರ ಗಂಗೊದಲು ಅದರ ಹಾಗೆ—ನೆರಿಗೆ ಹಿಡಿದಂತೆ ಇದೆ. ಇದರ ಮೈ ಕಟ್ಟೂ ಅದರಂತೆ—ಸಡಿಲ. ಹೊಟ್ಟೆ ಕೆಳಗೆ ಚರ್ಮ ಜೋತಿ ಬಿದ್ದಿರುತ್ತೆ. ಕಾಲು ಮೋಟು ಇದೂ ಭಾರಿ ದನ; 410-550 ಕಿಲೊ ತೂಗುತ್ತೆ. ದೇಹ ಉದ್ದ $1^1/_4$-$1^1/_2$ ಮೀ. ಎತ್ತರವೂ ಗಿರ್ ದನದಂತೆ—1·2 ರಿಂದ 1·7 ಮೀ.

ಆದರೆ ಬಣ್ಣ ಕೆಂಪು. ಕೆಂಪಿನ ಮೇಲೆ ಕಪ್ಪು ಅಥವಾ ಕಂದು ಬಣ್ಣದ ಛಾಯೆ. ಕೆಲವು ಬಾರಿ ಬಿಳೀ ಛಾಯೆಯೂ ಕಾಣಿಸುತ್ತೆ.

ಇದರ ತಲೆ ಗಿರಿ ತಳಿಯಂತಿಲ್ಲ. ಹಣೆ ಸುಮಾರು ಅಗಲ ಗೂಳಿಗಳಲ್ಲಿ ವಿಶಾಲವಾಗಿರುತ್ತೆ. ಕಿವಿಯೂ ಚಿಕ್ಕದು. 15-30 ಸೆಂಮೀ. ಉದ್ದ; 10-12 ಸೆಂಮೀ. ಅಗಲ. ಕೋಡೇನೋ ಬೆರೆಯೆ. ಮೋಟು—10 ಸೆಂಮೀ. ಇದ್ದರೆ ಹೆಚ್ಚು. ಕತ್ತು ಮೋಟು, ಡುಬ್ಬ ಗೂಳಿಗಳಲ್ಲಂತೂ ಭಾರಿ; ಒಂದು ಕಡೆಗೆ ವಾಲುತ್ತೆ—ಕೆಲವು ಬಾರಿ. ಇದರ ಗೊರಸು ತುಂಬ ಮೃದು.

ಇದು ಶ್ರೇಷ್ಟವಾದ ಹಾಲಿನ ತಳಿ. 7 ರಿಂದ 14 ಲೀ. ಸಾಮಾನ್ಯ. 10 ತಿಂಗಳು ಹಾಲು ; 4-5 ತಿಂಗಳು ನಿಲ್ಲಿಸುತ್ತೆ. ಹಾಲು ಗಟ್ಟಿ ; ಜಿಡ್ಡಿನ ಅಂಶ ಹೆಚ್ಚು. ಕೆಲವು ದನಗಳ ಹಾಲಿನಲ್ಲಿ ಜಿಡ್ಡಿನ ಅಂಶ ಶೇ. 6. 2½-3 ವರ್ಷಗಳಲ್ಲೇ ಕರು ಹಾಕುತ್ತೆ.

ಕೆಲಸದಲ್ಲಿ ಈ ತಳಿಯ ಎತ್ತುಗಳು ನಿಧಾನ; ಆದರೆ ಭಾರಿ ಹೊರೆಗಳನ್ನು ಎಳೆಯಬಲ್ಲವು. ದೆಹಲಿಯ ಭಾರತಿಯ ಪರಿಶೋಧನಾ ಕ್ಷೇತ್ರದಲ್ಲಿ—ಪೂಸಾ ಇನ್‌ಸ್ಟಿಟ್ಯೂಟ್ ಅಂತ ಅದನ್ನು ಸಾಮಾನ್ಯವಾಗಿ ಕರೆಯುತ್ತಾರೆ—ಇರುವ ಸಾಹಿವಾಲ್ ಹಿಂಡು ಭಾರತದಲ್ಲೆ ಹೆಸರುವಾಸಿಯಾದದ್ದು.

ಈ ಗುಂಪಿನ ಮತ್ತೊಂದು ತಳಿ **ಕೆಂಪು ಸಿಂಧಿ** (ಫೋಟೊ 22.)

ಇದರ ಹೆಸರು ಸೂಚಿಸುವಂತೆಯೇ ಈ ತಳಿಯ ತವರು ಪಾಕಿಸ್ಥಾನದ ಸಿಂಧ್—ಅದರಲ್ಲೂ ಕರಾಚಿ—ಹೈದರಾಬಾದ್ ಪ್ರದೇಶ. ಈ ತಳಿಯ ಮೂಲ ಬಹುತರ ಬಲೂಚಿಸ್ಥಾನದ ಲಾಸ್‌ಬೆಲ (Las Bela) ಎಂಬ ಕಡೆಯ ದನವಿರಬೇಕು. ಇವೂ ಗುಡ್ಡ ಬೆಟ್ಟಗಳ ದನ. ಈ ಸಿಂಧ್ ಹಸುವಿನಲ್ಲಿ ಲಾಸ್‌ಬೆಲ ಜತೆಗೆ ಆಫ್ಘಾನಿಸ್ಥಾನದ ದನಗಳ ಮತ್ತು ಗಿರ್ ತಳಿಯ ರಕ್ತವೂ ಬೆರೆತಿರುವಂತಿದೆ. ಈ ಮಿಶ್ರದಿಂದ ಈ ತಳಿ ವಿಕಾಸವಾಗಿರಬಹುದು ಎಂದು ಪ್ರವೀಣರು ಹೇಳುತ್ತಾರೆ. ಬಲೂಚಿಸ್ಥಾನದಂತೆ ಗುಡ್ಡ ಪ್ರದೇಶಗಳ, ಗಿರ್‌ನಂತಹ ಗುಡ್ಡುಗಾಡುಗಳ, ಆಫ್ಘಾನಿಸ್ಥಾನದಂತಹ ಚಳಿ ಮತ್ತು ಬೆಟ್ಟ ಪ್ರದೇಶದ ದನಗಳ ರಕ್ತವಿರುವುದರಿಂದ ಈ ದನ ಎಲ್ಲಿಯಾದರೂ ಬಾಳ ಬಲ್ಲದು ಬಾಳುತ್ತಿದೆ. ಈ ಕೆಂಪು ಸಿಂಧಿ ದನಗಳನ್ನು, ಉತ್ತರ ಪ್ರದೇಶ, ಬಂಗಾಳ, ಆಸ್ಸಾಮ್, ಬಂಗ್ಲದೇಶ, ಮದ್ರಾಸು, ಕೇರಳ, ಕರ್ನಾಟಕ ಮಧ್ಯ ಪ್ರದೇಶದ ಮುಂತಾದ, ಹವಾಗುಣದಲ್ಲಿ ಬಹಳ ವ್ಯತ್ಯಾಸವಿರುವ ಜಾಗಗಳಲ್ಲಿ, ಕಾಣಬಹುದು. ಇದು ಹೀಗೆ ಪ್ರವರ್ಧವಾಗಲು ಈ ತಳಿಗೆ ಕೆಲವು ವಿಶೇಷ ಗುಣಗಳಿವೆ.

ಸಿಂಧಿ ದನಗಳ ಮೈಕಟ್ಟು ದೊಡ್ಡದಲ್ಲ. 300 ರಿಂದ 450 ಕಿಲೋ ತೂಗುತ್ತೆ ; ಅಂದರೆ ಹೆಚ್ಚು ಮೇವು ಬೇಕಿಲ್ಲ. ಮೇವಿಗೂ, ದೇಹದ ತೂಕಕ್ಕೂ ಹತ್ತಿರದ ಸಂಬಂಧ ಇದೆ. ಭಾರಿ ದನಗಳಿಗೆ ಮೇವೂ

ಭಾರಿಯಾಗಿರಬೇಕು. ಸಣ್ಣ ದನಗಳಿಗೆ ಅಷ್ಟು ಬೇಕಿಲ್ಲ. ಈ ಸಿಂಧಿ ದನಗಳಿಗೆ ಗಿರ್ ದನದಷ್ಟು ಮೇವು ಬೇಕಿಲ್ಲ.

ಸಾಮಾನ್ಯವಾಗಿ ಗೊಲ್ಲರು—ಅದರಲ್ಲೂ ಒಂದೆಡೆ ನಿಲ್ಲದೆ ಕಾವಲಿನಿಂದ ಕಾವಲಿಗೆ ದನಗಳನ್ನು ಅಟ್ಟಿಕೊಂಡು ಹೋಗಿ ಮೆಯಿಸಿ, ಬೆಳೆಸುವ ಗೊಲ್ಲರು ಸಾಕಿದ ದನಗಳು ಗಟ್ಟಿ ಮುಟ್ಟಾಗಿರುತ್ತವೆ; ಕಷ್ಟ ಪರಿಸ್ಥಿತಿಗಳನ್ನು ಎದುರಿಸುತ್ತವೆ; ಅಲ್ಪ ಮೇವಿನಿಂದಲೇ ತೃಪ್ತಿಪಟ್ಟಿಕೊಳ್ಳುತ್ತವೆ. ಈ ಸಿಂಧಿ ದನವು ಗೊಲ್ಲರಿಂದ—ಅವರ ಹೆಸರು ಮಲ್ದಾರಿ ಅಂತ—ಬೆಳೆಸಿ ರೂಪಗೊಂಡ ತಳಿಯಾದುದರಿಂದ ಈ ಗುಣಗಳು ಇದರಲ್ಲೂ ಇವೆ.

ಇದರ ಚಿತ್ರ ನೋಡು (ಫೋಟೊ 22) ಇದರ ಸೈಜು ಆಗಲೇ ಹೇಳಿದೆ-ಮಧ್ಯಮಗಾತ್ರ, ಅಂತ. ಎತ್ತರ ಸುಮಾರು 1·2–1·4 ಮೀ. ; ಉದ್ದವೂ ಕೂಡ 1·2–1·4 ಮೀ. ದೇಹ ಅಡಕ. ತಲೆ ದೇಹಕ್ಕೆ ತಕ್ಕಂತೆಯೇ ಇದೆ. ಹಣೆ, ಕೆಲವು ದನಗಳಲ್ಲಿ ಗಿರ್ ದನದಂತೆ ಉಬ್ಬಿರುತ್ತದೆ. ಕೊಂಬು ಪಕ್ಕಕ್ಕೆ ಹೊರಟುಕೊಂಡು ಮೇಲಕ್ಕೆ ಬಾಗುತ್ತೆ. ಕಿವಿ ಸುಮಾರು ಗಾತ್ರ ; ಜೋತಿದೆ. ಸಾಹಿವಾಲಿಗಿಂತ ದೊಡ್ಡದು. ಗಿರ್‌ಗಿಂತ ಸಣ್ಣದು. ಡುಬ್ಬವೂ ಮಧ್ಯಸ್ಥ.

ಕಣ್ಣೆ ಸೌಮ್ಯ. ಸಾಮಾನ್ಯವಾಗಿ ಹಾಲು ತಳಿ ದನಗಳ ಕಣ್ಣೇ ಹಾಗೆ–ಸೌಮ್ಯ. ಅದೇ ಎತ್ತಿನ ತಳಿಗಳ ಕಣ್ಣು ದೊಡ್ಡವು, ಚುರುಕು ; ಕೆಲವು ವೇಳೆ ಕೆಂಪೇರಿರುತ್ತೆ. ಕಣ್ಣುಗಳಲ್ಲಿ ರೋಷ ಕಾಣುತ್ತೆ.

ಇದರ ಗಂಗೊದಲು ಇಳಿ ಬಿದ್ದಿರುತ್ತೆ—ಗಿರ್ ದನದಂತೆ. ಇದರಲ್ಲೂ ಹೊಟ್ಟೆ ತಳದ ಚರ್ಮ ಸಡಿಲ ಬಿದ್ದಿರುತ್ತೆ ; ಜೋತು ಬಿದ್ದಿರುತ್ತೆ. ಇದರ ಬಾಲವೂ ಉದ್ದ. ಕಾಲುಗಳು ಸ್ವಲ್ಪ ಮೋಟೆಂದೇ ಹೇಳಬೇಕು. ಇದರ ಕೆಚ್ಚಲೂ ಭಾರವಾಗಿ, ತುಂಬಿಕೊಂಡಿರುತ್ತೆ.

ಇದರ ಬಣ್ಣ, ಹೆಸರಿಗೆ ತಕ್ಕ ಹಾಗೆ ಕೆಂಪು–ಕಂದು ಕೆಂಪು, ಕುದುರೆ ಬಣ್ಣ. ಕೆಲವು ಹೆಚ್ಚು ಕೆಂಪು ; ಕೆಲವು ಹಳದಿ ಕೆಂಪು. ಗಂಗೊದಲಿನ ಮೇಲೆ, ಹಣೆಯ ಮೇಲೆ ಆಗಾಗ್ಗೆ ಸಣ್ಣ ಮಚ್ಚೆ ಇದ್ದರೂ ಇತರ ಕಡೆ ಇರುವುದಿಲ್ಲ. ಗೂಳಿಗಳಲ್ಲಿ ಬುಜ, ಚಪ್ಪೆ ಹೆಚ್ಚು ಕಪ್ಪು. ಕೂದಲು ಸ್ವಲ್ಪ ಮೃದು ; ಹೊಳಪುತಿರುತ್ತೆ ; ಗೊರಸು ಸ್ವಲ್ಪ ಮೃದು.

ಇದೂ ಕೂಡ ಶ್ರೇಷ್ಟವಾದ ಹಾಲಿನ ಕಳಿ. ಇದನ್ನು ಹಾಲಿಗಾಗಿಯೇ ಬೇರೆ ಕಡೆ ಸಾಕಿದರೂ ಇದರ ತವರಿನಲ್ಲಿ ಇದನ್ನು ಎತ್ತಿನ ತಳಿಯೆಂತಲೂ ಭಾವಿಸುತ್ತಿದ್ದಾರೆ. ಎತ್ತುಗಳನ್ನು ಎಲ್ಲಾ ಬೇಸಾಯದ ಕೆಲಸಗಳಿಗೂ ಹೂಡುತ್ತಾರೆ.

ಇದು ಸರಾಸರಿ $5^1/_2$–6 ಲೀ. ಹಾಲು ಕೊಡುತ್ತೆ. ಅನೇಕ ದನಗಳು ಇದಕ್ಕಿಂತ ಹೆಚ್ಚು ಹಾಲು ಕೊಡುತ್ತವೆ. 'ಸುಮಾರು 9 ತಿಂಗಳು ಕಾಲ ಹಾಲು ಕೊಡುತ್ತೆ; 5 ತಿಂಗಳು ಹಾಲು ನಿಲ್ಲಿಸುತ್ತೆ. ಆದರೆ ಇದರ ಮೊದಲನೆಯ ಕರು ನಿಧಾನ—$3^1/_2$ ವರ್ಷವಾದ ನಂತರ.

ಎತ್ತುಗಳ ನಡಿಗೆ ನಿಧಾನವೂ ಅಲ್ಲ, ಚುರುಕೂ ಅಲ್ಲ. ಸುಮಾರು ಅರ್ಧಟನ್ನೂ ಹೊರೆಯನ್ನು ಸುಲಭವಾಗಿ ಎಳೆಯುತ್ತೆ. ಕೆಲವು ಕಡೆ, ಕತ್ತೆಯಂತೆ ಇದನ್ನು ಹೇರು ಪ್ರಾಣಿಯಾಗಿಯೂ ಉಪಯೋಗಿಸುತ್ತಾರೆ. ಬೆನ್ನು ಗಟ್ಟಿ; 135–220 ಕಿಲೊ. ಹೇರಬಹುದು.

ಕೆಂಪು ಸಿಂಧಿ ದನ ಅನೇಕ ರೀತಿಯಲ್ಲಿ ಉತ್ತಮ ತಳಿಯಾದರೂ, ಒಂದು ಅಪಗುಣವಿದೆ. ಭಾರತದ ದನಗಳಲ್ಲಿ ಸಾಮಾನ್ಯವಾಗಿ ಇರುವ ರೋಗ ನಿರೋಧ ಶಕ್ತಿ ಈ ತಳಿಯಲ್ಲಿ ಕಡಿಮೆ. ಸ್ವಲ್ಪ ಬೇಗ ರೋಗಕ್ಕೆ ತುತ್ತಾಗುತ್ತೆ.

ಈ ಕೆಂಪು ಸಿಂಧಿ, ಇಂಡಿಯ ಪಾಕಿಸ್ಥಾನದಲ್ಲಿದೆ, ಸಿಲೋನ್, ಪೂರ್ವ ಆಫ್ರಿಕ, ಫಿಲಿಪ್ಪೈನ್ಸ್, ಮತ್ತು ಅಮೆರಿಕ ಕಡೆಯೂ ಹರಡಿದೆ. ಇದನ್ನು ಜೆರಸಿ (Jeresy) ಎಂಬ ಉತ್ತಮನಾದ ಇಂಗ್ಲೆಂಡಿನ ತಳಿಯೊಂದಿಗೆ ಬೆರೆಸಿ ಮಿಶ್ರ ತಳಿಗಳನ್ನು ಎತ್ತಿದ್ದಾರೆ. ಈ ತಳಿಗಳು ಹೆಚ್ಚು ಹಾಲು ಕೊಡುವುದಲ್ಲದೆ, ಇವುಗಳ ಹಾಲಿನಲ್ಲಿ ಹೆಚ್ಚು ಬೆಣ್ಣೆಯೂ ಇರುತ್ತೆ. ಸಾಮಾನ್ಯವಾಗಿ, ನಮ್ಮ ದೇಶದ ದನಗಳ ಹಾಲಿನಲ್ಲಿರುವಷ್ಟು ಜಿಡ್ಡಿನ ಅಂಶ, ಪಾಶ್ಚಾತ್ಯ ದೇಶದ ಹಸು ಹಾಲಿನಲ್ಲಿರುವುದಿಲ್ಲ; ನಮ್ಮ ದನದ ಹಾಲು ಬಹಳ ಗಟ್ಟಿ.

ಕೆಂಪು ಸಿಂಧಿ ನಮ್ಮ ಬೆಂಗಳೂರಿನ ಹವಾಗುಣಕ್ಕೆ ಚೆನ್ನಾಗಿ ಒಗ್ಗುತ್ತದೆ.

ಗಿರ್ ಗುಂಪಿಗೆ ಸೇರಿಸಬಹುದಾದ ಇನ್ನು ಮೂರು ತಳಿಗಳು ಹಾಲಿನ ತಳಿಗಳಲ್ಲ—ಎತ್ತಿನ ತಳಿಗಳು; ಅಲ್ಲದೆ ಬೆರಕೆ ತಳಿಗಳು. ಇವು ಯಾವು ವೆಂದರೆ ನಿಮಾರಿ, ದೇವೋನಿ (Deoni) ಮತ್ತು ಡಾಂಗಿ (Dangi).

ನಿಮಾರಿ ಚಿತ್ರಾರದ ದನ (ಫೋಟೊ 24) ಈ ಮೂರು ತಳಿಗಳೂ ಚಿತ್ರಾರದ ತಳಿಗಳೇ. ನಿಮಾರಿ, ಗಿರ್ ಮತ್ತು ಖಿಲ್ಲಾರಿಯಿಂದ ಬಂದ ಮಿಶ್ರ ತಳಿ. ಗಿರ್ ತಳಿಯಿಂದ ಬಣ್ಣವನ್ನೂ, ಗಾತ್ರವನ್ನೂ ಉಬ್ಬು ಹಣೆಯನ್ನೂ ಪಡೆದಿದ್ದರೆ, ಖಿಲ್ಲಾರಿಯಿಂದ ಅದರ ಗಟ್ಟಿ ಮುಟ್ಟುತನ ಚುರುಕು ನಡೆಗೆ ಮತ್ತು ರೋಷವನ್ನು ಪಡೆದಿದೆ. ಇದರ ತವರು ಮಧ್ಯ ಪ್ರದೇಶದ ಬರ್ವಾಣಿ-ಖಂಡ್ವ ಭಾಗ. ಈ ಭಾಗವನ್ನು ನಿಮಾರ್ ಎನ್ನುತ್ತಾರೆ. ನರ್ಮದಾ ನದಿ, ವಿಂಧ್ಯ ಪ್ರದೇಶದ ಭಾಗ. ಗುಡ್ಡ ಬೆಟ್ಟಗಳ ಭಾಗ. ಇಂತಹ ಕಡೆ, ಒರಟು ನೆಲ ರಸ್ತೆಗಳಲ್ಲಿ, ಏರು ತಗ್ಗುಗಳಲ್ಲಿ ಈ ದನ $^3/_4$-1 ಟನ್ನು ಹೊರೆಯನ್ನು ನಿರಾಯಾಸವಾಗಿ ಎಳೆಯುತ್ತದೆ. ನಡೆಗೆ ಸುಮಾರು ಚುರುಕು—ಗಂಟೆಗೆ 5 ಕಿ.ಮಿ. ; ದಿನಕ್ಕೆ 8-10 ಗಂಟೆ ಕಾಲ ಕೆಲಸ. ಇಲ್ಲಿಯ ಬೇಸಾಯದ ಕೆಲಸ ಶ್ರಮವಾದುದರಿಂದ, ಎತ್ತುಗಳು 6-8 ವರ್ಷ ಮಾತ್ರ ದುಡಿಯಬಲ್ಲವು. ಆಮೇಲೆ ಸೋತು ಮುದಿಯಾಗುತ್ತವೆ.

ಇದರ ಚಿತ್ರ ಇಲ್ಲಿದೆ. (ಫೋಟೊ 23) ಸುಮಾರು ಗಾತ್ರ ; 320-400 ಕಿಲೊ $1^1/_2$ ಮಿ. ಎತ್ತರ; 1·2-1·5 ಮಿ. ಉದ್ದ. ಮಾಟವಾದ ದೇಹ. ಸುಮಾರು ಉದ್ದದ ತಲೆ, ಉಬ್ಬಿರುತ್ತೆ. ತಲೆ ಎತ್ತಿಕೊಂಡ ನಿಲುವು. ಕೊಂಬು ಸುಮಾರು ಗಿರ್ ದನದಂತೆ. ಕಿವಿಯೂ ಸ್ವಲ್ಪ ಉದ್ದ, ಅಗಲ, ಆದರೆ ಜೋತಿರುವುದಿಲ್ಲ. ಗಂಗೊದಲು ಸುಮಾರಾಗಿ ಜೋತಿರುತ್ತೆ. ಡುಬ್ಬವೂ ಪುಷ್ಟವಾಗಿರುತ್ತೆ. ಕಾಲುಗಳು ಮಾತ್ರ ಗಿರ್ ತರಹ ಅಲ್ಲ. ಎತ್ತಿನ ತಳಿಯಾದುದರಿಂದ ನೆಟ್ಟಗೆ ಗಟ್ಟಿಯಾಗಿರುತ್ತೆ. ಇದರ ಬಾಲವೂ ಉದ್ದ. ಗೊರಸು ಗಟ್ಟಿ; ಕಲ್ಲು ಭೂಮಿಯ ಓಡಾಟಕ್ಕೆ ಅನುಕೂಲ. ಗಿರ್‌ನಂತೆ ಚರ್ಮ ಸಡಿಲ.

ಇದರ ಬಣ್ಣ ಕೆಂಪು-ಬಿಳಿಪು ಮಿಶ್ರ. ಚಿತ್ರ ಚಿತ್ರವಾಗಿರುತ್ತೆ.

ದೇವೋನಿ ಇತ್ತೀಚಿನ ತಳಿ—ಸುಮಾರು 25 ವರ್ಷ ಕೆಳಗೆ ವಿಕಾಸವಾದ ತಳಿ. (ಫೋಟೊ 24) ಇದನ್ನು ಡೊಂಗಾರಿ ಅಂತಲೂ ಕರೆಯುತ್ತಾರೆ—ಬೆಟ್ಟದ ದನ ಅಂತ. ಇದರ ತವರು ಪೂರ್ವ ಮಹಾರಾಷ್ಟ್ರ ಮತ್ತು ಮೈಸೂರಿನ ಬಿದರೆ ಜಿಲ್ಲೆ. ಈ ತಳಿ, ಈ ಪ್ರದೇಶದ ನಾಡು ದನ, ಗಿರ್ ಮತ್ತು ಡಂಗಿ ದನಗಳ ಮಿಶ್ರಣದಿಂದ ರೂಪಗೊಂಡದ್ದು. ಈ ಪ್ರದೇಶ ಗುಡ್ಡ

ಗಾಡು, ರಸ್ತೆಗಳು ಚೆನ್ನಾಗಿಲ್ಲ; ಹೆಚ್ಚು ರಸ್ತೆಗಳಿಲ್ಲ; ಕಾಲು ದಾರಿಗಳೇ ಹೆಚ್ಚು. ಕಲ್ಲು ಹೆಚ್ಚು. ಇಲ್ಲಿಯ ಮಣ್ಣು ಜಿಗಟು. ಉಳುಮೆ ಇತ್ಯಾದಿ ಕೆಲಸ ಶ್ರಮದ್ದು. ಇಂತಹ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ, ಇಲ್ಲಿಯ ರೈತರು ಈ ದನದ ತಳಿಯನ್ನು ರೂಪಿಸಿಕೊಂಡಿದ್ದಾರೆ. ಹಾಲಿನ ಉತ್ಪತ್ತಿಗೂ ಗಮನ ಕೊಟ್ಟಿದ್ದಾರೆ. ಹಿಗಾಗಿ, ಇದು ಎತ್ತಿನ ತಳಿಯೂ ಹೌದು. ತಕ್ಕಮಟ್ಟಿಗೆ ಹಾಲೂ ಕೊಡುತ್ತೆ ಇದು ಭಾರಿ ದನವಲ್ಲ; ಮಧ್ಯಮ ಗಾತ್ರದ್ದು; ಸುಮಾರು 300-550 ಕಿಲೊ. ಅದರ ಮೈ ಕಟ್ಟು ಗಿರ್ ತಳಿಯಂತೆಯೆ. ಹಣೆ ಉಬ್ಬು; ಕಿವಿ ಉದ್ದ; ಮೋಟು ಕೋಡು. ಆದರೂ ಗಿರ್ ದನದಂತೆಯೇ. ಚರ್ಮ ಸಡಿಲ ಗಂಗೊದಲು ಭಾರ; ಜೋತಿರುತ್ತೆ. ಗಟ್ಟಿಗೊರಸು. ಅದರ ಬಣ್ಣ ಬೇರೆ. ಮೈ ಮೇಲೆ ಕಪ್ಪು ಬಿಳಿ ಚುಕ್ಕಿ. ದಿನಕ್ಕೆ 3 ಲೀ-10 ತಿಂಗಳು ಕಾಲ ಸುಮಾರು 5 ತಿಂಗಳು ಹಾಲು ಸಲ್ಲಿಸುತ್ತೆ. ಎತ್ತು ಗಲಾಟೆ ಮಾಡದೆ ಚೆನ್ನಾಗಿ ಕೆಲಸ ಮಾಡುತ್ತೆ ನಡೆಗೆ ನಿಧಾನ.

ದೇವೋನಿ ತಳಿಯನ್ನು ಆ ಪ್ರದೇಶದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳು ವಂತೆ ಹೇಗೆ ರೂಪಿಸಿದ್ದಾರೊ ಹಾಗೆ ಮಹಾರಾಷ್ಟ್ರದಲ್ಲಿ, ಬಹಳ ಹೆಚ್ಚಾಗಿ ಮಳೆ ಬೀಳುವ ಪಶ್ಚಿಮ ಘಟ್ಟದ ಉತ್ತರ ಭಾಗ, ನಾಸಿಕ, ಠಾಣ, ಡಾಂಗ್, ಗುಜರಾತಿನ ಸೂರತ್ ಜಿಲ್ಲೆ ಪ್ರದೇಶಕ್ಕೆ ಸೂಕ್ತವಾದ ಮತ್ತೊಂದು ತಳಿಯನ್ನು ರೂಪಿಸಿದ್ದಾರೆ. ಇದರ ಹೆಸರು ಡಾಂಗಿ ಈ ಪ್ರದೇಶದಲ್ಲಿ ವರ್ಷಕ್ಕೆ 50 ರಿಂದ 150 ಅಂಗುಲ ಮಳೆ.

ಸಾಮಾನ್ಯವಾಗಿ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಎತ್ತು ಬಾಳುವುದಿಲ್ಲ; ಚೆನ್ನಾಗಿ ಬೆಳೆಯುವುದಿಲ್ಲ. ಅದಕ್ಕೋಸ್ಕರವೇ ನಮ್ಮ ಮಲೆನಾಡಿನ ಕಡೆ ಉತ್ತಮವಾದ ಎತ್ತುಗಳು ಅಪರೂಪ. ಇಂತಹ ಪ್ರದೇಶ ಗಳಿಗೆ, ಬೇಸಾಯದ ಕೆಲಸಗಳಿಗೆ ಕೋಣ ಒಪ್ಪೇ ಹೊರತು ಎತ್ತುಗಳಲ್ಲ. ಕೋಣನಿಗೆ, ನೀರು, ಕೊಚ್ಚೆ, ಕೆಸರು ಕಂಡರೆ ಬಹು ಪ್ರೀತಿ. ಎತ್ತಿಗೆ ಇವು ಯಾವೂ ಆಗದು. "ಎತ್ತು ಏರಿಗೆ ಎಳೆದರೆ ಕೋಣ ಕೊಚ್ಚೆಗೆ ಎಳೆಯಿತು" ಅಂತ ಗಾದೆ ಕಟ್ಟಿರುವುದು ಇದಕ್ಕಾಗಿಯೇ. ಆದರೆ ಡಾಂಗಿ ದನಗಳು ಮಾತ್ರ ಈ ಗಾದೆಗೆ ವಿರೋಧ. ಮಳೆಯಲ್ಲೆ, ಕೆಸರಿನಲ್ಲೆ ಸಂತೋಷದಿಂದ ಕೆಲಸ

ಮಾಡಬಲ್ಲ ಏಕ ಮಾತ್ರ ದನವೆಂದರೆ ಡಾಂಗಿ. ಇದಕ್ಕೆ ಕಾರಣ ಇವುಗಳ ಚರ್ಮದ ರಚನೆ. ಇದರ ಚರ್ಮದ ಮೇಲೆ ಹೇರಳವಾಗಿ ಎಣ್ಣೆ ಸೂಸುತ್ತೆ; ಮೈಮೇಲೆ ಎಣ್ಣೆಯ ಪದರ ಹರಡಿರುತ್ತೆ. ಇದರ ಮೇಲೆ ಮಳೆ ಬಿದ್ದರೆ ನೀರು ಜಾರಿಹೋಗುತ್ತೆ; ತಂಗುವುದಿಲ್ಲ, ಇಂಗುವುದಿಲ್ಲ. ಇದರ ಗೊರಸು ಬಲುಗಟ್ಟಿ. ಜೆಣಚಿನಂತೆ; ಬೇಗ ಸವೆಯುವುದಿಲ್ಲ.

ಈ ತಳಿಯನ್ನು ರೂಪಿಸಿದವರು, ಮಹದೇವ್‌ಕಿಲಿ, ಕನ್ನಡಿ ಮತ್ತು ಥಾಕೂರ್ ಎಂಬ ಗೊಲ್ಲರು, ಮೊದಲು ಸೌರಾಷ್ಟ್ರದ ಭಾರ್‌ವಾಡರು ತಮ್ಮ ಗಿರ್ ದನಗಳನ್ನು ಇಲ್ಲಿಯ ಕಾಡುಗಳಿಗೆ ಕ್ಷಾಮ ಕಾಲದಲ್ಲಿ ಅಟ್ಟಿಕೊಂಡು ಬರುತ್ತಿದ್ದರಂತೆ; ಈ ತಳಿ ಮತ್ತು ಸ್ಥಳದ ತಳಿ ಬೆರೆತು ಡಾಂಗಿ ತಳಿ ಕ್ರಮೇಣ ರೂಪಗೊಂಡಿತಂತೆ. ಈಗ, ಈ ದನ ಬತ್ತದ ಗದ್ದೆ ಕೆಲಸಗಳಿಗೆ, ಘಟ್ಟದ ರಸ್ತೆಯಲ್ಲಿ ಸಾಮಾನು ಸಾಗಿಸುವುದಕ್ಕೆ ಒಪ್ಪಾದ ತಳಿ.

ಇದರ ಮೈಕಟ್ಟು, ಗಿರ್ ದನದಂತೆ ಸ್ವಲ್ಪ ಸಡಿಲ. ಆದರೆ ಮಧ್ಯಮ ಗಾತ್ರದ್ದು—275-450 ಕಿಲೊ ಅಷ್ಟೆ—ನಮ್ಮ ಮೈಸೂರಿನ ದನದಷ್ಟು. ಸಣ್ಣ ತಲೆ, ಸಣ್ಣ ಕಿವಿ, ಸಣ್ಣ ಕತ್ತು, ದೊಡ್ಡ ಮೂತಿ, ದೊಡ್ಡ ಕಣ್ಣು, ಹಣೆ ಸ್ವಲ್ಪ ಉಬ್ಬು, ಕಣ್ಣು ಅಚ್ಚ ಕಪ್ಪು, ಕೋಡು, ಮೋಟು. ಜೋತಿದ ದಪ್ಪ ಗಂಗೊದಲು. ಚರ್ಮ ಸಡಿಲ. ಮುಂದಿನ ಕಾಲುಗಳು ಅಡ್ಡಕ್ಕೆ ದೂರವಾಗಿರುತ್ತೆ.

ಇದರ ಬಣ್ಣ ಕೆಂಪು, ಬಿಳುಪು, ಕಪ್ಪು ಮಿಶ್ರ. ನೋಡುವುದಕ್ಕೆ ನಿಮಾರಿ ದನದಂತಿರುತ್ತೆ.

ಈಗ, ಈ ತಳಿಯನ್ನು, ನಮ್ಮ ಮೈಸೂರಿನ ಹೆಚ್ಚು ಮಳೆ ಬೀಳುವ ಕಾರ್‌ವಾರ್ ಕಡೆ ಸಾಕುತ್ತಿದ್ದಾರೆ. ಧಾರವಾಡದ ಟೇಗೂರು ಬಳಿ ಈ ತಳಿಯನ್ನು ಅಭಿವೃದ್ಧಿ ಪಡಿಸಲು ಒಂದು ಕೇಂದ್ರವಿದೆ.

ಮಲೆನಾಡಿನವರಿಗೆ ಬಹಳ ಅನುಕೂಲವಾದ ದನ. ಅಲ್ಲಿ ಇಲ್ಲಿ ಮೇದು, ಗುಡ್ಡ ಬೆಟ್ಟ ಏರಿ ಇಳಿದು ಬಾಳುತ್ತೆ. ಆದರೆ ಇದರಿಂದ ಹೆಚ್ಚು ಹಾಲನ್ನು ನಿರೀಕ್ಷಿಸಲಾಗದು.

ಇದರೊಂದಿಗೆ ಗಿರ್ ದನಗಳ ಗುಂಪಿನ ಕತೆ ಮುಗಿಯಿತು.

ಇನ್ನು ಉಳಿದಿರುವುದು **ಪರ್ವತದ ದನಗಳು**–ಹಿಮಾಲಯದ ಪರ್ವತ ಗಳದ್ದು. ಭಾರತದಲ್ಲಿ ಈ ಗುಂಪಿಗೆ ಸೇರಿದಂತೆ ಎರಡು ತಳಿಗಳಿವೆ—ಉತ್ತರ ಪ್ರದೇಶದ 'ಪೊನ್ವಾರ್' ಮತ್ತು ಡಾರ್ಜಿಲಿಂಗ್ ಕಡೆಯ 'ಸಿರಿ' ದನಗಳು. ಇವುಗಳ ಅಂತಹ ಪ್ರಸಿದ್ಧ ದನಗಳಲ್ಲ. ಆದರೂ ಇವುಗಳ ವಿಷಯ ಎತ್ತುವುದಕ್ಕೆ ಕಾರಣವಿದೆ.

ನಮ್ಮ ಭಾರತದ ದನ ಜೆಬು ವರ್ಗಕ್ಕೆ ಸೇರಿದ ದನಗಳು, ಡುಬ್ಬದ ದನ ಗಳು ಅಂತ ಹೇಳಿದ್ದೀನಿ. ಆದರೆ, ಈ ಪರ್ವತ ದನಗಳಿಗೆ, ಪಾಶ್ಚಾತ್ಯ ದನ ಗಳಂತೆಯೇ ಡುಬ್ಬವಿಲ್ಲ ಅಥವಾ ಡುಬ್ಬ ಎದ್ದು ಕಾಣುವುದಿಲ್ಲ. ಅಲ್ಲದೆ, ಇವು ಗಳನ್ನು ದೂರದಿಂದ ನೋಡಿದರೆ ಮೊಖ, ಮೈಕಟ್ಟು ಎಲ್ಲಾ ಪಾಶ್ಚಾತ್ಯ ದನ ಗಳಂತೆಯೇ ಕಾಣುತ್ತದೆ. ಅವುಗಳಂತೆಯೇ ಬಣ್ಣದ ದನ, ಮೈಮೇಲೆ ಕೂದಲು ಜಾಸ್ತಿ. ಮೋಟು ಕೋಡು.

ಇದಕ್ಕೆ ಬಹುಶ ಕಾರಣ, ಈ ಪರ್ವತಗಳ ಹವಾಗುಣ ಪಾಶ್ಚಾತ್ಯ ದೇಶಗಳ ಹವಾಗುಣದಂತೆಯೇ ಇರುವುದರಿಂದ ಇರಬಹುದು. ಇಲ್ಲಿ ಚಳಿ ಹೆಚ್ಚು. ಆದುದರಿಂದ ದಪ್ಪ ಚರ್ಮ, ದಟ್ಟ ಕೂದಲು ಅಚ್ಚ ಬಣ್ಣ ಹೊಂದಲೇ ಬೇಕು, ಚಳಿಯಿಂದ ಪಾರಾಗಲು.

ಆದರೆ ಇವುಗಳ ಮೈಕಟ್ಟು ಮಾತ್ರ ಚಿಕ್ಕದು, ಈ ಪರ್ವತಗಳಲ್ಲಿ ಪುಷ್ಟಿ ಕರವಾದ ಮೇವು ಸಿಗುವುದಿಲ್ಲವಾದುದರಿಂದ ಇವುಗಳ ಗಾತ್ರ ಸಣ್ಣ. ಇವು ಗಿಡ್ಡ ದನ.

ಪೊನ್ವಾರ್ ತಳಿಯು ಉತ್ತರ ಪ್ರದೇಶದ ಹಿಮಾಲಯ ಭಾಗದ ಪಿಲಿ ಬಿಟ್ ಜಿಲ್ಲೆಯದು (ಫೋಟೊ 25) 270–360 ಕಿಲೊ ತೂಕ ;1·2 ಮಿ. ಎತ್ತರ ; 1·2–1·5 ಮಿ. ಉದ್ದ. ಇದು ಈಚೆಗೆ ರೂಪಗೊಂಡ ತಳಿ. ಇದರ ದೇಹ ಅಡಕ; ಕಪ್ಪು ಬಿಳುಪು ಬಣ್ಣ. ಇದು ಡುಬ್ಬವಿಲ್ಲದಿದ್ದರೂ ಪಾಶ್ಚಾತ್ಯ ದನವಲ್ಲ ಎನ್ನುವುದಕ್ಕೆ ಇದರ ಕೋಡಿನ ಆಕಾರವೇ ಸಾಕ್ಷಿ, ಈ ಕೋಡು, ಕಾಂಕ್ರೇಜ್ ದನದಂತೆ ಲೈರ್ ಆಕಾರದ್ದು.

ಚಿಕ್ಕ ತಲೆ, ಸಣ್ಣ ಕಿವಿ, ದೊಡ್ಡ ಕಣ್ಣು, ಹಣೆ ಚಪ್ಪಟೆ ಅಥವಾ ಸ್ವಲ್ಪ ತಗ್ಗಿರುತ್ತೆ. ಕೊಂಬು ಉದ್ದ. ಕತ್ತು ಸಣ್ಣ, ಗಂಗೊದಲು ಬಿಗಿ. ಚೆನ್ನಾಗಿ ಬೆಳೆದ ಗೂಳಿಯಲ್ಲಿ ಸುಮಾರು ಗಾತ್ರದ ಡುಬ್ಬ. ಉದ್ದವಾದ ಬಾಲ.

ಆದರೆ ಬಿಳಿಯ ಕುಚ್ಚು. ಬಿಳಿಯ ಕುಚ್ಚು ಇನ್ನೊಂದು ತಳಿಗೆ ಮಾತ್ರ ಇದೆ. ಈ ದನ ಚುರುಕು ; ಕೋಪಿಷ್ಠ. ಚೆನ್ನಾಗಿ ಕೆಲಸ ಮಾಡುತ್ತೆ, ಹಾಲು ಕಡಿಮೆ.

ಸಿಕ್ಕಿಂ, ಭೂತಾನ್, ಡಾರ್ಜೀಲಿಂಗ್ ಕಡೆ ಸಿರಿ ಎಂಬ ಮತ್ತೊಂದು ತಳಿ. ಬಹುಶಃ ಇದರಲ್ಲಿ ಟಿಬೆಟಿನ ದನದ ರಕ್ತ ಓಡುತ್ತಿರಬಹುದು. ಕಾರಣ ಟಿಬೆಟ್ ಹತ್ತಿರದಲ್ಲೆ ಇದೆ. ಇದರ ಬಣ್ಣವೂ ಕಪ್ಪು-ಬಿಳುಪು ಮಿಶ್ರ. ದಟ್ಟವಾದ ಮೈಗೂದಲು.

ಭಾರಿ ದೇಹ. ಮೈಕಟ್ಟು ಪಾಶ್ಚಾತ್ಯ ದನಗಳ ತರಹ. ಅಗಲವಾದ ಹಣೆ. ಚೂಪಾದ ಮುಂಚಾಚಿದ ಕೋಡು. ಸಣ್ಣ ಕಿವಿ. ಗಟ್ಟಿ ಮುಟ್ಟಾದ ಕಾಲುಗಳು ; ಪರ್ವತದಲ್ಲಿ ಅಡ್ಡಾಡುವುದಕ್ಕೆ ಅನುಕೂಲವಾದ ಕಾಲು. ನಡಿಗೆ ನಿಧಾನವಾದರೂ 1 ಟನ್ನು ಹೊರೆಯನ್ನು ಎಳೆದು ಏರುತ್ತವೆ. ಈ ತಳಿಯ ಹಸುಗಳು ಸುಮಾರು $^1/_2$ ಲೀ. ಹಾಲು ಕೊಡುತ್ತವೆ. ಹಾಲು ಬಹಳ ಗಟ್ಟಿ. ಜಿಡ್ಡಿನ ಅಂಶ ಶೇ. 6 ರಿಂದ 10 ಇಷ್ಟು ಜಿಡ್ಡಿರುವ ಹಾಲನ್ನು ಮತ್ತಾವ ತಳಿಯೂ ಕೊಡುವುದಿಲ್ಲ. ಎಮ್ಮೆ ಹಾಲಿಗಿಂತ ಗಟ್ಟಿ.

ಇದರ ಎತ್ತರ 110-125 ಸೆಂಮೀ. ಉದ್ದ—120-140 ಸೆಂಮೀ. ಈ ದನಗಳನ್ನು ತಪ್ಪಲುಗಳಿಗೆ ತಂದರೆ, ದನ ಕೆಡುತ್ತವೆ.

ಅಬ್ಬ .... ಇಲ್ಲಿಗೆ ದನದ ಕತೆ ಮುಗಿಯಿತು, ಕಣೋ. ಅಕ್ಕನಿಗೆ ಹೇಳಿ ಒಂದು ಕಪ್ಪು ಸ್ಟ್ರಾಂಗ್ ಕಾಫಿ ಈಸುಕೊಂಡು ಬಾ."

ಸ್ವಲ್ಪ ಹೊತ್ತಿನಲ್ಲಿಯೇ 2 ಲೋಟ ಕಾಫಿ ತಂದ. ಮಾವ ಅಳಿಯ ಅವನ್ನು ಹೀರಿಕೊಂಡರು.

" ದನದ ಕತೆಯನ್ನೇನೋ ಮುಗಿಸಿಬಿಟ್ಟೆ ; ಕೊನೆ ಕೊನೆಯಲ್ಲಿ ಮೇಲ್ ಗಾಡಿ ತರಹ ಕತೆಗಿತೆ ಏನೂ ಇಲ್ಲದೆ ಓಡಿಸಿ ಬಿಟ್ಟೆ .... "

" ಅಷ್ಟಲ್ಲದೆ. ಮಾಮಂದು ಗೂಡ್ಸ್‌ಗಾಡಿ ಅಂತ ಮಾಡಿದ್ದಿಯಾ. ಅಲ್ಲದೆ, ಈ ಪರ್ವತದ ದನಗಳು ಅಷ್ಟು ಮುಖ್ಯವಲ್ಲ. ನಾನು ಅವನ್ನು ನೋಡಿಲ್ಲ. ನೀನೂ ಅವನ್ನು ನೋಡುತ್ತಿಯೋ ಇಲ್ಲವೊ. ಸಾಕುವುದಂತೂ ಇಲ್ಲವೇ ಇಲ್ಲ. ಅದಕ್ಕೇ ಅವುಗಳ ವಿಚಾರ ಓಡಿಸಿ ಬಿಟ್ಟೆ. "

" ಇನ್ನೂ ಪಾಶ್ಚಾತ್ಯ ದನಗಳ ವಿಷಯ ಹೇಳಬೇಕಿತ್ತು. ಎಮ್ಮೆಗಳ ವಿಷಯ ಹೇಳಬೇಕಿತ್ತು. ದನ ಸಾಕುವುದು ಹೇಗೆ ಅಂತ ಹೇಳಬೇಕಿತ್ತು."

"ಹೇಳಬೇಕಿತ್ತು. ದನಗಳ ವಿ: ಬೇಕಾದಷ್ಟಿದೆ, ಹೇಳು ವುದು. ಆದರೆ ರಜಾ ಮುಗಿತಲ್ಲ. ಮತ್ತಾದರೂ, ಸಮಯ ಬಂದರೆ ಹೇಳೋಣ. ಅಥವಾ ಕಾಗದ ಬರೆದು ಣ.

ಈ ದನದ ಕತೆಯನ್ನು ಹೇಳಲು ಕಾರಣ, ಒಂದು ನನಗೆ ಭಾವನಿಗೆ ಸಂಬಂಧಪಟ್ಟದ್ದು. ಭಾವನಿ ಮೂಲಕ ದನಗಳ ಬಗ್ಗೆ ಆಸಕ್ತಿ ಬರಲೆಂದು. ಈ ಉದ್ದೇಶ ಸಾಧನೆ. ನೆನ್ನೆ ಭಾವ ಹೇಳಿದರು: ಅವರು ರಿಟೈರ್ ಆದ ಮೇಲೆ ಕೆಲವು ಹಸು ಸಾಕುತ್ತಾರಂತೆ.


ಎರಡನೆಯದು ನಿನಗೆ ಸಂಬಂಧಪ

ನಮ್ಮ ದೇಶದ ದನದ ಸಂಪತ್ತು ಅರಿಯದು. ಬಹಳ ಪ್ರಾಚೀನ ಕಾಲದಿಂದ, ಚರಿತ್ರೆಯುಗ ಪ್ರಾರಂಭವಾಕ್ಕೆ ಮುಂಚೆನಿಂದ, ಸಹಸ್ರಾರು ಗೊಲ್ಲರು, ಕುಶಲತೆಯಿಂದ, ಮಮತೆಯಶ್ರದ್ಧೆಯಿಂದ ಕೂಡಿಟ್ಟು ನಮಗೆ ಬಿಟ್ಟುಹೋದ ದೊಡ್ಡ ಆಸ್ತಿ—ನಮ್ಮ ತಳಿಗಳು. ಇಂತಹ ಆಸ್ತಿ ಮತ್ತ್ಯಾವ ಜನಾಂಗಕ್ಕೂ ಇಲ್ಲ. ಇದನ್ನು ಪಶುಭಾಗ್ಯವನ್ನು, ನಮ್ಮ ಜನ—ಅದರಲ್ಲೂ ಮುಂದಿನ ಭಾರತೀಂಜೆಗಳಾಗುವ ನಮ್ಮ ಮಕ್ಕಳು ಅರಿಯಬೇಕು. ಅರಿತು ಹಿಗ್ಗಬೇಕುಗ್ಗಿ ಕಾಪಾಡಬೇಕು. ಕಾಪಾಡಿ ಬೆಳೆಸಬೇಕು.


ಹರಪ್ಪ ಜನರಂತೆ, ಆರ್ಯರದ್ರಾವಿಡರಂತೆ ನಮ್ಮ ಮುಂದಿನ ಜನಾಂಗ ಪಶುಪೋಷಕರಾಗಬೇಕು, ಪಾಲಕರಾಗಬೇಕು, ದನಗಾರರಾಗ ಬೇಕು, ಗೋಪಾಲ ರತ್ನರಾಗಬೇಕು. ನಮ್ಮ ಮತ, ಹಾಲು ಮತವಾಗ ಬೇಕು. ಈ ಹಿರಿಯ ಆಸೆಯಿಂದಲೇ, ನಾನು, ನಿನಗೆ ನಮ್ಮ ದನದ ಕತೆಯನ್ನು ಹೇಳಿದ್ದು."

"ಕಿಟ್ಟಿ ಗೋಪಾಲನಾಗಬೇಕ ಗೋ ಬೇಕಲ್ಲ ಮಾವ. ಯಾವಾಗ ಕೊಡಿಸುತ್ತಿಯಾ ಸಾಹಿವಾಲ್ ಕರು"


"ಬೆಂಗಳೂರಿಗೆ ಹೋದ ಮೇ: ಕರು ಜತೆಗೆ, ಕರುವನ್ನು ಹೇಗೆ ಸಾಕಬೇಕು ಎಂಬ ಕಾಗದವನ್ನೂ ಮ ನೋಡುತ್ತಿರು."




1. ಕಾಂಕ್ರೇಜ್ ಹಸು




2. ಮಾಲ್ವಿ ಗೂಳಿ




3. ಕೆಂಕಥೆ




4. ಹೇರಿಫರ್ಡ್




5. ಥಾರ್‌ಪಾರ್ಕರ್ ಹಸು




6. ಹರಿಯಾಣ ಗೂಳಿ




7. ಮೇವತಿ ಹಸು




8. ರಥ್




9. ನಗೋರಿ ಗೂಳಿ




10. ಬಚ್ಚೌರ್ ಗೂಳಿ




11. ಗಾವ್‌ಲಾವ್ ಗೂಳಿ




12. ಓಂಗೋಲ್ ಗೂಳಿ




13. ಕೃಷ್ಣಾ ಹಸು




14. ಹಳ್ಳಿಕಾರ್ ಗೂಳಿ




19. ಖಿಲ್ಲಾರಿ ಗೂಳಿ




20. ಗಿರ್ ಗೂಳಿ




21. ಸಾಹಿವಾಲ್




22. ಕೆಂಪು ಸಿಂಧಿ ಹಸು




23. ನಿಮಾರಿ ಗೂಳಿ




24. ದೇವ್ರೋನಿ ಹಸು




25. ಪೊನ್ವಾರ್




26. ಮುರ್ರಾ ಎಮ್ಮೆ




27. ಜಾಫರ್‌ಬಾದಿ ಎಮ್ಮೆ



28. ನಾಗಪುರಿ ಎಮ್ಮೆ



29. ನೀಲಿ ಕೋಣ



30. ಮೆಹಸಾನ ಎಮ್ಮೆ